ಸಾಹಿತ್ಯ ಸೌರಭ

ದ್ವಿತೀಯ ಸೆಮಿಸ್ಟರ್
ಬಿ.ಎ ಐಚ್ಛಿಕ ಕನ್ನಡ ಪಠ್ಯ
(ಪತ್ರಿಕೆ : ಎ–4)

ಬಿ.ಎ.
ದ್ವಿತೀಯ ಸೆಮಿಸ್ಟರ್

ಪ್ರಧಾನ ಸಂಪಾದಕರು
ಡಾ. ಪ್ರಶಾಂತ ಜಿ. ನಾಯಕ

ಸಂಪಾದಕರು
ಡಾ. ಸುವರ್ಣ ಸಂಗಣ್ಣ ಹುಡೇದ
ಅರುಣ್ ಕುಮಾರ್.ವಿ
ಹರೀಶ್ ಎಂ.ಸಿ.

ಬೆಂಗಳೂರು ನಗರ ವಿಶ್ವವಿದ್ಯಾಲಯ
BENGALURU CITY UNIVERSITY
ಆಗು ನೀ ಅನಿಕೇತನ
BE BOUNDLESS

OPTIONAL KANNADA PATHYA - SAHITHYA SOURABHA (A-4) :
A Prescribed Text Book for B.A Degree Course (Second Semester);

Chief Editor:

Prof. Prashanth G. Nayak

(Professor of Kannada & Director,

Kannada Bharathi, Kuvempu University,

Shankaraghatta, B.R. Project. Shimoga Dist.)

Edited By :
Dr. Suvarna Sanganna Huded
Arunkumar V
Harish M. C.

Publishd by : Bengaluru City University, BENGALURU

Pp :

© Bengaluru City University

First print : 2022

ಪ್ರಧಾನ ಸಂಪಾದಕರು
ಡಾ. ಪ್ರಶಾಂತ ಜಿ. ನಾಯಕ

ಸಲಹಾ ಸಮಿತಿ:
ಡಾ. ಕೆ.ವೈ. ನಾರಾಯಣಸ್ವಾಮಿ
ಡಾ. ಎಂ.ಎಸ್. ಆಶಾದೇವಿ

ಸಂಯೋಜಕರು:
ಡಾ. ಬೆಳಕೆರೆ ಲಿಂಗರಾಜಯ್ಯ

ಬೆಲೆ: ರೂ. 00/–

ಎ 04: ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ

ಪರಿವಿಡಿ

ಅ. ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಘಟ್ಟಗಳು :

ನವೋದಯ

ಪ್ರಗತಿಶೀಲ

ನವ್ಯ

ದಲಿತ – ಬಂಡಾಯ

ಮಹಿಳಾ ಸಾಹಿತ್ಯ

ಆ. ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಕವಿತೆಗಳು :

1. ಕಾರಿ ಹೆಗ್ಗಡೆಯ ಮಗಳು – ಬಿ.ಎಂ.ಶ್ರೀ
2. ಇಂದಿನ ದೇವರು – ಕುವೆಂಪು
3. ದಾಟಿ ಬಾ ನಿರ್ಭಯ ನಿಲುವಿಗೆ – ಜಿ.ಎಸ್ ಶಿವರುದ್ರಪ್ಪ
4. ಬೆಂಗಳೂರಿನ ಹಾಡು – ಸಿದ್ದಲಿಂಗಯ್ಯ
5. ನಾನು ರಾತ್ರಿಗಳನ್ನು ಮಾತ್ರ ಪ್ರೀತಿಸುತ್ತೇನೆ – ಶಶಿಕಲಾ ವೀರಸ್ವಾಮಿ

ಇ. ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಕಥೆಗಳು :

1. ನಮ್ಮ ಮೇಷ್ಟ್ರು – ಮಾಸ್ತಿ ವೆಂಕಟೇಶ ಅಯ್ಯಾಂಗಾರ್
2. ನಾಲ್ಕು ಮೊಳ ಭೂಮಿ – ಚದುರಂಗ
3. ಕಥೆಯಾದಳು ಹುಡುಗಿ – ಯಶವಂತ ಚಿತ್ತಾಲ
4. ಮಾರಿಕೊಂಡವರು – ದೇವನೂರು ಮಹಾದೇವ

ಈ. **ಲಲಿತ ಪ್ರಬಂಧಗಳು**

1. ಹೆಂಡತಿಯ ಹೆಸರು – ಎ.ಎನ್ ಮೂರ್ತಿರಾವ್
2. ವಿಮೆ ಯಮನನ್ನೇ ಹೆದರಿಸಿತು – ಗೊರೂರು ರಾಮಸ್ವಾಮಿ ಐಯ್ಯಂಗಾರ್
3. ಬೆಂಗಳೂರ ಬೆಳದಿಂಗಳು – ಚಂದ್ರಶೇಖರ ಕಂಬಾರ
4. ಅಮೇರಿಕಾದಲ್ಲೊಂದು ದನದ ಪೇರಿ – ವಸುಧೇಂದ್ರ

ಉ. **ವೈಚಾರಿಕ ಲೇಖನಗಳು**

1. ನಮಗೆ ಬೇಕಾಗಿರುವ ಇಂಗ್ಲೀಷ್ – ಕುವೆಂಪು
2. ಸಮಾಜದ ಕಣ್ಣಲ್ಲಿ ಲೈಂಗಿಕ ಸಂಬಂಧಗಳು – ಶಿವರಾಮ ಕಾರಂತ
3. ತಕರಾರಿನ ಕೊನೆಗೆ – ಮೊಗಳ್ಳಿ ಗಣೇಶ್

*****

ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಘಟ್ಟಗಳು

ಆಧುನಿಕ ಕನ್ನಡ ಸಾಹಿತ್ಯದ ಅರುಣೋದಯಕ್ಕೆ ಮುದ್ದಣ್ಣನ 'ರಾಮಾಶ್ವಮೇಧ' ಒಂದು ಮೈಲುಗಲ್ಲಾಗಿ ನಿಲ್ಲುತ್ತದೆ. 19 ನೇ ಶತಮಾನದ ಕೊನೆಯಲ್ಲಿ ಬರುವ ಮುದ್ದಣ ಪ್ರಾಚೀನ ಕಾಲದಿಂದ ಪರಂಪರಾಗತವಾಗಿ ಬಂದ ಕನ್ನಡ ಸಾಹಿತ್ಯದ ಮೌಲ್ಯಗಳನ್ನು ತನ್ನಲ್ಲಿ ಅರಗಿಸಿಕೊಂಡು ಪ್ರಾಚೀನ ಮತ್ತು ಹೊಸಗನ್ನಡ ಸಾಹಿತ್ಯದ ಸೇತುವೆಯಾಗಿ ನಿಲ್ಲುತ್ತಾನೆ.ಸುಮಾರು 1500 ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯದಲ್ಲಿ ಅನೇಕ ಬದಲಾವಣೆಗಳುಂಟಾಗಿರುವವು. ಈ ಕಾಲಘಟ್ಟದಲ್ಲಾಗುವ ಬದಲಾವಣೆಗಳನ್ನು

ಪೂರ್ವದ ಹಳೆಗನ್ನಡ
ಹಳೆಗನ್ನಡ
ನಡುಗನ್ನಡ ಮತ್ತು
ಹೊಸಗನ್ನಡ

ಎಂದು ನಾಲ್ಕು ರೀತಿಯ ವಿಭಾಗಗಳನ್ನು ಮಾಡಿಕೊಳ್ಳಲಾಗಿದ್ದು ಕನ್ನಡ ಸಾಹಿತ್ಯದ ಆರಂಭಕಾಲದಿಂದಲೂ ಕಂಡುಬರುವ ಚಂಪೂ, ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ ಮೊದಲಾದ ಕಾವ್ಯಬಂಧಗಳನ್ನು ತೊರೆದು ಅದಕ್ಕೊಂದು ಹೊಸದಾದ ತಿರುವು ನೀಡಿದ್ದೆಂದರೆ ಆಧುನಿಕ ಕನ್ನಡ ಸಾಹಿತ್ಯ ಅಥವಾ ಹೊಸಗನ್ನಡ ಸಾಹಿತ್ಯ.ಈ ಹೊಸಗನ್ನಡ ಸಾಹಿತ್ಯದಲ್ಲಿ ನಾಲ್ಕು ರೀತಿಯ ಕಾಲ ಘಟ್ಟಗಳನ್ನು ಅಧ್ಯಯನದ ಅನುಕೂಲತೆಗಾಗಿ ಮಾಡಿಕೊಳ್ಳಲಾಗಿದೆ. ಅವುಗಳೆಂದರೆ,

ನವೋದಯ
ಪ್ರಗತಿಶೀಲ
ನವ್ಯ
ದಲಿತ–ಬಂಡಾಯ
ನವೋದಯ

ಹೊಸಗನ್ನಡ ಸಾಹಿತ್ಯದ ಪ್ರಥಮ ಘಟ್ಟ 'ನವೋದಯ ಸಾಹಿತ್ಯ.' ಇದರ ಪ್ರಥಮ ಹೆಜ್ಜೆ ಆರಂಭವಾದದ್ದು 1921 ರಲ್ಲಿ ಬಿ.ಎಂ.ಶ್ರೀಯವರ 'ಇಂಗ್ಲೀಷ್ ಗೀತಗಳು' ಕೃತಿಯ ಮೂಲಕ ಅಂದರೆ 1920 ರಿಂದ 1950 ರವರೆಗಿನ ಅವಧಿಯನ್ನು ನವೋದಯ ಸಾಹಿತ್ಯದ ಕಾಲವೆಂದು ಕರೆಯಲಾಗುತ್ತದೆ. ಆದರೆ, 1950 ರ ನಂತರದಲ್ಲಿ ನವೋದಯ ಕೃತಿಗಳು ರಚನೆಯಾಗಲಿಲ್ಲವೆಂತಲ್ಲ. 'ನವೋದಯ' ಎಂಬ ಪದದ ಅರ್ಥ 'ಹೊಸತನದ ಉದಯ' "ನವೋದಯ ಎಂಬ ಈ ಪದ ಹತ್ತೊಂಬತ್ತು–ಇಪ್ಪತ್ತನೇ ಶತಮಾನದಲ್ಲಿ ಪಶ್ಚಿಮದ ಪ್ರೇರಣೆಯಿಂದ ಇಡೀ ಭಾರತೀಯ ಪರಿಸರದಲ್ಲಿ ಯಾವ ಒಂದು ಪುನರುಜ್ಜೀವನ ಅಥವಾ ಬದಲಾವಣೆ ಕಾಣಿಸಿಕೊಂಡಿತೋ ಅದನ್ನು ಸಮರ್ಪಕವಾಗಿ ಸೂಚಿಸುವ ಪದವಾಗಿದೆ. ನವೋದಯ ಎನ್ನುವುದು ವಿಶಾಲಾರ್ಥದಲಿ ಪಾಶ್ಚಿಮಾತ್ಯ ವಸಾಹತುಷಾಯಿ ಹಾಗೂ ಅದರ ಪರಿಣಾಮವಾದ ಇಂಗ್ಲೀಷ್ ಶಿಕ್ಷಣದಿಂದ, ಇಡೀ ಭಾರತೀಯ ಜೀವನದಲ್ಲಾದ ಹೊಸ ವಿಚಾರಗಳ ಉತ್ಕರ್ಷವನ್ನು ಹೇಗೋ ಹಾಗೆ, ಇಲ್ಲಿನ ಹಳೆಯ ಹಾಗೂ ಹೊಸ ಮನೋಧರ್ಮಗಳ ಘರ್ಷಣೆಯ ಪರಿಣಾಮವನ್ನು ಸೂಚಿಸುತ್ತದೆ. ಭಾರತದ ರಾಜಕೀಯ. ಸಾಮಾಜಿಕ, ಧಾರ್ಮಿಕ ಹಾಗೂ ಒಟ್ಟಾರೆಯಾಗಿ ಸಾಂಸ್ಕೃತಿಕ ಪುನರುಜ್ಜೀವನವನ್ನು 'ನವೋದಯ' ಎಂಬ ಪದ ಸೂಚಿಸುತ್ತದೆ." ನವೋದಯ ಸಾಹಿತ್ಯವನ್ನು ನವ್ಯ ಕಾವ್ಯದ ಕವಿ –ವಿಮರ್ಶಕರುಗಳು ತಮಗಿಂತ ಹಿಂದಿನ ಈ ಕಾವ್ಯಮಾರ್ಗವನ್ನು 'ರೋಮ್ಯಾಂಟಿಕ್

ಕಾವ್ಯ' ಎಂದೂ 'ರಮ್ಯಕಾವ್ಯ' ಎಂದು ಕರೆದರು. ನವೋದಯ ಸಾಹಿತ್ಯವು ಇಂಗ್ಲೀಷ್ ರೋಮ್ಯಾಂಟಿಕ್ ಕವಿಗಳಿಂದ ಪ್ರೇರಣೆ ಪಡೆಯಿತು ಎಂಬ ಕಾರಣದಿಂದ ನವ್ಯ ಕವಿಗಳು ಇದನ್ನು ರೋಮ್ಯಾಂಟಿಕ್ ಎಂದು ಕರೆದಿರುವಂತೆ ತೋರುತ್ತದೆ. ಈ ರೋಮ್ಯಾಂಟಿಕ್ ಕಾವ್ಯದ ತಿರುಳು 'ನವೋದಯ ಕಾವ್ಯ' ಎಂಬುದನ್ನು ಪರಿಶೀಲಿಸಿ ನೋಡಿದರೆ ಅದೆಲ್ಲವೂ ಭಾರತೀಯ ಪರಂಪರೆಗೆ ಹೊಸದಾದುದೇನೂ ಅಲ್ಲ ಎಂಬುದು ಸ್ಪಷ್ಟವಾಗುವುದರಿಂದ ಹೊಸಗನ್ನಡದ ಈ ಆಧುನಿಕ ಕಾವ್ಯವನ್ನು 'ನವೋದಯ ಕಾವ್ಯ' ಎಂದು ಕುವೆಂಪು ಅವರು ಹೆಸರಿಸಿದ್ದು ತುಂಬಾ ಉಚಿತವಾದುದು.

ನವೋದಯ ಕವಿಗಳು ಪ್ರಕೃತಿಪ್ರಿಯತೆ, ಆದರ್ಶಮಯತೆ, ಏಕಾಂತತೆ ಮೊದಲಾವುಗಳಲ್ಲಿ ಪಾಶ್ಚಾತ್ಯಕವಿಗಳಿಗೆ ಋಣಿಯಾಗಬೇಕಾದ ಅವಶ್ಯಕತೆಯೇನೂ ಇರಲಾರದು. ನವೋದಯ ಕಾವ್ಯವು ತನ್ನ ಪರಂಪರಾಗತವಾದ ಅನುಭವಗಳ ಹಿನ್ನಲೆಯಿಂದ ಇಂಗ್ಲೀಷ್ ರೋಮ್ಯಾಂಟಿಕ್ ಕವಿಗಳಿಗೆ ನಿಲುಕದ ಅನೇಕ ಅನುಭವ ಸ್ತರಗಳನ್ನು ಮುಟ್ಟಿರುವುದು.

ನವೋದಯ ಸಾಹಿತ್ಯದ ಕವಿಗಳ ಕಾವ್ಯದ ವಸ್ತು ನಿಸರ್ಗವೇ ಆಗಿದೆ. ನಿಸರ್ಗಪ್ರೇಮ, ಆಶಾವಾದ, ಗೇಯತೆ, ಕಲ್ಪನೆಯ ತೀವ್ರತೆಗಳನ್ನು ಈ ಸಾಹಿತ್ಯದಲ್ಲಿ ಕಾಣುತ್ತೇವೆ.

ನವೋದಯ ಸಾಹಿತ್ಯಕ್ಕೆ ಪ್ರೇರಣೆ ಪ್ರಭಾವಗಳು

1. ಪಾಶ್ಚಾತ್ಯ ಶಿಕ್ಷಣದ ಪ್ರಭಾವ

ಕನ್ನಡದಲ್ಲಿ 'ನವೋದಯ ಸಾಹಿತ್ಯ'ವು ಒಂದು ಸಾಹಿತ್ಯ ಪ್ರಕಾರವಾಗಿ ಮೆರೆಯಲು ಸ್ಫೂರ್ತಿ ದೊರೆತದ್ದು ಪಾಶ್ಚಾತ್ಯ ಶಿಕ್ಷಣದಿಂದಲೇ. ಕ್ರಿ.ಶ..1857 ರ ದಂಗೆಯ ನಂತರದಲ್ಲಿ ಭಾರತದಲ್ಲಿ ಬ್ರಿಟೀಷ್ ಆಡಳಿತ ಪ್ರಾರಂಭವಾಯಿತು. ಅಂದಿನಿಂದ ಭಾರತದಲ್ಲಿ ಇಂಗ್ಲೀಷ್ ಶಿಕ್ಷಣವು ಪ್ರಾರಂಭವಾಯಿತು. ಸಮಾಜ ಸುಧಾರಕ ಹಾಗೂ ಸ್ವಾತಂತ್ರ ಹೋರಾಟಗಾರನಾದ ರಾಜಾರಾಮ ಮೋಹನ್ರಾಯ್ ಇಂಗ್ಲೀಷ್ ವಿದ್ಯಾಭ್ಯಾಸದಿಂದ ಲಾಭವಿರುವುದು ಎಂದು ಹೇಳಿದ. ಹಾಗೂ ಒಂದು ಕಾಲೇಜನ್ನು ಪ್ರಾರಂಭಿಸಿ ಅಲ್ಲಿ ವಿಜ್ಞಾನ, ಬಂಗಾಲಿ ಭಾಷೆ ಅಲ್ಲದೇ ಇಂಗ್ಲೀಷ್ ಭಾಷೆಯನ್ನು ಕಡ್ಡಯವಾಗಿ ಕಲಿಯಬೇಕೆಂದು ಒತ್ತಾಯಿಸಿದನು.

ಭಾರತದಲ್ಲಿ ಇಂಗ್ಲೀಷ್ ಶಿಕ್ಷಣವು ಮಾಧ್ಯಮಿಕ ಹಂತದ ವಿದ್ಯಾರ್ಥಿಗಳಿಗೆ ದೊರೆತಿದ್ದರಿಂದಾಗಿ ಅವರು ಇಂಗ್ಲೀಷ್ ಕವಿಗಳ ವಸ್ತು ರೀತಿ ಮತ್ತು ಶೈಲಿಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು.

ಶೆಕ್ಸಪೀಯರನ	ರಾಜತ್ವ, ಅಧಿಕಾರ, ಸರಕಾರ
ವರ್ಡ್ಸವರ್ತ್	ಬಂಡಾಯ, ದುಃಖ
ಡಿಕೆನ್ಸ್	ಮಾನವ ಸ್ವಭಾವ
ಕಾರ್ಲೆ	ಸಮಕಾಲೀನ ಸಮಾಜದ ಸಮಸ್ಯೆಗಳು

ಈ ಮೊದಲಾದ ವಿಷಯಗಳನ್ನು ಇಂಗ್ಲೀಷ್ ಕವಿಗಳ, ಕೃತಿಗಳ ಅಧ್ಯಯನದಿಂದ ಭಾರತೀಯರು ತಿಳಿದುಕೊಂಡರು. ಅವರ ನಾಟಕಗಳಲ್ಲಿ ಕಂಡುಬರುವ (ಖಿಡಿಚಿಜಿಜಥಿ) ದುಃಖಾಂತ ಮತ್ತು (ಛಿಠಜಿಜಥಿ) ಸುಖಾಂತ ಎಂಬ ಪ್ರಭೇದಗಳನ್ನು ತಿಳಿದುಕೊಂಡರು. ಇದರಿಂದ ಕನ್ನಡದಲ್ಲಿ ಹಲವಾರು ರೂಪಾಂತರ ಮತ್ತು ಭಾಷಾಂತರಗಳು ನಡೆದವು. ಅಲ್ಲದೆ ಇಂಗ್ಲೀಷ್ ಸಾಹಿತ್ಯದ ಪ್ರಭಾವದಿಂದಾಗಿ ಕಥೆ, ಕಾದಂಬರಿ,

ಪ್ರಬಂಧ ಮೊದಲಾದ ವಿಶೇಷವಾದ ಸಾಹಿತ್ಯದ ಪ್ರಕಾರಗಳು ನವೋದಯದಲ್ಲಿ ಬಳಕೆಗೆ ಬಂದವು. ಹೀಗಾಗಿ ಕನ್ನಡದಲ್ಲಿ ಹೊಸದಾದ ಸಾಹಿತ್ಯ ಉದರಿಸಲು ಪಾಶ್ಚಾತ್ಯ ಶಿಕ್ಷಣವು ಪ್ರಮುಖವಾದ ಪ್ರೇರಣೆ ಪ್ರಭಾವಗಳನ್ನು ನೀಡಿತು.

2. ಕ್ರೈಸ್ತ ಮಿಶನರಿಗಳು

ಕ್ರೈಸ್ತ ಧರ್ಮದ ಅಭಿಮಾನಿಗಳು ಮತ ಪ್ರಚಾರಕ್ಕಾಗಿ ಭಾರತಕ್ಕೆ ಬಂದು ಬೈಬಲ್ ಮತ್ತು ಇತರ ಕೃತಿಗಳನ್ನು ಭಾಷಾಂತರ ಮಾಡಿ ಅವುಗಳನ್ನು ಪ್ರಕಟಿಸಿದರು. ಅಲ್ಲದೇ ಉಚಿತವಾಗಿ ಅವುಗಳನ್ನು ಹಂಚಿದರು. ಇದರಿಂದ ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಅಪಾರ ಬೆಳವಣಿಗೆಯುಂಟಾಯಿತು.

- 'ಮಿಲಿಯಂ ಕ್ಯಾರಿ' ಕ್ರಿ.ಶ. 1809 ರಲ್ಲಿ ಬೈಬಲ್‌ನ್ನು ಕನ್ನಡಕ್ಕೆ ಅನುವಾದಿಸಿದ ನಂತರ 1817 ರಲ್ಲಿ ಕನ್ನಡ ವ್ಯಾಕರಣ ಕೃತಿಯಾದ ''A Grammar of the Karnataka language" ಪ್ರಕಟವಾಯಿತು.ಇದು ಅಚ್ಚಾದ ಕನ್ನಡದ ಮೊದಲ ಗ್ರಂಥವಾಗಿದೆ.
- ಆನ್ ಹ್ಯಾಂಡ್ಸನು ಬಳ್ಳಾರಿ, ಬೆಂಗಳೂರು ಮತ್ತು ಮಂಗಳೂರುಗಳಲ್ಲಿ ಮುದ್ರಣ ಯಂತ್ರಗಳನ್ನು ಪ್ರಾರಂಭಿಸಿ ಕನ್ನಡ ಸಾಹಿತ್ಯ ಹೆಚ್ಚು ವಿಸ್ತಾರತೆಯನ್ನು ಪಡೆದುಕೊಳ್ಳುವಂತೆ ಮಾಡಿದನು.
- ವಿಲಿಯಂ ರೀವ್ ಎಂಬುವವನು 1822 ರಲ್ಲಿ ಕನ್ನಡ–ಇಂಗ್ಲೀಷ್, ಇಂಗ್ಲೀಷ್–ಕನ್ನಡ ನಿಘಂಟು ಬರೆದನು.
- ಕ್ಯಾಬೆಲ್ ಎಂಬುವವನು ಕನ್ನಡ ವ್ಯಾಕರಣಪರವಾಗಿ ಬಹಳ ಜನಪ್ರಿಯ ಲೇಖನಗಳನ್ನು ಬರೆದು ಪ್ರಕಟಿಸಿದನು.
- ಗ್ಯಾರೇಟ್ ಎನ್ನುವವ 1846–48 ರಲ್ಲಿ ಭಗವದ್ಗೀತೆಯನ್ನು ಪ್ರಕಟಿಸಿದನು.
- ಮೆಕಂಜಿ ಸಾವಿರಕ್ಕೂ ಹೆಚ್ಚು ಪ್ರಾಚೀನ ಗ್ರಂಥಗಳನ್ನು ಸಂಗ್ರಹಿಸಿದನು.
- ಕಿಟೆಲ್‌ರು ಬಾಷೆಲ್ ಮಿಶನ್ ಸಂಸ್ಥೆಯನ್ನು ಸ್ಥಾಪಿಸಿದಲ್ಲದೇ ಕನ್ನಡ–ಕನ್ನಡ ನಿಘಂಟು ಮತ್ತು ಇಂಗ್ಲೀಷ್–ಕನ್ನಡ ನಿಘಂಟುಗಳನ್ನು ರಚಿಸಿದರು. ಮತ್ತು ಶಬ್ದಮಣಿದರ್ಪಣ , ಛಂದೋಂಬುಧಿ ಕೃತಿಗಳ ಸಂಪಾದನೆ ಮಾಡಿದರು.

3. ಬಂಗಾಲಿ ಸಾಹಿತ್ಯದ ಪ್ರಭಾವ

ಬಂಗಾಲಿ ಸಾಹಿತ್ಯದಲ್ಲಿ ಪ್ರಸಿದ್ಧರಾದ ಬಂಕಿಮಚಂದ್ರ ಚಟರ್ಜಿಯವರು 'ದುರ್ಗೇಶ ನಂದಿನಿ' ಎಂಬ ಕಾದಂಬರಿಯನ್ನು 1865 ರಲ್ಲಿ ಮತ್ತು 'ಆನಂದಮಠ' ಎಂಬ ಕಾದಂಬರಿಯನ್ನು 1882 ರಲ್ಲಿ ರಚಿಸಿದ್ದು, ಇವುಗಳೆರಡು ಕನ್ನಡಕ್ಕೆ ಅನುವಾದಗೊಂಡವು. ಅಲ್ಲದೇ ಮಹರ್ಷಿ ರವೀಂದ್ರನಾಥ ಠಾಗೋರವರು ನೊಬೆಲ್ ಪ್ರಶಸ್ತಿ ಪಡೆದ ಕೃತಿ 'ಗೀತಾಂಜಲಿ' ಯನ್ನು ರಚಿಸಿದರು. ಈ ಕೃತಿಯು ಭಾರತದ ಎಲ್ಲ ಭಾಷೆಗಳಲ್ಲಿಯೂ ಅನುವಾದಗೊಂಡಿತು.

4. ಸಂಸ್ಕೃತ ಸಾಹಿತ್ಯದ ಪ್ರಭಾವ

ಸಂಸ್ಕೃತದ ಹಲವಾರು ಕೃತಿಗಳು ಕನ್ನಡಕ್ಕೆ ಅನುವಾದಗೊಂಡವು. ಎಸ್. ನರಸಿಂಹಾಚಾರ್ ಅವರು ಸಂಸ್ಕೃತ ಕವಿ ಕಾಳಿದಾಸನ 'ರಘುವಂಶ' ಕೃತಿಯ ಎರಡು ಖಂಡಗಳನ್ನು ಅನುವಾದ ಮಾಡಿದರು. ಕ್ರಿ.ಶ.

1869 ರಲ್ಲಿ ಚುರುಮುರಿ ಕೃಷ್ಣರಾಯ ಮತ್ತು ಅಭಿನವ ಕಾಳಿದಾಸ ಎಂದು ಬಿರುದು ಪಡೆದ ಬಸವಪ್ಪಶಾಸ್ತ್ರಿಗಳು ಕಾಳಿದಾಸನ ಶಾಕುಂತಲ ನಾಟಕವನ್ನು ಕನ್ನಡಕ್ಕೆ ಅನುವಾದ ಮಾಡಿದರು.

5. ರಾಜಾಶ್ರಯ ಕನ್ನಡವನ್ನು ಉಳಿಸಿತು–ಬೆಳೆಸಿತು

ಪ್ರಾಚೀನ ಕಾಲದಿಂದಲೂ ರಾಜಾಶ್ರಯವು ಕನ್ನಡವನ್ನು ಉಳಿಸಿದೆ ಮತ್ತು ಅದನ್ನು ಬೆಳೆಸಿದೆ. ಆದರೆ, 19ನೇ ಶತಮಾನದ ಮೊದಲಿಗೆ ರಾಜಾಶ್ರಯದ ಕೊರತೆಯು ಕಂಡುಬರುತ್ತದೆ. ಇದರಿಂದಾಗಿ 15ನೇ ಶತಮಾನದಿಂದ 19 ನೇ ಶತಮಾನದ ಪೂರ್ವದವರೆಗೆ ಕನ್ನಡ ಸಾಹಿತ್ಯವು ತನ್ನ ನಡಿಗೆಯನ್ನು ನಿಲ್ಲಿಸಿತ್ತು. 19ನೇ ಶತಮಾನದ ಪೂರ್ವದಲ್ಲಿ ಪೇಶ್ವೆ ಮತ್ತು ನಿಜಾಮರ ದಬ್ಬಾಳಿಕೆ ಹಾಗೂ ಹೈದರ ಮತ್ತು ಟಿಪ್ಪುಸುಲ್ತಾನರ ಆಡಳಿತ ಕಾಲದಲ್ಲಿ ಕನ್ನಡ ಸಾಹಿತ್ಯದ ರಚನೆಗೆ ಪ್ರೋತ್ಸಾಹ ದೊರೆಯಲಿಲ್ಲ. ತದ ನಂತರದ ಮೈಸೂರು ಒಡೆಯರ ಕಾಲದಲ್ಲಿ ಸಾಕಷ್ಟು ಕನ್ನಡ ಕೃತಿಗಳು ರಚನೆಗೊಂಡವು.ಮುಮ್ಮಡಿ ಕೃಷ್ಣರಾಜ ಒಡೆಯರು ಸುಮಾರು 80 ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದರು. ಕ್ರಿ.ಶ. 1821 ರಲ್ಲಿ 'ಸೌಗಂಧಿಕಾ ಪರಿಣಯ' ಎಂಬ ಮಹತ್ವ ಪೂರ್ಣವಾದ ಗದ್ಯ ಕೃತಿಯನ್ನು ರಚನೆ ಮಾಡಿದರು.

ಮೈಸೂರು ಒಡೆಯರ ಆಸ್ಥಾನದಲ್ಲಿ ದೇವಚಂದ್ರ, ದೇವಲಾಪುರದ ನಂಜುಂಡ ಮತ್ತು ಕೆಂಪುನಾರಾಯಣ ಕವಿಗಳಿದ್ದರು. ದೇವಚಂದ್ರನು 'ರಾಜಾವಳಿಕಥೆ' ಎಂಬ ಕೃತಿಯನ್ನು ಗದ್ಯದಲ್ಲಿ ರಚಿಸಿದರೆ ನಂಜುಂಡ ಕವಿಯು ವ್ಯಾಕರನವನ್ನು ಬರೆದನು. ಹಾಗೂ ಕೆಂಪುನಾರಾಯಣ 'ಮುದ್ರಾಮಂಜೂಷ' ಎಂಬ ಮಹತ್ವಪೂರ್ಣವಾದ ಕೃತಿಯನ್ನು ಗದ್ಯ ಶೈಲಿಯಲ್ಲಿ ಬರೆದಿದ್ದಾನೆ.

6. ಜನಪದ ಸಾಹಿತ್ಯ

ಕನ್ನಡ ಜನ ಜೀವನದ ಅಭಿವ್ಯಕ್ತಿಯಾಗಿರುವ ಜನಪದ ಸಾಹಿತ್ಯವು ನವೋದಯದ ಕವಿಗಳಿಗೆ ವಸ್ತು ಮತ್ತು ರೂಪಗಳನ್ನು ಒದಗಿಸಿತು. ಜನಪದದ ಬಯಲಾಟ, ಹಾಡುಗಳು ಮೊದಲಾದವುಗಳು ಹುಟ್ಟಿದರೂ ಜೆ.ಎಫ್.ಫ್ಲೀಟ್‌ನು 'ಲಾವಣಿಗಳು' ಎಂಬ ಕೃತಿಯನ್ನು ಪ್ರಕಟಿಸಿದನು. ಕಿಟೆಲ್‌ರವರು ತಮ್ಮ ಶಬ್ದಕೋಶದಲ್ಲಿ ಸಾವಿರಕ್ಕೂ ಮಿಗಿಲಾದ ಗಾದೆಗಳನ್ನು ಹಾಗೂ ಲಾವಣಿಗಳನ್ನು ಸಂಗ್ರಹಿಸಿದರು.

7. ವಚನಸಾಹಿತ್ಯ ಮತ್ತು ದಾಸ ಸಾಹಿತ್ಯದ ಪ್ರಭಾವ

12ನೇ ಶತಮಾನದ ವಚನಕಾರರು ಮತ್ತು 15ನೇ ಶತಮಾನದಲ್ಲಿದ್ದ ದಾಸರು ಆಧುನಿಕ ಯುಗದ ನವೋದಯ ಸಾಹಿತ್ಯದ ಮೇಲೆ ಗಾಢವಾದ ಪ್ರಭಾವವನ್ನು ಬೀರಿದರು. ಇವರು ವಸ್ತು, ರೂಪ, ಭಾಷೆ ಮತ್ತು ಅಭಿವ್ಯಕ್ತಿ ದೃಷ್ಟಿಯಿಂದ ಸ್ವತಂತ್ರತೆಯುಳ್ಳವರಾಗಿದ್ದರು. ಇಂತಹ ಸ್ವತಂತ್ರ ಪ್ರವೃತ್ತಿಯ ಮನೋಭಾವವು ಆಧುನಿಕ ಕವಿಗಳ ಮೇಲೆ ಸಾಕಷ್ಟು ರೀತಿಯಲ್ಲಿ ಪ್ರೇರಣೆ– ಪ್ರಭಾವವನ್ನೊದಗಿಸಿತು.

8. ಸ್ವಾತಂತ್ರ್ಯ ಚಳುವಳಿ

ಹೊಸಗನ್ನಡ ಕಾಲವು ಸಂಘರ್ಷದ ಕಾಲವಾಗಿದ್ದರಿಂದ. ಭಾರತವು ಬ್ರಿಟೀಷರ ದಬ್ಬಾಳಿಕೆಯಿಂದ ಬೇಸತ್ತು ಅದರಿಂದ ಮುಕ್ತಿಯನ್ನು ಕಾಣುವ ಹಂತದಲ್ಲಿತ್ತು. ಅದಕ್ಕಾಗಿ ಗಾಂಧೀಜಿ, ಬಾಲಗಂಗಾಧರ ತಿಲಕರಂತ ಮಹಾನ್ ನಾಯಕರು ದೇಶದಲ್ಲೆಲ್ಲ ಸಂಚರಿಸಿ ಭಾಷಣಗಳನ್ನು ಮಾಡಿದರು. ಅವರ ಭಾಷಣಗಳ ಅನುವಾದ ಕಾರ್ಯವು ಕನ್ನಡದ ನಾಡಿನಲ್ಲಿ ನಡೆಯಿತು. ಈ ಸ್ವಾತಂತ್ರ ಹೋರಾಟದ ಚಳುವಳಿಗಳು ದೇಶಪ್ರೇಮ ಗೀತೆಗಳ ರಚನೆಗೆ ಪ್ರೇರಣೆಯನ್ನು ನೀಡಿದವು.

ಹೀಗೆಯೇ ರಾಷ್ಟ್ರಪ್ರೇಮ, ದೇಶಾಭಿಮಾನ ಮೊದಲಾದವುಗಳು ಅಂದಿನ ಮೌಲ್ಯಗಳಾಗಿದ್ದವು. ಇದು ನವೋದಯದ ಕವಿಗಳಿಗೆ ವಸ್ತುವಿನ ದೃಷ್ಟಿಯಿಂದ ಪ್ರೇರಣೆಯನ್ನು ನೀಡಿತು. ಈ ಎಲ್ಲ ಪ್ರೇರಣೆಗಳಿಂದ ಒಟ್ಟುಗೂಡಿ ನವೋದಯವೆಂಬ ದೀಪ ಉದಯಿಸಿತು.

ನವೋದಯದ ಸಾಹಿತ್ಯದ ಲಕ್ಷಣ ಧೋರಣೆಗಳು

ಕನ್ನಡ ಸಾಹಿತ್ಯದಲ್ಲಿ ನವೋದಯ ಎಂಬುದನ್ನು ಮೊದಲು ಬಳಕೆಗೆ ತಂದವರು ಈ ಮೊದಲೇ ಹೇಳಿರುವಂತೆ ಬಿ.ಎಂ.ಶ್ರೀಯವರು ಇವರ 'ಇಂಗ್ಲೀಷ್ ಗೀತಗಳು' 1921 ರಲ್ಲಿ ಪ್ರಕಟವಾದಾಗ ಅದರಲ್ಲಿ 12 ಕವನಗಳಿದ್ದವು. 1924 ರಲ್ಲಿ ಅದರಲ್ಲಿ 24 ಕವನಗಳನ್ನು ಶ್ರೀಯವರು ಸೇರಿಸಿದರು. ತದನಂತರ 1926 ರಲ್ಲಿ ಪ್ರಕಟವಾದಾಗ ಅದರಲ್ಲಿ 60 ಕವನಗಳಿದ್ದವು. ಇವು ಇಂಗ್ಲೀಷ್ ಕವನಗಳ ಅನುವಾದಗಳು. ಇಲ್ಲಿಂದ ಪ್ರಾರಂಭಗೊಂಡ ನವೋದಯ ಸಾಹಿತ್ಯ 1945 ರವರೆಗೂ ಮುಂದುವರೆಯಿತು. ಈ ನವೋದಯ ಸಾಹಿತ್ಯದ ಲಕ್ಷಣ ಧೋರಣೆಗಳು ಕೆಳಗಿನಂತಿವೆ.

1. ನಿಸರ್ಗ ಪ್ರಿಯತೆ

ನವೋದಯದ ಸಾಹಿತ್ಯದ ಹಲವಾರು ಕವಿಗಳು ನಿಸರ್ಗ ಪ್ರಿಯರಾಗಿದ್ದರು. ಅವರು ನಿಸರ್ಗದ ಹಲವಾರು ಮುಖಗಳನ್ನು ತಮ್ಮ ಕಾವ್ಯದಲ್ಲಿ ಚಿತ್ರಿಸಿರುವರು. ಅಲ್ಲಿ ನಿಸರ್ಗ ಮತ್ತು ಮಾನವನ ನಡುವಿನ ಸಂಬಂಧವನ್ನು ತಿಳಿಯಪಡಿಸಿದರು. ಇವರ ಕಾವ್ಯರಚನೆಗೆ ನಿಸರ್ಗದ ಹಲವಾರು ವಸ್ತುಗಳು ಪ್ರೇರಣೆಯನ್ನು ಒದಗಿಸಿವೆ. ಉದಾ: ಕುವೆಂಪು ಅವರ 'ರಾಮಾಯಣ ದರ್ಶನಂ' ದಲ್ಲಿ ಸ್ವಪ್ನಗಳ ಮತ್ತು ಒಳಗಣ್ಣಿಗೆ ಕಾಣುವ ದೃಶ್ಯಗಳ ಮಹತ್ವ ಎದ್ದು ಕಾಣುತ್ತದೆ. ಅದರಂತೆ ಬೇಂದ್ರೆಯವರ ಕವನದಲ್ಲಿ ಇಂದ್ರಿಯ ಜಗತ್ತಿನಲ್ಲಿ ಅತೀಂದ್ರಿಯ ಜಗತ್ತಿಗೆ ಮತ್ತೆ ಮತ್ತೆ ಸಾಗುತ್ತವೆ.

2. ಭಾವ ಪ್ರಧಾನತೆ

ನವೋದಯ ಸಾಹಿತ್ಯದ ಕವಿಗಳು ತಮ್ಮ ಕಾವ್ಯಗಳನ್ನು ರಚಿಸುವಾಗ ಅವುಗಳು ಭಾವಪ್ರಧಾನವಾಗಿರುವಂತೆ ರಚನೆ ಮಾಡಿದರು.

3. ಬಾಳಿನ ಅರ್ಥಪೂರ್ಣತೆ

ಬಾಳು ಸ್ವೀಕಾರಾರ್ಹ ಎಂದು ಸಾರಿದ ನವೋದಯ ಸಾಹಿತ್ಯವು ಬಾಳಿನ ಅರ್ಥಪೂರ್ಣತೆಯನ್ನು ಬಿಂಬಿಸುವ ಹಲವಾರು ಕಾವ್ಯ ಕೃತಿಗಳು ರಚನೆಗೊಂಡವು.

4. ನಾದ ಮಾಧುರ್ಯ

ನವೋದಯ ಸಾಹಿತ್ಯದ ಕಾವ್ಯದಲ್ಲಿ ನಾದಮಾಧುರ್ಯ ಮತ್ತು ಪ್ರಾಸಪ್ರಿಯತೆಯನ್ನು ಕಾಣುತ್ತೇವೆ. ಈ ಸಾಹಿತ್ಯದ ಘಟ್ಟದಲ್ಲಿ ಹುಟ್ಟಿದ ಸಾಕಷ್ಟು ಕಾವ್ಯಗಳು ಭಾವನಾತ್ಮಕ ಸತ್ವಗಳನ್ನು ಪಡೆದುಕೊಂಡಿದ್ದರಿಂದ ಅವುಗಳು ನಾದಮಾಧುರ್ಯದಿಂದ ಕೂಡಿರುವಂಥವುಗಳಾಗಿವೆ.

5. ಭಕ್ತಿ ಗೌರವ

ನವೋದಯ ಸಾಹಿತ್ಯದಲ್ಲಿ ದೇಶ, ನಾಡು-ನುಡಿ, ಸ್ವಾತಂತ್ರ್ಯ ಮೊದಲಾದವುಗಳ ಬಗೆಗೆ ಭಕ್ತಿಯನ್ನುಂಟುಮಾಡುವ, ಜನರಲ್ಲಿ ಶ್ರದ್ಧೆಯನ್ನು ಬೆಳೆಸುವ ಪ್ರಯತ್ನ ಈ ಸಾಹಿತ್ಯ ರಚನೆಯಲ್ಲಿ ನಡೆಯಿತು.

6. ಆಧ್ಯಾತ್ಮಿಕತೆ

ಆಧ್ಯಾತ್ಮಿಕತೆಯು ನವೋದಯ ಸಾಹಿತ್ಯದ ಲಕ್ಷಣವಾಗಿದೆ. ಈ ಕವಿಗಳು ಬಾಳಿನ ಸತ್ಯದೊಂದಿಗೆ ಆಧ್ಯಾತ್ಮಿಕತೆಯನ್ನು ಸಾರಿದರು. ಅವರು ಆಧ್ಯಾತ್ಮಿಕ ಜೀವನವೇ ಸಾರ್ಥಕ ಜೀವನವೆಂದರು.
ಹೀಗೆಯೇ ನವೋದಯ ಸಾಹಿತ್ಯದಲ್ಲಿ ಕಾವ್ಯದ ದೃಷ್ಟಿಯಿಂದ ಪ್ರಕೃತಿಗೀತೆಗಳು ರಾಷ್ಟ್ರೀಯ ಗೀತೆಗಳು, ಸಾಮಾಜಿಕ ಗೀತೆಗಳು ಮತ್ತು ಆಧ್ಯಾತ್ಮಿಕ ಗೀತೆಗಳೆಂದು ಅವುಗಳನ್ನು ವಿಂಗಡಣೆ ಮಾಡಬಹುದಾಗಿದೆ.

ಪ್ರಗತಿಶೀಲ

"1945 ರ ಸುಮಾರಿಗೆ ಹೊಸದೊಂದು ಗಾಳಿ ಬೀಸಲಾರಂಭಿಸಿತು. ಇದು ಅಖಿಲ ಭಾರತದಲ್ಲಿ ಬೀಸಿದ ಗಾಳಿ. ಈ ಗಾಳಿಯಲ್ಲಿ ಉಸಿರಾಡಿ ಇದರಿಂದ ಚೇತನ ಪಡೆದವರು ತಮ್ಮನ್ನು 'ಪ್ರಗತಿಶೀಲರು' ಎಂದು ಕರೆದುಕೊಂಡರು." ಇದೇ ಪ್ರಗತಿಶೀಲ ಚಳುವಳಿಯಾಗಿ ರೂಪುಗೊಂಡಿತು. ಕನ್ನಡನಾಡಿನಲ್ಲಿ ಅ.ನ. ಕೃಷ್ಣರಾಯರು ಪ್ರಗತಿಶೀಲ ಚಳುವಳಿಯ ನಾಯಕತ್ವವನ್ನು ವಹಿಸಿಕೊಂಡರಲ್ಲದೆ ಪ್ರಗತಿಶೀಲ ಲೇಖಕರ ಸಂಘದ ಅಧ್ಯಕ್ಷರೂ ಆದರು. ಅದಕ್ಕಾಗಿ ನಾಡಿನ ಹಲವಾರು ಕಡೆಗೆ ಸಂಚರಿಸಿ ಭಾಷಣಗಳನ್ನು ಮಾಡಿದರಲ್ಲದೇ ಅದಕ್ಕಾಗಿ ಪುಸ್ತಕಗಳನ್ನು ಮತ್ತು ಹಲವು ಲೇಖನಗಳನ್ನು ರಚಿಸಿದರು. ಪ್ರಗತಿಶೀಲ ಎಂದರೆ ಪ್ರಗತಿಯ ಲಕ್ಷಣವೆಂದು, ಇದರ ಶಬ್ದಕೋಶದ ಅರ್ಥ, "ಮುಂದೆ ಹೋಗುವುದು ಎಂದು. ಈಗ ಇರುವ ಸ್ಥಿತಿಯು ಬದಲಾಗಿ ಮತ್ತೊಂದು ಸ್ಥಿತಿಗೆ ದಾರಿಮಾಡಿಕೊಡುವ ಪ್ರಗತಿಯೆಂದಾಗ ಆ ಪದವು ವರ್ಣನಾತ್ಮಕವಾಗುತ್ತದೆಯೇ ವಿನ ಗುಣಾತ್ಮಕವಾಗುವುದಿಲ್ಲ. ಎಂದರೆ, ಬದಲಾವಣೆಯು ಒಳ್ಳೆಯದರಲ್ಲಿ ಪರಿಣಮಿಸಬಹುದು. ಅಥವಾ ದುರಂತದಲ್ಲಿ ಮುಕ್ತಾಯವಾಗಬಹುದು." ಪ್ರಗತಿಶೀಲ ಸಾಹಿತ್ಯವು ಅಧುನಿಕ ಸಾಹಿತ್ಯಕ್ಕೆ ಒಂದು ಹೊಸ ಆಯಾಮವನ್ನು ಒದಗಿಸಿತು. ರಷ್ಯಾದ ಮಾರ್ಕ್ಸವಾದದ ಪ್ರೇರಣೆಯಿಂದ ಉದ್ಭವಿಸಿದ ಈ ಸಾಹಿತ್ಯ ಪ್ರಕಾರವು ಸಮಾಜದಲ್ಲಿ ನಡಯುವ ಶೋಷಣೆ, ದೌರ್ಜನ್ಯ, ಕೂಲಿಕಾರರ ಕಷ್ಟನಷ್ಟ ಮೊದಲಾದ ಸಮಸ್ಯೆಗಳ ಕುರಿತು ರಚಿತಗೊಳ್ಳುವುದು ಇದರ ಧೋರಣೆಯಾಯಿತು. ಈ ಕವಿಗಳಿಂದ ರಚಿತವಾದ ಸಾಹಿತ್ಯದಲ್ಲಿ ವಾಸ್ತವಿಕತೆಯ ಚಿತ್ರವನ್ನು ನಾವು ಕಾಣುತ್ತೇವೆ. ಇಲ್ಲಿ ಮಡಿವಂತಿಕೆಯೆಂಬುದಿಲ್ಲ. ನವೋದಯವು ಮಧ್ಯಮ ವರ್ಗದವರ ಕಡೆಗೆ ಮುಖ ತಿರುಗಿಸಿದರೆ ಈ ಪ್ರಗತಿಶೀಲ ಸಾಹಿತ್ಯವು ಕೆಳವರ್ಗದ ಜನರ ಸಮಸ್ಯೆಗಳ ಕುರಿತಾಗಿ ಹುಟ್ಟಿತು. ಸಾಮಾಜಿಕ ಪ್ರಜ್ಞೆಯೆನ್ನುವುದು ಪ್ರಗತಿಶೀಲದ ಬಹುಮುಖ್ಯವಾದ ಅಂಗ. ಇಲ್ಲಿ ನವೋದಯಕ್ಕಿಂತ ಹೆಚ್ಚು ಸಾಮಾಜಿಕ ಪ್ರಜ್ಞೆಯನ್ನು ಕಾಣುತ್ತೇವೆ. ಇದರ ಬೆಳವಣಿಗೆಯು ಕಂಡುಬರುವುದು, ಕಾವ್ಯಕ್ಕಿಂತಲೂ ಕಾದಂಬರಿ ಕ್ಷೇತ್ರದಲ್ಲಿ. ಪ್ರಗತಿಶೀಲ ಸಾಹಿತ್ಯದ ವಸ್ತು ಸಮಾಜದಲ್ಲಿ ಕಂಡುಬರುವ ಕೊಳೆಯನ್ನು ಹೊರಕ್ಕೆಳೆದು ಅದರ ಬಗೆಗೆ ಮುಚ್ಚುಮರೆ ಇಲ್ಲದೆ ಬರೆಯುವುದು. ಈ ಸಾಹಿತ್ಯ ಯುಗದಲ್ಲಿ ಮೂಡಿ ಬಂದ ಕೃತಿಗಳನ್ನು ನೋಡಿದರೆ ನವೋದಯ ಸಾಹಿತ್ಯಕ್ಕಿಂತ ಇದು ಭಿನ್ನವೆಂಬುದು ಗೋಚರವಾಗುತ್ತದೆ. ಬದುಕು ಸ್ವೀಕಾರಾರ್ಹ ಎಂದು ನವೋದಯ ಲೇಖಕರು ಹೇಳಿದ್ದರೆ, ಈ ಪ್ರಗತಿಶೀಲರು ಬದುಕನ್ನು ಸ್ವಚ್ಛಗೊಳಿಸುವ ಮನೋಧರ್ಮದವರಾಗಿದ್ದರು.

ಪ್ರಗತಿಶೀಲ ಸಾಹಿತ್ಯಕ್ಕೆ ಉಂಟಾದ ಪ್ರೇರಣೆ–ಪ್ರಭಾವಗಳು

ಹೊಸಗನ್ನಡ ಸಾಹಿತ್ಯದಲ್ಲಿ ಪ್ರಗತಿಶೀಲ ಸಾಹಿತ್ಯವು ಬೆಳೆದು ಬರಲು ಅಥವಾ ಮೂಡಿಬರಲು ಪ್ರೇರಣೆ ಪ್ರಭಾವವನ್ನೊದಗಿಸಿದ ಪ್ರಮುಖ ಅಂಶಗಳೆಂದರೆ

1. ಇಂಗ್ಲೀಷ್ ಶಿಕ್ಷಣದ ಪ್ರೇರಣೆ – ಪ್ರಭಾವ
2. ಪಾಶ್ಚಾತ್ಯ ಕವಿಗಳ ಪ್ರೇರಣೆ
3. ಬಂಗಾಳಿ ಸಾಹಿತ್ಯದ ಗಾಢವಾದ ಪ್ರಭಾವ

4. ರಷ್ಯಾದ ಮಾರ್ಕ್ಸ್‌ವಾದದ ಸ್ಥಿತಿ ಗತಿ
5. ಪತ್ರಿಕೆಗಳ ಪ್ರಭಾವ
6. ಸಾಮಾಜಿಕ ಶೋಷಣೆ, ದಬ್ಬಾಳಿಕೆ
7. ವಚನ ಸಾಹಿತ್ಯದ ಪ್ರೇರಣೆ

ಪ್ರಗತಿಶೀಲ ಸಾಹಿತ್ಯದ ಲಕ್ಷಣಗಳು

ಪ್ರಗತಿಶೀಲ ಸಾಹಿತ್ಯದ ನಾಯಕರಾದ ಅ.ನ.ಕೃ. ಅವರು 1946 ರ ಅಕ್ಟೋಬರ್ 27 ರಂದು ಧಾರವಡ ಜಿಲ್ಲೆಯ 6 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಪ್ರಗತಿಶೀಲ ಚಳುವಳಿಯ ಬಗೆಗೆ ವ್ಯಕ್ತಪಡಿಸಿದ ಹಲವು ಅಭಿಪ್ರಾಯಗಳನ್ನು ಇಲ್ಲಿ ನೋಡುವುದು ಅವಶ್ಯವೆನಿಸುತ್ತದೆ.

"ಜನತೆಯ ಮನೋವಿಕಾಸಕ್ಕೆ ಸಾಹಿತ್ಯ ಸಾಧನವೆಂಬ ಭಾವನೆ ಬೇಳೆಸಲು ಪ್ರಯತ್ನ ಸಾಕಷ್ಟು ಆಗಿಲ್ಲ. ಸಾಹಿತಿ ತನ್ನ ಸ್ವರ್ಣಮಂದಿರದಿಂದ ಹೊರಬೀಳಲೊಲ್ಲ. ಸಾಮಾನ್ಯ ತನ್ನ ಹೊಟ್ಟೆಯ ಹೋರಾಟದಲ್ಲಿ ಸಾಹಿತ್ಯಕ್ಕೆ ಗಮನ ಕೊಡಲೊಲ್ಲ. ... ಸಾಹಿತ್ಯವೆಂಬ ಮಡಿವಂತಿಕೆ ಕೋಟೆಯನ್ನು ಕಟ್ಟಿಕೊಂಡು.. ತನ್ನ ಭಾವಪ್ರಪಂಚದಲ್ಲಿ ಮೈಮರೆಯುವ ಸಾಹಿತಿ, ತನ್ನ ಅಥವಾ ದೇಶದ ಹಿತವನ್ನು ಸಾಧಿಸಲಾರ. ಜಗತ್ತಿನ ಪ್ರತಿಯೊಂದು ವಿಷಯವೂ ಅವನ ಕುಲುಮೆಗೆ ಸೇರಿದೆ. ವರ್ಗ ವೈಷಮ್ಯವನ್ನು ಸಾಹಿತ್ಯ ಕೆರಳಿಸುವುದಿಲ್ಲ. ಅನ್ಯಾಯ, ಕ್ರೌರ್ಯ, ದಬ್ಬಾಳಿಕೆ ಯಾರಲ್ಲಿ ಕಂಡುಬಂದರೂ ಅವನು ಸಿಡಿದೇಳುತ್ತಾನೆ... ಎಲ್ಲ ಸಾಹಿತ್ಯ, ಕಲೆಗಳ ಉಗಮಕ್ಕೂ ಸಾಮನ್ಯ ಜನತೆಯೇ ಮೂಲ. ... ಉತ್ತಮ ಕಲೆಯ ತಾಯಿಬೇರು ಸಾಮಾನ್ಯ ಜೀವನದಲ್ಲಿ ಅಡಗಿದೆ. ... ನವೋದಯ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಪದದೊಂದಿಗೆ ಪೂರ್ಣ ಬೆರೆಯುವ ಮನೋಭಾವನೆ ಇರಲಿಲ್ಲ. ಆದ್ದರಿಂದಲೇ ಅದರಿಂದ ಅತೃಪ್ತಿ ಹುಟ್ಟಿತು. ನವೋದಯ ಕವಿಗಳು ನಿರ್ವಿಣ್ಣರಾಗಿ ಕುಳಿತಾಗ ಪ್ರಗತಿಶೀಲರು ಜನಕ್ಕೆ ಧೈರ್ಯ, ಸ್ಥೈರ್ಯಗಳನ್ನು ನೀಡಿದರು. ಪರಂಪರಾಗತವಾಗಿ ಮೌಢ್ಯವನ್ನು ರೂಢಿಸಿಕೊಂಡು ಬಂದಿದ್ದ ಸಾಹಿತ್ಯವನ್ನು ಪ್ರಗತಿಶೀಲರು ಖಂಡಿಸುತ್ತಾ ಬಂದರು. ... ಶಾಂತಿ ದುರ್ಬಲತೆಯಿಂದ ದೊರೆಯುವುದಿಲ್ಲ. ಕ್ರಾಂತಿಯಾದ ನಂತರವೇ ಶಾಂತಿ ಸಾಧ್ಯ. ಎಂದೋ ಆಗಿಹೋದ ಹರಿಶ್ಚಂದ್ರರಾಮರ ಸತ್ಯಪ್ರಿಯತೆಯನ್ನು ನೆನೆಯುತ್ತ ಕುಳಿತಲ್ಲಿ ಬಂದ ಲಾಭವೇನು? ... ಸಾಹಿತ್ಯ ವಿಲಾಸದ ಸಾಧನವಲ್ಲ. ದೇಶೋದ್ಧಾರಕ್ಕೆ ಆತ್ಮೋದ್ಧಾರಕ್ಕೆ ಸಾಧನವಾಗಿರುವ ಗಾಯಿತ್ರಿಯದು."

ಪ್ರಗತಿಶೀಲ ಸಾಹಿತ್ಯದ ಲಕ್ಷಣಗಳು ಹೀಗಿವೆ:

1. ಪ್ರಗತಿಶೀಲ ಸಾಹಿತ್ಯವು ನವೋದಯ ಸಾಹಿತ್ಯದಂತೆ ಜೀವನ ನಿಷ್ಠೆಯುಳ್ಳದ್ದಾಗಿದೆ.
2. ಪ್ರಗತಿಶೀಲ ಸಾಹಿತ್ಯವು ಮಧ್ಯಮ ವರ್ಗ ಮತ್ತು ದುರ್ಬಲ ವರ್ಗದ ಜನರ ಬಗೆಗೆ ಚಿಂತನೆ ಮಾಡುತ್ತದೆ.
3. ಕ್ರಾಂತಿಯಿಂದಲೇ ಶಾಂತಿ ಸಾಧ್ಯವೆಂದು ಪ್ರಗತಿಶೀಲ ಸಾಹಿತ್ಯ ಸಾರುತ್ತದೆ.
4. ಪ್ರಗತಿಶೀಲ ಸಾಹಿತ್ಯವು ಬಂಡವಾಳಶಾಹಿಯನ್ನು ವಿರೋದಿಸುತ್ತದೆ.
5. ಬಡವ, ಶೋಷಿತರು ಹಾಗೂ ದಲಿತ ವರ್ಗದ ಜನಕ್ಕೆ ಸಹಾಯ ನೀಡುವ ಮನೋವೃತ್ತಿ ಪ್ರಗತಿಶೀಲ ಸಾಹಿತ್ಯದ್ದು.
6. ಸಮಾಜದಲ್ಲಿರುವ ಮೌಢ್ಯ ಸಂಪ್ರದಾಯಗಳನ್ನು ಕಿತ್ತೆಸೆಯುವ ಗುರಿ ಪ್ರಗತಿಶೀಲ ಸಾಹಿತ್ಯದ್ದಾಗಿದೆ.
7. ಪ್ರಗತಿಶೀಲ ಸಾಹಿತ್ಯದ ಉಸಿರು ಶ್ರಮ ಜೀವಿಗಳ ಹಿತರಕ್ಷಣೆಯಾಗಿದೆ.
8. ಪ್ರಗತಿಶೀಲ ಸಾಹಿತ್ಯ ಕೃತಿಗಳ ಮೂಲ ಉದ್ದೇಶ ಜೀವನದ ನಗ್ನ ಸತ್ಯವನ್ನು ನಿರೂಪಿಸುವುದು.

9. ಪ್ರಗತಿಶೀಲ ಸಾಹಿತ್ಯ ವಾಸ್ತವಿಕತೆಗೆ ಹೆಚ್ಚು ಗಮನ ಕೊಡುತ್ತದೆ.
10. ರೋಷ ಮತ್ತು ಆವೇಶಗಳನ್ನು ಹೆಚ್ಚು ಉಳ್ಳದ್ದು.

ಪ್ರಗತಿಶೀಲ ಸಾಹಿತ್ಯದ ಧೋರಣೆಗಳು

1. **ಮೌಢ್ಯ ಸಂಪ್ರದಾಯಗಳ ಖಂಡನೆ**

ಪ್ರಗತಿಶೀಲ ಸಾಹಿತ್ಯವು ಸಮಾಜದಲ್ಲಿರುವ ಮೌಢ್ಯ ಸಂಪ್ರದಾಯಗಳನ್ನು ತೆಗೆದುಹಾಕುವ ಗುರಿ ಹೊಂದಿರುವುದು. ಬಸವರಾಜ ಕಟ್ಟಿಮನಿಯವರ ಜರತಾರಿ ಜಗದ್ಗುರು, ಮೋಹದ ಬಲೆಯಲ್ಲಿ ಮತ್ತು ಅ.ನ.ಕೃ. ಅವರ ನಗ್ನಸತ್ಯ, ಶನಿಸಂತಾನ ಮೊದಲಾದ ಕಾದಂಬರಿಗಳಲ್ಲಿ ಮೌಢ್ಯ ಸಂಪ್ರದಾಯಗಳನ್ನು ಖಂಡಿಸುವ ಧೋರಣೆಗಳು ಕಂಡುಬರುತ್ತವೆ.

2. **ಕ್ರಾಂತಿಯಿಂದ ಮಾತ್ರ ಶಾಂತಿ ಎಂಬ ಮನೋಧರ್ಮ**

ಸಾಹಿತಿಯ ಕ್ರಾಂತಿ ಎಂಬ ಖಡ್ಗದಿಂದ ಈ ಸಮಾಜದ ತಾಮಸಗಳು ಕಳೆಯಬೇಕು ಎನ್ನುವುದು ಪ್ರಗತಿಶೀಲರ ಪ್ರಮುಖ ಧೋರಣೆ. ವ್ಯಕ್ತಿ ಅಥವಾ ಸಮಾಜ ಶಾಂತಿಯಿಂದ ಬದುಕಲು ಕ್ರಾಂತಿ ಅವಶ್ಯ, ಅನಿವಾರ್ಯವಾದದ್ದು ಎಂಬ ಮನೋಭಾವವನ್ನು ಪ್ರಗತಿಶೀಲರು ಹೊಂದಿದ್ದರು.

3. **ಸಾಮಾಜಿಕ ಮತ್ತು ಧಾರ್ಮಿಕ ಆಷಾಢಭೂತಿತನದ ಅನಾವರಣ**

ಪ್ರಗತಿಶೀಲ ಸಾಹಿತ್ಯದ ಲೇಖಕರು ಸಮಾಜದಲ್ಲಿದ್ದ ಕೊಳೆಯನ್ನು ತೊಡೆದು ಹಾಕುವ ಛಲದಿಂದಾಗಿ ಗೌರವಸ್ಥರ ವಿಷಯವನ್ನು ಆರಿಸಿ ಬಯಲಿಗೆಳೆದರು. ಮಠಗಳಲ್ಲಿ, ದೇವಾಲಯಗಳಲ್ಲಿ ಮತ್ತು ಮನೆಗಳಲ್ಲಿ ನಡೆಯುವ ಮೋಸ ವಂಚನೆಗಳನ್ನು ಬಯಲು ಮಾಡಿದರು.

4. **ಪ್ರಗತಿಶೀಲ ಚಳುವಳಿಯು ಒಂದು ಪ್ರತಿಭಟನೆಯಾಯಿತು**

ಪ್ರಗತಿಶೀಲ ಸಾಹಿತ್ಯವು ಅದರ ಚಳುವಳಿಯು ಪ್ರತಿಭಟನೆಯ ರೂಪದಲ್ಲಿ ಪ್ರಾರಂಭವಾಯಿತು. "ರಾಜ ಸೇವಾಸಕ್ತರ ಮತ್ತು ಜರತಾರಿ ರುಮಾಲಿನವರ ಸಾಹಿತ್ಯ ಸಾಕು ಎಂಬುದು ಪ್ರಗತಿಶೀಲರ ಕೂಗಾಗಿತ್ತು."

5. **ಸಮತಾವಾದದ ಪ್ರತಿಪಾದನೆಯೊಂದಿಗೆ ಬಂಡವಾಳ ಶಾಹಿಯ ವಿರೋಧ**

ಪ್ರಗತಿಶೀಲ ಸಾಹಿತ್ಯದಲ್ಲಿ ಸಮತಾವಾದವನ್ನು ಪ್ರತಿಪಾದನೆ ಮಾಡುತ್ತಾ ಬಂಡವಾಳ ಶಾಹಿಯ ವಿರೋಧವನ್ನು ಮಾಡುತ್ತದೆ. ದುಡಿಯುವ ಕಾರ್ಮಿಕ ವರ್ಗದ ಶೋಷಣೆ, ಅವರ ಸಮಸ್ಯೆಗಳನ್ನು ಕುರಿತು ಚಿಂತಿಸುತ್ತದೆ. ತರಾಸು ಅವರು 'ಮುಂಜಾವಿನಿಂದ ಮುಂಜಾವು' ಮತ್ತು ನಿರಂಜನರ 'ಚಿರಸ್ಮರಣೆ' ಮೊದಲಾದ ಕೃತಿಗಳಲ್ಲಿ ಈ ಅಂಶಗಳು ಗೋಚರಿಸುತ್ತವೆ.

6. **ದೀನದಲಿತರ ಶೋಷಣೆಯ ಚಿತ್ರಣ**

ಪ್ರಗತಿಶೀಲ ಲೇಖಕರ ಕೃತಿಗಳಲ್ಲಿ ಸಮಾಜುು ಬಹುಸಂಖ್ಯಾತ ಜನರಾದ ಮಧ್ಯಮ ವರ್ಗ ಹಾಗೂ ದೀನ ದಲಿತರ ಸಮಸ್ಯೆಗಳನ್ನು ಅವರಿಗೆ ಉಂಟಾಗುವ ಶೋಷಣೆಯ ಚಿತ್ರಣವು ಕಾಣಸಿಗುತ್ತದೆ.

ಉದಾ : ತ.ರಾ.ಸು ಅವರ 'ಪುರಾಷಾವತಾರ', ಕಟ್ಟಿಮನಿಯವರ 'ಬೂಟ್ಪಾಲಿಶ್' ನಿರಂಜನ ಅವರ 'ಕೊನೆಯ ಗಿರಾಕಿ' ಹಾಗೂ ಚದುರಂಗದ 'ನಾಲ್ಕು ಮೊಳ ಭೂಮಿ' ಎಂಬ ಕೃತಿಗಳನ್ನು ಪರಿಭಾವಿಸಬೇಕು.

ನವ್ಯ

"ಸುಮಾರು 1950 ರ ವೇಳೆಗೆ ನವೋದಯ ಕಾವ್ಯ ಮಾರ್ಗದ ಸತ್ವ ತೀರಿತು. ಹೊಸ ಕಾವ್ಯ ಮಾರ್ಗದ ಅವಶ್ಯಕತೆಯಿದೆ ಎಂಬ ಭಾವ ಬಲಿತು ನವೋದಯ ಕವ್ಯ ಮಾರ್ಗಕ್ಕೆ ಪ್ರತಿಭಟನೆಯಾಗಿ ಹೊಸ ಕಾವ್ಯ ಮಾರ್ಗವೊಂದು ಕನ್ನಡದಲ್ಲಿ ರೂಪ ತಾಳಿತು. ಇದರ ಅವಶ್ಯಕತೆಯನ್ನು ಒತ್ತಿ ಹೇಳಿದ ವಿ.ಕೃ.ಗೋಕಾಕ್ ಅವರು ಹೊಸ ಕಾವ್ಯಮಾರ್ಗವನ್ನು 'ನವ್ಯ ಮಾರ್ಗ'ವೆಂದು ಕರೆದರು." ಮುಂದೆ 1952 ರ ಸುಮಾರಿಗೆ ಗೋಪಾಲ ಕೃಷ್ಣ ಅಡಿಗರು ತಮ್ಮ 'ನಡೆದು ಬಂದ ದಾರಿ' ಸಂಕಲನದಲ್ಲಿ ಈ ಹೊಸ ಕಾವ್ಯ ಮಾರ್ಗಕ್ಕೆ ಒಂದು ಭದ್ರವಾದ ಬುನಾದಿ ಹಾಕಿದರು.

ನವ್ಯ ಎಂಬ ಪದವು 'ಹೊಸದು' ಎಂಬ ಅರ್ಥವನ್ನು ಹೊಂದಿದ್ದು, ಅದು "ನೆನ್ನೆಯ ಹೊಸದು ಇಂದಿಗೆ ಹಳೆಯದು. ಇವತ್ತಿನ ಹೊಸದು ನಾಳೆಗೆ ಹಳೆಯದು. ಆದ್ದರಿಂದ 'ನವ್ಯಕಾವ್ಯ' ಎಂದಾಗ ಅಡಿಗರು ಹೇಳುವಂತೆ 'ಇದು ಎಲ್ಲ ರೀತಿಯಿಂದಲೂ ನವ್ಯ, ನ ಭೂತೋ ನ ಭವಿಷ್ಯತಿ ಎಂದು ಅರ್ಥ ಹಚ್ಚಬೇಕಾಗಿಲ್ಲ. ಹಾಗೆ ನೋಡಿದರೆ ಶ್ರೇಷ್ಠ ಕಾವ್ಯ ಯಾವಾಗಲೂ ನವ್ಯತೆಯ ಅಂಶವನ್ನು ಒಳಗೊಂಡೇ ಇರುತ್ತದೆ. ಆದ್ದರಿಂದ ನವ್ಯಕಾವ್ಯ ಎಂಬುದು ನವೋದಯ ಕಾವ್ಯ ಮಾರ್ಗಕ್ಕಿಂತ ಭಿನ್ನವಾದ ಕಾವ್ಯ ಮಾರ್ಗವನ್ನು ಸೂಚಿಸಲು ಬಳಕೆಯಾದ ಒಂದು ಪಾರಿಭಾಷಿಕ ಪದ."

ನವ್ಯತೆ ಇದು ಮೊಟ್ಟ ಮೊದಲು ಫ್ರಾನ್ಸಿನ ಅರ್ ನಾವೋ (Art Nouveau–ಹೊಸ ಕಲೆ) ಎಂಬ ಪದದಿಂದ ಬಳಕೆಯಾಗಿ ನಂತರ ಒಂದು ಮಾರ್ಗವನ್ನು ಸೂಚಿಸುವ ಪದವಾಗಿ ಬಳಕೆಯಾಯಿತು. ಈ ನವ್ಯ ಕಾವ್ಯವು ನವೋದಯ ಕಾವ್ಯದಂತೆ ಪಾಶ್ಚಾತ್ಯ ಸಾಹಿತ್ಯದ Modernist Poetry ಎಂಬುದಕ್ಕೆ ಸಂವಾದಿ ರೂಪದಲ್ಲಿ ನವ್ಯಕಾವ್ಯ ಬಳಕೆಯಲ್ಲಿ ಬಂದಿರುವುದು. "ನವೋದಯ ಕಾವ್ಯಕ್ಕೆ ಆಧುನಿಕಕಾವ್ಯ ಎಂಬ ಮತ್ತೊಂದು ಹೆಸರೂ ಬಳಕೆಯಲ್ಲಿ ಇದ್ದಿತ್ತಾದ್ದರಿಂದ ಇಂಗ್ಲೀಷಿನ ಮಾಡರ್ನ ಪೊಯಟ್ರಿಯಿಂದ ಪ್ರೇರಣೆ ಪಡೆದ ಕನ್ನಡ ಕಾವ್ಯವನ್ನು ಆಧುನಿಕಕಾವ್ಯ ಎಂದು ಕರೆಯುವಂತಿರಲಿಲ್ಲ. ಆದ್ದರಿಂದ ಅದನ್ನು ಕನ್ನಡದ ಸಂದರ್ಭದಲ್ಲಿ ನವ್ಯಕಾವ್ಯ ಎಂದು ಕರೆಯಬೇಕಾಗಿ ಬಂದಿತೆಂದು ತೋರುತ್ತದೆ" ಎಂದು ಜಿ.ಎಚ್.ನಾಯಕ ಅವರು ಹೇಳಿದರೆ 'ನವ್ಯಕಾವ್ಯ' ಎಂಬುದನ್ನು ಮೊದಲು ಬಳಕೆ ಮಾಡಿದ ವಿ.ಕೃ..ಗೋಕಾಕ ಅವರು 1950 ರಲ್ಲಿ ಮುಂಬಯಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯ ಗೋಷ್ಠಿಯ ಅಧ್ಯಕ್ಷರಾಗಿ ಮಾಡಿದ ಉಪನ್ಯಾಸದಲ್ಲಿ "ನವ್ಯ ಎಂಬ ಶಬ್ದವನ್ನು ಇಲ್ಲಿಯವರೆಗೆ ಬರೀ ಸಾಮಾನ್ಯ ಅರ್ಥದಲ್ಲಿ ಬಳಸಿದ್ದೇನೆ. ಆದರೆ 'ನವ್ಯಕಾವ್ಯ' ವೆಂದರೆ ಆಧುನಿಕ ಕಾವ್ಯಕ್ಕಿಂತ ಬೇರೆಯಾದ ಕಾವ್ಯ. ವಿಶೇಷ ತಂತ್ರ–ವಿಧಾನಗಳನ್ನು ಪೆಡದ ಕಾವ್ಯವೆಂಬರ್ಥದಲ್ಲಿ ಆ ಶಬ್ದವನ್ನು ಪ್ರಯೋಗಿಸುತ್ತೇನೆ" ಎಂದು ಹೇಳಿದ್ದಾರೆ.

ಹೀಗೆ ನವ್ಯತೆ ಅಥವಾ ನವ್ಯಕಾವ್ಯ ಎಂಬುದು ಹೊಸಗನ್ನಡ ಸಾಹಿತ್ಯದ ಘಟ್ಟದಲ್ಲಿ 1950 ರಿಂದ 1980 ರವರೆಗೆ ಸುಮಾರು ಮೂರು ದಶಕಗಳ ಕಾಲದವರೆಗೆ ತನ್ನ ಪರಿಧಿಯನ್ನು ಚಾಚಿಕೊಂಡಿರುವುದು.

ನವ್ಯ ಸಾಹಿತ್ಯಕ್ಕೆ ಪ್ರೇರಣೆ ಪ್ರಭಾವಗಳು

1. ಇಂಗ್ಲೀಷ್ ಶಿಕ್ಷಣದ ಪ್ರೇರಣೆ–ಪ್ರಭಾವ
2. ಭಾರತೀಯರ ವಿದೇಶಿ ಪ್ರವಾಸ
3. ಪಾಶ್ಚಾತ್ಯ ಕವಿಗಳ ಪ್ರಭಾವ
4. ಸ್ವಾತಂತ್ರ್ಯ ನಂತರದಲ್ಲಿದ್ದ ಬಡತನ ಮತ್ತು ಅಜ್ಞಾನ
5. ವಿಜ್ಞಾನದ ಹೊಸ ಹೊಸ ಸಂಶೋಧನೆಗಳ ಪ್ರಭಾವ
6. ನಗರೀಕರಣ ಪ್ರಭಾವ
7. ಮೊದಲನೆಯ ಮಹಾಯುದ್ಧ
8. ಸ್ವಾತಂತ್ರ್ಯಾ ನಂತರದ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗತಿ ಹೀಗೆ ನವ್ಯ ಸಾಹಿತ್ಯ ಹಲವಾರು ಅಂಶಗಳ ಪ್ರೇರಣೆ ಮತ್ತು ಪ್ರಭಾವಗಳಿಂದ ಸ್ಪೂರ್ತಿಯನ್ನು ಪಡೆದುಕೊಂಡಿತು.

ನವ್ಯ ಸಾಹಿತ್ಯದ ಲಕ್ಷಣಗಳು

1. ನವ್ಯ ಸಾಹಿತ್ಯವು ಪ್ರಗತಿಶೀಲ ಸಾಹಿತ್ಯಕ್ಕಿಂತ ಹೆಚ್ಚಿನ ರೀತಿಯಲ್ಲಿ ವಾಸ್ತವಿಕತೆಯನ್ನು ತರಲು ಪ್ರಯತ್ನಿಸಿತು.
2. ನವ್ಯ ಸಾಹಿತ್ಯದ ಭಾಷೆ ಸರಳವಾಗಿದ್ದು, ಇದು ಪ್ರಾಸ ಮತ್ತು ಛಂದಸ್ಸಿನ ಬಂಧಗಳಿಂದ ಬಿಡುಗಡೆ ಪಡೆಯಿತು.
3. ನವ್ಯ ಸಾಹಿತ್ಯದಲ್ಲಿ ವ್ಯಕ್ತಿಯ, ವೈಯಕ್ತಿಕ ಸಮಸ್ಯೆಗಳಿಗೆ ಪ್ರಾಮುಖ್ಯತೆ ಉಂಟಾಯಿತು.
4. ಸಮಕಾಲೀನ ಸಮಸ್ಯೆಗಳೇ ನವ್ಯ ಕಾವ್ಯದ ವಸ್ತುಗಳಾದವು.
5. ನವ್ಯಸಾಹಿತ್ಯ ಮಾನವನ ಬದುಕಿನ ಸ್ವಭಾವದ ಸಮಗ್ರ ಚಿತ್ರಣವನ್ನು ನೀಡಲು ಪ್ರಯತ್ನಿಸಿತು.
6. ನವ್ಯಸಾಹಿತ್ಯದಲ್ಲಿ ಕಂಡುಬರುವ ನಾಯಕ ದುರ್ಬಲ, ಅಂತರ್ಮುಖಿ ಮತ್ತು ಸೂಕ್ಷ್ಮ ಸಂವೇದನಾಶೀಲದವನು.
7. ವೈಚಾರಿಕತೆಯು ನವ್ಯ ಸಾಹಿತ್ಯದಲ್ಲಿ ಪ್ರಾಮುಖ್ಯತೆಯನ್ನು ಪಡೆಯಿತು.
8. ಅನುಭವದ ಮೂಲಕವೇ ಜೀವನದ ಅರ್ಥವನ್ನು ಕಂಡುಕೊಳ್ಳುವ ನಿಲುವು ನವ್ಯಸಾಹಿತ್ಯದ ಲೇಖಕರದಾಗಿತ್ತು.

ನವ್ಯಸಾಹಿತ್ಯದ ಧೋರಣೆಗಳು

1. **ಭಾಷೆ ಪ್ರಾಸ, ಛಂದೋ ಬಂಧಗಳಿಂದ ಬಿಡುಗಡೆ ಪಡೆಯಿತು.**
   ನವೋದಯ ಸಾಹಿತ್ಯದಲ್ಲಿ ಭಾಷೆಯ ಲಲಿತ ಮತ್ತು ಸುಮಧುರವಾಗಿತ್ತು. ಕಾವ್ಯದಲ್ಲಿ ಇವುಗಳಿಲ್ಲದಿದ್ದರೆ ಅದು ಸಪ್ಪೆಯೆನಿಸುತ್ತದೆ. ಆದರೆ ನವ್ಯ ಸಾಹಿತ್ಯದಲ್ಲಿ ಕಾವ್ಯವು ಈ ಛಂದೋಬಂಧಗಳಿಂದ ಮುಕ್ತಿಯನ್ನು ಪಡೆದುಕೊಂಡಿತು.

2. ಬದುಕು ಸ್ವೀಕಾರಾರ್ಹ ಎಂಬ ತತ್ವದ ನಿರಾಕರಣೆ

ಬದುಕು ಅರ್ಥಪೂರ್ಣವಾದುದೆಂಬ ಅಭಿಪ್ರಾಯವನ್ನು ನವೋದಯ ಸಾಹಿತ್ಯವು ಹೊಂದಿತ್ತು. ಆದರೆ ನವ್ಯ ಸಾಹಿತ್ಯವು ಬಾಳು ಸ್ವೀಕಾರಾರ್ಹ ಎಂಬುದನ್ನು ಒಪ್ಪುವುದಿಲ್ಲ. ಅದು ವ್ಯಕ್ತಿ ನಿಷ್ಠವಾಗಿರುವುದು.

3. ಸಾಹಿತ್ಯ ಸೌಂದರ್ಯ ಸೃಷ್ಟಿಯೆಂಬ ಭಾವನೆಯ ನಿರಾಕರಣೆ

ಓದುಗರಿಗೆ ರಸಾನಂದವನ್ನುಂಟುಮಾಡುವ ಭಾವನೆಯನ್ನು ನವೋದಯ ಸಾಹಿತ್ಯವು ಹೊಂದಿದ್ದರೆ, ನವ್ಯ ಸಾಹಿತ್ಯ ಸೌಂದರ್ಯ ಸೃಷ್ಟಿ ಎಂಬ ಅಂಶವನ್ನು ನಿರಾಕರಿಸಿತು. ಸಾಹಿತ್ಯದ ಗುರಿ ಆನಂದ, ಸಾಹಿತಿಯಾದವನು ಸೌಂದರ್ಯವನ್ನು ಸೃಷ್ಟಿ ಮಾಡುವ ಒಬ್ಬ ಕಲೆಗಾರ ಎಂಬ ಭಾವನೆಗಳನ್ನು ನಿರಾಕರಿಸಿತು.

4. ಸಂಪ್ರದಾಯ ವಿರೋಧಿಯಾದ ನಿಲುವು

ನವ್ಯ ಸಾಹಿತ್ಯವು ಯಾವುದೇ ಸಂಪ್ರದಾಯವನ್ನು ಒಪ್ಪಿಕೊಂಡು ರಚಿತವಾದುದಲ್ಲ. ಇಲ್ಲಿಯ ಲೇಖಕ ಸಂಪ್ರದಾಯದ ಬಗೆಗೆ ವಿರೋಧಿಯಾದ ನಿಲುವನ್ನು ತಳೆದಂತಹ ವ್ಯಕ್ತಿಯಾಗಿರುವನು.

5. ನವ್ಯ ಸಾಹಿತ್ಯವು ಬದುಕಿನ ಸಂಕೀರ್ಣತೆಯನ್ನು ವಿಶ್ಲೇಷಿಸುವುದು

ನವ್ಯ ಸಾಹಿತ್ಯವು ಬದುಕಿನ ಸಂಕೀರ್ಣತೆಯ ಆಯಾಮಗಳನ್ನು ವಿಶ್ಲೇಷಣೆ ಮಾಡುತ್ತದೆ. ಇದು ಬದುಕಿನ ಜಟಿಲತೆಯ ಹಿನ್ನಲೆಯಲ್ಲಿ ಉದಾತ್ತ, ಸಂದೇಹ, ಉಲ್ಲಾಸ ಮತ್ತು ಆತಂಕಗಳಿಗೆ ಪ್ರಜ್ಞಾವಂತ ಮನಸ್ಸನ್ನು ಮತ್ತು ಅಂತಹ ವ್ಯಕ್ತಿತ್ವವನ್ನು ಚಿತ್ರಿಸುತ್ತದೆ.

ದಲಿತ – ಬಂಡಾಯ

ದಲಿತ ಎಂಬ ಪದವು ಸಾಹಿತ್ಯದ ಹಿನ್ನಲೆಯಲ್ಲಿ ಸಾಕಷ್ಟು ಚರ್ಚಿತವಾದ ವಿಷಯವಾಗಿದೆ. ಕೆಲವರು ಜಾತಿಯ ಆಧಾರದಿಂದ ಇದನ್ನು ಗುರುತಿಸಿದರೆ, ಮತ್ತೇ ಕೆಲವರು ಇದನ್ನು ಶೋಷಣೆಯ ಹಿನ್ನಲೆಯಲ್ಲಿ ಅರ್ಥೈಸಿರುವರು. 'ದಲಿತ' ಎಂಬುದಕ್ಕೆ ಶೋಷಿತ, ಅಥವಾ ತುಳಿತಕ್ಕೊಳಗಾದ ಒಂದು ವರ್ಗ ಎಂದು ಅರ್ಥ. "ತಲೆಮಾರಿನಿಂದ ಅರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದ ಜನಾಂಗದವರು ಮಾತ್ರ 'ದಲಿತರು' ಇವರು ತಮ್ಮ ನೋವನ್ನು ಅತ್ಯಂತ ಸಮರ್ಥವಾಗಿ ಭಾಷೆಯ ಮುಖಾಂತರ ಸೃಷ್ಟಿಸುವಂಥದ್ದೇ ದಲಿತ ಸಾಹಿತ್ಯ"ವಾದರೆ ಶೋಷಣೆಗಳಿಗೆ ಒಳಗಾದ ದಲೀತೇತರರು ಬರೆದ ಸಾಹಿತ್ಯ ಬಂಡಾಯ ಸಾಹಿತ್ಯ ಎನಿಸುತ್ತದೆ. ಆದರೆ ಇವೆರಡರ ಆಶಯ ಒಂದೇ ಆಗಿರುವುದು.

'ಬಂಡಾಯ' ಎಂಬ ಶಬ್ದವು ಬಂಡು ಎಂಬ ಶಬ್ದದಿಂದ ಬಂದಿದ್ದು ಒಂದು ವ್ಯವಸ್ಥೆಯ ವಿರುದ್ಧ ಕೈಕೊಳ್ಳುವ ಸಾಹಿತ್ಯಕವಾದ ಹೋರಾಟ ಅಥವಾ ಪ್ರತಿಭಟನೆ ಬಂಡಾಯ ಸಾಹಿತ್ಯವಾಗಿರುವುದು. "ಬಂಡಾಯ ಅನ್ನುವುದೊಂದು ಮನೋಧರ್ಮ. ಈ ಮನೋಧರ್ಮದ ಮುಖ್ಯ ಲಕ್ಷಣ, ಸಾಮಾಜಿಕ ಅಸಮಾನತೆ ಹಾಗೂ ಅನ್ಯಾಯಗಳ್ನು ಒಟ್ಟಾರೆಯಾಗಿ ವಸ್ತು ಸ್ಥಿತಿಯನ್ನು ಪ್ರಶ್ನಿಸುವ ಮತ್ತು ಪರಿಸ್ಥಿತಿಯನ್ನು ಬದಲಾಯಿಸುವ ಉದ್ದೇಶದಿಂದ ಪ್ರತಿಭಟಿಸುವ ಒಂದು ಪ್ರವೃತ್ತಿ" ಯಾಗಿದೆ.

ದಲಿತ–ಬಂಡಾಯ ಸಾಹಿತ್ಯದ ಪ್ರೇರಣೆ ಪ್ರಭಾವಗಳು

ದಲಿತ ಬಂಡಾಯ ಸಾಹಿತ್ಯವು ಪ್ರಾಚೀನ ಕಾಲದಿಂದ (ಪಂಪನಿಂದ ಕುವೆಂಪು) ಆಧುನಿಕ ಕಾಲದವರೆಗೂ ಬೆಳೆದು ಬಂದಿರುವಂತಹದು. ಆದರೆ, ಇದಕ್ಕೆ ಒಂದು ಮೂರ್ತರೂಪ ದೊರತದ್ದು 1979ರಲ್ಲಿ. ಈ ದಲಿತ ಬಂಡಾಯ ಸಾಹಿತ್ಯದ ಮೇಲೆ ಹಲವಾರು ಪ್ರೇರಣೆ ಪ್ರಭಾವಗಳಾದವು ಅವುಗಳಲ್ಲಿ ಪ್ರಮುಖವಾದವುಗಳೆಂದರೆ–

1. ಮರಾಠಿ ದಲಿತ ಸಾಹಿತ್ಯದ ಚಳುವಳಿ
2. ಕನ್ನಡ ವಚನಸಾಹಿತ್ಯ ಮತ್ತು ಜಾನಪದ ಸಾಹಿತ್ಯ
3. ದಕ್ಷಿಣ ಆಫ್ರಿಕಾದ ಕಪ್ಪು ಸಾಹಿತ್ಯ
4. ಅಮೇರಿಕಾದ ನಿಗ್ರೋ ಸಾಹಿತ್ಯ
5. ಮಾರ್ಕ್ಸವಾದ
6. ಅಂಬೇಡ್ಕರ ಅವರ ವೈಚಾರಿಕ ಬರಹಗಳು
7. ಲೋಹಿಯಾವಾದ
8. ಬಸವಲಿಂಗಪ್ಪನವರ 'ಬೂಸಾ' ಪ್ರಕರಣ
9. ಶಿಕ್ಷಣದ ಸಾರ್ವತ್ರೀಕರಣ
10. ದೇವರಾಜ ಅರಸರ ದಲಿತರ ಕಾರ್ಯಕ್ರಮಗಳು
11. ಮೀಸಲಾತಿಕ್ರಮ
12. ಸಂಕ್ರಮಣ, ಅನ್ವೇಷಣೆ, ಹೊಸದಿಕ್ಕು ಮೊದಲಾದ ಬಂಡಾಯ ಸಾಹಿತ್ಯದ ಪತ್ರಿಕೆಗಳ ಪ್ರಭಾವ

ಈ ಎಲ್ಲ ಪ್ರೇರಣೆ ಮತ್ತು ಪ್ರಭಾವಗಳಿಂದಾಗಿ ದಲಿತ ಬಂಡಾಯ ಸಾಹಿತ್ಯವು ತೀವ್ರವಾದ ಸ್ವರೂಪವನ್ನು ಪಡೆದುಕೊಂಡಿತು.

ದಲಿತ–ಬಂಡಾಯ ಸಾಹಿತ್ಯದ ಲಕ್ಷಣಗಳು

1. ಸಾಮಾಜಿಕ, ಧಾರ್ಮಿಕ, ರಾಜಕೀಯ ಮತ್ತು ಆರ್ಥಿಕವಾಗಿ ತಮಗೆ ಉಂಟಾಗುವ ಅನ್ಯಾಯ, ಶೋಷಣೆಯನ್ನು ಪ್ರತಿಭಟಿಸುವುದು ಅದರ ವಿರುದ್ಧ ದನಿ ಎತ್ತುವುದು.
2. ದಲಿತ ಸಾಹಿತ್ಯವು ಸಮಸ್ಯೆಗಳನ್ನು ತಲಸ್ಪರ್ಶಿಯಾಗಿ ವಿಚಾರಣೆಗೆ ಒಳಪಡಿಸಿ ಅವುಗಳನ್ನು ವಿಶ್ಲೇಷಣೆಗೆ ತೊಡಗಿಸಿ ಅವುಗಳ ಬಗೆಗೆ ದಲಿತರಿಗೆ ಅರಿವನ್ನುಂಟುಮಾಡಿಸುತ್ತದೆ.
3. ದಲಿತ ವರ್ಗದ ಜನರನ್ನು ಸುಶಿಕ್ಷಿತರನ್ನಗಿಸುತ್ತದೆ. ಅವರಲ್ಲಿ ತಮ್ಮ ಜವಾಬ್ದಾರಿಯ ತಿಳಿವಳಿಕೆಯನ್ನು ಮೂಡಿಸುತ್ತದೆ.
4. ದಲಿತ ಸಾಹಿತ್ಯವು ಸರಳವಾದದ್ದುಅದು ಅಕ್ಷರಜ್ಞಾನವಿಲ್ಲದವರಿಗೂ ತಿಳಿಯುವಂತಹುದು.
5. ಜನರ ಜೀವನದ ಧೋರಣೆಗಳನ್ನು ಕುರಿತು ಚಿಂತನೆ ನಡೆಸುವ ಸಾಹಿತ್ಯವು ದಲಿತ –ಬಂಡಾಯ ಸಾಹಿತ್ಯವಾಗಿರುವುದು.
6. ಸಾಮಾನ್ಯ ಜನರ ಸಮಸ್ಯೆಗಳ ಬಗೆಗೆ ವಿಶ್ಲೇಷಿಸಿ ಅವರಲ್ಲಿ ಜಾಗ್ರತಿಯನ್ನುಂಟುಮಾಡುತ್ತದೆ.
7. ಪಟ್ಟಭದ್ರ ಹಿತಾಸಕ್ತಿಗಳ ಕಪಿ ಮುಷ್ಟಿಯಿಂದ ಸಂರಕ್ಷಿಸಿ ಅವರಿಗೆ ಬುದ್ದಿ ಕಲಿಸುವ ಪ್ರಯತ್ನ ಮಾಡುತ್ತದೆ.

ದಲಿತ-ಬಂಡಾಯ ಸಾಹಿತ್ಯದ ಧೋರಣೆಗಳು

1. **ಸಮಾಜದಲ್ಲಿಯ ಗೊಡ್ಡು ಸಂಪ್ರದಾಯಗಳನ್ನು ಖಂಡಿಸುವುದು**

   ಸಂಪ್ರದಾಯ ವಿರೋಧಿಯಾದ ದಲಿತ-ಬಂಡಾಯ ಸಾಹಿತ್ಯವು ಸಮಾಜದಲ್ಲಿದ್ದ ಗೊಡ್ಡು ಆಚರಣೆಗಳನ್ನು ಖಂಡನೆಮಾಡುತ್ತದೆ. 'ಕಲ್ಲನಾಗರ ಕಂಡರೆ ಹಾಲನೆರೆಯೆಂಬರಯ ದಿಟದ ನಾಗರ ಕಂಡರೆ ಕೊಲ್ಲು ಕೊಲ್ಲೆಂಬರು' ಎಂಬ ಬಸವಣ್ಣನವರ ವಚನದಲ್ಲಿ ಬರುವ ಸಮಾಜದ ಮೂಢತೆಯ ಆಕ್ರೋಶವನ್ನು ಈ ಸಾಹಿತ್ಯದಲ್ಲಿ ಕಾಣುತ್ತೇವೆ.

2. **ದೀನ ದಲಿತರ ಬದುಕಿನ ಚಿತ್ರಣ**

   ದಲಿತ ಮತ್ತು ಬಂಡಾಯ ಸಾಹಿತ್ಯ ಕೇವಲ ಬಂಡವಾಳ ಶಾಹಿ ವರ್ಗದ ಶೋಷಣೆಯನ್ನು ಮಾತ್ರ ಚಿತ್ರಿಸದೇ ದಲಿತ ವರ್ಗದ ಜನರ ಅಜ್ಞಾನ, ಮೂಢನಂಬಿಕೆ ಮೊದಲಾದವುಗಳ ಬಗೆಗೆ ಚಿತ್ರಿಸುತ್ತದೆ. ಈ ಕಾರ್ಯವನ್ನು ದಲಿತ ಬಂಡಾಯದ ಲೇಖಕರೇ ತಮ್ಮ ಕೃತಿಗಳಲ್ಲಿ ಕೈಕೊಂಡಿರುವುದು.

3. **ಮಾನವೀಯತೆ**

   ಬಂಡಾಯ ಸಾಹಿತ್ಯದ ಬಹುಮುಖ್ಯ ಕಾಳಜಿಯೆಂದರೆ ಮಾನವೀಯತೆ. ಈ ಲೇಖಕರ ಮಾನವೀಯತೆಯು ಬಂಗಲೆಯಲ್ಲಿ ವಾಸಿಸುವ ಜನತೆಯ ಮೇಲಿರದೆ ಮುರುಕು ಗುಡಿಸಲಿನಲ್ಲಿ ವಾಸ ಮಾಡುವ ಜನರ ಕಡೆಗಿರುವುದು. ಈ ಅಂಶವನ್ನು ಬಂಡಾಯ ಸಾಹಿತಿಗಳಾದ ಬರಗೂರು, ಅಬೂಬಕರ, ಲಲಿತನಾಯಕ, ಚನ್ನಣ್ಣ ವಾಲೀಕಾರ, ಚಂಪಾ, ಲಂಕೇಶ, ಸಿದ್ದಲಿಂಗಯ್ಯ ಮೊದಲಾದವರ ಕೃತಿಗಳಲ್ಲಿ ಕಾಣುತ್ತೇವೆ.

4. **ಸ್ತ್ರೀ ಸಂವೇದನೆಗೆ ಪ್ರಾಶಸ್ತ್ಯ ನೀಡಿರುವುದು**

   12ನೇ ಶತಮಾನದ ವಚನಕಾರರಲ್ಲಿ ಅಕ್ಕಮಹಾದೇವಿಯ ನಂತರದಲ್ಲಿ ಸ್ತ್ರೀಗೆ ಸ್ವಾತಂತ್ರ್ಯ ದೊರೆತಿದ್ದು ಈ ಬಂಡಾಯ ಸಾಹಿತ್ಯದಲ್ಲಿ ಈ ನಿಟ್ಟಿನಲ್ಲಿ ಕಾರ್ಯ ಮಾಡಿದವರೆಂದರೆ ಲಲಿತನಾಯಕ,ಸಾರಾ ಅಬೂಬಕ್ಕರ, ಮಾಲತಿ ಪಟ್ಟಣಶೆಟ್ಟಿ, ವಿಜಯಾ ದಬ್ಬೆ ಮೊದಲಾದವರು.

5. **ದಲಿತರ, ಬಡವರ, ಶೋಷಿತರ ಧ್ವನಿಯಾಗಿದೆ**

   ದಲಿತ ಬಂಡಾಯ ಸಾಹಿತ್ಯವು ಶತಶತಮಾನಗಳಿಂದ ಮೇಲ್ವರ್ಗದ ಜನರಿಂದ ತುಳಿತಕ್ಕೊಳಗಾದ ಅನ್ಯಾಯ ಆಕ್ರಮಣಗಳಿಗೆ ಬಲಿಯಾಗಿ ಅವರ ದೌರ್ಜನ್ಯಗಳನ್ನು ತಾಳಿಕೊಳ್ಳುತ್ತ ಶೋಷಿತರಾಗುತ್ತಲೇ ಬಂದಿರುವ ಕೆಳವರ್ಗದ ಧ್ವನಿ ಈ ಸಾಹಿತ್ಯವಾಗಿದೆ. ಸಿದ್ದಲಿಂಗಯ್ಯ, ದೇವನೂರ ಮಹಾದೇವ, ಚನ್ನಣ್ಣ ವಾಲೀಕಾರ ಮೊದಲಾದವರ ಕೃತಿಗಳಲ್ಲಿ ಶೋಷಿತ ವರ್ಗದ ಧ್ವನಿಯನ್ನು ಎತ್ತಿ ಹೇಳುವ ಅಂಶಗಳು ಕಂಡುಬರುತ್ತವೆ.

6. **ಜಾತಿ ವ್ಯವಸ್ಥೆಯನ್ನು ತಿರಸ್ಕರಿಸುತ್ತದೆ**

   ಬಂಡಾಯ ಸಾಹಿತ್ಯವು ಸಮಾಜದಲ್ಲಿ ಕಂಡುಬರುವ ಜಾತಿ, ಲಿಂಗ, ವರ್ಣಗಳನ್ನು ತಿರಸ್ಕರಿಸುತ್ತದೆ. ಅದು ಜಾತಿ ರಹಿತವಾದ, ವರ್ಗರಹಿತವಾದ ಮಾನವೀಯತೆಯಿಂದ ಮೆರೆಯುವ ನವಸಮಾಜದ ನಿರ್ಮಾಣದ ಕನಸನ್ನು ಕಾಣುತ್ತದೆ.

ಮಹಿಳಾ ಸಾಹಿತ್ಯ

ಕನ್ನಡ ಭಾಷೆಯ ಮೂಲ ನಿಖರವಾಗಿ ಹೇಳಲು ಕಷ್ಟ ಸಾಧ್ಯವದರೂ ಕ್ರಿ.ಪೂ.ದಿಂದಲೇ ಅದರ ಕುರುಹುಗಳನ್ನು ನೋಡಬಹುದು. ಭಾಷೆಯ ಹುಟ್ಟಿನ ನಂತರ ಕ್ರಮೇಣ ಮನುಷ್ಯ ತನ್ನ ಅನುಭವಗಳನ್ನು ಅಕ್ಷರಗಳ ಮೂಲಕ ಹೊರಹಾಕಿದಾಗ ಅದು ಸಾಹಿತ್ಯವಾಯಿತು. ಸಾಹಿತ್ಯ ಎನ್ನುವುದು ಮನುಷ್ಯನ ಅನುಭವದ ಅಕ್ಷರಗಳ ದಾಖಲೆಯಾಗಿದೆ. ಇಂಥ ಕನ್ನಡ ಸಾಹಿತ್ಯದ ಪ್ರಾರಂಭಕಾಲ ಸದ್ಯಕ್ಕೆ ಕ್ರಿ.ಶ. 450 ರ ಹಲ್ಮಿಡಿ ಶಾಸನದಿಂದ ಎಂದು ನಿರ್ಧರಿಸಲಾಗಿದೆ. ಅಲ್ಲಿಂದ ಇಲ್ಲಿಯವರೆಗೆ ಕನ್ನಡ ಸಾಹಿತ್ಯ ಹಂತ ಹಂತವಾಗಿ ಬೆಳೆದು ನಿಂತಿದೆ. ಸುಮಾರು 2000 ವರ್ಷ ಇತಿಹಾಸವಿರುವ ಕನ್ನಡ ಸಾಹಿತ್ಯಕ್ಕೆ ಸಂಸ್ಕೃತ ಸಾಹಿತ್ಯವೇ ಪೂರಕ ಮತ್ತು ಪ್ರೇರಕವಾಗಿದೆ. ಹಳಗನ್ನಡ, ನುಡಿಗನ್ನಡ ಮತ್ತು ಹೊಸಗನ್ನಡ ಸಾಹಿತ್ಯದ ಹಂತಗಳನ್ನು ನೋಡಿದಾಗ , ಪ್ರತಿ ಹಂತದಲ್ಲೂ ಪ್ರಬುದ್ಧತೆಯನ್ನು ಹೊಂದುತ್ತಾ ಬೆಳೆದು ಬಂದಿರುವುದನ್ನು ನೋಡುತ್ತೇವೆ.

ಕನ್ನಡ ಸಾಹಿತ್ಯದ ಇತಿಹಾಸ ಸುಮಾರು ಕ್ರಿ.ಶ.450 ರಿಂದಲೇ ಪ್ರಾರಂಭವಾದರೂ ಅದರ ಸುವರ್ಣಯುಗ 10ನೆಯ ಶತಮಾನವಾಗಿದೆ. ಕನ್ನಡ ನಾಡಿನ ಮಹಿಳೆಯರು ಪ್ರಾಚೀನ ಕಾಲದಿಂದಲೂ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಗಳನ್ನು ನಿರ್ವಹಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಕನ್ನಡ ನಾಡಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಅದೇ ರೀತಿ ಸಾಹಿತ್ಯ ಕ್ಷೇತ್ರವನ್ನು ಗಮನಿಸಿದಾಗ ಪ್ರಾರಂಭದ ಕಾಲದಲ್ಲಿ ಮಹಿಳಾ ಸಾಹಿತಿಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವುದಿಲ್ಲವಾದರೂ ಜನಪದ ಸಾಹಿತ್ಯದಲ್ಲಿ ಅವರದೇ ಮೇಲುಗೈಯಾಗಿದೆ. ಜನಪದ ಸಾಹಿತ್ಯದ ಮೂಲ ಕೂಡ ನಿಖರವಾಗಿಲ್ಲವಾದ್ದರಿಂದ ಅಕ್ಷರ ದಾಖಲೆಗಿಂತ ಮುನ್ನವೇ ಜನಪದ ಸಾಹಿತ್ಯ ಸೃಷ್ಟಿಯಾಗಿದ್ದಂತೂ ನಿಜ. ಈ ರೀತಿಯಲ್ಲಿ ಜನಪದ ಕವಿಯಿತ್ರಿಯರು, ಕಲಾವಿದೆಯರು ಗಮನ ಸೆಳೆದಿದ್ದಾರೆ. ಅಷ್ಟೇ ಅಲ್ಲದೆ ಎಲ್ಲಾ ಕ್ಷೇತ್ರಗಳಲ್ಲಿಯೂ ಪುರುಷರಿಗೆ ಸರಿ ಸಮಾನವಾಗಿ ಕಾರ್ಯಗೈದು ಸಮಾಜಕ್ಕೆ ವಿಶೇಷ ಕೊಡುಗೆಯನ್ನು ನೀಡಿದ್ದಾರೆ.

ಜನಪದ ಎನ್ನುವುದು ಜನಸಾಮಾನ್ಯರ ಸೃಷ್ಟಿಯಾಗಿದೆ. 'ಜನಪದ ಸಾಹಿತ್ಯ ಶಿಷ್ಟ ಸಾಹಿತ್ಯಕ್ಕೆ ತಾಯಿಬೇರು' ಎಂಬ ಮಾತು ಸಮಂಜಸವಾಗಿದೆ. ಜನಪದ ಸಾಹಿತ್ಯವನ್ನು ಅವಲೋಕಿಸಿದರೆ ಬದುಕಿನ ಸಮಗ್ರ ವಿಷಯಗಳನ್ನು ತಿಳಿಯಬಹುದು. ಜಾನಪದ ಗಣಿಯಿಂದ ಯಾವುದೇ ವಿಷಯವನ್ನು ತೆಗೆದುಕೊಂಡರೂ ಅಧ್ಯಯನಯೋಗ್ಯವಾಗಿದೆ. ಕೆಲಸದ ಜೊತೆಯಲ್ಲೇ ಹುಟ್ಟಿದ ಈ ಸಾಹಿತ್ಯಕ್ಕೆ , ಅದರ ಸತ್ವಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಇಂಥ ಸಾಹಿತ್ಯ ಸೃಷ್ಟಿಯಲ್ಲಿ ಮಹಿಳೆಯರ ಪಾತ್ರವೇ ಅಧಿಕವಾಗಿದೆ. ಈ ಮೂಲಕ ಕನ್ನಡ ಸಾಹಿತ್ಯಕ್ಕೆ ಜನಪದ ಮಹಿಳೆಯರು ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ.

ಇಂಥ ಜನಪದ ಸಾಹಿತ್ಯವನ್ನು ಕುರಿತು ಶ್ರೀ ಅವರು 'ನಾಡಪದಗಳು' ಎಂಬ ಸಂಗ್ರಹದ ಮುನ್ನುಡಿಯಲ್ಲಿ "ಕರುಳು ಕರುಳನ್ನು ಮಿಡಿಯುತ್ತದೆ. ಅಂತರಂಗವು ಅಂತರಂಗವನ್ನು ತಟ್ಟಿ ಮಾರ್ದನಿ ಕೊಡುತ್ತದೆ. ನಮ್ಮ ಹಳ್ಳಿಗಾಡಿನ ಜೀವನ ಸಾರವನ್ನೇ ಹೊರಹೊಮ್ಮಿಸುತ್ತಿರುವ ಈ ಹಾಡುಗಳು ಅವರನ್ನು ತಣಿಸಿ ಹುರಿದುಂಬಿಸುವಂತೆ ಮತ್ತಾವುದೂ ಹುರಿದುಂಬಿಸಲಾರದು" ಎಂದಿದ್ದಾರೆ 'ಗರತಿಯ ಹಾಡು' ಮುನ್ನುಡಿಯಲ್ಲಿ "ನಾಗರಿಕತೆಯ ಕಾಲದಲ್ಲಿ ಇತಿಹಾಸ ಪುರಾಣಗಳ ಸಾರವನ್ನು ಜನರ ಮಟ್ಟಕ್ಕಿಳಿಸುವುದೂ , ಚರಿತ್ರೆಯಲ್ಲಿ ನಡೆದ ಮರೆಯಲಾಗದ ಸಂಗತಿಗಳನ್ನು ಜನರ ನೆನಪಿನಲ್ಲಿ ನಿಲ್ಲಿಸುವುದೂ, ಭಕ್ತಿ, ಜ್ಞಾನ, ವೈರಾಗ್ಯವನ್ನು ಮನೆಮನೆಗೆ ಬೀರುವುದೂ ಈ ಜನಪದ ಸಾಹಿತ್ಯದ ಕೆಲಸ"

ಎಂಬ ಮಾತಿನಲ್ಲಿ ಅದರ ಮೌಲ್ಯವನ್ನು ತಿಳಿಸಿದ್ದಾರೆ. ಇಂಥ ಅಮೂಲ್ಯವಾದ ಸಾಹಿತ್ಯದ ಅಧಿಕ ಭಾಗವನ್ನು ಮಹಿಳೆಯರೇ ರಚಿಸಿದರೂ ಸ್ವಲ್ಪವೂ ಗರ್ವವಿಲ್ಲದೆ ಅತ್ಯಂತ ಸೌಜನ್ಯದಿಂದ–

ಹಲಗೆಯ ಹಿಡಿದಿಲ್ಲ ಬಳಪಾದಿ ಬರೆದಿಲ್ಲ
ಶ್ರೀ ಗುರುವು ನಮಗೆ ಕಲಿಸಿಲ್ಲ। ಕೇಳಿರಕ್ಕ
ಲೆಕ್ಕಣಿಕೆ ನಮಗೆ ಗೊತ್ತಿಲ್ಲ ।

ಎಂದು ಹೇಳುವ ಅವರ ಎದೆಯಲ್ಲಿ ಮೊಗೆದಷ್ಟು ಸಾಹಿತ್ಯ ಸಂಪತ್ತು ಹೊರ ಹರಿಯುತ್ತಲೇ ಇರುತ್ತದೆ.

ಈ ರೀತಿಯಲ್ಲಿ ಜನಪದರು ಕನ್ನಡ ಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಅಲ್ಲದೆ ಇವುಗಳನ್ನು ಸಮಗ್ರಹಿಸಿ ಪ್ರಕಟಿಸಿರುವ ಕೆಲಸದಲ್ಲಿ ಕೂಡ ಮಹಿಳೆಯರು ಮಹತ್ವದ ಪಾತ್ರವನ್ನು ವಹಿಸಿದ್ದಾರೆ.

ಜನಪದ ಸಾಹಿತ್ಯವನ್ನು ಬಿಟ್ಟರೇ ಕನ್ನಡ ಸಾಹಿತ್ಯಕ್ಕೆ ಮಹಿಳೆಯರು ಪ್ರವೇಶಿಸಿದ್ದು ಯಾವಾಗ ಎಂಬುದನ್ನು ಗಮನಿಸಿದರೆ, ಹಲವಾರು ವಾದ ವಿವಾದಗಳಿದ್ದರೂ ಕಂತಿ ಕನ್ನಡದ ಪ್ರಥಮ ಕವಯಿತ್ರಿ ಎಂದು ನಿರ್ಧರಿಸಲಾಗಿದೆ. ನಾಗಚಂದ್ರನ ಸಮಕಾಲೀನಳು ಎಂದು ನಂಬಲಾದ ಕಂತಿಯ ಜೀವನದ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲದಿದ್ದರೂ ಆಕೆಯ ಕೀರ್ತಿ, ಪಾಂಡಿತ್ಯವನ್ನು ಹೊಗಳಲೇಬೇಕು. “ ಇಷ್ಟು ಪ್ರತಿಭಾವಂತಳಾದ ಕವಯಿತ್ರಿ ಎಂಟುನೂರು ವರ್ಷಗಳ ಹಿಂದೇಯೇ ಆಗಿಹೋದುದು ಕನ್ನಡ ವಾಙ್ಮಯದ ಹಾಗೂ ಕನ್ನಡಿಗರ ಭಾಗ್ಯವೆಂದೇ ಹೇಳಬಹುದು. ಆದರೆ ಆಕೆಯ ಜೀವನದ ವಿಷಯದಲ್ಲಿ ಹೆಚ್ಚಿಗೆ ಏನೂ ತಿಳಿಯದು. ಆದರೂ ಆಕೆಯ ಕೀರ್ತಿ ಪಾಂಡಿತ್ಯಗಳಿಗೇನೂ ಕುಂದಿಲ್ಲ. ಕನ್ನಡ ಸಾಹಿತ್ಯವಿರುವವರೆಗೂ ಅವಳ ಸುಂದರವಾದ ಪದ್ಯಗಳೂ ಇರುತ್ತವೆ. ಕನ್ನಡತಿಯರೆಲ್ಲರ ಪ್ರತಿನಿಧಿಯಾಗಿ ನಿಂತು ನಾಗಚಂದ್ರನಂತಹ ಹಮ್ಮಿನ ಕವಿಯನ್ನು ಸೋಲಿಸಿದಳು ಎಂದು ಮತ್ತಷ್ಟು ಗೌರವಕ್ಕೆ ಪಾತ್ರಳಾಗುತ್ತಾಳೆ. ಕನ್ನಡಾಂಬೆ ಕಂತಿಯಂತಹ ಅನೇಕ ಬುದ್ದಿವಂತ ಕಬ್ಬಿಗಿತ್ತಿಯರನ್ನು ನಾಡಿಗೆ ಕೊಟ್ಟು ನಾಡು ನುಡಿಗಳನ್ನು ಸಮೃದ್ಧಗೊಳಿಸಲಿ ”ಎಂಬ ಮಂದಾಕಿನಿಯರ ಮಾತು ಸಮಂಜಸವಾಗಿದೆ.

ಹತ್ತನೆಯ ಶತಮಾನದಲ್ಲಿದ್ದ ರನ್ನರ ‘ಶಾಂತಿ ಪುರಾಣ’ವನ್ನು ದಾನಚಿಂತಾಮಣಿ ಎಂದು ಹೆಸರುವಾಸಿಯಾದ ಅತ್ತಿಮಬ್ಬೆಯು 1000 ಪ್ರತಿಗಳನ್ನು ಪ್ರಕಟಿಸಿ ಹಂಚಿದಳು ಎಂಬುದನ್ನು ಗಮನಿಸಿದರೆ ಅತ್ತಿಮಬ್ಬೆಗಿದ್ದ ಸಾಹಿತ್ಯಾಸಕ್ತಿ ಕಂಡುಬರುತ್ತದೆ.

ಹನ್ನೆರಡನೆಯ ಶತಮಾನವು ಕನ್ನಡ ಸಾಹಿತ್ಯಕ್ಕಷ್ಟೇ ಅಲ್ಲದೆ ಮಹಿಳಾ ಸಾಹಿತಿಗಳನ್ನು ಸೃಷ್ಟಿಸುವಲ್ಲಿ ದಾಖಲೆಯನ್ನೇ ಮಾಡಿತು. ಏಕೆಂದರೆ ಮಹಿಳಾ ಸಾಹಿತಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಾಣುವುದು ಹನ್ನೆರಡನೆಯ ಶತಮಾನದಲ್ಲಿಯೇ. ಅನೇಕ ವಚನಕಾರ್ತಿಯರು ಹುಟ್ಟಿಕೊಂಡು ಅದುವರೆಗೆ ತಮ್ಮೆಲ್ಲ ಪ್ರತಿಭೆಯನ್ನು ಹೊರಹಾಕಲು ಆಸ್ಪದವಿಲ್ಲದೆ ಬಚ್ಚಿಟ್ಟುಕೊಂಡಿರುವ ಹೆಣ್ಣು ವಚನಕಾರರ ವಿಶಾಲ ಮನೋಭಾವದಿಂದ ಸಾಹಿತ್ಯದ ಮೂಲಕ ಹೊರಹೊಮ್ಮಿಸಿರುವುದನ್ನು ಕಾಣುತ್ತೇವೆ.

ಅನೇಕ ಶತಮಾನಗಳಿಂದ ನಿರ್ಲಕ್ಷಕ್ಕೆ ಒಳಗಾಗಿದ್ದ ಹೆಣ್ಣನ್ನು, ತಿರಸ್ಕಾರಕ್ಕೆ ಒಳಗಾಗಿದ್ದ ಶೂದ್ರರನ್ನು ಉದ್ಧಾರ ಮಾಡಲು, ಜನರಲ್ಲಿ ಅರಿವು ಮೂಡಿಸಲು ವಚನ ಚಳುವಳಿ ಅನಿವಾರ್ಯವಾಯಿತು. ಎಲ್ಲರನ್ನು ಸಮಾನವಾಗಿ ಕಾಣಬೇಕೆಂಬ ಶರಣರ ಹೋರಾಟದಲ್ಲಿ ಸಹಜವಾಗಿ ಸ್ತ್ರೀಯರಿಗೆ ಸ್ಥಾನಮಾನ

ದೊರಕಿರುವುದನ್ನು ನೋಡುತ್ತೇವೆ. ನಾಲ್ಕು ಗೋಡೆಗಳ ಮಧ್ಯ ಬದುಕುತ್ತಿರುವ ಹೆಣ್ಣಿಗೆ ಆತ್ಮ ತತ್ವದ ಮೂಲಕ ಪುರುಷ ಸಮಾನತೆಯನ್ನು ವಚನಕಾರರು ತರುವಲ್ಲಿ ಯಶಸ್ವಿಯಾದರು. ಜೇಡರ ದಾಸಿಮಯ್ಯನು-

ಮೊಲೆ ಮೂಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ನಡುವೆ ಸುಳಿವ ಆತ್ಮನು
ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ ರಾಮನಾಥ.

ಎಂದು ಹೇಳಿ, ಸ್ತ್ರೀಯರಿಗೂ ಸಮಾಜದಲ್ಲಿ ಸಮಾನ ಸ್ಥಾನಮಾನ ಇದೆ ಎಂಬುದನ್ನು ತೋರಿಸಿಕೊಟ್ಟರು. ಸಮಾಜದಲ್ಲಿ ಧರ್ಮದ ಹೆಸರಿನಲ್ಲಿ ನಡೆಯುವ ಡಾಂಭಿಕತೆ, ಅಂಧಶ್ರದ್ಧೆ, ಜಾತಿಭೇದ ಮುಂತಾದವುಗಳ ವಿರುದ್ಧ ಹೋರಾಟ ಮಾಡಿದ ಕ್ರಾಂತಿಯ ಕಾಲ. ಸ್ತ್ರೀಯರಿಗೆ, ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ಸ್ವಾತಂತ್ರ್ಯದ ಜೊತೆ ಅಭಿವ್ಯಕ್ತಿ ಸ್ವಾತಂತ್ರ್ಯ ಸಿಕ್ಕಿದ್ದು ಕೂಡ ಈ ಕಾಲದ ವಿಶೇಷತೆಯಾಗಿದೆ. ಈ ಅವಕಾಶವನ್ನು ಸದುಪಯೋಗಪಡಿಸಿಗೊಂಡ ಅನೇಕ ವಚನಕಾರ್ತಿಯರು ಅದ್ಭುತವೆನ್ನುವಷ್ಟು ತಮ್ಮ ಪ್ರತಿಭೆಯನ್ನು ಸಾಹಿತ್ಯದ ಮೂಲಕ ಹೊರಹಾಕಿ, ಕನ್ನಡ ಸಾಹಿತ್ಯಕ್ಕೆ ವಿಶೇಷ ಕೊಡುಗೆಯನ್ನು ನೀಡಿದ್ದಾರೆ. ಅಕ್ಕಮಹಾದೇವಿ, ಮುಕ್ತಾಯಕ್ಕ, ಅಕ್ಕಮ್ಮ, ನೀಲಾಂಬಿಕೆ, ಗಂಗಾಂಬಿಕೆ, ಸತ್ಯಕ್ಕ ಮುಂತಾದವರು ವಚನಗಳನ್ನು ಬರೆದು ಸಮಾಜದ ಉದ್ಧಾರಕ್ಕಾಗಿ ಶ್ರಮಿಸಿದ್ದಾರೆ. ಸುಮಾರು 35 ಮಂದಿ ಶರಣೆಯರ ಸು. 1104 ವಚನಗಳು ದೊರೆತಿವೆ.

ಅಕ್ಕಮಹಾದೇವಿ:

ನಿರ್ಮಲಶೆಟ್ಟಿ ಮತ್ತು ಸುಮತಿ ದಂಪತಿಯ ಮಗಳಾದ ಅಕ್ಕಮಹಾದೇವಿ ಶಿವಮೊಗ್ಗ ಜಿಲ್ಲೆಯ ಉಡುಗಣಿ(ಉಡುತಡಿ ಎಂದೂ ಹೇಳಲಾಗುತ್ತದೆ.) ಗ್ರಾಮದಲ್ಲಿ ಜನ್ಮ ತಾಳಿದಳು. ಶಿವಭಕ್ತೆಯಾದ ಅಕ್ಕ ಬಾಲ್ಯದಿಂದಲೂ ಮಲ್ಲಿಕಾರ್ಜುನನನ್ನೇ ಪತಿಯೆಂದು ಭಾವಿಸಿ ಜೀವಿಸುತ್ತಿರುವಾಗ ಕೌಶಿಕನ ಕಣ್ಣಿಗೆ ಬಿದ್ದು, ಅವಳಿಗೆ ಇಷ್ಟವಿಲ್ಲದಿದ್ದರೂ ತಂದೆ-ತಾಯಿಯ ಮಾತಿಗೆ ಮಣಿದು ಅನಿವಾರ್ಯವಾದ ಪರಿಸ್ಥಿತಿಗೆ ಕಟ್ಟುಬಿದ್ದು, ಕೊನೆಗೆ ಮೂರು ಷರತ್ತುಗಳನ್ನು ಹಾಕಿ ಮದುವೆಯಾಗುತ್ತಾಳೆ. ಆದರೆ ಆ ಷರತ್ತುಗಳನ್ನು ಕೌಶಿಕನು ಮುರಿದಾಗ ಅರಮನೆಯನ್ನು ಬಿಟ್ಟು ಚೆನ್ನಮಲ್ಲಿಕಾರ್ಜುನನನ್ನು ಹುಡುಕುತ್ತಾ ಹೊರಡುತ್ತಾಳೆ ಎಂದು ತಿಳಿದುಬರುತ್ತದೆ. ಒಟ್ಟಿನಲ್ಲಿ “ಇದು ಅಕ್ಕಮಹಾದೇವಿ ಜೀವನದಲ್ಲಿ ಒಂದು ಅಗ್ನಿ ದಿವ್ಯ ಘಟನೆ. ಆಕೆ ವಿಚಾರ ಸ್ವಾತಂತ್ರ್ಯದ ಮಹಿಳೆ. ಗಂಡ ಮತ್ತು ವಿಚಾರ ಸ್ವಾತಂತ್ರ್ಯ- ಈ ಎರಡು ಆಯ್ಕೆಗಳು ಆಹ್ವಾನವಾದಾಗ ಗಂಡನ'ನ್ನು ಧಿಕ್ಕರಿಸಿ, ವಿಚಾರ ಸ್ವಾತಂತ್ರ್ಯವನ್ನು ಆಯ್ದುಕೊಂಡುದು ಲೋಕದ ಇತಿಹಾಸದಲ್ಲಿಯೇ ಅಪರೂಪದ ಘಟನೆಯಾಗಿದೆ. ಎಂಬ ಮಾತು ಸಮಂಜಸವಾಗಿದೆ.”

ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಕ್ರಾಂತಿ ಮಾಡಿದ ಅಕ್ಕಮಹಾದೇವಿಯ ವಚನಗಳಲ್ಲಿ ಪ್ರಗತಿಪರ ವಿಚಾರ , ತತ್ವಜ್ಞಾನದ ಬೋದನೆಯನ್ನು ಕಾಣುತ್ತೇವೆ. ಅಕ್ಕನ 354 ವಚನಗಳು ದೊರೆತಿದ್ದು, ಸೃಷ್ಟಿಯ ವಚನ ಹಾಗೂ ಮಂತ್ರಗೋಪ್ಯ ಎಂಬ ರಚನೆಗಳಲ್ಲದೆ ‘ಯೋಗಾಂಗ ತ್ರಿವಿಧಿ’ ಎಂಬ ಕಿರುಕಾವ್ಯ ಹಾಗೂ ಸ್ವರವಚನಗಳನ್ನು ರಚಿಸಿ, ಕನ್ನಡ ಸಾಹಿತ್ಯದ ಪ್ರಥಮ ಕವಿಯಿತ್ರಿ ಎಂಬ ಹೆಗ್ಗಳಿಕೆಗೆ ಪಾತ್ರಳಾಗಿದ್ದಲ್ಲದೆ, ಕನ್ನಡ ಸಾಹಿತ್ಯಕ್ಕೆ ವಿಶೇಷ ಕೊಡುಗೆಯನ್ನು ನೀಡಿದ್ದಾಳೆ. ಅಕ್ಕನ ದಿಟ್ಟತನ ಮತ್ತು

ಸಾಧನೆಯನ್ನು ಕುರಿತು –1 ಶಿವಶರಣೆಯರ ವಚನ ಸಂಪುಟ–ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟನೆ; ಪುಟ–14

"ಸಾಂಪ್ರದಾಯಿಕ ವಿವಾಹವನ್ನು ಧಿಕ್ಕರಿಸಿ ಹೊರಬಂದ ಅಕ್ಕನ ಧೋರಣೆ ಕ್ರಾಂತಿಕಾರಕವಾದುದು. ಕಷ್ಟವನ್ನೇ ಅರಿಯದ ವಯಸ್ಸಿನಲ್ಲಿ ಅಕ್ಕ ತನ್ನ ಮಾನಸಿಕ ದೃಢತೆಯನ್ನು ಸಾಧಿಸಿಕೊಂಡದ್ದು ಮಹಾ ಸಾಧನೆ. ತನ್ನ ಸಾಧನೆಯ ಹಾದಿಯಲ್ಲಿ ಎಲ್ಲವನ್ನೂ ಎದುರಿಸಬಲ್ಲೆನೆಂಬ ಚೈತನ್ಯ. ಹದಿನಾರರ ಹರೆಯದಲ್ಲಿ ತನುವಿನಾಸೆ ತೊರೆದು ಹೆಂಗಸಿಗಿದ್ದ ಪಾರತಂತ್ರ್ಯವನ್ನು ತೊರೆದು ಮುಕ್ತಳಾಗಿ ಪಾರಮಾರ್ಥಿಕ ಪ್ರಪಂಚದ ಶೃಂಗವನ್ನೇರಲು ಮಾಡಿದ ಪಯಣ, ಏರಿದ ಸಿದ್ಧಿಯ ಹಂತಗಳು, ಇದಕ್ಕಾಗಿ ನಡೆಸಿದ ಹೋರಾಟ, ಒಂದು ರೀತಿಯಲ್ಲಿ ಹೆಣ್ಣಿನ ಗೌರವ ಸಾಧನೆಯ, ಸ್ವಾತಂತ್ರ್ಯ ಸಾಧನೆಯ,ಹೆಣ್ಣಿನ ಪರಮಾರ್ಥ ಸಾಧನೆಯ ಒಂದು ಮಹಾಪ್ರಕರಣ "–2(ವಚನ ಧರ್ಮಸಾರ–ಎಂ.ಆರ್.ಶ್ರೀ; ಪುಟ–10.) ಡಾ.ರಂ.ಶ್ರೀ.ಮುಗುಳಿಯವರು ಅಕ್ಕನ ವಚನಗಳನ್ನು ಕುರಿತು –"ಅವಳ ಆತ್ಮಚ'ರಿತ್ರೆಯ ಮತ್ತು ವ್ಯಕ್ತಿತ್ವದ ಜೀವಂತ ಮತ್ತು ಜ್ವಲಂತ ದಾಖಲೆಗಳಾಗಿವೆ." ಎಂದಿದ್ದಾರೆ.(ಕನ್ನಡ ಸಾಹಿತ್ಯದ ಇತಿಹಾಸ – ಡಾ.ರಂ.ಶ್ರೀ.ಮುಗುಳಿ;ಪುಟ–90)

ಒಟ್ಟಿನಲ್ಲಿ ಅಕ್ಕನ ವಚನಗಳಲ್ಲಿ ತನ್ನ ಜೀವನದುದ್ದಕ್ಕೂ ಅನುಭವಿಸಿದ ನೋವು–ನಲಿವು,ವಿರಹ, ಆಧ್ಯಾತ್ಮಿಕ ನಿಲುವು, ಸಮಾಜ ಸುಧಾರಣೆ ಮುಂತಾದವುಗಳನ್ನು ಕಾಣಬಹುದಾಗಿದೆ.

ಅಕ್ಕಮ್ಮ: ಅಕ್ಕಮಹಾದೇವಿಯ ನಂತರ 157 ವಚನಗಳನ್ನು ರಚಿಸಿದ ಅಕ್ಕಮ್ಮ ಸಂಖ್ಯೆಯಲ್ಲಿ ಎರಡನೆ ಸ್ಥಾನವನ್ನು ಪಡೆದಿದ್ದಾಳೆ. 'ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗ ' ಎಂಬ ಅಂಕಿತದಿಂದ ರಚಿಸಿದ ಅಕ್ಕಮ್ಮನ ವಚನಗಳಲ್ಲಿ ಶೀಲ, ವ್ರತ, ನೇಮ,ಆಚಾರಗಳು, ಸಮಾಜದಲ್ಲಿಯ ಅಸಮಾನತೆಯ ವಿರುದ್ಧ ಸಿಡಿದೇಳುವ ರೀತಿಯನ್ನು ಕಾಣುತ್ತೇವೆ. ಅನಾಚಾರಿಗಳನ್ನು, ವ್ರತಭ್ರಷ್ಟರನ್ನು, ಕಪಟ ವೇಷಧಾರಿಗಳನ್ನು ಕಟುವಾಗಿ ನಿಂದಿಸಿ ಸಮಾಜವನ್ನು ತಿದ್ದುವ ಪ್ರಯತ್ನ ಅಕ್ಕಮ್ಮನ ವಚನಗಳಲ್ಲಿ ಕಂಡುಬರುತ್ತದೆ.

ಅಮುಗೆರಾಯಮ್ಮ:

"ಅಮುಗೇಶ್ವರ ಲಿಂಗ" ಅಂಕಿತವನ್ನಿಟ್ಟುಕೊಂಡು 115 ವಚನಗಳನ್ನು ಬರೆದ ಅಮುಗೆರಾಯಮ್ಮನ ವೈಯಕ್ತಿಕ ಜೀವನದ ಬಗ್ಗೆ ಹೆಚ್ಚಿನ ವಿಷಯ ಲಭ್ಯವಾಗಿಲ್ಲ. ನಿಷ್ಠುರ ಸ್ವಭಾವದವಳಾದ ಇವಳು ಜ್ಞಾನಿಗಳೆಂದು ತಿರುಗುವ ವೇಷಧಾರಿಗಳನ್ನು ಮಾತಿನಲ್ಲೇ ಚಾಟಿ ಏಟಿನ ಚುರುಕು ಮುಟ್ಟಿಸಿದ್ದಾಳೆ ಒಟ್ಟಾರೆ ರಾಯಮ್ಮನ ವಚನಗಳಲ್ಲಿ ಛಲ, ನಿಷ್ಠುರತೆ, ಧೈರ್ಯ ಎದ್ದು ಕಾಣುತ್ತದೆ. ಡಾ.ಚಿದಾನಂದಮೂರ್ತಿಯವರು "ಭಾಷೆಯ ಒರಟುತನವೇ ಅವಳ ಅಭಿವ್ಯಕ್ತಿಗೆ ನಾವೀನ್ಯತೆಯನ್ನು ತರುತ್ತದೆ." 4 ಎಂದಿದ್ದರೆ.(ವಚನ ಸಾಹಿತ್ಯ– ಡಾ.ಚಿದಾನಂದಮೂರ್ತಿ; ಪುಟ–184)

ಮೋಳಿಗೆ ಮಹಾದೇವಿ :

ಕಾಶ್ಮೀರದ ರಾಜ ದಂಪತಿಗಳು ಬಸವಣ್ಣನ ವ್ಯಕ್ತಿತ್ವದ ಪ್ರಭಾವದಿಂದ ಕಲ್ಯಾಣಕ್ಕೆ ಬಂದು ಅಲ್ಲಿ ಕಟ್ಟಿಗೆಯನ್ನು ಮಾರುವ ಕಾಯಕದಲ್ಲಿ ತೊಡಗುತ್ತಾರೆ. ಮೋಳಿಗೆ ಮಾರಯ್ಯ ಮತ್ತು ಮೋಳಿಗೆ ಮಹಾದೇವಿ ಎಂಬ ಹೆಸರಿನಿಂದ ಈ ರಾಜದಂಪತಿಗಳು ದಾಸೋಹ ಕಾರ್ಯವನ್ನು

ಮುಂದುವರೆಸುತ್ತಾರೆ. ಕಲ್ಯಾಣದಲ್ಲಿ ಕ್ರಾಂತಿಯಾಗಿ ಶರಣರೆಲ್ಲ ಅಲ್ಲಿಂದ ಹೋದಾಗ ಇವರಿಬ್ಬರು ಮಾತ್ರ ಅಲ್ಲಿಯೇ ಉಳಿದುಕೊಳ್ಳುತ್ತಾರೆ. ಕಾಯಕಕ್ಕೆ ಹೆಚ್ಚಿನ ಮಹತ್ವ ಕೊಟ್ಟ ಮಹಾದೇವಿ ಶರಣರೆಲ್ಲರೂ ಹೋದಾಗ ಮಾರಯ್ಯನೂ ಕೈಲಾಸಕ್ಕೆ ಹೋಗಬೇಕೆಂಬ ಆಸೆ ವ್ಯಕ್ತಪಡಿಸುತ್ತಾನೆ. ಆಗ ಮಹಾದೇವಿ "ಮಾಡಿದ ಭಕ್ತಿಗೆ ಕೈಲಾಸಕ್ಕೆ ಹೋದೆಹೆನೆಂಬುದು ಕೈಕೂಲಿಯೇ " , ಎಂದೂ "ಕಾಯಕವೇ ಕೈಲಾಸವೆಂದ ಮೇಲೆ ಮತ್ತೇ ಬೇರೆ ಕೈಲಾಸವುಂಟೇ?" ಎಂದು ಪ್ರಶ್ನಿಸಿ ಅವಳ ವಿಚಾರಧಾರೆ ಗಂಡನ ಮೇಲೆ ಪರಿಣಾಮ ಬೀರುವಂತೆ ಮಾಡಿ ಆದರ್ಶ ವ್ಯಕ್ತಿತ್ವವನ್ನು ಮೆರೆದಿದ್ದಾಳೆ.

"ಎನ್ನಯ್ಯ ಪ್ರಿಯ ನಿಃಕಳಂಕ ಮಲ್ಲಿಕಾರ್ಜುನಾ" ಎಂಬ ಅಂಕಿತದಿಂದ ಅನೇಕ ವೈಚಾರಿಕ ವಚನಗಳನ್ನು ರಚಿಸಿರುವುದು ಕಂಡುಬರುತ್ತದೆ.

ಮುಕ್ತಾಯಕ್ಕ :

" ಅಜಗಣ್ಣ ಮತ್ತು ಅಜಗಣ್ಣ ತಂದೆ" ಎಂಬ ಅಂಕಿತದಿಂದ ವಚನಗಳನ್ನು ರಚಿಸಿದ ಮುಕ್ತಾಯಕ್ಕ ಸ್ವತಂತ್ರ ಪ್ರವೃತ್ತಿ, ದಿಟ್ಟ ವ್ಯಕ್ತಿತ್ವವನ್ನು ಹೊಂದಿದವಳು. ಗದುಗಿನ ಸಮೀಪದಲ್ಲಿರುವ ಲಕ್ಕುಂಡಿ ಗ್ರಾಮದಲ್ಲಿ ಜನಿಸಿದ ಮುಕ್ತಾಯಕ್ಕ ರಚಿಸಿದ 37 ವಚನಗಳು ದೊರೆತಿವೆ. ಅಣ್ಣನ ಬಗ್ಗೆ ವಿಪರೀತ ಪ್ರೀತಿ, ಭಕ್ತಿ, ಗೌರವ ಹೊಂದಿದ ಮುಕ್ತಾಯಕ್ಕನಿಗೆ ಅಜಗಣ್ಣನೇ ಆಧ್ಯಾತ್ಮ ಗುರುವಾಗಿದ್ದನು. ಅಂತಹ ಅಣ್ಣನನ್ನು ಕಳೆದುಕೊಂಡಾಗ ಅಗಲಿಕೆಯಿಂದ ಆದ ದುಃಖವನ್ನು ತನ್ನ ವಚನಗಳಲ್ಲಿ ವ್ಯಕ್ತಪಡಿಸಿದ್ದಾಳೆ. ಮುಂದೆ ಅಲ್ಲಮ್ಮನ ಜೊತೆ ದಿಟ್ಟತನದಿಂದ ವಾದ ಮಾಡಿ ಮಾತಡಿದ್ದು, ಆಕೆಯ ವಿಶಾಲ ಜ್ಞಾನವನ್ನು ತೋರಿಸುವಂತಿದ್ದು, ಪ್ರಭುವಿನ ಉಪದೇಶದಿಂದ ಆಧ್ಯಾತ್ಮ ದರ್ಶನ ಪಡೆದಳು. ಕಾವ್ಯಾಂಶವನ್ನು ಹೊಂದಿದ ಅವಳ ವಚನಗಳಲ್ಲಿ ಶಬ್ದಚಿತ್ರ, ಅಮೂರ್ತ ಚಿತ್ರಗಳ ಕಲ್ಪನೆ ಅದ್ಭುತವಾಗಿ ಮೂಡಿ ಬಂದಿವೆ. ಅವಳ ವಚನಗಳ ಶೈಲಿ ಸರಳವಾಗಿದ್ದು, ಅರ್ಥಗರ್ಭಿತವಾಗಿವೆ.

"ಮುಕ್ತಾಯಕ್ಕ ಅಂಗನೆಯರ ಇತಿಹಾಸದಲ್ಲಿಯೇ ಅಪೂರ್ವವ್ಯಕ್ತಿ. ಗಾರ್ಗಿಯ ಸಂವಾದ ಶಕ್ತಿ, ಮಹಾದೇವಿಯ ವಿರಕ್ತಿ, ದ್ರೌಪದಿಯ ಅಗ್ರಜಾನುಶಕ್ತಿ, ಮೈತ್ರೇಯಿಯ ಆತ್ಮದಳದನಾಸಕ್ತಿ, ಏಕಲ್ವನ ಗುರುಭಕ್ತಿಗಳೆಲ್ಲ ಸೇರಿ ಮುಕ್ತಾಯಿಯಾಗಿ ಮೂರ್ತಿಭವಿಸಿದಂತಿದೆ" ಎಂಬ ಡಾ. ಸಿದ್ದಯ್ಯ ಪುರಾಣಿಕ್ ಅವರ ಅಭಿಪ್ರಾಯ ಮುಕ್ತಾಯಕ್ಕನ ವ್ಯಕ್ತಿತ್ವದ ಮಹತ್ವವನ್ನು ತಿಳಿಸುತ್ತದೆ.

ಹೀಗೆ ಅಜಗಣ್ಣ–ಮುಕ್ತಾಯಕ್ಕ ಅಪೂರ್ವ ಸಹೋದರ–ಸಹೋದರಿಯರಾಗಿದ್ದು, ಮುಕ್ತಾಯಕ್ಕನ ವಚನಗಳು ಸತ್ವದಿಂದ ಕೂಡಿದ್ದು, ವಚನ ಸಾಹಿತ್ಯಕ್ಕೂ, ಕನ್ನಡ ಸಾಹಿತ್ಯಕ್ಕೂ ಅಮೂಲ್ಯವಾದ ಕೊಡುಗೆ ನೀಡಿದ್ದನ್ನು ನೋಡಬಹುದು.

ಈ ವಚನಕಾರ್ತಿಯರಲ್ಲದೆ ಸತ್ಯಕ್ಕ ಎಂಬುವಳು "ಶಂಬುಜಕ್ಕೇಶ್ವರಾ" ಎಂಬ ಅಂಕಿತದಿಂದ ಬರೆದ 29 ವಚನಗಳಲ್ಲಿ ಶಿವನ ಬಗ್ಗೆ ಇರುವ ನಿಷ್ಠೆ, ಸದ್ಭಕ್ತರ ಮಹಿಮೆ, ಡಾಂಬಿಕರ ಬಗ್ಗೆ ಟೀಕೆಗಳನ್ನು ಕಾಣುತ್ತೇವೆ. "ಮಾರಯ್ಯ ಪ್ರಿಯ ಅಮುಗೇಶ್ವರ ಲಿಂಗ" ಎಂಬ ಅಂಕಿತದಿಂದ ಬರೆದ ಆಯ್ದಕ್ಕಿ ಲಕ್ಕಮ್ಮ ಅಲ್ಲದೆ ನಾಗಲಾಂಬಿಕೆ, ಕಾಳವ್ವೆ, ಗೊಗ್ಗವ್ವೆ, ಬೊಂತಾದೇವಿ, ಕದಿರ ರೇಮ್ಮವ್ವೆ, ವೀರಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಕೇತಲದೇವಿ, ಮಸಣ್ಣಮ್ಮ, ಕನ್ನಡಿ ಕಾಯಕದ ರೇವಮ್ಮ, ರೇಚವ್ವೆ, ದುಗ್ಗಳೆ, ಗುಡ್ಡವ್ವೆ, ರೇಕಮ್ಮ, ಸೂಳೆ ಸಂಕವ್ವೆ ಮೊದಲಾದ ವಚನಕಾರ್ತಿಯರು ತಮ್ಮ ವಚನಗಳಲ್ಲಿ ಸಮಾಜದಲ್ಲಿ ನಡೆಯುವ

ಅನಾಚಾರಗಳನ್ನು ಎತ್ತಿ ತೋರಿಸುತ್ತಾ, ಸಮಾಜ ಸುಧಾರಣೆಗೆ ಪ್ರಯತ್ನಿಸಿರುವುದನ್ನು ಕಾಣುತ್ತೇವೆ. ಇತಿಹಾಸದುದ್ದಕ್ಕೂ ಶೋಷಣೆಗೆ ಒಳಗಾಗಿ ಮೂಲೆ ಗುಂಪಾಗಿದ್ದ ಸ್ತ್ರೀಯರು ಸಿಕ್ಕಿರುವ ಅವಕಾಶವನ್ನು ಸದುಪಯೋಗಪಡಿಸಿಕೊಂಡು, ತಮ್ಮ ಪ್ರತಿಭೆಯೆನ್ನೆಲ್ಲಾ ಹೊರಹಾಕಿದರು. ಆಧ್ಯಾತ್ಮಿಕ, ಸಾಮಾಜಿಕ, ಸಾಹಿತ್ಯ ಕ್ಷೇತ್ರಕ್ಕೆ ವಿಶೇಷವಾದ ಕೊಡುಗೆಯನ್ನು ನೀಡಿದ್ದಾರೆ. ಅಲಂಕಾರ ಭಾಷಾಶೈಲಿ, ಪ್ರಾಸ, ಲಯ, ಭಾವತೀವ್ರತೆ, ರೂಪಕಗಳು, ಗಾದೆಗಳು, ಶಬ್ದ ಚಿತ್ರ, ಉಕ್ತಿವೈಚಿತ್ರಗಳು, ದೇಶೀಯ ಸೊಗಡು, ಬಂಡಾಯ ಧೋರಣೆ ಮೊದಲಾದ ಸಾಹಿತ್ಯಿಕ ಅಂಶಗಳನ್ನು ಹೇರಳವಾಗಿ ಬಳಸಿಕೊಂಡು ಕನ್ನಡ ಸಾಹಿತ್ಯಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ.

ಹನ್ನರಡೆನೆಯ ಶತಮಾನದ ನಂತರ ಹದಿನೇಳನೆಯ ಶತಮಾನದವರೆಗೂ ಲೇಖಕಿಯರ ಬಗ್ಗೆ ಯಾವುದೇ ಮಾಹಿತಿ ಇಲ್ಲದಿರುವುದು ವಿಷಾದದ ಸಂಗತಿ. ಸ್ತ್ರೀ ಮತ್ತೆ ತೆರೆಯ ಮರೆಗೆ ಸರಿಯಲು ಇರುವ ಕಾರಣಗಳ ಬಗ್ಗೆ ಗಮನಿಸಬೇಕಾಗಿದೆ.

ವಚನ ಸಾಹಿತ್ಯದ ನಂತರ ಕೀರ್ತನ ಸಾಹಿತ್ಯ ಹೆಚ್ಚಿನ ಪ್ರಮಾಣದಲ್ಲಿ ಬಂದರೂ ಲೇಖಕಿಯರ ಸಂಖ್ಯೆ ಮತ್ತೇ ಇಳಿಮುಖವಾದದ್ದನ್ನು ಕಾಣುತ್ತೇವೆ. ಚಿಕ್ಕದೇವರಾಯನ ಕಾಲದಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಮತ್ತು ಅವರಲ್ಲಿಯ ಪ್ರತಿಭೆಗಳಿಗೆ ಪ್ರೋತ್ಸಾಹ ಸಿಕ್ಕಿ ಆ ಕಾಲದ ಹೊನ್ನಮ್ಮ, ಶೃಂಗಾರಮ್ಮ ಮತ್ತು ರಾಣಿ ಚೆಲುವಾಂಬೆಯರು ಕೃತಿ ರಚನೆ ಮಾಡಿರುವುದು ತಿಳಿದು ಬರುತ್ತದೆ. ಅಲ್ಲದೆ ಕೀರ್ತನೆಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಗಲಗಲಿಯ ಅವ್ವ, ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವ ಪ್ರಮುಖರು. ಇವರಲ್ಲದೆ ಭಾಗಮ್ಮ, ಚೆ.ರಾ. ಚೆಲ್ಲಾಮ್ಮ, ಸಣ್ಣ ಭಡತಿ ಗಣಪಕ್ಕ, ಸುಂದರಬಾಯಿ, ಪನ್ನಿ ಲಕ್ಷ್ಮಿಬಾಯಿ, ನಾಡಘರ ಶಾಂತಿಬಾಯಿ, ಅಂಡಬಾಯಿ, ರಾಧಾಬಾಯಿ, ಸರಸಾಬಾಯಿ, ಗುಂಡಮ್ಮ, ಜೀವೂಬಾಯಿ ಮುಂತಾದವರು ಕೀರ್ತನೆಗಳನ್ನು, ಅನೇಕ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ತಮ್ಮ ಕಾಣಿಕೆಯನ್ನು ಅರ್ಪಿಸಿದ್ದಾರೆ.

ಹೊನ್ನಮ್ಮ :

ಸಂಚಿಯ ಹೊನ್ನಮ್ಮ ಎಂದೇ ಪ್ರಸಿದ್ಧಳಾದ ಹೊನ್ನಮ್ಮ ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿ ಊಳಿಗದವಳಾಗಿದ್ದು, ಗುರುಗಳಿಂದಲೇ ಹೊಗಳಿಸಿಕೊಂಡ ಪ್ರತಿಭಾವಂತ ಮಹಿಳೆ. ಒಡೆಯರಿಂದಲೂ ಮೆಚ್ಚುಗೆ ಗಳಿಸಿದ ಹೊನ್ನಮ್ಮ 'ಹದಿಬದೆಯ ಧರ್ಮ' ಎಂಬ ಕೃತಿಯನ್ನು ರಚಿಸಿದ್ದಾಳೆ. ಓದು ಕಲಿಸಿದ ಗುರುವೇ ಶಿಷ್ಯರನ್ನು ಹೊಗಳಬೇಕಾದರೆ ಅವರಲ್ಲಿ ವಿಶೇಷ ಯೋಗ್ಯತೆ ಇರಲೇಬೇಕು. ಅಂಥ ಪ್ರತಿಭೆಯನ್ನು ಪಡೆದ ಹೊನ್ನಮ್ಮ ತನ್ನ ಕೃತಿಯ ಬಗ್ಗೆ ಹೀಗೆ ಹೇಳಿದ್ದಾಳೆ.

'ಪದಿನೆಂಟು ಬಣ್ಣನೆಯೆಂದು ಬವಣೆಗೊಂಡು
ಪದಗೆಟ್ಟು ಬಯಲು ಬಣ್ಣಿಸದೆ
ಮುದದೊಡನಿಹ ಪರದೇಳ್ಗೆವಡೆಯೆ ಹದಿ
ಬದೆಯ ಧರ್ಮವ ಬಣ್ಣಿಪೆನು'– (ಹದಿಬದೆಯ ಧರ್ಮ.ಸಂ_1, ಪ_35)

ಎಂದು ಕಾವ್ಯದ ವಾಸ್ತು, ಉದ್ದೇಶ, ರೂಪವನ್ನು ಸರಳವಾಗಿ, ಸ್ಪಷ್ಟವಾಗಿ ಹೇಳಿರುವುದನ್ನು ಕಾಣಬಹುದು. ಅಲ್ಲದೆ ಕಾವ್ಯಕ್ಕೆ ಆಕರವಾಗಿದ್ದುದು ರಾಮಾಯಾಣ, ಮಹಾಭಾರತ, ಮನುಧರ್ಮಶಾಸ್ತ್ರ

ಮೊದಲಾದ ಕೃತಿಗಳಲ್ಲಿ ಹೇಳಿರುವ ವಿಷಯವನ್ನೇ ನಾನೂ ಹೇಳಿದ್ದೇನೆ ಎಂದು ವಿನಮ್ರತೆಯಿಂದ ತಿಳಿಸಿದ್ದಾಳೆ.

'ಹದಿಬದೆಯ ಧರ್ಮ'ದಲ್ಲಿ 9 ಸಂಧಿಗಳಿದ್ದು, ಹೆಣ್ಣಿಗೆ ಹೇಳಿದ ನೀತಿ, ಧರ್ಮದ ಬಗ್ಗೆ ಉಪದೇಶ ಮಾಡಿರುವುದು ವಿಶೇಷವಾಗಿದೆ. ಏಕೆಂದರೆ 'ಹೆಣ್ಣು ಸಂಸಾರದ ಕಣ್ಣು' ಎಂಬುವುದರಲ್ಲಿ ಸಂದೇಹವೇ ಇಲ್ಲ. ಒಂದು ಸಂಸಾರ ನೆಮ್ಮದಿಯ ಜೀವನ ನಡೆಸಲು ಪರಸ್ಪರರ ಸಹಕಾರ ಅಗತ್ಯವಾಗಿದೆ. ಹೆಣ್ಣಿನ ಕರ್ತವ್ಯಗಳನ್ನು ಎಳೆ_ಎಳೆಯಾಗಿ ಬಿಡಿಸಿ ಹೇಳುವ ಹೊನ್ನಮ್ಮ, ಪುರುಷ ದಬ್ಬಾಳಿಕೆಯನ್ನೂ ಖಂಡಿಸಿರುವುದನ್ನು ಕಾಣಬಹುದು. ಗಂಡ, ಅತ್ತೆ, ಮಾವ, ನಾದಿನಿಯರ ಮನವನ್ನು ಗೆಲ್ಲುವ ವಿಧಾನವನ್ನು ಸೊಗಸಾಗಿ ಹೇಳುತ್ತಾ, ಗಂಡ ಮತ್ತು ಅವರ ಮನೆಯವರಿಗೂ ಹೊಸದಾಗಿ ಬಂದ ಹೆಣ್ಣು ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲು ಅನುವು ಮಾಡಿಕೊಡಬೇಕೆಂಬುದನ್ನು ಕೂಡ ಹೇಳಿದ್ದಾಳೆ. ಪತಿಯು ಸತಿಯನ್ನು ಹೇಗೆ ನೋಡಿಕೊಳ್ಳಬೇಕೆಂಬುದನ್ನು ಕೂಡ ವಿವರವಾಗಿ ತಿಳಿಸಿದ್ದಾಳೆ.

ಹೆಣ್ಣನ್ನು ಕೀಳಾಗಿ, ಕಾಣುವವರನ್ನು ಖಂಡಿಸುತ್ತಾ,

'ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು
ಪೆಣ್ಣಲ್ಲವೇ ನಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು' -----(ಸಂಚಿ ಹೊನ್ನಮ್ಮ-ಹದಿಬದೆಯ ಧರ್ಮ) ಎಂದಿದ್ದಾಳೆ.

ಒಟ್ಟಿನಲ್ಲಿ ಸುಖಿ ಕುಟುಂಬದ ಮತ್ತು ಸಮಾಜದ ಒಳಿತಿಗಾಗಿ ಅವಶ್ಯವಿರುವ ಮೌಲ್ಯಗಳನ್ನು ನೀತಿಗಳನ್ನು ಹೇಳಿರುವ ಹೊನ್ನಮ್ಮ ಸಾಹಿತ್ಯಕ್ಕೆ ತನ್ನದೇ ಕೊಡುಗೆ ನೀಡಿದ್ದಾಳೆ.

ಶೃಂಗಾರಮ್ಮ:

ಹೊನ್ನಮ್ಮನ ಸಮಕಾಲೀನಳಾದ ಶೃಂಗಾರಮ್ಮ ಕೂಡ ಚಿಕ್ಕದೇವರಾಜನ ಆಸ್ಥಾನದಲ್ಲಿದ್ದಳು. ತಂದೆ ಚಿಂತಾಮಣಿ ದೇಶಿಕೇಂದ್ರ, ಗುರು ಶ್ರೀನಿವಾಸ ದೇಶಿಕೇಂದ್ರ "ಚಿಕದೇವ ಭೂಪಾಲ ಸಂತವಿಸಿದ ಸಣ್ಣಮಗಳು ಶೃಂಗಾರಮ್ಮ 'ಪದ್ಮಿನಿ ಕಲ್ಯಾಣ' ಎಂಬ ಕಾವ್ಯ ಬರೆದಿದ್ದಾಳೆ. ತಿರುಪತಿಯ ಶ್ರೀನಿವಾಸನಿಗೂ, ಪದ್ಮಾವತಿಗೂ ನಡೆದ ವಿವಾಹ ಕಲ್ಯಾಣವೇ ಕಾವ್ಯದ ವಸ್ತುವಾಗಿರುವ, 189 ಪದ್ಯಗಳ ಚಿಕ್ಕ ಹಾಡುಗಬ್ಬ ಇದಾಗಿದೆ. (ಸರೋಜಿನಿ ಮಹಿಷಿ: ಕರ್ನಾಟಕದ ಕವಯಿತ್ರಿಯರು_ಪುಟ-215,1961)

ಪದ್ಮಿನಿಯ ಬಾಲ್ಯದಿಂದ ಪ್ರಾರಂಭವಾಗುವ ಕಥೆ, ಪದ್ಮಿನಿಯ ಗೆಳತಿಯರ ನಡೆ-ನುಡಿ, ಯೌವನದ ಸೊಬಗು, ನಂತರ ಶ್ರೀನಿವಾಸನೊಡನೆ ಮದುವೆ ಮಾಡುವುದರೊಂದಿಗೆ ಕೃತಿ ಮುಕ್ತಾಯವಾಗಿದೆ. ಪ್ರಾಸ, ಅನುಪ್ರಾಸ, ಸರಳ ನಿರೂಪಣೆ ಹೊಂದಿದ 'ಪದ್ಮಿನಿ ಕಲ್ಯಾಣ' ಒಂದು ಸಾಂಪ್ರಾದಾಯಿಕ ಕೃತಿಯಾಗಿ ಮೂಡಿಬಂದಿದೆ.

ಚೆಲುವಾಂಬೆ: 18ನೇ ಶತಮಾನ

"1712 ರಿಂದ 1731 ರವರೆಗೆ ಆಡಳಿತ ನಡೆಸಿದ ಮೈಸೂರು ಅರಸರಾದ ದೊಡ್ಡ ಕೃಷ್ಣರಾಜರ ರಾಣಿಯಾಗಿದ್ದ ಚೆಲುವಾಂಬೆಯು 'ವರನಂದಿ ಕಲ್ಯಾಣ', 'ವೆಂಕಟಾಚಲ

ಮಹಾತ್ಮೆ"ಲಾಲಿಪದ',‘ಅಲಮೇಲಮ್ಮಂಗೆ ಲಾಲಿಪದ', ‘ತಲಕಾವೇರಿ ಮಹಾತ್ಮ್ಯೆ', ಮಂಗಳಾರತಿ'._ಎಂಬ ಕೃತಿಗಳನ್ನು ರಚಿಸಿರುವುದಾಗಿ ತಿಳಿದುಬರುತ್ತದೆ".
(ಲೀಲಾವತಿ ಎಸ್,ರಾವ್,:ಕನ್ನಡ ಸಾಹಿತ್ಯ ಸಂದರ್ಭ:ಪುಟ–176,–1990)

ಇವುಗಳಲ್ಲದೆ 'ಕೃಷ್ಣ ಕರ್ಣಾಮೃತ ವ್ಯಾಖ್ಯೆ' ಎಂಬುದು ಸಂಸ್ಕೃತ ಗ್ರಂಥಕ್ಕೆ ಕನ್ನಡದಲ್ಲಿ ಬರೆದ ವ್ಯಾಖ್ಯಾನವೇ ಆಗಿದೆ. ಅದರೆ ಈ ಕೃತಿ ಪೂರ್ಣವಾಗಿ ದೊರೆತಿಲ್ಲ. ಈ ಎಲ್ಲಾ ಕೃತಿಗಳಿಂದ ಚೆಲುವಾಂಬೆಗೆ ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರ ಪರಿಚಯವಿರುವದನ್ನು ನೋಡಬಹುದು.

‘ವರನಂದಿ ಕಲ್ಯಾಣ' ದಲ್ಲಿ ಯದುಗಿರಿಯ ನಾರಾಯಣನಿಗೂ, ದಿಲ್ಲಿಯ ಸುಲ್ತಾನನ ಮಗಳು ವರನಂದಿಗೂ ಮದುವೆ ನಡೆಯುವ ಕತೆ ಸೊಗಸಾಗಿ ಮೂಡಿಬಂದಿದೆ. ತಂದೆ ಸುಲ್ತಾನನು ತನ್ನ ಮಗಳ ಆಸೆಯನ್ನು ಈಡೇರಿಸುವ ರೀತಿ, ಚೆಲುವರಾಯ ಮತ್ತು ವರನಂದಿ ಪರಸ್ಪರ ಪ್ರೀತಿಸಿ ಮದುವೆ ನೆರವೇರಿದ ರೀತಿಯನ್ನು ಮನಮುಟ್ಟುವಂತೆ ಚಿತ್ರಿಸಿರುವುದನ್ನು ಕಾಣಬಹುದು. ಈ ಕಥೆಯನ್ನು ಏಳು ಸಂಧಿಗಳಲ್ಲಿ 881 ಸಾಂಗತ್ಯ ಪದ್ಯಗಳಲ್ಲಿ ಚೆಲುವಾಂಬೆ ಬರೆದಿದ್ದಾಳೆ. 'ವೆಂಕಟಾಚಲ ಮಹಾತ್ಮೆ'ಯಲ್ಲಿ ವೆಂಕಟೇಶನಿಗೆ ಜೋಜೋ ಹಾಡುವುದು, ಹರಿಯು ಧೃವನಿಗೆ ಪಟ್ಟ ಕಟ್ಟಿದ್ದು, ದ್ರೌಪದಿಗೆ ವಸ್ತ್ರ ಅಕ್ಷಯವಿತ್ತಿದ್ದು ಮುಂತಾದ ಪುರಾಣ ಪ್ರಸಂಗಗಳನ್ನು ನೆನೆಯುವ ಮೂಲಕ ಹರಿಯ ಮೇಲಿನ ಭಕ್ತಿಯ ಪರಾಕಾಷ್ಠೆಯನ್ನು ನೋಡಬಹುದು. ಅಲಮೇಲಮ್ಮನ ರೋಪ, ಗುಣಗಳ ವರ್ಣನೆಯನ್ನು ‘ಅಲಮೇಲಮ್ಮನ ಲಾಲಿಪದ'ದಲ್ಲಿ ಕಾಣಬಹುದು.

ಒಟ್ಟಿನಲ್ಲಿ ಸೊಗಸಾದ ಭಾಷೆ ಪ್ರಾಸ, ಅನುಪ್ರಾಸಗಳು, ನೇರ ನಿರೂಪಣೆ ಚೆಲುವಾಂಬೆಯ ಕಾವ್ಯದಲ್ಲಿ ಸೊಗಸಾಗಿ ಮೂಡಿಬಂದಿದೆ.

ಹನ್ನೆರಡನೆಯ ಶತಮಾನದ ವಚನಕಾರ್ತಿಯರಂತೆ ಅನೇಕ ಮಹಿಳಾ ಕೀರ್ತನಕಾರರು ಕೂಡ ಕೃತಿ ರಚನೆ ಮಾಡಿ ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಮನೆ ಮನೆಗೆ ಭಕ್ತಿ ಸಾಹಿತ್ಯವನ್ನು ತಲುಪಿಸುವ ಕಾರ್ಯವನ್ನು ಮಾಡಿದ್ದಾರೆ. ಅವರಲ್ಲಿ ಗಲಗಲಿ ಅವ್ವನವರು, ಭಾಗಮ್ಮ, ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭಿಮವ್ವ, ಚಲ್ಲಮ್ಮ, ಸುಂದರಾಬಾಯಿ ಮುಂತಾದವರು ಪ್ರಮುಖರಾಗಿದ್ದಾರೆ.

ಗಲಗಲಿಯ ಅವ್ವ:

18ನೇ ಶತಮಾನದ ಗಲಗಲಿಯ ಅವ್ವನವರು ಹರಿದಾಸರ ಸಾಲಿನಲ್ಲಿ ನಿಲ್ಲುವ ಮೊಟ್ಟಮೊದಲ ಮಹಿಳೆಯಾಗಿದ್ದಾಳೆ. ಕೊಪ್ಪಳ ಜಿಲ್ಲೆಯ ಭೋಗಾಪುರ ಗ್ರಾಮದ ಹೆಣ್ಣು ಮಗಳು. ಹನ್ನೆರಡು ವರುಷದ ಅವ್ವನಿಗೆ ವಿಜಾಪುರ ಜಿಲ್ಲೆಯ ಗಲಗಲಿಯ ವಿದ್ವಾಂಸರಾದ ತೊಂಬತ್ತೈದು ವರುಷದ ಮುದ್ಗಲಾಚಾರ್ಯರೊಡನೆ ಮದುವೆ ಏರ್ಪಟ್ಟು, ಎಂಟು ದಿನಗಳಲ್ಲಿಯೇ ವಿಧವೆಯ ಪಟ್ಟ ಬಂದಿತು. ನಂತರ ಆಕೆಯ ಐದು ಮಂದಿ ಮಲಮಕ್ಕಳೇ ಅವ್ವನಿಗೆ ವಿದ್ಯೆಯನ್ನು ಹೇಳಿಕೊಟ್ಟು, ಸಂಸ್ಕೃತದಲ್ಲಿ ದೊಡ್ಡ ವಿದ್ವಾಂಸಳನ್ನಾಗಿ ಮಾಡಿದರು. ‘ಶ್ರೀ ರಾಮೇಶ', ‘ರಮಿ ಅರಸ' ಅಂಕಿತಗಳಿಂದ ಕನ್ನಡದಲ್ಲಿ ಹಾಡುಗಳನ್ನು ರಚಿಸಿದ್ದಾಳೆ. 'ಶೃಂಗಾರ ತಾರತಮ್ಯ', 'ಮುಯ್ಯದ ಹಾಡು', ‘ಮೋರೆಗೆ ನೀರು ತಂದ ಹಾಡುಗಳು'.

'ಬೀಗರ ಹಾಡುಗಳು' ಅವ್ವನವರ ಪ್ರಮುಖ ಕೃತಿಗಳಾಗಿವೆ. ಸುಮಾರು 266 ಕೀರ್ತನೆಗಳು ದೊರೆತಿದ್ದು, ಅವುಗಳನ್ನು ಬಾಗಲಕೋಟೆಯ ತಾಸಗಾಂವಕರ ಅವರು ಸಂಗ್ರಹಿಸಿ, ಸಂಪಾದಿಸಿದ್ದಾರೆ.

ಹೆಳವನಕಟ್ಟೆ ಗಿರಿಯಮ್ಮ:

ಹರಿದಾಸರ ಪ್ರಮುಖರ ಪಟ್ಟಿಯಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಹೆಸರೂ ಒಂದಾಗೆದೆ, ಕಾಲ 18ನೆಯ ಶತಮಾನ, ಧಾರವಾಡ ಜಿಲ್ಲೆಯ ರಾಣಿಬೆನ್ನೂರಿನ ಬಿಷ್ಟಪ್ಪ ಜೋಯಿಸರ ಮಗಳಾಗಿದ್ದು, ಮಲೆ ಬೆನ್ನೂರಿನ ಶಾನುಭೋಗ ಕೃಷ್ಣಪ್ಪನ ಮಗ ತಿಪ್ಪರಸನೊಂದಿಗೆ ಮದುವೆಯಾಗುತ್ತದೆ. ಆದರೆ ಅಪಾರ ಭಕ್ತಿ ಭಾವವನ್ನು ಹೊಂದಿದ್ದು, ಸಂಸಾರದಲ್ಲಿ ಒಲವಿಲ್ಲದ ಗಿರಿಯಮ್ಮ ಗಂಡನಿಗೆ ಇನ್ನೊಂದು ಮದುವೆ ಮಾಡಿಸಿ, ರಂಗನಾಥ ಸ್ವಾಮಿಯನ್ನು ನೆನೆಯುತ್ತಾ ಜೀವನ ಪೂರ್ತಿ ವಿರಾಗಿಣಿಯಾಗಿಯೇ ಇದ್ದು ಬಿಡುತ್ತಾಳೆ. ಗೋಪಾಲದಾಸರ ಅನುಗ್ರಹದಿಂದ 'ಹೆಳವನಕಟ್ಟೆ ರಂಗ' ಅಂಕಿತದಿಂದ ಕೃತಿ ರಚನೆ ಮಾಡಿದ್ದಾಳೆ. 46 ಹಾಡುಗಳು ದೊರೆತಿದ್ದು, ಅದರಲ್ಲಿ ಒಂದು ಉಗಾಭೋಗ, 40 ಕೀರ್ತನೆಗಳು ಮತ್ತು 05 ದೊಡ್ಡ ಹಾಡುಗಳಿವೆ. ದೇವ ದೇವತೆಗಳ ಸ್ತುತಿ, ಪುರಾಣ ಪ್ರಸಂಗಗಳು ಗಿರಿಯಮ್ಮನ ಕಾವ್ಯದ ವಸ್ತುಗಳಾಗಿವೆ. ಉದ್ದಾಳಿಕನ ಕತೆ, ಶಂಕರಗಂಡನ ಹಾಡು, ಸೀತಾಕಲ್ಯಾಣ, ಚಂದ್ರಹಾಸ ಕತೆ, ಬ್ರಹ್ಮ ಕೊರವಂಜಿ–ಇವು ಗಿರಿಯಮ್ಮನ ದೊಡ್ಡ ಹಾಡುಗಳಾಗಿವೆ.

'ಉದ್ದಾಳಿಕನ ಕತೆ' ಸಾಂಗತ್ಯ ಕೃತಿಯಾಗಿದ್ದು, 448 ನುಡಿಗಳಿವೆ. 'ಶಂಕರಗಂಡನ ಹಾಡು' ಕೂಡ ಸಾಂಗತ್ಯ ಕೃತಿಯಾಗಿದ್ದು 62 ನುಡಿಗಳನ್ನು ಹೊಂದಿದೆ. ಕಾಮನ ಗರ್ವಭಂಗ ಈ ಹಾಡಿನಲ್ಲಿ ಮೂಡಿಬಂದಿದ್ದು, ಅಹಂಕಾರ ಇರಬಾರದು ಎನ್ನುವ ನೀತಿ ಪಾಠ ಇದರಲ್ಲಿದೆ. 'ಸೀತಾಕಲ್ಯಾಣ' ಹಾಡಿನಲ್ಲಿ 87 ನುಡಿಗಳಿದ್ದು, ಮದುವೆ ಪದ್ಧತಿಗಳನ್ನು ರಾಮ–ಸೀತೆಯರ ಮದುವೆಗೂ ಅನ್ವಯಿಸಿ ಹೇಳಲಾಗಿದೆ. 'ಚಂದ್ರಹಾಸನ ಕತೆ'ಯು ಸಾಂಗತ್ಯ ಕೃತಿಯಾಗಿದ್ದು, ನಾಲ್ಕು ಸಂಧಿಗಳಿವೆ.355 ನುಡಿಗಳನ್ನು ಹೊಂದಿರುವ ಈ ಕೃತಿಯಲ್ಲಿ ಭಗವಂತನ ಕೃಪೆಯ ಶಕ್ತಿ ಎಂಥದ್ದು ಎಂಬುದನ್ನು ಸೊಗಸಾಗಿ ವರ್ಣಿಸಲಾಗಿದೆ. 'ಬ್ರಹ್ಮ ಕೊರವಂಜಿ'–ವಚನ ಮತ್ತು ಪದ್ಯಗಳಿಂದ ಕೂಡಿದ ಹಾಡಾಗಿದೆ. ಬ್ರಹ್ಮನು ಕೊರವಂಜಿಯ ವೇಷ ಧರಿಸಿ ಬಂದು ಸೆರೆಮನೆಯಲ್ಲಿದ್ದ ದೇವಕಿಯ ಹತ್ತಿರ ಬಂದು ಕೃಷ್ಣ ಹುಟ್ಟುವ ಮತ್ತು ಕಂಸನ ವಧೆಯಾಗುವ ವಿಷಯವನ್ನು ತಿಳಿಸುವುದೇ ಇದರ ವಸ್ತುವಾಗಿದೆ.

ಇವುಗಳಲ್ಲದೆ ಕಾಲೀಯ ಮರ್ದನ, ಗಜೇಂದ್ರ ಮೋಕ್ಷ, ಪತಿದಾನ ಕೊಟ್ಟ ಹಾಡು, ಭಾಗವತ, ರಾಮಾಯಣ–ಇನ್ನೂ ಅನೇಕ ಹಾಡುಗಳನ್ನು ರಚಿಸಿದ್ದಾಳೆಂಬುದಕ್ಕೆ ಉಲ್ಲೇಖವಿದ್ದರೂ ಆ ಹಾಡುಗಳು ಇನ್ನೂ ದೊರೆತಿಲ್ಲ.

ಹರಪನಹಳ್ಳಿ ಭೀಮವ್ವ: (1822–1902)

ಹರಿದಾಸ ಪರಂಪರೆಯಲ್ಲಿ ಕೇಳಿಬರುವ ಮತ್ತೊಂದು ಹೆಸರು ಹರಪನಹಳ್ಳಿ ಭೀಮವ್ವ, ಹೆಚ್ಚಿನ ಸಂಖ್ಯೆಯಲ್ಲಿ ಕೀರ್ತನೆಗಳನ್ನು ರಚಿಸಿರುವಳು. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ನಾರಾಯಣ ದೇವರ ಕರೆ ಎಂಬ ಊರಲ್ಲಿ ಹುಟ್ಟಿದ ಭೀಮವ್ವನ ತಂದೆ ರಘುನಾಥಾಚಾರ್ಯ, ತಾಯಿ ರಾಘಮ್ಮ. ಹನ್ನೊಂದು ವರ್ಷದ ಭೀಮವ್ವನಿಗೆ ರಾಮದುರ್ಗದ ಹಿರೇಹಾಳದ ನಲವತ್ತೈದು ವರ್ಷದ ವಿದುರನೊಂದಿಗೆ ಮದುವೆ ಮಾಡಲಾಯಿತು. ತವರು ಮನೆಯಲ್ಲಿ ಭೀಮಾಬಾಯಿ ಆಗಿದ್ದವಳು ಗಂಡನ

ಮನೆಯಲ್ಲಿ ಕೃಷ್ಣಬಾಯಿ ಆದಳು. ಇವೆರಡು ಹೆಸರುಗಳನ್ನು ಕೂಡಿಸಿ 'ಭೀಮೇಶ ಕೃಷ್ಣ' ಎಂಬ ಅಂಕಿತವನ್ನಿಟ್ಟುಕೊಂಡು ಸಾಹಿತ್ಯವನ್ನು ರಚಿಸಿದ್ದಾಳೆ. ಅವುಗಳಲ್ಲಿ ಸುಮಾರು 143 ಸಣ್ಣ ಹಾಡುಗಳು, 06 ದೊಡ್ಡ ಹಾಡುಗಳಾಗಿವೆ. ವರ್ಣನಾ ಪ್ರಧಾನವಾಗಿರುವ ಈಕೆಯ ಹಾಡುಗಳಲ್ಲಿ ಭಕ್ಷ್ಯ–ಭೋಜ್ಯಗಳ, ಆಭರಣ–ಅಲಂಕಾರ, ರೂಪ–ಗುಣಗಳ ವರ್ಣನೆಯನ್ನು ಕಾಣಬಹುದು. 'ಸೀರೆಹಾಡು' ಎಂದೇ ಪ್ರಸಿದ್ಧವಾಗಿರುವ ಈ ಹಾಡಿನಲ್ಲಿ ಸುಮಾರು 70 ಬಗೆಯ ಸೀರೆಯ ಹೆಸರುಗಳು, ಬಣ್ಣ, ಅಂಚು, ಸೆರಗು ಮುಂತಾದವುಗಳ ಬಗ್ಗೆ ವರ್ಣಿಸಿದ್ದಾಳೆ.

ಗೋಪಿಯರು ಯಮುನಾ ನದಿಯಲ್ಲಿ ಜಲಕ್ರೀಡೆಯಾಡುತ್ತಿರುವಾಗ ಅವರು ದಡದ ಮೇಲಿಟ್ಟಿದ್ದ ಸೀರೆಗಳನ್ನೆಲ್ಲಾ ಕೃಷ್ಣ ಕದ್ದೊಯ್ಯುವನು. ಆಗ ಗೋಪಿಯರು–

ಕರಿಯ ಹೂವಿನ ಸೀರೆ..ಬಿಳಿಯ ಹೂವಿನ ಸೀರೆ.
ಸಾರಾವಳಿ ಸೀರೆ ರಾಗಾವಳಿ ಸೀರೆ..ಬಾಳೆಪಟ್ಟೆ ಸೀರೆ
ಬದನೆ ಬಣ್ಣದ ಸೀರೆ..ಕರಿಯ ಚಂದರ ಕಾಳಿ
ಕವಳೆ ಹೂವಿನ ಸೀರೆ.....

ಹೀಗೆ ಸೀರೆಗಳ ಹೆಸರನ್ನು ಹೇಳುತ್ತಾ ಅವುಗಳೊಂದಿಗಿರುವ ಭಾವನಾತ್ಮಕ ಸಂಬಂಧಗಳನ್ನೂ ವರ್ಣಿಸುತ್ತಾಳೆ. ಹೀಗೆ ಭೀಮವ್ವ ಬರೆದು ಹಾಡಿದ ಹಾಡುಗಳನ್ನು ಈಗಲೂ ಅವಳ ವಂಶದವರು ಅದೇ ಧಾಟಿಯಲ್ಲಿ ಹಾಡುವುದನ್ನು ಉಳಿಸಿಕೊಂಡು ಬಂದಿರುವುದು ವಿಶೇಷವಾಗಿದೆ.

ಇವರಲ್ಲದೆ ಕ್ರಿ.ಶ. 1828ರಲ್ಲಿದ್ದ ಯದುಗಿರಿಯಮ್ಮ ಬೆಂಗಳೂರಿನಲ್ಲಿ ನೆಲೆಸಿದ್ದರು. ಇವರಿಗೆ ವಿದ್ಯಾಭ್ಯಾಸ ಇಲ್ಲದಿದ್ದರೂ ಕನ್ನಡ, ತಮಿಳು, ತೆಲುಗು ಭಾಷೆಗಳನ್ನು ಓದಬಲ್ಲವರಾಗಿದ್ದರು.'ಮುದ್ದು ವೆಂಕಟ', 'ವೆಂಕಟ ಕೃಷ್ಣ', 'ಶ್ರೀನಿವಾಸ' ಎಂಬ ಅಂಕಿತಗಳನ್ನಿಟ್ಟುಕೊಂಡು 74 ಬಿಡಿ ಕೀರ್ತನೆಗಳನ್ನು ಬರೆದಿದ್ದಾರೆ. ಅಲ್ಲದೆ 'ಶ್ರೀ ಮುದ್ರಾಯಣ', ಭಾಗವತ ಕತೆ, ಶ್ರೀರಂಗಧ್ಯಾನ, ಅಂಡಳ್ ಉತ್ಸವಾದಿಗಳು ಎಂಬ ಕೃತಿಗಳನ್ನು ರಚಿಸಿದ್ದಾರೆ.

ಚೆ.ರಾ.ಚೆಲ್ಲಮ್ಮ (1850): ಮೈಸೂರಿನ ಮಹಾರಾಣಿ ಬಾಲಿಕಾ ಪಾಠಶಾಲೆಯಲ್ಲಿ ಶಿಕ್ಷಕಿಯಾಗಿದ್ದರು. ತಂದೆ ಚೆರುಪಕಲ್ಲಿ ರಾಮಾರ್ಯರು, ತಾಯಿ ಸೀತಮಾಂಬೆ. ರಾಜಕಳಾನಿಧಿ, ರುಕ್ಮಿಣೀ ಪರಿಯಣ ಮತ್ತು ಪಾರಿಜಾತಾಪಹರಣ ಎಂಬ ಮೂರು ಕೃತಿಗಳನ್ನು ರಚಿಸಿದ್ದಾರೆ.

ಸಣ್ಣ ಭಡತಿ ಗಣಪಕ್ಕ (ಸುಮಾರು.1870): ಉತ್ತರಕನ್ನಡ ಜಿಲ್ಲೆಯ ಗೋಕರ್ಣದವರು. ತಂದೆ ಗಣಪಭಟ್ಟರು, ತಾಯಿ ಪಾರ್ವತಿ. ಮನೆಯಲ್ಲಿ ಯಾವಾಗಲೂ ಭಜನೆ, ಕೀರ್ತನೆಗಳ ಸಂತರ್ಷಣೆಗಳ ವಾತಾವರಣ. ಹನ್ನೆರಡನೆಯ ವಯಸ್ಸಿನಲ್ಲಿ ನಾಗಪ್ಪ ಸಣ್ಣ ಭಡತಿ ಎಂಬ ವೈದಿಕರೊಂದಿಗೆ ಮದುವೆಯಾಗಿ ಒಂಬತ್ತು ಮಕ್ಕಳ ತಾಯಿಯಾಗಿ, ಬಡತನದ ಸಂಸಾರದಲ್ಲೂ ಕಾವ್ಯ ರಚನೆ ಕೈಗೊಂಡು ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿರುವುದು ವಿಶೇಷವಾಗಿದೆ. 'ಗೋಕರ್ಣ ಮಹಾತ್ಮೆ' ಮತ್ತು 'ಕೃಷ್ಣನ ಹುಟ್ಟು' ಎಂಬ ಕೃತಿಗಳನ್ನು ರಚಿಸುವುದರ ಜೊತೆಗೆ 'ಕೃಷ್ಣನ ಹುಟ್ಟು' ಎಂಬ ಹೆಸರಿನ ಯಕ್ಷಗಾನವನ್ನು ರಚಿಸಿರುವುದು ತಿಳಿದುಬರುತ್ತದೆ.

ಸುಂದರಾಬಾಯಿ (ಸು.1875): ಹೆಬ್ಬಳ್ಳಿಯ ಜಹಗೀರದಾರರ ಮನೆಯಲ್ಲಿ ಹುಟ್ಟಿದ ಇವರು ಚಿತ್ತಾಪುರದ ಶ್ರೀಮಂತ ಜಹಗೀರದಾರರ ಮನೆಗೆ ಹೋದರೂ ಈಕೆ ಬಾಲವಿಧವೆಯಾಗಿದ್ದಳು. ಇವಳ ಮಾವನವರಾದ ಶ್ರೀ ಸತ್ಯ ಪರಾಕ್ರಮ ಸ್ವಾಮಿಗಳ ಪ್ರಭಾವದಿಂದ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡು ಅನೇಕ ಹಾಡುಗಳನ್ನು ರಚಿಸಿದ್ದಾಳೆ. ಕೃತಿಗಳು: 'ರುಕ್ಮಾಂಗದ ಚರಿತ್ರೆ', 'ಕೃಷ್ಣನ ಹುಟ್ಟು', 'ಸುಭದ್ರಾ ಮುಯ್ಯಿ', 'ರುಕ್ಮಿಣೀ ಪರಿಣಯ', 'ಸುಭದ್ರಾ ಕಲ್ಯಾಣ', ಶುಕ್ರವಾರ– ಶನಿವಾರ ಗೌರಿಯ ಹಾಡುಗಳನ್ನು ರಚಿಸಿದ್ದಾಳೆ. 'ಶ್ರೀ ವೆಂಕಟೇಶ', 'ಬೆಟ್ಟದೊಡೆಯ ಶ್ರೀ ವೆಂಕಟೇಶ' ಎಂಬ ಅಂಕಿತದಿಂದ ರಚಿಸಿದ ಈ ಹಾಡುಗಳ ವಸ್ತು ಕೃಷ್ಣ, ಕೃಷ್ಣ ಭಕ್ತಿ ಮತ್ತು ಕೃಷ್ಣ ಭಕ್ತರನ್ನು ಕುರಿತಾಗಿದೆ.

ಪನ್ನಿ ಲಕ್ಷ್ಮೀಬಾಯಿ (ಸು.1880):–ಉತ್ತರಕನ್ನಡ ಜಿಲ್ಲೆಯ ಗೋಕರ್ಣದವಳಾದ ಲಕ್ಷ್ಮೀಬಾಯಿ ವೈದಿಕ ಮನೆತನದವಳು. ತಂದೆ ರಾಮಭಟ್ಟರು. ಬಾಲವಿಧವೆಯಾದ ಲಕ್ಷ್ಮೀದೇವಿ 42 ವರ್ಷಗಳು ಬದುಕಿದ್ದು ಅನೇಕ ದೇವರನಾಮಗಳನ್ನು ರಚಿಸಿದ್ದಾಳೆ.

ಇವರಲ್ಲದೆ ಓರಬಾಯಿ ಲಕ್ಷ್ಮೀದೇವಮ್ಮ, ಅಂಬಾಬಾಯಿ, ರಾಧಾಬಾಯಿ, ಸರಸಾಬಾಯಿ, ಕಳಸದ ಸುಂದರಮ್ಮ, ಗುಂಡಮ್ಮನವರು, ಜೀವೂಬಾಯಿ ಮೊದಲಾದವರು ಅನೇಕ ಕೀರ್ತನೆಗಳನ್ನು, ಹಾಡುಗಳನ್ನು ಬರೆದು ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ಇದೆಲ್ಲವನ್ನು ನೋಡಿದಾಗ ಭಕ್ತಿಯನ್ನು ಪ್ರಧಾನವಾಗಿಟ್ಟುಕೊಂಡು ಬರೆದ ಅನೇಕ ವಚನಕಾರ್ತಿಯರು ಮತ್ತು ಹರಿಭಕ್ತೆಯರು ಅಂದಿನ ಧರ್ಮ, ಸಮಾಜದ ಕುಂದು–ಕೊರತೆಗಳನ್ನು ಬಹಿರಂಗವಾಗಿ ವ್ಯಕ್ತಪಡಿಸುವ ಸಾಮರ್ಥ್ಯವನ್ನು ಹೊಂದಿದವರಾಗಿದ್ದರೆಂಬುದು ತಿಳಿದು ಬರುತ್ತದೆ. "ಪುರುಷರು ಅಂದು ಇವರಿಗೆಲ್ಲ ಬೆಂಬಲ ಸೂಚಿಸಿ ಪ್ರೋತ್ಸಾಹಿಸದಿದ್ದರೆ, ಬಹುಶಃ ಇವುರೆಲ್ಲರೂ ಕಣ್ಮರೆಯಲ್ಲಿಯೇ ಇರುತ್ತಿದ್ದರೇನೋ" ಎಂದಿರುವ ಲೀಲಾವತಿ ಎಸ್.ರಾವ್. ಅವರ ಮಾತಿಯಲ್ಲಿ ಸತ್ಯಾಂಶವಿದೆ ಎಂದು ಹೇಳಬಹುದು.

ಆಧುನಿಕ ಕನ್ನಡ ಲೇಖಕಿಯರು:

ಬ್ರಿಟಿಷರ ಪ್ರಭಾವದಿಂದ ಆಧುನಿತೆಯೆಡೆಗೆ ಮುಖ ಮಾಡಿದ ಮಹಿಳೆ ವಿವಿಧ ರೀತಿಯ ಜ್ಞಾನವನ್ನು ಪಡೆದುದಲ್ಲದೆ, ಪಡೆದುದಲ್ಲದೆ, ಪಡೆದ ಅನುಭವಗಳನ್ನು ಅಭಿವ್ಯಕ್ತಿಸುವ ಸಾಮರ್ಥ್ಯ ಮತ್ತು ಸ್ವಾತಂತ್ರ್ಯವನ್ನು ಪಡೆದಳು.

"1907ರಲ್ಲಿ ವೀರಶೈವ ಮಹಾಸಭಾದ ವೇದಿಕೆಯ ಮೇಲೆ ಮತನಾಡಿದ ಮೊದಲ ಮಹಿಳೆ ಬಾರ್ಸಿ ಗಂಗಾಬಾಯಿ ಎಂದು ತಿಳಿದುಬರುತ್ತದೆ." ಅದರಂತೆ 1909–1910ರಲ್ಲಿ ಶಾಂತಾಬಾಯಿ ನೀಲಗಾರ ಎಂಬುವವರು (ಮುಖ್ಯೋಪಾಧ್ಯಾಯಿನಿ ಆಗಿದ್ದರು) ಸ್ಪರ್ಧೆಗಾಗಿ ಬರೆದ ಕಾದಂಬರಿ 'ಸದ್ಗುಣಿ

ಕೃಷ್ಣಾಬಾಯಿ' ಅಥವಾ 'ಉತ್ತಮ ಗೃಹಿಣಿ'. ಇವರೇ ಆಧುನಿಕ ಕನ್ನಡದ ಪ್ರಥಮ ಲೇಖಕಿ ಎಂದು ಗುರುತಿಸಲಾಗಿದೆ.

ಹೊಸಗನ್ನಡ ಸಾಹಿತ್ಯದಲ್ಲಿ ಕಾವ್ಯದ ಜೊತೆ ಕತೆ, ಕಾದಂಬರಿ, ಜೀವನ ಚರಿತ್ರೆ, ಶಿಶು ಸಾಹಿತ್ಯ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಮಹಿಳೆಯರೂ ಕೃತಿಗಳನ್ನು ರಚಿಸಿದರು. ನಂಜಗೂಡಿನ ತಿರುಮಲಾಂಬ, ಆರ್. ಕಲ್ಯಾಣಮ್ಮ, ಕೊಡಗಿನ ಗೌರಮ್ಮ, ಭಾರತಿ(ತಿರುಮಲೆ ರಾಜಮ್ಮ), ಶ್ಯಾಮಲಾದೇವಿ ಬೆಳಗಾಂವಕರ್, ವಾಣಿ, ತ್ರಿವೇಣಿ, ಅನುಪಮಾ ನಿರಂಜನ, ಎಂ.ಕೆ.ಇಂದಿರಾ, ಕಾತ್ಯಾಯಿನಿ.ಎಚ್.ಎಸ್.ಗೀತಾ ಕುಲಕರ್ಣಿ, ವೀಣಾ ಶಾಂತೇಶ್ವರ ಮುಂತಾದವರು ಮೌಲ್ಯಯುತವಾದ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ನಂಜನಗೂಡಿನ ತಿರುಮಲಾಂಬ:

1887, ಮಾರ್ಚ್ 25ರಂದು ಜನನ. ತಂದೆ ವೆಂಕಟಕೃಷ್ಣ ಅಯ್ಯಂಗಾರ, ತಾಯಿ ಆಲಮೇಲಮ್ಮ. "ನಂಜನಗೂಡಿನ ತಿರುಮಲಾಂಬ ಹೊಸಗನ್ನಡದ ಮೊದಲ ಪತ್ರಿಕಾ ಸಂಪಾದಕಿ, ಜೊತೆಗೆ ಮೊದಲ ಪ್ರಕಾಶಕಿಯೂ ಆಗಿದ್ದವರು. ಸತೀ ಹಿತೈಷಿಣಿ ಗ್ರಂಥಮಾಲೆಯನ್ನು ನಡಸಿದವರು."

5ನೇ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡು 10ನೆಯ ವಯಸ್ಸಿನಲ್ಲಿಯೇ ಕೊಳ್ಳೆಗಾಲದ ನರಸಿಂಹ ಅಯ್ಯಂಗಾರರನ್ನು ಮದುವೆಯಾಗಿ ಮುಂದಿನ ನಲ್ಕು ವರ್ಷಗಳಲ್ಲಿಯೇ ವಿಧವೆಯಾದರು. ಪ್ರಾಥಮಿಕ ಶಿಕ್ಷಣ ಮುಗಿಸಿದ ತಿರುಮಲಾಂಬ ತಮ್ಮ ಮುಂದಿನ ಜೀವನವನ್ನು ಸಾಹಿತ್ಯ ಬರೆಯುವುದರಲ್ಲಿ, ಪ್ರಕಾಶನಗಳಲ್ಲಿ ತೊಡಗಿಸಿಕೊಂಡರು.

1. ಬೀದರಿನ ರಂಗಮಂದಿರದಲ್ಲಿ ದೇಜಗೌ ಅವರ ಸನ್ಮಾನ ಸಮಾರಂಭದಲ್ಲಿ ಡಾ. ಎಂ.ಎಂ.ಕಲಬುರ್ಗಿಯವರು ಹೇಳಿದ್ದು.
2. ಶಕುಂತಲಾ.ಎಸ್,ದುರ್ಗಿ–ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ; ಪುಟ–38, 1999
3. ಡಾ.ವಿಜಯಾ ದಬ್ಬೆ–ಲೇಖಕಿಯರ ಸಾಹಿತ್ಯ 75 ವರ್ಷಗಳಲ್ಲಿ; ಪುಟ–02, 1987

ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಅಂದರೆ ಕಾದಂಬರಿ, ನಾಟಕ, ಕಾವ್ಯ, ಪ್ರಬಂಧ, ವ್ಯಕ್ತಿಚಿತ್ರಗಳನ್ನು ಕುರಿತು ಕೃತಿಗಳನ್ನು ರಚಿಸಿದ್ದಾರೆ. 'ಸುಶೀಲೆ', 'ವಿರಾಗಿಣಿ', 'ನಭಾ', 'ವಿದ್ಯುಲ್ಲತಾ', 'ದಕ್ಷಕನ್ಯಾ', 'ಮಾತೃನಂದಿನಿ' ಮೊದಲಾದ 14 ಕಾದಂಬರಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ 'ಸುಶೀಲೆ', 'ವಿದ್ಯುಲ್ಲತಾ','ಮಾತೃನಂದಿನಿ' ಕಾದಂಬರಿಗಳು ಕ್ರಮವಾಗಿ 1913, 1914, 1916ರಲ್ಲಿ ವಿವಿಧ ತರಗತಿಗಳಿಗೆ ಪಠ್ಯವಾಗಿದ್ದವು. ಇವರು ರಚಿಸಿದ ಕಾದಂಬರಿಗಳಲ್ಲಿ ಸ್ತ್ರೀ ವಿದ್ಯಾಭ್ಯಾಸ ಕುರಿತು ಸಮಾಜದ ತಪ್ಪು ತಿಳುವಳಿಕೆಗಳು, ವಿಧವೆಯರ ಅಸಹಾಯಕ ಸ್ಥಿತಿ, ಭೀತಿ, ಸಂಶಯ. ಬಾಲ್ಯ ವಿವಾಹದ ನಿರಾಕರಣೆ ಮುಂತಾದ ವಸ್ತುಗಳು ಒಳಗೊಂಡಿರುವುದನ್ನು ಕಾಣುತ್ತೇವೆ. ಇವರು ರಚಿಸಿದ 04 ನಾಟಕಗಳೆಂದರೆ 1916ರ 'ರಮಾನಂದ' ಮತ್ತು 'ಚಂದ್ರವದನ', 1928ರಲ್ಲಿ 'ವಿವೇಕೋದಯ' ಮತ್ತು 'ಭಾರ್ಗವ ಗರ್ವಭಂಗಂ'. ಇವುಗಳಲ್ಲಿ 'ರಮಾನಂದ' ನಾಟಕವು 1917 ರಲ್ಲಿ ಪಠ್ಯವಾಗಿತ್ತು. 'ಸನ್ಮಾರ್ಗದರ್ಶಿನಿ', 'ಹಿತೈಷಿಣಿ', 'ಶ್ರೀಪಾದರೇಣು' ಎಂಬ ನಾಮವಿಶೇಷಣಗಳಿಂದ 'ಭಕ್ತಿಗೀತಾವಳಿ' ಮತ್ತು 'ಭದ್ರಗೀತಾವಳಿ'

ಎಂಬ ಕಾವ್ಯಗಳನ್ನು, ಪ್ರಬಂಧ ಸಾಹಿತ್ಯ ಪ್ರಕಾರದಲ್ಲಿ 05 ಲೇಖನಗಳನ್ನು ಕುರಿತು ಕೃತಿಯನ್ನು ರಚಿಸಿ, ಕನ್ನಡ ಸಾಹಿತ್ಯಕ್ಕೆ ವಿಶೇಷ ಕೊಡುಗೆಯನ್ನು ನೀಡಿದ್ದಾರೆ.

ಆರ್.ಕಲ್ಯಾಣಮ್ಮ : (1892–1965)

ರಾಮಸ್ವಾಮಯ್ಯಂಗಾರ್ ಮತ್ತು ಜಾನಕಮ್ಮ ದಂಪತಿಗಳ ಮಗಳಾಗಿ ಹುಟ್ಟಿದ ಕಲ್ಯಾಣಮ್ಮ ಸಾಂಪ್ರದಾಯಿಕ ತುಂಬು ಕುಟುಂಬದಲ್ಲಿ ಬೆಳೆದು 9ನೇ ವಯಸ್ಸಿನಲ್ಲಿಯೇ ವಿಧವೆಯಾಗಿ ಅನೇಕ ಕಷ್ಟ–ಕಾರ್ಪಣ್ಯಗಳನ್ನು ದಾಟಿ ಬೆಳೆದವರು. ಸಾಹಿತ್ಯ ಕೃಷಿ, ಸಮಾಜ ಸೇವೆ, ಪತ್ರಿಕೆ–ಪ್ರಕಾಶನಗಳ ಮೂಲಕ ತಮ್ಮ ಜೀವನವನ್ನು ಸಾರ್ಥಕಪಡೆಸಿಕೊಂಡಿದ್ದಾರೆ. ಕಲ್ಯಾಣಮ್ಮನವರು ಕೂಡ ಕಾದಂಬರಿ, ನಾಟಕ, ಸಣ್ಣಕತೆ, ಪ್ರಬಂಧ, ವ್ಯಕ್ತಿ ಚಿತ್ರ, ಮಕ್ಕಳ ಸಾಹಿತ್ಯ, ಅನುವಾದ–ಹೀಗೆ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ.

ನಿರ್ಮಲೆ, ಸ್ನೇಹಲತೆ, 20ನೆಯ ಶತಮಾನದ ಅಳಿಯ, ಬ್ಯಾರಿಸ್ಟರ್ ರಾಮಚಂದ್ರನ್, ಹಿಂದೂ ಭಾಗ್ಯೋದಯ, ಸತೀ ಪದ್ಮಿನಿ, ಚಾಣಕ್ಯ ತಂತ್ರ, ಕಪ್ಪಲ್ಲ ಕಬ್ಬು, ವರುಣನ ರಾಜೀನಾಮೆ, ಮಾಧುವಿನ ಪ್ರತಿಜ್ಞೆ ಮೊದಲಾದ 20ಕ್ಕೂ ಹೆಚ್ಚು ನಾಟಕಗಳನ್ನು ವಿಭಿನ್ನ ವಸ್ತುವನ್ನಿಟ್ಟುಕೊಂಡು ರಚಿಸಿದ್ದಾರೆ. ಪ್ರಿಯಂವದಾ, ಇಂದಿರೆ ಅಥವಾ ನಿರ್ಭಾಗ್ಯವನಿತೆ, ಸುಖಲತಾ ಎಂಬ ಕಾದಂಬರಿಗಳನ್ನು, ಫಲಿತಾಂಶ, ನನ್ನ ಧನವನ್ನು ನನಗೆ ತಾ, ದೇವನೆಲ್ಲಿ, ಸರಸ್ವತಿ, ಅಮಾವಾಸ್ಯೆ ರಾತ್ರಿ, ದೇವೇಚ್ಛೆ, ದೇವಿಯ ತ್ಯಾಗ, ಕಳ್ಳ–ಮೊದಲಾದ ಕತೆಗಳನ್ನು, ರಾಣಿ ದುರ್ಗಾದೇವಿ, ಸರೋಜಿನಿದೇವಿ, ಶಾರದಾದೇವಿ ಮುಂತಾದ 20ಕ್ಕೂ ಹೆಚ್ಚು ವ್ಯಕ್ತಿ ಚಿತ್ರಕ್ಕೆ ಸಂಬಂಧಿಸಿದ ಲೇಖನಗಳನ್ನು, ಸಮಾಜ ಚಿತ್ರ, ಹಿಂದೂ ಧರ್ಮಶಾಸ್ತ್ರದಲ್ಲಿ ಸ್ತ್ರೀಯರ ಸ್ಥಾನ, ಭಾರತವರ್ಷದ ಕವಯಿತ್ರಿಯರು, ಮಾತಾಶಿಶು ಸಂರಕ್ಷಣೆ, ಮಕ್ಕಳನ್ನು ಹೆದರಿಸುವುದು ತಪ್ಪು, ರಾಷ್ಟ್ರೀಯ ಶಿಕ್ಷಣಸ್ವರೂಪ,–ಹೀಗೆ 100ಕ್ಕೂ ಹೆಚ್ಚು ಪ್ರಬಂಧಗಳಲ್ಲಿ ತಮ್ಮ ವಿಚಾರಧಾರೆಯನ್ನು ನಿರರ್ಗಳವಾಗಿ, ಸತ್ವಪೂರ್ಣವಾಗಿ ಮೂಡಿಸಿದ್ದಾರೆ.

ಮಕ್ಕಳ ಬೌದ್ಧಿಕ ವಿಕಾಸವಾಗುವಂತಹ, ಕೂತೂಹಲ ಕೆರಳಿಸುವ ಕತೆಗಳು, ಕವಿತೆಗಳು, ಲೇಖನಗಳನ್ನೂ ಬರೆದಿದ್ದಾರೆ. ಅವುಗಳಲ್ಲಿ ಅರಮನೆ ಗುಬ್ಬಚ್ಚಿ, ಆಟದ ಮೈದಾನ, ಗಾಂಧೀಜಿ ಮುಂತಾದವು. ಇವುಗಳಲ್ಲದೆ ಇಂಗ್ಲೀಷ್, ತಮಿಳು, ತೆಲುಗು, ಹಿಂದಿ ಭಾಷೆಗಳಿಂದ ಅನುವಾದಗೊಂಡ ಬರಹಗಳೂ, ಆಕಾಶವಾಣಿ ಉಪನ್ಯಾಸಗಳೂ ಇವೆ.

ತಿರುಮಲೆ ರಾಜಮ್ಮ(ಭಾರತಿ):

20–11–1900ರಂದು ಜನನ. 'ಭಾರತಿ' ಎಂಬ ಕಾವ್ಯನಾಮದಿಂದ ಸಾಹಿತ್ಯವನ್ನು ರಚಿಸಿದ ಇವರು ಸಾಹಿತಿ, ಸಂಗೀತ ವಿದುಷಿ, ಸಮಾಜ ಸೇವಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಪತಿ ತಿರುಮಲೆ ತಾತಾಚಾರ್ಯ ಶರ್ಮರೊಡನೆ ಪತ್ರಕರ್ತೆಯಾಗಿಯೂ ಕೆಲಸ ಮಾಡಿದ್ದಾರೆ. ಇವರು ಕಾವ್ಯ, ನಾಟಕ, ವ್ಯಕ್ತಿಚಿತ್ರ ಮತ್ತು ಪ್ರಬಂಧಗಳನ್ನು ರಚಿಸಿದ್ದಾರೆ.

1931ರಲ್ಲಿ 'ತಪಸ್ವಿನಿ' ಎಂಬ ರೂಪಕ ರಚಿಸಿದ್ದು, ಲಕ್ಷ್ಮಣನು ಅಣ್ಣನೊಡನೆ ಹದಿನಾಲ್ಕು ವರುಷ ವನವಸದಲ್ಲಿದ್ದಾಗ, ಆ ಹದಿನಾಲ್ಕು ವರುಷಗಳವರೆಗೆ ತಪಸ್ಸಿನಿಂದ ಕಳೆದ ಊರ್ಮಿಳೆಯನ್ನು ಮರಳಿ

ಭೇಟಿಯಾಗುವ ಸನ್ನಿವೇಶ ಈ ರೂಪಕದ ವಸ್ತುವಾಗಿದೆ. 'ರಾಷ್ಟ್ರಭಕ್ತಿ' ಎಂಬ ಕವನ ಸಂಕಲನವನ್ನು ಪ್ರಕಟಿಸಿದ್ದು, ಅದರಲ್ಲಿ ದೇಶಭಕ್ತಿ ಗೀತೆಗಳನ್ನು ಕಾಣಬಹುದು. ಅಲ್ಲದೆ 'ಆರ್ಯಕೈಲಾಸಂ' ಎಂಬ ವ್ಯಕ್ತಿಚಿತ್ರವನ್ನು, 1925ರಲ್ಲಿ 'ಪು.ತಿ.ನ. ಅವರ ಕೃತಿ ಅಹಲ್ಯೆ' ಎಂಬ ವಿಮರ್ಶಾಲೇಖನವನ್ನು ಬರೆದಿದ್ದಾರೆ.

ಶ್ಯಾಮಲಾದೇವಿ ಬೆಳಗಾಂವ್ಕರ್: ಕಾಲ–1910–1943

ಧಾರವಾಡದಲ್ಲಿ ಜನಿಸಿದ ಇವರು ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಪಡೆದು, ಮುಂದೆ ಬೆಳಗಾವಿಯ ರಾಮಚಂದ್ರರಾಯರನ್ನು ವಿವಾಹವಾದರು. ಪತಿಯು ನಡೆಸುತ್ತಿದ್ದ 'ಜಯ ಕರ್ನಾಟಕ' ಪತ್ರಿಕೆಯಲ್ಲಿ ಇವರು ಬರಹಗಳನ್ನು ಬರೆದರು. 1936 ರ 'ಹೂಬಿಸಿಲು', 1943ರ 'ಹೊಂಬಿಸಲು'–ಕಥಾ ಸಂಗ್ರಹಗಳಾಗಿವೆ. ಅಲ್ಲದೆ ವಿಮರ್ಶಾಲೇಖನಗಳು, ಕಾವ್ಯ, ಅನುವಾದಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯವನ್ನೆಲ್ಲಾ ಅವಲೋಕಿಸಿದಾಗ ಅವರ ಬದುಕು–ಬರಹಗಳೆರಡರಲ್ಲಿಯೂ ಸಾಮಾಜಿಕ ಬದ್ಧತೆಯನ್ನು ಕಾಣಬಹುದಾಗಿದೆ.

ಲೀಲಾಬಾಯಿ ಕಾಮತ್:

15–10–1911 ರಂದು ಶ್ರೀನಿವಾಸ ದಾಂಗೆ ಮತ್ತು ಕಾಶೀಬಾಯಿ ದಾಂಗೆಯವರಿಗೆ ಮಗಳಾಗಿ ಮಂಗಳೂರಿನಲ್ಲಿ ಜನಿಸಿದರು. 5ನೇ ತರಗತಿವರೆಗೆವಿದ್ಯಾಭ್ಯಾಸ ಮಾಡಿದ ಲೀಲಾಬಾಯಿಗೆ ಹನ್ನೊಂದನೇ ವಯಸ್ಸಿನಲ್ಲಿ ವಿವಾಹವಾಯಿತು. ಮಾತೃಭಾಷೆ ಕೊಂಕಣಿಯಾದರೂ ಮದುವೆಯಾದ ನಂತರ ಹಿಂದಿ, ಇಂಗ್ಲೀಷ್, ಕನ್ನಡ, ಮರಾಠಿ ಭಾಷೆಗಳಲ್ಲಿ ಪ್ರಾವಿಣ್ಯತೆಯನ್ನು ಹೊಂದಿ 100 ಕ್ಕೂ ಹೆಚ್ಚು ಪರಭಾಷಾ ಪತ್ರಗಳನ್ನು ಕನ್ನಡಕ್ಕೆ ಅನುವಾದಿಸಿ ಸಾಹಿತ್ಯಕ್ಕೆ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ.

ಕೊಡಗಿನ ಗೌರಮ್ಮ : 1912–1939

ರಾಮಯ್ಯ ಮತ್ತು ನಂಜಕ್ಕ ದಂಪತಿಗಳ ಮಗಳಾಗಿ ಜನಿಸಿದ ಗೌರಮ್ಮ ಪ್ರೌಢಶಾಲೆಯವರೆಗೆ ವಿದ್ಯಾಭ್ಯಾಸವನ್ನು ಪಡೆದಿದ್ದಳು. 12 ಕಥೆಗಳನ್ನೊಳಗೊಂಡ 'ಕಂಬನಿ' ಎಂಬ ಕಥಾ ಸಂಕಲನ 1939 ರಲ್ಲಿ, ಎಂಟು ಕಥೆಗಳನ್ನೊಳಗೊಂಡ 'ಚಿಗುರು' ಕಥಾಸಂಕಲನ ಅವರ ಮರಣದ ನಂತರ ಪ್ರಕಟಗೊಂಡಿದೆ. ವಿಧವೆಯರ ಸ್ಥಿತಿಗತಿ, ವೇಶ್ಯೆಯರ ಸಮಸ್ಯೆ, ವರದಕ್ಷಿಣೆ ಪಿಡುಗು ಮುಂತಾದ ಹೆಣ್ಣಿನ ಸಮಸ್ಯೆಗಳನ್ನು ಕುರಿತು ಸಾಹಿತ್ಯವನ್ನು ರಚಿಸಿದ್ದಾರೆ. ಅವರ ಅಕಾಲ ಮರಣವಾಗದಿದ್ದರೆ ಕನ್ನಡ ಸಾಹಿತ್ಯವನ್ನು ಇನ್ನೂ ಶ್ರೀಮಂತಗೊಳಿಸುತ್ತಿದ್ದರು ಎಂಬುದರಲ್ಲಿ ಸಂಶಯವಿಲ್ಲ. ಇವರಲ್ಲದೆ ಬೆಳೆಗೆರೆ ಜಾನಕಮ್ಮ, ಸರಸ್ವತಿಬಾಯಿ ರಾಜವಾಡೆ, ವಾಣಿ, ತುಳಸಿಬಾಯಿ, ಬಾಲಮ್ಮಳ್, ಸೀತಾದೇವಿ, ಅನ್ನಪೂರ್ಣಮ್ಮ, ನರಸಮ್ಮ ಆರ್., ಜಯಲಕ್ಷ್ಮಮ್ಮ, ಭಾಗೀರತಿಬಾಯಿ, ಮಹಾಲಕ್ಷ್ಮಿ, ಸುಲೋಚನಾದೇವಿ, ಶಾಂತಾಬಾಯಿ ನಿಲುಗಾರ, ಜಯದೇವಿತಾಯಿ ಲಿಗಾಡೆ, ಶಾಂತಾದೇವಿ ಮಾಳವಾಡ ಮುಂತಾದವರು ಕತೆ, ಕಾವ್ಯ, ವಿಮರ್ಶೆ, ಲೇಖನಗಳು, ಪ್ರಬಂಧ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದು ಕನ್ನಡ ಸಾಹಿತ್ಯಕ್ಕೆ ವಿಶೇಷ ಕೊಡುಗೆಯನ್ನು ನೀಡಿದ್ದಾರೆ.

ಸ್ವಾತಂತ್ರ್ಯೋತ್ತರ ಕನ್ನಡ ಮಹಿಳಾ ಸಾಹಿತ್ಯ:

1953 ರಲ್ಲಿ ತ್ರಿವೇಣಿಯವರ ಆಗಮನದೊಂದಿಗೆ ಲೇಖಕಿಯರ ಸ್ಥಾನಮಾನದಲ್ಲಿ ಬದಲಾವಣೆ ಕಂಡುಬಂದಿತು. ಸ್ವಾತಂತ್ರೋತ್ತರ ಬರಹಗಾರ್ತಿಯರಲ್ಲಿ ತ್ರೀವೇಣಿ ಅತ್ಯಂತ ಪ್ರಮುಖರು. ಇವರ ಪ್ರಥಮ ಕಾದಂಬರಿ 'ಹೂವು-ಹಣ್ಣು' ವೇಶ್ಯಾ ಸಮಸ್ಯೆಯನ್ನೊಳಗೊಂಡಿದ್ದು 1953 ರಲ್ಲಿ ಪ್ರಕಟವಾಯಿತು. ಮನಶಾಸ್ತ್ರವನ್ನು ಪ್ರಧಾನ ವಿಷಯವನ್ನಾಗಿ ಅಭ್ಯಸಿಸಿ ಬಿ.ಎ. ಪದವಿ ಗಳಿಸಿದ ತ್ರಿವೇಣಿಯವರು ಮನೋವೈಜ್ಞಾನಿಕ ಕಾದಂಬರಿಗಳನ್ನು ಬರೆದರು. ವಸ್ತು ವೈವಿಧ್ಯ ಹಾಗೂ ಸರಳ ಶೈಲಿಯಿಂದಾಗಿ ತ್ರಿವೇಣಿಯವರು ಕೆಲವೇ ವರ್ಷಗಳಲ್ಲಿ ಜನಪ್ರಿಯತೆಯನ್ನು ಗಳಿಸಿದರು.

'ಶರಪಂಜರ', 'ಬೆಕ್ಕಿನ ಕಣ್ಣು', 'ದೂರದ ಬೆಟ್ಟ'-ಮೊದಲಾದ ಮನೋ ವೈಜ್ಞಾನಿಕ ಕಾದಂಬರಿಗಳಲ್ಲದೆ 'ಅಪಸ್ವರ', 'ಸೋತು ಗೆದ್ದವಳು', 'ಅಪಜಯ', 'ಕೀಲೆಗೊಂಬೆ', 'ಹಣ್ಣೆಲೆ ಚಿಗುರಿದಾಗ', 'ವಸಂತಗಾನ ', 'ಕಂಕಣ', 'ಮುಕ್ತಿ'-ಮುಂತಾದ ಇಪ್ಪತೊಂದು ಕಾದಂಬರಿಗಳನ್ನು, 'ಹೆಂಡತಿಯ ಹೆಸರು', 'ಸಮಸ್ಯೆಯ ಮಗು'-ಎಂಬ ಎರಡು ಕಥಾ ಸಂಕಲನಗಳನ್ನು ಕನ್ನಡಿಗರಿಗೆ ಕೊಟ್ಟಿದ್ದಾರೆ. ಅವರು ತಮ್ಮ ಕತೆ-ಕಾದಂಬರಿಗಳಲ್ಲಿ ಕೌಟುಂಬಿಕ, ಸಾಮಾಜಿಕ ಸಮಸ್ಯೆಗಳನ್ನು ಹಾಗೂ ಸ್ತ್ರೀಯ ಬದುಕಿನ ಹಲವು ಸಮಸ್ಯೆಗಳನ್ನು, ದಾಂಪತ್ಯ ಜೀವನದ ಸರಸ-ವಿರಸವನ್ನು, ನೋವು-ನಲಿವುಗಳನ್ನು ಚಿತ್ರಿಸಿದ್ದಾರೆ. ಅಲ್ಪಾವಧಿಯಲ್ಲೇ ಜನ ಮೆಚ್ಚುಗೆಯನ್ನು ಪಡೆದ ತ್ರಿವೇಣಿಯವರ ಹೆಸರು ಆಧುನಿಕ ಕನ್ನಡ ಸಾಹಿತ್ಯದಲ್ಲಿ, ಕನ್ನಡಿಗರ ಮನದಲ್ಲಿ ಶಾಶ್ವತವಾಗಿದೆ.

ಡಾ॥ ಅನುಪಮಾ ನಿರಂಜನ ಅವರು ವೃತ್ತಿಯಿಂದ ವೈದ್ಯರಾದರೂ ಅನೇಕ ಕತೆಗಳನ್ನು, ಕಾದಂಬರಿಗಳನ್ನು ಬರೆದಿದ್ದಾರೆ. ಇವರ ಪ್ರಥಮ ಕಾದಂಬರಿ 'ಅನಂತಗೀತ' 1954ರಲ್ಲಿ ಪ್ರಕಟವಾಗಿದೆ. ಆಕಾಶಗಂಗೆ, ಸಸ್ಯ ಶ್ಯಾಮಲಾ, ಕೊಳಚೆ ಕೊಂಪೆಯ ದಾನಿಗಳು-ಮೊದಲದ 19 ಕಾದಂಬರಿಗಳನ್ನು, ಕಣ್ಮಣಿ, ರೂವಾರಿಯ ಲಕ್ಷ್ಮಿ, ನೀರಿಗೆ ನೈದಿಲೆ ಶೃಂಗಾರ, ಏಳು ಸುತ್ತಿನ ಮಲ್ಲಿಗೆ, ಗಿರಿಧಾಮ, ಒಡಲು ಪುಷ್ಪ-ಎಂಬ ಕಥಾ ಸಂಕಲನಗಳನ್ನು, ಆರೋಗ್ಯ ದರ್ಶನ, ಕೆಂಪಮ್ಮನ ಮಗು, ತಾಯಿ-ಮಗಳು, ಕೇಳು ಕಿಶೋರಿ-ಎಂಬ ವೈದ್ಯಕೀಯ ಗ್ರಂಥಗಳನ್ನೂ ಬರೆದಿದ್ದಾರೆ. ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಿಗೆ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ.

ಸ್ವಾತಂತ್ರ್ಯಾ ನಂತರದ ಲೇಖಕಿಯರಲ್ಲಿ ಗೀತಾ ಕುಲಕರ್ಣಿಯವರು ಪ್ರಮುಖರು. ತೇಲಿ ಹೋದ ಮೋಡ, ಸುವರ್ಣೆಯ ಗ್ರೀನ್ ರೂಂ, ಚಿಪ್ಪಿನೊಳಗಣ ಮುತ್ತು-ಇವು ಕಥಾ ಸಂಕಲನಗಳು; ಕಂಬನಿ ಒರೆಸಿದ ಕೈ, ಸ್ವಪ್ನ ಮಂದಿರ, ಸಂಬಂಧ-ಮೊದಲಾದ ಕಾದಂಬರಿಗಳನ್ನು ಬರೆದ ಇವರ ಕತೆ-ಕಾದಂಬರಿಗಳಲ್ಲಿ ಪ್ರಗತಿಪರ ಧೋರಣೆಗಳು ಕಂಡು ಬರುತ್ತವೆ.

ಇವರಲ್ಲದೆ ತ್ರಿವೇಣಿಯವರ ಸಹೋದರಿಯಾದ ಆರ್ಯಾಂಬ ಪಟ್ಟಾಭಿಯವರು ಹೊಂಗನಸು, ಆರಾಧನೆ, ಎರಡು ಮುಖ, ಕಪ್ಪು-ಬಿಳುಪು, ಸವತಿ ನೆರಳು-ಮೊದಲಾದ 20ಕ್ಕೂ ಹೆಚ್ಚು ಕಾದಂಬರಿಗಳನ್ನು, ಉದಯ ರವಿ, ಮರಳಿ ಬಂದ ಮಮತೆ, ನನ್ನವಳು-ಎಂಬ ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ ಶ್ರೀಮತಿ ಶಾಂತಾದೇವಿ ಕಣವಿ, ಎಚ್.ಎಸ್.ಪಾರ್ವತಿ, ಎ.ಪಂಕಜಾ, ಪುಷ್ಪ.ಎನ್.ರಾವ್, ನೀಳಾದೇವಿ, ಈಚನೂರು ಜಯಲಕ್ಷ್ಮಿ, ಈಚನೂರು ಶಾಂತ, ಅನಸೂಯಾ ರಾಮರೆಡ್ಡಿ, ಮಂಗಳಾ ಸತ್ಯನ್, ಪ್ರೇಮಾ ಭಟ್ಟ, ರೇಖಾ ಕಾಖಂಡಕಿ, ಗಿರಿಜ.ಟಿ, ಗೀತಾ ನಾಗಭೂಷಣ,

ಅಶ್ವಿನಿ ಸಾಯಿಸುತೆ, ಡಾ॥ ನಳಿನಿಮೂರ್ತಿ, ಜಯಂತಿಬಾಯಿ, ಕಮಲಾ ಹಂಪನಾ, ಡಾ॥ ಎಮ.ಆರ್.ಉಮಾದೇವಿ, ವಿಜಯಲಕ್ಷ್ಮಿ.ಆರ್.ಎನ್–ಮೊದಲಾದವರು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಮೃದ್ಧವಾದ ಕೊಡುಗೆಯನ್ನಿತ್ತಿದ್ದಾರೆ.

*****

ಅಡಿಟಿಪ್ಪಣಿಗಳು :

1. ಜಿ.ಎಸ್.ಶಿವರುದ್ರಪ್ಪ – ನವೋದಯ ಮರುಪರಿಶೀಲನೆ(ಸಮಗ್ರಗದ್ಯ–2), ಪು–224
2. ಎಲ್.ಎಸ್.ಶೇಷಗಿರಿರಾವ್–ಹೊಸಗನ್ನಡ ಸಾಹಿತ್ಯ, ಪು–51
3. ಹೆಚ್.ಎಸ್.ರಾಘವೇಂದ್ರರಾವ್–ಪ್ರಗತಿಶೀಲತೆ,ಪು–3
4. ಎಲ್.ಎಸ್.ಶೇಷಗಿರಿರಾವ್–ಹೊಸಗನ್ನಡ ಸಾಹಿತ್ಯ, ಪು–51, 52
5. ಎಲ್.ಎಸ್.ಶೇಷಗಿರಿರಾವ್–ಹೊಸಗನ್ನಡ ಸಾಹಿತ್ಯ, ಪು–54
6. ನರಹಳ್ಳಿ ಬಾಲಸುಬ್ರಮಣ್ಯ – ನವ್ಯತೆ, ಪು–3
7. ನರಹಳ್ಳಿ ಬಾಲಸುಬ್ರಮಣ್ಯ – ನವ್ಯತೆ, ಪು–3, 4
8. ದೇವಯ್ಯ ಹರವೆ–ದಲಿತಸಾಹಿತ್ಯ ಕೆಲವು ತಾತ್ವಿಕ ಚಿಂತನೆಗಳು(ಶತಮಾನದ ಸಾಹಿತ್ಯ ವಿಮರ್ಶೆ), ಪು–772
9. ಜಿ.ಎಸ್.ಶಿವರುದ್ರಪ್ಪ – ಸಮಗ್ರಗದ್ಯ(ಸಂ–2),ಪು–108, 109

****

ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಕವಿತೆಗಳು :

ಕಾರಿ ಹೆಗ್ಗಡೆಯ ಮಗಳು

–ಬಿ.ಎಂ.ಶ್ರೀ

ಪಡುವ ದಿಬ್ಬದ ಗೌಡನೊಬ್ಬನು
ಬಿಡದೆ ತೊರೆಯನ ಕೂಗಿಕೊಂಡನು;
ತಡೆಯದೀಗಲೆ ಗಡುವ ಹಾಯಿಸು,
ಕೊಡುವೆ ಕೇಳಿದ ಹೊನ್ನನು.

ಆರು ನೀವೀ ಕರುಗಿ ಮೊರೆಯುವ
ನೀರ ಕಾಯಲ ಹಾಯುವವರು?
ಪಡುವ ದಿಬ್ಬದ ಗೌಡ ನಾನೀ
ಮಡದಿ ಕಾರಿಯ ಕುವರಿಯು.

ಓಡಿ ಬಂದೆವು ಮೀರು ದಿವಸ;
ಜಾಡು ಹಿಡಿದು ಹಿಂದೆ ಬಂದರು;
ನಮ್ಮ ನೀ ಕಣಿವೆಯಲಿ ಕಂಡರೆ
ಚಿಮ್ಮಿ ಹರಿವುದು ನೆತ್ತರು.

ಹತ್ತಿ ಕುದುರೆಯ ತರುಬಿ ಬರುವರು,
ಮುತ್ತಿಕೊಂಡರೆ ನನ್ನ ಕೊಲುವರು;
ಘೋರ ದುಃಖದ ನಾರಿಯನು ಬಳಿ–
ಕಾರು ನಗಿಸಲು ಬಲ್ಲರು?

ಆಗ, ಅಂಜನದೆ, ತೊರೆಯನೆಂದನು;
ಬೇಗ' ಜೀಯಾ, ಓಡ ತರುವೆನು
ಸುದಲಿ ಹೊನ್ನು, ಬೆಡಗಿ ನಿನ್ನೀ
ಮಡದಿಗೋಸುಗ ಬರುವೆನು.

ಅದುದಾಗಲಿ ಮುದ್ದಿನರಗಿಣಿ–
ಗಾದ ಗಂಡವ ಕಾದು ಕೊಡುವೆನು
ಕಡಲು ನೊರೆಗಡೆದೆದ್ದು ಕುದಿಯಲಿ
ಗಡುವ ಹಾಯಿಸಿ ಬಿಡುವೆನು.
ತೂರುಗಾಳಿಗೆ ಕಡಲು ಕುದಿಯಿತು,
ನೀರದೆವ್ವಗಳರಚಿಕೊಂಡವು
ಹೆಪ್ಪು ಮೋಡದ ಹುಬ್ಬುಗಂಟಿಗೆ
ಕಪ್ಪಗಾದವು ಮುಖಗಳು

ಕೆರಳಿ ಕೆರಳಿ ಗಾಳಿ ಚಚ್ಚಿತು;
ಇರುಳ ಕತ್ತಲೆ ಕವಿದು ಮುಚ್ಚಿತು
ಕಣಿವೆಯಿಳಿವರ ಕುದುರೆ ಕತ್ತಿಯ
ಖಣಿ ಖಣಿ ಧ್ವನಿ ಕೇಳಿತು!

ಏಳು ಬೇಗೇಳಣ್ಣ, ಎಂದಳು;
ಹೂಳಿಕೊಳಲಿ ನನ್ನ ಕಡಲು,
ಮುಳಿದ ಮುಗಿಲ ತಡೆಯಬಲ್ಲೆ,
ಮುಳಿದ ತಂದೆಯ ತಡೆಯೆನು.

ಇತ್ತ ಕರೆಮೊರೆ ಹಿಂದಕಾಯಿತು;
ಅತ್ತ ತೆರೆ ಮೊರೆ ಸುತ್ತಿಕೊಂಡಿತು;
ಆಲ ಕೈಯಲಿ ತಾಳಬಹುದೇ
ಏಳು ಬೀಳಿನ ಕಡಲನು!

ಅಲೆಗಳಬ್ಬರದಲ್ಲಿ ಮೀಟಿ
ಮುಳುಗುತಿಹರು ಏಳುತಿಹರು–
ಕರೆಗೆ ಬಂದ ಕಾರಿ ಹೆಗ್ಗಡೆ,
ಕರಗಿ ಮುಳಿಸು, ಅತ್ತನು!

ತೊಂಡು ತೆರೆಗಳ ಮುಸುಕಿನಲ್ಲಿ
ಕಂಡು ಮಗಳ, ಕರಗಿಹೋದ
ಒಂದು ಕೈ ನೀಡಿದಳು ನೆರವಿಗೆ,
ಒಂದು ತಬ್ಬಿತು ನಲ್ಲನ!

ಮರಳು, ,ರಳು, ಮಗಳೆ ಎಂದ
ಮೊರೆವ ಕಾಯಲ ಗಂಟಲಿಂದ;
ಮರೆತೆ, ಒಪ್ಪಿದೆ ನಿನ್ನ ನಲ್ಲನ,
ಮರಳು ಕಂದಾ ಎಂದನು.

ಮರಳಬಹುದೆ? ಹೋಗಬಹುದೆ?
ಕರೆಯ ತೆರೆಯಪ್ಪಳಿಸಿ ಹೊಯ್ದು
ಹೊರಳಿ ಹೋದವು ಮಗಳ ಮೇಲೆ
ಕೊರಗಿನಲಿ ಅವನುಳಿದನು.

*****

ಬಿ.ಎಂ.ಶ್ರೀ (1939)

'ಶ್ರೀ' ಎಂಬ ಕಾವ್ಯನಾಮದಿಂದ ಖ್ಯಾತರಾದ ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯ (ಬಿ.ಎಂ.ಶ್ರೀ.) 1884 ರಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಲೇ ಕನ್ನಡಕ್ಕಾಗಿ

ಅಹರ್ನಿಶಿ ದುಡಿದಿದ್ದಾರೆ. ಈ ಅಭಿರುಚಿಯ ಫಲವಾಗಿ ಶ್ರೀಯವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇಂಗ್ಲೀಷ್ ಸಾಹಿತ್ಯದ ಆಳವಾದ ಅನುಭವದಿಂದ 'ಶ್ರೀ'ಯವರು ಹೊಸಗನ್ನಡ ಸಾಹಿತ್ಯದ ಪ್ರಯೋಗಕ್ಕೆ ಅಡಿಯಿಟ್ಟರು. 'ಇಂಗ್ಲಿಷ್ ಗೀತೆಗಳು', 'ಹೊಂಗನಸು' 'ಶ್ರೀ'ಯವರ ಕವನ ಸಂಕಲನಗಳು. 'ಗದಾಯುದ್ಧ', 'ಪಾರಸಿಕರು', 'ಅಶ್ವತ್ಥಾಮನ್' ನಾಟಕಗಳು. 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' ಭಾಷಣಗಳ ಸಂಕಲನ. 'ಕಾರಿಹೆಗ್ಗಡೆಯ ಮಗಳು' ಇಂಗ್ಲಿಷಿನ 'ಲಾರ್ಡ್ ಉಲಿನ್ಸ್ ಡಾಟರ್' ಎಂಬ ಕವನದ ಭಾವಾನುವಾದ. ಥಾಮಸ್ ಕ್ಯಾಂಪ್ ಬೆಲ್ ಎಂಬ ಕವಿಯ ಈ ಕವನವನ್ನು 'ಶ್ರೀ'ಯವರು ಕನ್ನಡದ ಗೋವಿನ ಕಥೆ ಪದ್ಯದ ಧಾಟಿ ಮತ್ತು ಛಂದಸ್ಸುಗಳನ್ನು ಅಳವಡಿಸಿ ರಚಿಸಿದ್ದಾರೆ.

ಇಂದಿನ ದೇವರು

- ಕುವೆಂಪು

ನೂರು ದೇವರನ್ನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ

ಶತಮಾನಗಳು ಬರಿಯ ಜಡಶಿಲೆಯ ಪೂಜಿಸಾಯ್ತು ;
ಪಾವ್ಗಳಿಗೆ ಪಾಲೆರೆದು ಪೋಷಿಸಾಯ್ತು !
ಬಿಸಿಲು ಮಳೆ ಗಾಳಿ ಬೆಂಕಿಯನ್ನೆಲ್ಲ ಬೇಡಿಯಾಯ್ತು ;
ದಾಸರನು ಪೂಜಿಸಿಯೆ ದಾಸ್ಯವಾಯ್ತು !

ಗುಡಿಯೊಳಗೆ ಕಣ್ಮುಚ್ಚಿ ಬೆಚ್ಚಗಿರುವರನೆಲ್ಲ
ಭಕ್ತ ರಕ್ತವ ಹೀರಿ ಕೊಬ್ಬಿಹರನೆಲ್ಲ,
ಗಂಟೆ ಜಾಗಟೆಗಳಿಂ ಬಡಿದು, ಕುತ್ತಿಗೆ ಹಿಡಿದು
ಕಡಲಡಿಗೆ ತಳ್ಳಿರೈ ಶಂಖದಿಂ ನುಡಿದು !

ನಿದ್ದೆ ಮಾಡುತ್ತಿಹರು ಹಲವು ದೇವತೆಗಳೆಲ್ಲ,
ಬಿದ್ದವರು ಕಲ್ಲಾಗಿ ಕೆಲವರಿಹರು ;
ಕ್ಲೀಬತನದಲಿ ಮರೆತು ತಮ್ಮ ಪೌರುಷವನೆಲ್ಲ
ಸತ್ತೆಹೋದಂತಿಹರು ಮತ್ತುಳಿದಮರರು.

ಅವರ ಗುಡಿ ಹಾಳಾಯ್ತು ; ಅವರ ನುಡಿ ಮಡಿದುಹೋಯ್ತು ;
ಅವರ ನೆಮ್ಮದ ನಮಗೆ ಬೀಳುಗತಿಯಾಯ್ತು !
ಮುಂದಿವಳನಾರಾಧಿಸುವ ಶಕ್ತಿಯಾರ್ಜಿಸುವ ;
ಒಂದು ಶತಮಾನವನು ಒಂದೆ ದಿನ ಜೈಸುವ !

ಸತ್ತ ಕಲ್ಗಳ ಮುಂಥೆ ಅತ್ತು ಕರೆದುದು ಸಾಕು,
ಜೀವದಾತೆಯನಿಂದು ಕೂಗಬೇಕು !
ಶಿಲೆಯ ಮೂರ್ತಿಗೆ ನೆಯ್ದ ಕಲೆಯ ಹೊದಿಕೆಯನೊಯ್ದು
ಚಳಿಯು ಮಳೇಯಲಿ ನವೆವ ತಾಯ್ಗೆ ಹಾಕು !

ಭಾರತಿಯೆ ನಮಗಿಂದು ಜೀವನದ ದೇವತೆಯು,
ವಿಶ್ವರೂಪಿಣಿಯವರಳು, ವಿಶ್ವಮುಖಿಯೈ !
ನಮ್ಮೆಲ್ಲರಂಗಗಳೆ ನಮ್ಮಂಬೆಯಂಗವೈ
ನಮ್ಮ ಸ್ವಾತಂತ್ರ್ಯದೊಳೆ ನಮ್ಮಮ್ಮ ಸುಖಿಯೈ !

ಇಂದೂ ನಾಳೆಯೊ ದಾಸನೀಶನಾಗಲೆ ಬೇಕು,
ಎಂದಿಂದೆ ಎದ್ದೇಳಿ ; ನಾಳೆಯೆನೆ ಹೋಕು !
ನಾವೆ ದೇವತೆಗಳೈ ! ಭಾರತವೆ ಸ್ವರ್ಗವೈ !
ಭಾರತಾಂಬೆಯೆ ನಮಗೆ ದೇವಿಯೈ, ಜನನಿ !

****

ಕವಿ ಪರಿಚಯ

ಕುವೆಂಪು (1904–1994) : ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಅವರು ಕುವೆಂಪು ಎಂಬ ಕಾವ್ಯ ನಾಮದಿಂದ ಪ್ರಸಿದ್ಧರಾಗಿದ್ದಾರೆ. 1904ರಲ್ಲಿ ತೀರ್ಥಹಳ್ಳಿ ಸಮೀಪದ ಕುಪ್ಪಳ್ಳಿಯಲ್ಲಿ ಇವರು ಮಲೆನಾಡಿನ ಕೋಗಿಲೆ ಎಂದೇ ಖ್ಯಾತರಾಗಿದ್ದಾರೆ. ಕವಿಯಾಗಿ, ಕಾದಂಬರಿಕಾರರಾಗಿ, ವಿಮರ್ಶಕರಾಗಿ, ಕಾವ್ಯ ಮೀಮಾಂಸೆಕಾರರಾಗಿ, ನಾಟಕಕಾರರಾಗಿ, ಪ್ರಬಂಧಕಾರರಾಗಿ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಶ್ರೀರಾಮಾಯಣ ದರ್ಶನಂ, ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡತಿ, ಜಲಗಾರ, ಬೆರಳ್ಗೆಕೊರಳ್, ರಕ್ತಾಕ್ಷಿ, ಪಕ್ಷಿಕಾಶಿ ಇವು ಇವರ ಕೆಲವು ಕೃತಿಗಳು ಮೂಲತಃ ಮಲೆನಾಡಿನ ಚೇತನವಾದ ಇವರು ಪ್ರಕೃತಿ ಉಪಾಸಕರು, ನಿಸರ್ಗ ಕವಿ.

ದಾಟಿ ಬಾ ನಿರ್ಭಯದ ನಿಲುವಿಗೆ

- ಜಿ.ಎಸ್ ಶಿವರುದ್ರಪ್ಪ

ದಾರಿಯುದ್ದಕ್ಕೂ ವನವಾಸ, ಅಗ್ನಿಪರೀಕ್ಷೆ,
ಹೇಗೆ ದಾಟುತ್ತೀಯೆ ನನ್ನ ಮಗಳೆ?
'ನಸ್ತ್ರೀ ಸ್ವಾತಂತ್ರ್ಯಮರ್ಹತಿ' –ಎಂದು ವಟಗುಟ್ಟು–
ತ್ತಲೇ ಇದೆ ಮನುಧರ್ಮಶಾಸ್ತ್ರದ ರಗಳೆ.

ಅಗ್ನಿ ಪರೀಕ್ಷೆ ಸೀತೆಗೆ ಮಾತ್ರ ; ಶ್ರೀರಾಮ–
ನಾದರೋ ಅಕಳಂಕ ಪ್ರಶ್ನಾತೀತ !
ಚಂದ್ರಮತಿ ಹರಾಜಿಗೆ, ದ್ರೌಪದಿ ಜೂಜಿಗೆ
ವಸ್ತುವಾಗಳಿದದ್ದು ಎಂಥ ವಿಪರೀತ !

ದ್ರೌಪದಿಯಂತೆ ಎಲ್ಲರಿಗು ಅಕ್ಷಯ ವಸ್ತ್ರ
ಲಭಿಸುವುದೆಂಬ ನಂಬಿಕೆಯಿಲ್ಲ ;
ಇಂದಿಗೂ ಹೊಸ್ತಿಲ ಹೊರಗೆ ಲಕ್ಷ್ಮಣರೇಖೆ,
ದಾಟಿ ನಡೆದೇನೆಂಬ ಧೈರ್ಯವಿಲ್ಲ.

ಎಲ್ಲ ಧರ್ಮಗಳ ನಿಲುವೂ ಇಷ್ಟೆ : ಈಡನ್ನಿನ ತೋಟ–
ದಲ್ಲಿ ತಿನ್ನಬಾರದ ಹಣ್ಣ ತಿನ್ನಿಸಿದವಳು
ಈವ್ ; ಗಂಡಸಿನ ಪತನಕ್ಕೆ ಕಾರಣ ಹೆಣ್ಣು ;
ಮಾಯೆ ; ಋಷಿಗಳ ತಪಸ್ಸು ಕೆಡಿಸಿದವಳು.
ಬುದ್ಧ ಹೇಳಿದ್ದೇನು ಆನಂದನಿಗೆ? ಸದ್ಯಕ್ಕೆ
ಹೆಣ್ಣು ಸೇರುವುದು ಬೇಡ ನಮ್ಮ ಸಂಘಕ್ಕೆ ;
ಅರ್ಹಂತ ಮತದಂತೆ ಗಂಡಾಗಿ ಹುಟ್ಟಿದರೆ
ಮಾತ್ರ ಅರ್ಹತೆಯುಂಟು ಮೋಕ್ಷಕ್ಕೆ !

ಹೇಳುತ್ತದೆ ಖುರಾನ್ : ಹೆಣ್ಣೊಂದು ಬರಿಯ ಹೊಲ,
ನಿನ್ನ ಸ್ವತ್ತು ; ಮೂರು ಸಲ ತಲಾಖ್ ಎಂದರೆ ಸಾಕು.
ಸ್ತ್ರೀ ಶೂದ್ರಾದಿಗಳಿಗೆಲ್ಲಿಯದೊ ವೇದಾಧಿಕಾರ?
ಇಂಥ ದಯವಿರದ ಧರ್ಮಗಳ ಆಚೆ ನೂಕು.

ಹೊಸ ತಿಳಿವಿನೆಚ್ಚರದಲ್ಲಿ ಲೋಕ ಸಾಗಿದೆ
ಮಗಳೆ. ದಾಟಿ ಬಾ ಮಹದೇವಿಯಕ್ಕನ ಹಾಗೆ
ನಿರ್ಭಯದ ನಿಲುವಿಗೆ. ಆತ್ಮಗೌರವದ ಗಿರಿಶಿಖರ–
ದೆತ್ತರದಲ್ಲಿ ಅರಳಿಕೊಳ್ಳಲಿ ಬದುಕು ಹೊಸ ಬೆಳಕಿಗೆ.

****

ಕವಿ ಪರಿಚಯ

ಜಿ.ಎಸ್ ಶಿವರುದ್ರಪ್ಪ : ಇವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರಿನ ಈಸೂರಿನಲ್ಲಿ 1926 ಫೆಬ್ರವರಿ 2 ರಂದು ಜನಿಸಿದರು. ಇವರು ಕುವೆಂಪು, ಪು.ತಿ.ನ ಅವರ ಕಾವ್ಯಾವಲೋಕನದಿಂದ ಪ್ರಭಾವಿತರಾದರು. ಸಾಮಗಾನ, ಚೆಲವು–ಒಲವು, ದೇವಶಿಲ್ಪ, ತೀರ್ಥವಾಣಿ, ಕಾರ್ತಿಕ, ಗೋಡೆ ದೀಪದ ಹೆಜ್ಜೆ, ಅನಾವರಣ ಇತ್ಯಾದಿ ಕವನಗಳು. 'ಫಕೀರ ಮೋಹನ ಸೇನಾಪತಿ' ಮತ್ತು 'ಚತುರಂಗ' ಇವರ ಅನುವಾದಿತ ಕೃತಿಗಳು. ಕನ್ನಡದ ಮೂರನೇ ರಾಷ್ಟ್ರಕವಿ ಎಂದು 2007ರಲ್ಲಿ ಕೇಂದ್ರ ಸರ್ಕಾರ ಘೋಷಿಸಲ್ಪಟ್ಟಿತು. ಜಿ.ಎಸ್.ಎಸ್ ಕನ್ನಡಕ್ಕೆ ಅಪಾರ ಸೇವೆಸಲ್ಲಿಸಿರುವರು.

ಬೆಂಗಳೂರಿನ ಹಾಡು

– ಸಿದ್ಧಲಿಂಗಯ್ಯ

ಬೆಂಗಳೂರೇ ಎಂದು ಬಾಯಾರೆ ಕರೆಯೋರೆ
ಮೈತುಂಬ ವಡವೆಗಳು ಇರಬಹುದು ನನಗೆ
ನನ್ನ ಮೇಲಿರಬಹುದು ಎಲ್ಲ ಚೆಲುವರ ಕಣ್ಣು
ರಥ ಕುದುರೆ ಕಾಲಾಳು ಆನೆಗಳು ಸುತ್ತ

ನಮ್ಮ ಮದುವೆಗೆ ಮೊದಲು ಗಂಡ ಕೆಂಪೇಗೌಡ
ಹಾರುವರ ಹಟ್ಟಿಯಲಿ ಜೀತಕಿದ್ದ
ಚಿಂದಿ ದುಪಟಿಯ ಚೆಲುವ ತಂಗಳಿನ ಸರದಾರ
ದನದ ಕೊಟ್ಟಿಗೆಯಲ್ಲಿ ಮಲಗುತಿದ್ದ
ಏಳು ಲೋಕದ ನೋವು ಮೂಡುವಾಗೆದ್ದವನು
ದುಡಿಯುತಿದ್ದನು ಹೊತ್ತು ಇಳಿವತನಕ
ಹಿಪ್ಪನೇರಳೆ ಕಡ್ಡಿ ಹಣ್ಣು ತರಕಾರಿಗಳು
ಮಲ್ಲಿಗೆಯು ಕಿಕ್ಕಿರಿದು ಬೆಳೆವತನಕ

ಅಪ್ಪಣೆಯ ಕೊಟ್ಟ ಧಣಿ ಮೇಲು ತೋಟವನೆಲ್ಲ
ಅಗೆದುಬಿಡು ನಾ ಬರುವ ವೇಳೆಯೊಳಗೆ
ಯಾವ ಕೀಲಿನ ನೋವೊ ಎಂಥ ಮಾಯದ ಮರೆವೊ
ನನಗಂಡ ತೋಟದಲಿ ಮಲಗಿಬಿಟ್ಟ

ಗಿಡಗಿಡವು ಹಾವಾಗಿ ನಾಗಲೋಕವು ಹುಟ್ಟಿ
ಬೇಲಿಗಳ ಮೇಲೆಲ್ಲ ಮಾಣಿಕ್ಯ ಚೆಲ್ಲಿ
ಏಳೆಡೆಯ ನಾಗರವು ನಿಂತು ನಾಂಟೇವಾಡಿ
ಮಲಗಿದ್ದ ಪತಿರಾಯ ಬೆಳಗುತಿದ್ದ

ಹತ್ತು ದಿಕ್ಕುಗಳಲ್ಲಿ ಮುತ್ತು ರತ್ನದ ದೀಪ
ಕಂಡ ಹಾರುವ ಹರಿದ ಬೆವರ ತೊರೆಯಾಗಿ
ಎಂಥ ಪುಣ್ಯವೊ ನಿನದು ಯಾವ ತಾಯಿಯ ಮಗನೊ
ನಾಗಪ್ಪ ಬಂದವನೆ ಕೆಂಪಯ್ಯ ಏಳೊ

ರಾಜ್ಯವಾಳುವ ಯೋಗ ನಿನಗು'ಂಟು ಕೆಂಪಣ್ಣ
ಎದ್ದು ನಿಲ್ಲೋ ರಾಜ ಕಟ್ಟಯ್ಯ ದಂಡು
ನೀನರಸನಾದಾಗ ನನ್ನ ಮಂತ್ರಿಯ ಮಾಡೊ
ಮುತ್ತಿಗೆಯ ಹಾಕಯ್ಯ ಕೊಳ್ಳಯ್ಯ ಕತ್ತಿ

ನನ್ನ ಗಂಡನ ಜೊತೆಯ ಜೀತಗಾರರ ಕಥೆಯು
ಯಾವ ಹಾಡಿನ ಒಳಗೂ ಮೂಡಲಿಲ್ಲ
ರಾಜ್ಯ ದಾಹದ ಬೆಂಕಿ ಊರೂರ ಸುಟ್ಟಾಗ
ಬೂದಿಯಾದರೊ ಅವರು ತಿಳಿಯಲಿಲ್ಲ

ನನ್ನ ಸೀರೆಯ ಸೆರಗು ಮರೆಮಾಡಿಕೊಂಡಿರುವ
ಜೋಪಡಿಯ ಲೋಕವನು ತೋರಲ್‌ಏನು
ಹೊಟ್ಟೆಯೊಳಗಿನ ಬೆಂಕಿಯುಂಡೆಯೆಲ್ಲವನೆತ್ತಿ
ಮೆರೆವ ಜನಗಳ ಮೇಲೆ ಚೆಲ್ಲಲೇನು

*****

ಡಾ. ಸಿದ್ಧಲಿಂಗಯ್ಯ (1954–2021)

ರಾಮನಗರ ಜಿಲ್ಲೆಯ ಮಾಗಡಿಯ ಮಂಚನಬೆಲೆ ಜನಿಸಿದ ಡಾ. ಸಿದ್ಧಲಿಂಗಯ್ಯನವರು ಕನ್ನಡ ಕಾವ್ಯ ಶರೀರಕ್ಕೆ ದಲಿತ ಸಂಸ್ಕೃತಿಯ ರಕ್ತ ಮಾಂಸಗಳನ್ನು ತುಂಬಿದ ಮಹತ್ವದ ಕವಿ. ದಲಿತ ಬಂಡಾಯ ಸಾಹಿತ್ಯ ಚಳವಳಿ ಆರಂಭವಾದ ಸಂದರ್ಭದಲ್ಲಿ ಸಿದ್ಧಲಿಂಗಯ್ಯನವರ ಪದ್ಯಗಳು ಉಂಟುಮಾಡಿದ ಪ್ರಭಾವ ಅನನ್ಯವಾದುದು. ಇವರ ಪದ್ಯಗಳನ್ನು ಸಾಮೂಹಿಕವಾಗಿ ಗಟ್ಟಿಯಾಗಿ ಹಾಡಿದಾಗ ಕಾವ್ಯವೂ ಒಂದು ಆಯುಧವಾಗಬಹುದು ಎಂಬ ಸತ್ಯ ಗೋಚರವಾಯಿತು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಪದವಿಯನ್ನು ಸುವರ್ಣ ಪದಕಗಳೊಂದಿಗೆ ಪಡೆದು ವಿದ್ಯಾರ್ಥಿದೆಸೆಯಿಂದಲೂ ಅತ್ಯಂತ ಪ್ರತಿಭಾವಂತ ಎನ್ನಿಸಿದವರು. ಇವರ ಮೊದಲ ಕವನ ಸಂಕಲನ 'ಹೊಲೆ ಮಾದಿಗರ ಹಾಡು' ಶತಮಾನಗಳಿಂದ ತುಳಿತಕ್ಕೆ ಒಳಗಾದ ದಲಿತರ ನೋವು ಸಂಕಟಗಳನ್ನು ಸಿಟ್ಟಿನಿಂದ ಆಕ್ರೋಶದಿಂದ ಹೊರಹಾಕಿತು. ಕನ್ನಡ ಕಾವ್ಯಲೋಕಕ್ಕೆ ಒಂದು ಶಾಕ್ ನೀಡಿತು. ಅನಂತರ ಬಂದ 'ಸಾವಿರಾರು ನದಿಗಳು' ಮತ್ತು 'ಕಪ್ಪು ಕಾಡಿನ ಹಾಡು' ಸಂಕಲನಗಳು ಸೂಕ್ಷ್ಮ ಅಭಿವ್ಯಕ್ತಿಯಿಂದ ಸಂಕಟ ಮತ್ತು ಸಂಯಮಗಳನ್ನು ಬೆಸೆದುಕೊಂಡು ಹೊರಬಂದವು. 'ಗ್ರಾಮದೇವತೆಗಳು' ಪಿಎಚ್.ಡಿ. ಮಹಾ ಪ್ರಬಂಧವಾದರೆ 'ಅವತಾರಗಳು' ಮತ್ತು 'ಹಕ್ಕಿನೋಟ' ಲಲಿತ ಪ್ರಬಂಧಗಳಾಗಿವೆ 'ಊರುಕೇರಿ' ಎಂಬ ಆತ್ಮಕಥನ, ;ಪಂಚಮ ಮತ್ತು ನೆಲಸಮ', 'ಏಕಲವ್ಯ' ಎಂಬ ನಾಟಕಗಳು ಸಿದ್ಧಲಿಂಗಯ್ಯನವರ ಇನ್ನಿತರ ಕೃತಿಗಳು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರು ಹಾಗೂ ನಿರ್ದೇಶಕರಾಗಿ ಸೇವೆ ಸಲ್ಲಿಸಿರುವ ಇವರು ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ, ಸಂದೇಶ ಪ್ರಶಸ್ತಿಗಳನ್ನು ತಮ್ಮ ಸಾಹಿತ್ಯಸಾಧನೆಗೆ ಪಡೆದಿಕೊಂಡಿದ್ದಾರೆ. ನಾಡೋಜ ಪ್ರಶಸ್ತಿಯನ್ನ ಮರಣೋತ್ತರ ಸಂದಿವೆ.

ನಾನು ರಾತ್ರಿಗಳನ್ನು ಮಾತ್ರ ಪ್ರಿತಿಸುತ್ತೇನೆ.

– ಶಶಿಕಲಾ ವೀರಯ್ಯ ಸ್ವಾಮಿ

ನಾನು ರಾತ್ರಿಗಳನ್ನು ಮಾತ್ರ ಪ್ರಿತಿಸುತ್ತೇನೆ

ಹೌದು, ಗಪ್ಪುಗಾರಾದ ನೀರವದ ನಿಶೆಯಲ್ಲಿ
ನೆಲ ಮುಗಿಲುಗಳು ಪಿಸುಗುಡುವುದನ್ನು ಕೇಳುತ್ತಾ

ಚಿಕ್ಕೆಗಳು ನಕ್ಕು ಕಣ್ಣು ಮಿಟುಕಿಸುವಾಗ

ಸಾಗರವು ಉನ್ಮಾದದಲ್ಲಿ ಉಕ್ಕಿ ನಲಿಯುತ್ತದೆ

ನಾನಾಗ ಮಗುವಾಗುತ್ತೇನೆ ಮುಗ್ದನಗುವಾಗುತ್ತೇನೆ

ಅದಕ್ಕೆಂದೆ ನಾನು ರಾತ್ರಿಗಳನ್ನು ಮಾತ್ರ ಪ್ರೀತಿಸುತ್ತೇನೆ

ಇನಿಯನ ಬೆಚ್ಚನೆಯ ಹಚ್ಚಡದಲ್ಲಿ

ರಾತ್ರಿ ನನ್ನೆದುರು ಬಂಗಾರದ ಬಾಗಿಲು ತೆರೆಯುತ್ತದೆ

ತೆರೆದ ಬಾಗಿಲಿನಿಂದ ಗುಲಾಬಿ ಪಾದದ ಮುದ್ದಾದ ಮಕ್ಕಳು

ಓಡಿಬಂದು 'ಅಮ್ಮಾ' ಎಂದು ನನ್ನ ಬಿಗಿದಪ್ಪುತ್ತವೆ

ಈ ತೆಕ್ಕೆಯಲ್ಲಿರುವ ಹಸೀ ರಕ್ತದ ವಾಸನೆಯಲ್ಲಿ

ನಾನು ಅರಳಿ ಗಮಗಮಿಸುತ್ತೇನೆ

ಅದಕ್ಕೆಂದೇ ನಾನು ರಾತ್ರಿಗಳನ್ನು ಮಾತ್ರ ಪ್ರೀತಿಸುತ್ತೇನೆ

ನಿಮಗೆ ಗೊತ್ತೇ?

ನಿಶೆಯ ನಿಶಾಂತ ಮೌನದ ತೊಟ್ಟಿಲಲ್ಲಿ ಜೋಗುಳದಾಲಾಪ

ನೆಲವನ್ನು ತೂಗಿ ತೂಗಿ ಮಲಗಿಸುತ್ತೆ

ರಾತ್ರಿ ರಾಣಿಯ ಹೂಗಳು ಕನಸಿನಂಗಳದಲ್ಲಿ

ಪರಿಮಳದ ರಂಗೋಲಿ ಹಾಕುತ್ತವೆ

ಆಗ ಹೂವು ಅರಳು ಸದ್ದೂ ಇಲ್ಲಿ ಕೇಳಿಸುತ್ತದೆ

ಅದಕ್ಕೆಂದೇ ನಾನು ರಾತ್ರಿಗಳನ್ನು ಮಾತ್ರ ಪ್ರೀತಿಸುತ್ತೇನೆ

ಹಗಲು ಕಾಡುವ ಕಲವು ಹಳವಂಡಗಳಲ್ಲಿ

ನೊಗದ ಕೆಳಗಿನ ಹೆಗಲು ಸವೆಸುವಲ್ಲಿ
ನಾ ಮರೆತ ಸಾವು ರಾತ್ರಿಯಲ್ಲಿ ಸದ್ದಿಲ್ಲದೆ
ಬಂದು ಬಾಗಿಲು ಬಡಿಯುತ್ತದೆ
ತಟ್ಟನೆ, ಮುನಿದ ಇನಿಯನನ್ನೊಲಿಸಲು ಅಪ್ಪಿಕೊಳ್ಳುತ್ತೇನೆ
ನಿದ್ದೆಯ ಮಗುವನ್ನೆಬ್ಬಿಸಿ ಮೊಲೆಯುಣಿಸುತ್ತೇನೆ
ಈ ಯತ್ಕಟ ಪ್ರೀತಿಯ ಪರಮಾವಧಿಯಲ್ಲೇ
ನನಗೆ ಸಾವು ಸಹಜವಾಗುವುದರಿಂದ
ಅದನ್ನು ಹಾರ್ದಿಕವಾಗಿ ಸ್ವಾಗತಿಸುತ್ತೇನೆ
ಅದಕ್ಕೆಂದೇ ನಾನು ರಾತ್ರಿಗಳನ್ನು ಮಾತ್ರ ಪ್ರೀತಿಸುತ್ತೇನೆ.

*****

ಕವಿ ಪರಿಚಯ

ಶಶಿಕಲಾ ವೀರಯ್ಯ ಸ್ವಾಮಿ : ಕನ್ನಡದ ಪ್ರಮುಖ ಕವಯತ್ರಿ ಮತ್ತು ವೈಚಾರಿಕ ಬರಹಗಾರ್ತಿ. ಮೂಲತಃ ಶಿಕ್ಷಕಿಯಾದ ಇವರು ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದಲ್ಲಿ ಗಣನೀಯ ಸಾಧನೆಯನ್ನು ಮಾಡಿದ್ದಾರೆ. ತಂದೆ ಸಿದ್ದಲಿಂಗಯ್ಯ ತಾಯಿ ಅನ್ನ ಪೂರ್ಣದೇವಿ. ಹುಟ್ಟಿದ್ದು ಮೇ 01 1948ರಲ್ಲಿ. ಪ್ರಾರ್ಥಮಿಕ ವಿದ್ಯಾಬ್ಯಾಸ ಸಿಂದಗಿಯಲ್ಲಿ. ಉನ್ನತ ಶಿಕ್ಷಣವನ್ನು ಬಿಜಾಪುರ, ಗುಲ್ಬರ್ಗ ಕಾಲೇಜುಗಳಲ್ಲಿ ಪೂರೈಸಿದ ಇವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ವೃತ್ತಿ ಜೀವನ ಆರಂಭಿಸಿದ್ದು ಸಿಂದಗಿ ಜೂನಿಯರ್ ಕಾಲೇಜಿನಲ್ಲಿ ನಂತರ ಗೋಕಾಕ್, ಬೆಳಗಾವಿಇತ್ಯಾದಿ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ ನಂತರ ಪ್ರಾಚಾರ್ಯರಾಗಿ ನಿವೃತ್ತರಾಗಿದ್ದಾರೆ. ಇದಲ್ಲದೇ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕಿಯಾಗಿ, ಧಾರಾವಾಹಿ, ಚಲನಚಿತ್ರಗಳ ಆಯ್ಕೆ ಸಮಿತಿ ಸದಸ್ಯರಾಗಿ ಕೆಲಸ ಮಾಡಿದ್ದಾರೆ.

ಗುಬ್ಬಿ ಮನೆ, ಪ್ರಶ್ನೆ, ಜೀವ ಸಾವುಗಳ ನಡುವೆ, ಹೆಂಗ ಹೇಳಲೆ ಗೆಳತಿ, ಮಧ್ಯಂತರದ ಒಂದು ಗದ್ಯಗೀತೆ, ಬಟ್ಟ ಬಯಲಲ್ಲಿ ನಿಂತು, ಒಂಚೂರು ನೆಲ ಒಂಚೂರು ಮುಗಿಲು ಇವು ಇವರ ಕವನ ಸಂಕಲನಗಳು. ಇದಲ್ಲದೆ ಹಲವಾರು ಕೃತಿಗಳನ್ನು ಇವರು ಸಂಪಾದಿಸಿದ್ದಾರೆ. ಇವರ ಕವನಗಳು ಹಿಂದಿ, ಉರ್ದು, ಮಲೆಯಾಳಂ ಭಾಷೆಗೆ ಅನುವಾದಗೊಂಡಿವೆ.

ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದಾನ ಚಿಂತಾಮಣಿ ಅತ್ತಿಮಬ್ಬೆ ಇತ್ಯಾದಿ ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಕಥೆಗಳು :

ನಮ್ಮ ಮೇಷ್ಟರು

– ಮಾಸ್ತಿ ವೆಂಕಟೇಶ ಅಯ್ಯಂಗಾರ್

ಆ ದಿನ ಗುರುವಾರ. ಸ್ಕೂಲಿಗೆ ಹೋಗುವುದಕ್ಕೇ ಹೊತ್ತಾಗಿ ಹೋಯಿತಲ್ಲಾ ಎಂದು ಅವಸರವಸರವಾಗು ಬರುತ್ತಾ ಇದ್ದೆ. ಲಕ್ಷ್ಮಿ ನನ್ನ ಹಿಂದೆ ಬರುತ್ತಾ ಇದ್ದಳು; ಪುಟ್ಟ ಪುಟ್ಟ ಕಾಲನ್ನು ದಡದಡನೆ ಹಾಕುತ್ತಾ ಓಡಿಬರುತ್ತಿದ್ದಳು. ಹೊತ್ತಾಯಿತಲ್ಲ, ಲಕ್ಷ್ಮಿಯನ್ನು ಕರೆದುಕೊಂಡು ಹೋಗೋಣ, ಎಂದು ನಾನು ಹೋಗಿ ಕರೆಯುವ ಹೊತ್ತಿಗೆ ಅವಳು ಇನ್ನೂ ಎದ್ದೇ ಇರಲಿಲ್ಲ. ಆದರಿಂದ ಇನ್ನಿಷ್ಟು ಹೊತ್ತಾಯಿತು. ಹೀಗೆ ಹೋಗುತ್ತಾ ಇರುವಾಗ ನಮ್ಮ ಎದುರಿಗೆ ಸ್ವಲ್ಪ ದೂರದಲ್ಲಿ ಮೇಷ್ಟರು ಸಾವಕಾಶವಾಗಿ ನಡೆಯುತ್ತಾ ಸ್ಕೂಲಿಗೆ ಹೋಗುತ್ತಾ ಇದ್ದರು. ಮೇಷ್ಟರೇ ಈಗ ಹೋಗುವಾಗ ನಮಗೇನು ಸ್ಕೂಲಿನಲ್ಲಿ ಅವಸರ ಎಂದು ನಾನು ಮೆಲ್ಲಗೆ ನಡೆಯುವುದಕ್ಕೆ ಆರಂಭಿಸಿದೆ.

ಅಷ್ಟು ಹೊತ್ತಿಗೆ ಶಾಸ್ತ್ರಿಗಳು ಇನ್ನೊಂದು ಕಡೆಯಿಂದ ಬಂದು ಮೇಷ್ಟರನ್ನು ಕಂಡರು. "ಏನು ವೆಂಕಟರಮಣಯ್ಯನವರೇ, ಸ್ಕೂಲಿಗೆ ಹೊರಟಿರೋ"? ಎಂದು ಕೇಳಿದರು.

ಮೇಷ್ಟರು "ಹೌದು ಸ್ವಾಮಿ, ಹೊರಟೆ, ಒಂದು ಚಿಟಿಗೆ ನಸ್ಯವಿದ್ದರೆ ಕೊಡುವಿರಾ"? ಎಂದರು.

"ಕೊಟ್ಟೆ, ಇನ್ನೇನು ಸಮಾಚಾರ, ಸ್ವಲ್ಪ ಹೊತ್ತಾಯಿತಲ್ಲವೆ" ಎಂದು ಶಾಸ್ತ್ರಿಗಳು ಕೇಳಿದರು.

"ಏನೋ ಸ್ವಾಮಿ ಮನೆಯಲ್ಲಿ ಉಪ್ಪಿಲ್ಲ ಎಂದರು. ಈಗ ತರುವುದಕ್ಕೆ ಆಗುವುದಿಲ್ಲ, ಸ್ಕೂಲಿಗೆ ಹೊತ್ತಾಯಿತು ಎಂದೆ ಅದಕ್ಕೆ ಏನೇನೋ ಹೇಳಿದರು. ಈ ಗಲಾಟೆಯಲ್ಲಿ ಉಪ್ಪು ತರುವುದಕ್ಕೆ ಹೋಗಿದ್ದರೆಯೇ ಒಳ್ಳೆಯದಾಗಿತ್ತೆಂತ ತೋರಿತು. ಇಷ್ಟು ಹೊತ್ತಿಗೆ ಉಪ್ಪು ತಂದು ಕೊಟ್ಟು ಸ್ಕೂಲಿನಲ್ಲಿ ಇರಬಹುದಾಗಿತ್ತು. ಏನು ಮಾಡುವುದು ಹೇಳಿ" ಎಂದು ನಮ್ಮ ಮೇಷ್ಟರು ಹೇಳಿದರು.

ಶಾಸ್ತ್ರಿಗಳು "ಅದಕ್ಕೇನು, ನಮ್ಮ ಹುಡುಗರ ಕೈಲಿ ಯಾರ ಕೈಲಾದರೂ ತೆಗೆದುಕಳುಹಿಸುತ್ತೇನೆ. ದುಡ್ಡಿದೆಯೆ? ಕೊಡಿ" ಎಂದರು.

ಇವರು ಹೀಗೆ ಮಾತನಾಡುತ್ತಿರುವಾಗ, ನಾವು ಸುಮ್ಮನೆ ಯಾತಕ್ಕಿರಬೇಕು, ಮೇಷ್ಟರು ಇಲ್ಲಿದ್ದರೆ ನಾವು ಸ್ಕೂಲಿಗೆ ಹೋಗಿ ಮಾಡುವುದೇನನ್ನ, ಎಂದು ನಾನು ಲಕ್ಷ್ಮಿಯೂ 'ಗುಚ್ಚಮ್ಮ ನಕ್ಷತ್ರ' ಆಡುತ್ತಾ ಕುಳಿತೆವು. ಆಡುತ್ತಾ ಕುಳಿತಿದ್ದರಲ್ಲಿ ಹೊತ್ತೇ ತೋರಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ ನೋಡಿದರೆ ಮೇಷ್ಟರು ಸ್ಕೂಲಿಗೆ ಹೊರಟುಹೋಗಿದ್ದರು. "ಲಕ್ಷ್ಮಿ ಹೊತ್ತಾಯಿತು, ಹೋಗೋಣ ಬಾರೆ, ಮೇಷ್ಟರು ಕೋಪಿಸಿಕೊಳ್ಳುತ್ತಾರೆ" ಎಂದು ಹೇಳಿ ಎದ್ದೆ.

ಲಕ್ಷ್ಮಿ ಅಳುತ್ತಾ ಕುಳಿತಳು. ಆಟದಲ್ಲಿ ಅವಳ ಬಳಪವನ್ನೆಲ್ಲಾ ನನಗೆ ಸೋತಿದ್ದಳು. ನಾನೇನೂ ಅನ್ಯಾಯ ಮಾಡಿ ಬಳಪ ಗೆಲ್ಲಲಿಲ್ಲ. ಅವಳಿಗೆ ಆಟ ಚೆನ್ನಾಗಿ ಬಾರದು. ಸೋತಳು. ಈಗ ಬಾರೆ ಎಂದರೆ, "ನನ್ನ ಬಳಪ, ನನ್ನ ಬಳಪ" ಎಂತ ಅಳುತ್ತಾ ಕುಳಿತಳು. ಅವಳಿಗೆ ಏನೇನೋ ಹೇಳಿದೆ. ಕೇಳಿದರೆ ನ್ಯಾಯವೂ

ಇಲ್ಲ, ಧರ್ಮವೂ ಇಲ್ಲ. ಬಳಪ, ಬಳಪ: ಅವಳಿಗೆ ತಿಳಿದದ್ದು ಅಷ್ಟೇ. ಆಟದಲ್ಲಿ ಸೋತದ್ದು ಎಲ್ಲೋ ಹೋಯಿತು. ಕೊನೆಗೆ ನಾನು ಇವಳ ಸಂಗಡ ಏನು ಎಂತ ಅವಳಿಂದ ಗೆದ್ದಿದ್ದ ಬಳಪವನ್ನೆಲ್ಲಾ ಹಿಂದಕ್ಕೆ ಕೊಟ್ಟು "ನಮ್ಮಮ್ಮ, ನನ್ನ ಕಂದ" ಎಂತ ಕರೆದೆ. ಅವಳು "ನನ್ನ ಬಳಪ ಎಲ್ಲಾ ಕೊಡು" ಎಂದು ಅಳುತ್ತಾ ನಿಂತಳು. ಎಲ್ಲವನ್ನೂ ಕೊಟ್ಟಿದ್ದೆ. " ಎಲ್ಲಾ ಕೊಟ್ಟಿದ್ದೇನಲ್ಲ" ಎಂತ ಕೇಳಿದರೆ "ನಿನ್ನ ಜೇಬಿನಲ್ಲಿ ಇನ್ನೂ ಇದೆಯಲ್ಲಾ" ಎಂದಳು. ನನ್ನ ಜೇಬಿನಲ್ಲಿ ಇನ್ನೂ ಬಳಪ ಇದ್ದುದು ನಿಜ, ಆದರೆ ಅದು ನನ್ನದು; ಅವಳ ಬಳಪವನ್ನೆಲ್ಲಾ ಕೊಟ್ಟೆ. ಕೊಡದೆ ಇದ್ದರೆ ಅವಳು ಸ್ಕೂಲಿಗೆ ಬರುವುದಿಲ್ಲ. ಮೇಷ್ಟರು ಹೊತ್ತಾಯಿತೇನಮ್ಮ ಎಂದರೆ, ಲಕ್ಷ್ಮಿಯನ್ನು ಕರೆದುಕೊಂಡು ಬರುವುದಕ್ಕೆ ಹೋಗಿದ್ದೆ ಮೇಷ್ಟರೆ, ಎಂದು ಹೇಳುವುದಕ್ಕಿಲ್ಲದೆ ಹೋಗುವುದು. ಇದಕ್ಕೋಸ್ಕರ ನನ್ನ ಬಳಪವನ್ನೆಲ್ಲ ಅವಳಿಗೆ ಕೊಟ್ಟೆ. ಆಟ ಗೆದ್ದವನು ನಾನು. ಬಳಪ ಗೆದ್ದವಳು ಅವಳು. ಹೋದಸಲ ಇನ್ಸ್‌ಪೆಕ್ಟರ್ ಬಂದಾಗ ಗೌರಿಗಿಂತಲೂ ಸರಸ್ವತಿಗೆ ಹೆಚ್ಚು ನಂಬರು ಬಂದದ್ದು ಹೇಗೋ ಹಾಗಾಯಿತು ಎಂತ ಎಂದುಕೊಂಡು ಸ್ಕೂಲಿಗೆ ಹೊರಟೆ.

ಹೋಗುವ ಹೊತ್ತಿಗೆ ಮೇಷ್ಟರು ಕುಳಿತುಕೊಂಡು ಒಂದನೇ ಕ್ಲಾಸಿಗೆ ಪಾಠ ಹೇಳಿ ಕೊಡುತ್ತಾ ಇದ್ದರು. ನಾನು ಲಕ್ಷ್ಮಿಯೂ ನುಸುಳಿ ಹೋಗಿ ಒಂದು ಕಡೆ ಕುಳಿತು ಕೊಂಡೆವು.

ಮೇಷ್ಟರು ಒಂದನೇ ಕ್ಲಾಸಿಗೆ ಪಾಠ ಹೇಳಿ ನಮ್ಮ ಕಡೆ ತಿರುಗುತ್ತಾ, "ಗೌರಮ್ಮ ಸೀತಮ್ಮ ಏಕೆ ಬರಲಿಲ್ಲ ಇನ್ನೂ" ಎಂತ ಕೇಳಿದರು.

"ನಾನು ಆಗಲೆ ಬಂದೆ ಮೇಷ್ಟರೆ" ಎಂತ ನಾನು ಹೇಳಿದೆ.

"ಓಹೋ, ಬಂದೆಯಾ, ನಮ್ಮಮ್ಮ ಒಳ್ಳೆಯ ಹುಡುಗಿ, ಸ್ವಲ್ಪ ಜಾಗ್ರತೆ ಬಾರಮ್ಮ ಇನ್ನೂ ಮೇಲೆ" ಎಂದು, ನಾನು ಲಕ್ಷ್ಮಿಯನ್ನು ತೋರಿಸುವುದಕ್ಕೆ ತಲೆ ತಿರುಗಿಸದ್ದನ್ನು ನೋಡಿ "ಓ ಲಕ್ಷ್ಮಿಯನ್ನು ಕರೆದುಕೊಂಡು ಬಂದೆಯೋ? ನಿನಗೆ ದಿನವೂ ಲಕ್ಷ್ಮಿಯನ್ನೂ ಕರೆದುಕೊಂಡು ಬರುವುದಕ್ಕೆ ಹೊತ್ತಾಗುತ್ತದೆ. ಇನ್ನೂ ಕೊಂಚ ದಿನ ಅವಳನ್ನೂ ಕರೆದುಕೊಂಡು ಜಾಗ್ರತೆ ಸ್ಕೂಲಿಗೆ ಬಾರಮ್ಮ ಇನ್ಸ್‌ಪೆಕ್ಟರ್ ಬರುವದಿನ. ಇಷ್ಟರಲ್ಲೇ ಬಂದಾರು. ಎಲ್ಲರೂ ಸರಿಯಾಗಿ ಸ್ಕೂಲಿಗೆ ಬನ್ನಿರಮ್ಮ ಪಾಠಗಳನ್ನು ಸರಿಯಾಗಿ ಓದಬೇಕು. ಈ ಸಲ ಬರುವವರು ಹೊಸ ಇನ್ಸ್‌ಪೆಕ್ಟರು. ಚೆನ್ನಾಗಿ ಓದಿದವರಿಗೆಲ್ಲಾ ಮುತ್ತಿನಹಾರ ಇನಾಮಾಗಿ ಕಳುಹಿಸುತ್ತಾರೆ. ಸರಸ್ವತಮ್ಮ ಚೆನ್ನಾಗಿ ಓದು ತಾಯಿ. ಗೌರಮ್ಮ ಓದಿದ ಹಾಗೆ ಓದಬೇಕು".

ಸರಸ್ವತಿ "ಅವಳೇ ಚೆನ್ನಾಗಿ ಓದಲಿ ಮೇಷ್ಟರೆ, ನನಗೇನು ಮೆಳ್ಳಗಣ್ಣೆ"? ಎಂದಳು.

ಎಲ್ಲರೂ ಗಟ್ಟಿಯಾಗಿ ನಕ್ಕುಬಿಟ್ಟರು. ನಾನು ನಗಕೂಡದು ಎಂದರೂ ತಡೆಯಲಿಲ್ಲ. ನಗು ಬಂದುಬಿಟ್ಟಿತು. ಲಕ್ಷ್ಮಿ ಚಪ್ಪಾಳೆ ಹಾಕುತ್ತಾ ನಕ್ಕಳು. ತುಂಟ ಹುಡುಗಿ, ಮೇಷ್ಟರಿಗೆ ಕೂಡ ನಗು ಬಂತು. ಅವರು ತಡೆದುಕೊಂಡು, "ಛೆ, ಹಾಗೆಲ್ಲಾ ಹೇಳಬಾರದು" ಎಂದರು.

ಸರಸ್ವತಿಯದು ಇದೊಂದು ಜಂಬ, ನೋಡಿ. ತನಗೆ ಕಣ್ಣು ಮೂಗು ಸರಿಯಾಗಿದೆ ಎಂತ ಗೌರಿಯ ಮೆಳ್ಳಗಣ್ಣನ್ನು ಹಾಸ್ಯ ಮಾಡುವುದು ಅವಳ ವಾಡಿಕೆ. ನಾನು ಕಣ್ಣು ಮೂಗು ಸರಿಯಾಗಿದ್ದವಳೆ; ಲಕ್ಷ್ಮಿಯೂ ಸರಿಯಾಗಿದ್ದವಳೆ; ಮುಕ್ಕಾಲು ಪಾಲು ಜನಕ್ಕೆಲ್ಲ ಕಣ್ಣು ಮೂಗು ಸರಿಯಾಗಿಯೇ ಇರುತ್ತೆ. ಅದಕ್ಕೆ ಸರಸ್ವತಿಯದು ಬಹಳ ಜಂಬ. ಹುಡುಗಿಯರೇ ಹಾಗೆ ಎಂದು ತೋರುತ್ತದೆ. ಅವರು ಯಾವ ಕೆಲಸಕ್ಕೂ ಕಣ್ಣು ಮೂಗು ಸರಿಯಾಗಿದ್ದರೆ ಸಾಕು ಎಂದುಕೊಳ್ಳುತ್ತಾರೆ. ಹೆಂಗಸರ ಕೆಲಸ ಗಂಡಸರ ಮನಸ್ಸು

ಒಪ್ಪಿಸುವುದು. ಅದಕ್ಕೆ ಯಾವುದು ಬೇಕೋ ಅದು ಎಲ್ಲಕ್ಕೂ ಸಾಕು ಎಂತ ಅವರ ತಿಳಿವಳಿಕೆ. ಗಂಡಸರೂ ಹಾಗೆಯೇ. ಒಬ್ಬ ಹುಡುಗ ಬಿ.ಎ. ಪರೀಕ್ಷೆ ಮಾಡಿದ ಎಂತ ಇಟ್ಟುಕೊಳ್ಳಿ. ಅವನಿಗೆ ಒಂದು ಕಣ್ಣಾದರೂ, ಅವನೂ ಕರ್‍ರಗಿದ್ದರೂ, ಅವನ ಮುಸುಡಿ ಸೊಟ್ಟಾಗಿದ್ದರೂ, ಅವನು ತಾನು ಬಿ.ಎ. ಪಾಸು ಮಾಡಿರುವುದರಿಂದ ಹೆಂಗಸರೆಲ್ಲರೂ ತನ್ನನ್ನು ಮೆಚ್ಚುವರೆಂದುಕೊಳ್ಳುವನು. ಗಂಡಸರ ಕೆಲಸ ಸಂಪಾದಿಸುವುದು; ಸಂಪಾದಿಸುವುದಕ್ಕೆ ಯಾವುದು ಇರಬೇಕೋ ಅದು ಇದ್ದರೆ ಹುಡುಗ ತಾನು ಹುಡುಗಿಯರ ಕಣ್ಣಿಗೆ ಅಂದವಾಗಿರುತ್ತೇನೆ ಎಂದು ಕೊಳ್ಳುತ್ತಾನೆ. ವಿದ್ಯದಿಂದ ರೂಪು ಬರುವುದಿಲ್ಲವೆಂದು ಗಂಡಸರಿಗೆ ತಿಳಿಯದು. ರೂಪಿನಿಂದ ಪ್ಯಾಸಾಗುವುದಿಲ್ಲ ಎಂತ ಹೆಂಗಸರಿಗೆ ತಿಳಿಯದು. ರೂಪಿಲ್ಲದ ಹುಡುಗ ವಿದ್ಯೆಯೇ ರೂಪು ಎಂದು ಕೊಳ್ಳುವನು. ಓದದ ಹುಡುಗಿ ಸರಸ್ವತಿ ರೂಪೇ ವಿದ್ಯವೆಂದು ಕೊಂಡಿದ್ದಳು. ಅದಕ್ಕೆ ತಕ್ಕಹಾಗೆ, ಹಿಂದಿನ ವರುಷ ಇನ್ಸ್‌ಪೆಕ್ಟರು ಬಂದಾಗ ಅವಳು ಓದದೇ ಇದ್ದರೂ ಅವಳಿಗೆ ಸಹಬಾಸ್ ಗಿರಿ ಬಂದಿತ್ತು. ಅದುವರೆಗೂ ಸ್ನೇಹಿತರಾಗಿದ್ದ ಗೌರಿ ಸರಸ್ವತಿಯರಿಗೆ ಅಂದಿನಿಂದ ದಿನವೂ ಜಗಳ. ಇನ್ಸ್‌ಪೆಕ್ಟರು ಕ್ಲಾಸನ್ನು 'ನದಿ' ಎಂದರೇನಮ್ಮ? ಎಂತ ಕೇಳಿದರು. ಸರಸ್ವತಿಗೆ ತಿಳಿಯಲಿಲ್ಲ. ಬಾಯಿ ಪಾಠ ಮಾಡಿದರೆ ಅಲ್ಲವೆ ಬರುವುದು? ಅವಳು ಸುಮ್ಮನಿದ್ದಳು. ಅವಳು ಗೌರಮ್ಮನನ್ನು ಕೇಳಿದರು. ರಘುನಾಥರಾಯರ ಭೂವಿವರಣೆಯಲ್ಲಿ ಹೇಗೆ ಬರೆದಿದೆಯೋ ಹಾಗೆ ಗೌರಿ ಒಪ್ಪಿಸಿಬಿಟ್ಟಳು. ಗೌರಿಗೆ ಜಯ, ಆದರೆ ನಮಗೆ ಯಾರಿಗೂ ಹೊಟ್ಟೆಯುರಿ ಇಲ್ಲ. ಗೌರಿ ಓದುವ ಹುಡುಗಿ ಎಂದು ನಮಗೆಲ್ಲಾ ಗೊತ್ತು. ಆಮೇಲೆ ಇನ್ಸ್‌ಪೆಕ್ಟರು "ನದಿ ಹ್ಯಾಗಾಗುತ್ತೆ" ಎಂತ ಕೇಳಿದರು. ಗೌರಿಗೆ ತಿಳಿಯಲಿಲ್ಲ. ಸರಸ್ವತಿಯ ಟರ್ನು ಬಂತು. ಸರಸ್ವತಿ "ಅಲ್ಲಿ ಇಲ್ಲಿ ಬಿದ್ದ ನೀರು ಎಲ್ಲಾ ಸೇರಿ ಹೋಗಿ ನದಿಯಾಗುತ್ತೆ" ಎಂದಳು. ಇನ್ಸ್‌ಪೆಕ್ಟರು ಶಾಭಾಸ್ ಎಂದರು. ಮೇಷ್ಟರ ಕಡೆ ತಿರುಗಿ ಈ ಹುಡುಗಿಯನ್ನು ಚೆನ್ನಾಗಿ ತರಪೇತು ಮಾಡಿದ್ದೀರಿ ಮೇಷ್ಟರೆ, ಎಂದರು. ಮೇಷ್ಟರು ತರಪೇತು ಮಾಡಿದ್ದು ಗೌರಿಯನ್ನು; ಇನ್ಸ್‌ಪೆಕ್ಟರು ಹೇಳಿದ್ದು ಸರಸ್ವತಿಯನ್ನು. ಮೇಷ್ಟರಿಗೆ ಅದು ತಿಳಿಯದು. ಇನ್ಸ್‌ಪೆಕ್ಟರು ಹೇಳಿದ್ದು ಸರಸ್ವತಿಯನ್ನು. ಮೇಷ್ಟರಿಗೆ ಅದು ತಿಳಿಯದು. ಇನ್ಸ್‌ಪೆಕ್ಟರು ಹೇಳಿದ್ದು ಗೌರಿಯನ್ನೇನೋ ಎಂದು ಅವರು, "ಮಹಾಸ್ವಾಮಿ, ಕಷ್ಟಪಟ್ಟಿದ್ದೇನೆ, ಸ್ವಾಮಿಯವರಿಗೆ ಅದು ವೇದ್ಯ, ಭೂವಿವರಣೆಯಲ್ಲಿರುವ ಅಂಶ ಯಾವುದನ್ನೂ ಕೇಳಿದರೂ ಆ ಹುಡುಗಿ ಉತ್ತರ ಕೊಡ ಬಲ್ಲಳು" ಎಂದರು. ಇನ್ಸ್‌ಪೆಕ್ಟರು, ಮೇಷ್ಟರು ಹೇಳುವುದು ಗೌರಿಯನ್ನು ಎಂದು ತಿಳಿದು, "ಈ ಹುಡುಗಿಯನ್ನೇ? ಹೌದು ಅವಳು ಚೆನ್ನಾಗಿ ಓದಿದ್ದಾಳೆ. ನಾನು ಹೇಳುವುದು ಈ ಹುಡುಗಿಯನ್ನು" ಎಂದು ಸರಸ್ವತಿಯನ್ನು ತೋರಿಸಿ, "ನಿಮ್ಮ ಹೇಸರೇನಮ್ಮ" ಎಂದರು. ಸರಸ್ವತಿ, "ಸರಸ್ವತೀಬಾಯಿ." ಎಂದಳು. "ಸರಸ್ವತೀ ಬಾಯನ್ನು ನಾನು ಹೇಳುವುದು" ಎಂದು ಇನ್ಸ್‌ಪೆಕ್ಟರು ಹೇಳಿದರು. ಮೇಷ್ಟರು, "ಹೌದು ಮಹಾಸ್ವಾಮಿ, ಅವಳಿಗೆ, ಪಾಠ ಹೇಳಿ ಹೇಳಿ ನನ್ನ ಎದೆಗೂಡು ಒಣಗಿ ಹೋಗಿದೆ," ಎಂದರು. ನಿಜದ ಮಾತು. 'ನೀಕು ವಚ್ಚೇಲೇದು , ನಾಕು ಮರಚೇಲೇದು' ಎನ್ನುವ ಹಾಗೆ ಸರಸ್ವತಿಗೆ ಪಾಠ ಹೇಳಿ ಹೇಳಿ ಮೇಷ್ಟರು ಶುಷ್ಕವಾಗಿದ್ದರು. ಅಂತೂ ಮೇಷ್ಟರು ಹೇಳಿಕೊಡದೆ ಇದ್ದ ಯಾವುದೋ ಒಂದು ಮಾತನ್ನು ಹೇಳಿ ಸರಸ್ವತಿ ಶಾಭಾಸ್‌ಗಿರಿ ಪಡೆದಿದ್ದಳು. ಇದು ಗೌರಿಗೆ ಹೊಟ್ಟೆಯುರಿ. ಅಂದಿನಿಂದ ಅವರಿಬ್ಬರಿಗೂ ಆಗದು. ಗೌರಿ ಸರಸ್ವತಿಯನ್ನ "ಓಹೋ ಶಾಭಾಸ್‌ಗಿರಿಯೆ. ಓದಲಿಲ್ಲ ಮಾಡಲಿಲ್ಲ, ಜಂಬಕ್ಕೇನು ಎನ್ನುವಳು. ಸರಸ್ವತಿಯದು ಅದಕ್ಕೆಲ್ಲಾ ಏಕಮಂತ್ರ, "ಹೌದಮ್ಮ ನಾನೇನು ಮಾಡಲಿ ಹೇಳು; ನನಗೆ ಮೆಳ್ಳೆಗಣ್ಣಿಲ್ಲ ನನ್ನ ಕಣ್ಣು ಸರಿಯಾಗಿದೆ," ಎನ್ನುವಳು. ಹೀಗೆ ಇವರಿಬ್ಬರಿಗೂ ಆಗದು. ಮೇಷ್ಟರು ಇದನ್ನು ಹೇಳೋಣವೆಂದು ಗೌರಿಯ ಹಾಗೆ ಓದು ಎಂದರೆ ಅವಳು ಹೀಗೆ ಮಾತಾಡಿ ಗೌರಿಗೆ ಅವಮಾನವನ್ನು ಮಾಡುವಳು.

ಇನ್ನು ಆ ಗುರುವಾರ ಮಾತನ್ನು ಹೇಳುತ್ತೇನೆ. ಮೇಷ್ಟರು 'ಹಾಗೆಲ್ಲಾ ಹೇಳಬಾರದು' ಎಂದು ಹೇಳಿ, ಎಲ್ಲರಿಗೂ ಪಾಠಗಳನ್ನು ಕೊಟ್ಟರು. ಹುಡುಗಿಯರು ಆಗಾಗ ಸರಸ್ವತಿಯ ಮಾತನ್ನು ನೆನೆದು ನೆನೆದು ಕಿಲಕಿಲನೆ ನಗುವರು. ಪಿಸುಗುಟ್ಟಿ ಮಾತನಾಡುವರು. ಮಿಕ್ಕ ಏನನ್ನಾದರೂ ಮಾಡುವರು. ಪಾಠವನ್ನು ಮಾತ್ರ ಓದರು. ಮಡಲಲ್ಲಿ ಹಾಕಿಕೊಂಡು ಬಂದಿದ್ದ ಚಕ್ಕುಲಿ, ಮುಚ್ಚೋರೆ, ಅವಲಕ್ಕಿ ಇವುಗಳ ಸೇವನೆಯ ಕಟುಂಕಟುಂ, ಗರುಂ ಗುರಂ ಶಬ್ದ ಮಾತ್ರ ಕೇಳುತ್ತಲಿತ್ತು. ಗೌರಿಗೆ ಅವಮಾನವು ಇನ್ನೂ ಮರೆತಿರಲಿಲ್ಲ. ಮಿಕ್ಕವರಿಗೆ ಓದುವ ಇಷ್ಟವಿಲ್ಲ. ಓದುವ ಹುಡುಗಿ ಅವಳೊಬ್ಬಳೂ ಮುಖವನ್ನು ಗಂಟಿಕ್ಕಿಕೊಂಡು ತೆಪ್ಪಗೆ ಕುಳಿತಿದ್ದಳು. ಮೇಷ್ಟರು 'ಪಾಠ ಒಪ್ಪಿಸಿ, ಬನ್ನಿ' ಎಂದು ಯಾವಾಗ ಕರೆಯುವರೋ ಎಂದು ನಾನು ನಿರೀಕ್ಷಿಸುತ್ತಿದ್ದೆ. ನಡುನಡುವೆ ಲಕ್ಷ್ಮಿಯಿಂದ ಉಪಾಯವಾಗಿ ನನ್ನ ಬಳಪಗಳನ್ನು ಹಿಂದಕ್ಕೆ ತೆಗೆದುಕೊಳ್ಳಲು ಪ್ರಯತ್ನ ಮಾಡಿದೆ. ಪ್ರಯೋಜನವಾಗಲಿಲ್ಲ. ಇನ್ನೇನು ತೀರ ಬೇಜಾರಾಗಬೇಕು, ಅಷ್ಟರಲ್ಲಿ ತಮಾಷೆಗೆ ಮತ್ತೊಂದು ಅವಕಾಶ ಉಂಟಾಯಿತು.

ಮೇಷ್ಟರು "ಮನೆಯಲ್ಲಿ ಉಪ್ಪಿಲ್ಲದೆ ಬಿಟ್ಟು ಬಂದೆನಲ್ಲ. ಮನೆಗೆ ಹೋದರೆ ಏನಾಗಬೇಕೆಂದು ಹಣೆಯಲ್ಲಿ ಬರೆದಿದೆಯೋ" ಎಂದು ಪ್ರಾಪಂಚಿಕ ವಿಷಯವನ್ನು ಕುರಿತು ಯೋಚಿಸುತ್ತಿದ್ದರೋ, ಇಲ್ಲವೇ ಯಾವುದಾದರೊಂದು ಆಧ್ಯಾತ್ಮಿಕವಾದ ವಿಷಯವನ್ನೊ ಋಕ್ಕೂ ಸಂಹಿತೆ ಶಾಸ್ತ್ರವನ್ನೋ ಕುರಿತು ವಿಚಾರ ಮಾಡುತಿದ್ದರೋ ನಾನು ಹೇಳಲಾರೆ. ಅದರ ನಡುವೆ ಅದಕ್ಕೆ ಅಡ್ಡಲಾಗಿ ಒಬ್ಬಾಕೆ ಸ್ಕೂಲಿನೊಳಕ್ಕೆ ಬಂದರು. ಅವರು ಬಾಗಿಲಲ್ಲಿ ಕಂಡೊಡನೆಯೇ ಮೇಷ್ಟರಿಗೆ ಮನೆಯಲಾಗತಕ್ಕದ್ದು ಇಲ್ಲೇ ಬಂತೆಂದು ತೋರಿರಬೇಕು, ಅವರು ನೆಮ್ಮದಿಯಾಗಿ ಕುಳಿತಿದ್ದವರು ಗಾಬರಿಯಿಂದ ಆಕೆಯ ಕಡೆ ನೋಡುತ್ತ ಏನೋ ಮಾತನಾಡುವುದಕ್ಕೇ ತೊಡಗಿದರು. ಅಷ್ಟರಲ್ಲಿ ಅವರ ಹೆಂಡತಿ "ಉಪ್ಪಿಲ್ಲವೆಂದು ನಾನು ಹೇಳಿದ್ದರೂ ನೀವು ಸುಮ್ಮನೆ ಸ್ಕೂಲಿಗೆ ಬಂದುಬಿಟ್ಟರೆ ನಾನು ಏನು ಮಾಡಬೇಕು ಎಂದುಕೊಂಡಿರಿ"? ಎಂದು ಸ್ವಲ್ಪ ಗಟ್ಟಿಯಾಗಿ ಕೇಳಿದರು. ಮೇಷ್ಟರು "ನೀನು ಅದಕ್ಕೋಸ್ಕರ ಸ್ಕೂಲಿಗೆ ಬರುವುದೆ"? ಎಂದರು. " ನಾನು ಯಾವುದನ್ನಾದರೂ ಕೇಳಿದರೆ, ನೀವು ಓಡಿ ಹೋಗಿ ಸ್ಕೂಲಿನಲ್ಲಿ ಸೇರಿಕೊಳ್ಳುವುದು; ಏನೇ ಆಗಲಿ ಸ್ಕೂಲಿಗೆ ಮಾತ್ರ ಬರಬೇಡ ಎಂದು ಮಾತ್ರ ಶಾಸನಮಾಡುವುದು; ನಾನೇನು ಮಾಡಲಿ? ಇನ್ನು ಮೇಲೆ ನೀವು ಸ್ಕೂಲಿನಲ್ಲಿರಿ, ಎಲ್ಲಿಯಾದರೂ ಇರಿ, ನಾನು ಬರುವುದೇ ನಿಜ. ಇಲ್ಲದ್ದನ್ನು ತನ್ನಿ ಎನ್ನುವುದೇ ನಿಜ. ಈ ಸಂಕಟ ನನ್ನಿಂದಾಗುವುದಿಲ್ಲ".

"ಪಕ್ಕದ ಮನೆಯಲ್ಲಿ ಸ್ವಲ್ಪ ಕೇಳಿ ತಂದಿದ್ದರಾಗದೆ? ನೀನು ಇಲ್ಲಿರುವಾಗ ಯಾರಾದರೂ ಬಂದರೆ ನನ್ನ ಮಾನ ಹೋಗುವುದಲ್ಲ?" ಎಂದು ಮೇಷ್ಟರು ಹೇಳಿದರು.

ಆಕೆ "ಯಾರಾದರೂ ಬಂದರೆ ನಿಮ್ಮ ಮಾನ ಹೋಗುವುದು ಹಾಗಿರಲಿ ಬಾರದೆಯೇ ದಿನವೂ ನನ್ನ ಮಾನ ಹೋಗುತ್ತ ಇದೆ. ಎಲ್ಲರ ಮನೆಯಲ್ಲೂ ನಿನ್ನೆ ಅಕ್ಕಿ, ಇಂದು ಬೇಳೆ, ನಾಳೆ ಉಪ್ಪು, ಸುಮ್ಮನೆ ಸಾಲ ಕೇಳಿ ತಂದು ತಂದು ಸಾಕಾಯಿತು. ಇನ್ನು ಹೋಗಿ ನಾನು ಯಾರನ್ನು ಕೇಳುವುದಿಲ್ಲ. ದುಡ್ಡಿದ್ದರೆ ತನ್ನಿ ತರುತ್ತೇನೆ ಎನ್ನಿ ಸ್ಕೂಲಿಗೆ ಹೊತ್ತಾಯಿತೆಂದು ಹೇಳಿ ಹೊರಟುಹೋಗಬೇಡಿ ದುಡ್ಡಿಲ್ಲದಿದ್ದರೆ ಇಲ್ಲವೆನ್ನಿ, ಉಪ್ಪಿಲ್ಲದೆಯೇ ತಿನ್ನೋಣ" ಎಂದು ಹೇಳಿದರು.

ಇಷ್ಟು ನಡೆಯುವ ಹೊತ್ತಿಗೆ ಸ್ಕೂಲಿನಲ್ಲಿ ಹುಡುಗಿಯರ ಅವಾಂತರವೊ ಅವಾಂತರ, ಲಕ್ಷ್ಮಿ ಬೀದಿಯಲ್ಲಿ ಗರುಡಮರಿಯನ್ನು ನೋಡಿ – ಗರುಡಮರಿ ಏನೆ?...

ಗರುಡಮರಿ ಒಂದು ಚಿಕ್ಕ ಬೆಕ್ಕಿನಮರಿ; ನೋಡುವುದಕ್ಕೆ ಬಹು ಅಂದವಾಗಿತ್ತು ಸ್ಕೂಲಿನ ಹುಡುಗಿಯರು ಪೊರಕೆ ಕಡ್ಡಿಯನ್ನು ಅದಿರಿದಿರಿಗೆ ಆಡಿಸುತ್ತ ಆದರಿಂದ ಇಲಿ ಹಿಡಿಯುವ ಆಟವನ್ನು ಆಡಿಸುವರು. ಅದರ ಬಾಲವನ್ನು ಹಿಡಿದು ಎಳೆದು ಅದು ಸಿರ್ರೆನ್ನುವಂತೆ ಮಾಡುವರು. ಆಗಾಗ ತಂದಿದ್ದ ತಿಂಡಿಯಲ್ಲಿ ಅದಕ್ಕೇ ಭಾಗವನ್ನು ಕೊಡುವರು. ಆದ್ದರಿಂದ ಆ ಮರಿಗೆ ನಮ್ಮನ್ನೆಲ್ಲ ಕಂಡರೆ ಬಹಳ ಪ್ರೀತಿ, ನಮ್ಮ ಅಷ್ಟು ಜನರಲ್ಲಿ ಲಕ್ಷ್ಮಿಯನ್ನು ಕಂಡರೆ ಹೆಚ್ಚು ಪ್ರೀತಿ. ಒಂದು ಸಲ ಅವಳು ಅವರಮ್ಮನನ್ನು ಕೇಳಿಯೋ ಕೇಳದೆಯೋ ತುಂಬ ತಂಬಿಟ್ಟನ್ನು ತಂದಿದ್ದಳು. ನಾವೆಲ್ಲಾ ಹತ್ತಿರ ಸೇರಿ ಅವಳನ್ನೂ ಆಶ್ರಯಿಸಿ ನಮಗೂ ಸ್ವಲ್ಪ ಸ್ವಲ್ಪ ಬರುವಂತೆ ಏರ್ಪಾಡು ಮಾಡಿದೆವು. ನಾನು ಸರಸ್ವತಿ ಗೌರಿ ಗ್ರಹಚಾರ ಕಡಿಮೆಯಾಗಿ ಲಕ್ಷ್ಮಿ ಗರುಡ ಮರಿಯನ್ನು ಹತ್ತಿರಕ್ಕೆ ಕರೆದು ಆಟಕ್ಕೆ ಅದರಮರಿಗೆ ಆ ತಂಬಿಟ್ಟನ್ನು ಇಟ್ಟಳು. ಅದು ಅದನ್ನು ಆಟವೆಂದು ಬಿಡಲಿಲ್ಲ. ನಿಜವಾಗಿಯೇ ಬಾಯಲ್ಲಿ ಕಚ್ಚಿಕೊಂಡು ಬಿಟ್ಟಿತು. ಯಾರನ್ನು ಹತ್ತಿರ ಬರಗೊಡಿಸದೆ ಫಜೀತಿ ಮಾಡಿಬಿಟ್ಟಿತು ದಿನವೂ ಹೀಗೆಯೆ ತಂಬಿಟ್ಟು ಸಿಗುವುದೇನೋ ಈ ಹುಡುಗಿಯ ಹತ್ತಿರ ಎಂದು ಲಕ್ಷ್ಮಿಯಲ್ಲಿ ಬಹಳ ಸ್ನೇಹವನ್ನು ತೋರಿಸುತ್ತಿತ್ತು. ಲಕ್ಷ್ಮಿ ಕೂಡ ತಂಬಿಟ್ಟು ಹೋದರೂ ಬೆಕ್ಕಿಗೆ ತನ್ನ ಮೇಲೆ ಪ್ರೀತಿ ಹೆಚ್ಚಾಗಿದೆಯಲ್ಲಾ ಎಂಬ ಜಂಬದಿಂದ ಅದನ್ನು ಹಿಡಿದು ಹಿಸಿಕಿ, ಔಕಿ, ಅದರ ಪ್ರಾಣವನ್ನೂ ತೆಗೆಯುವಳು. ಅವಳೇ ಅದರ ಸೊಗಸಿಗೋಸ್ಕರ ಅದಕ್ಕೆ 'ಗರುಡಮರಿ' ಎಂದು ಹೆಸರಿಟ್ಟಿರುವಳು. ಮರಿ ಚೆನ್ನಾಗಿತ್ತು; ಮೈ ಸ್ವಲ್ಪ ಭಾಗ ಮೈಲು ಬಣ್ಣ ಸ್ವಲ್ಪವೆಲ್ಲಾ ಬಿಳುಪು; ಕುತ್ತಿಗೆಯೆಲ್ಲಾ ಮೃದುವಾದ ಬಿಳುಪು: ಮೂಗು ಹಣೆಯೂ ಬಿಳುಪು. ಅಲ್ಲಲ್ಲಿ ಸ್ವಲ್ಪ ಕಪ್ಪು; ಮುಸುಡಿ ಮಾಗಿದ ಪರಂಗಿ ಹಣ್ಣಿನ ಹೊರ ಭಾಗದ ಕೆಂಪು ಕಣ್ಣುಗಳು ಒಳ್ಳೆಯ ಪುಷ್ಯರಾಗ ಉಗುರು ಅದರಿಂದ ಪರಿಚಿಸಿಕೊಂಡವರಿಗೆ ಗೊತ್ತು. ಇದೀಗ ಗರುಡ ಮರಿ ...

ಲಕ್ಷ್ಮಿ ಈ ಗಲಭೆಯಲ್ಲಿ ಗರುಡಮರಿಯನ್ನು ನೋಡಿ ತಾನು ಅದರ ಹಿಂದೆ ಓಡಿ ಅದನ್ನು ಹಿಡಿದು ಸ್ಕೂಲಿಗೆ ತಂದಳು, ನಾನು ಅವಳು ಇನ್ನೂ ಕೆಲವೂ ಹುಡುಗಿಯರೂ ಅದನ್ನು ನಡುವೆ ಇಟ್ಟುಕೊಂಡು ಆಡುತ್ತಾ ಇದ್ದೆವು. ಮೇಷ್ಟರೂ ಮೇಷ್ಟರ ಹೆಂಡತಿ ಇನ್ನೇನು ಹೇಳಿಕೊಂಡರೋ. ಅದೇನೇನು ನಡೆಯಿತೋ ನಾನು ಕಾಣೆ. ನಮ್ಮ ಆಟದ ಮಂಪರದಲ್ಲಿ ನಾವು ಯಾವುದನ್ನೂ ನೋಡಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಮೇಷ್ಟರು ಮಾತ್ರ, ಸರಿಯಾಗಿ ಕುಳಿತುಕೊಳ್ಳಿರಮ್ಮ, ಎಂದು ಗಾಬರಿಯಿಂದ ಕೂಗಿದರೂ. ಅದನ್ನು ಕೇಳಿ ನಾವೆಲ್ಲ ಅಲ್ಲಲ್ಲಿ ಸರಿದು ನಮ್ಮ ನಮ್ಮ ಜಾಗದಲ್ಲಿ ಕುಳಿತೆವು. ಬೆಕ್ಕು ಲಕ್ಷ್ಮಿಯ ಮಡಿಲಲ್ಲಿ ಸೇರಿತು. ಎಲ್ಲರೂ ನಮ್ಮ ನಮ್ಮ ಪುಸ್ತಕಗಳನ್ನು ಕೈಯಲ್ಲಿ ಹಿಡಿದು ಇದೇನಾಯಿತೆಂದು ನೋಡಿದೆವು.

ಬಾಗಿಲಲ್ಲಿ ಮುದುಕರೊಬ್ಬರು ನಿಂತಿದ್ದರು. ನಿಂತು ಎಲ್ಲವನ್ನೂ ಸರ್ವಸ್ವ ಅಧಿಕಾರವುಳ್ಳವರಂತೆ, ಒಂದು ಕಡೆಯಿಂದ ನೋಡುತ್ತಿದ್ದರು. ಮೇಜಿನ ಹತ್ತಿರ ನಿಂತಿದ್ದ ನಮ್ಮ ಮೇಷ್ಟರನ್ನು "ನೀವು ಇಲ್ಲಿ ಮೇಷ್ಟರೇನಯ್ಯ?" ಎಂದು ಕೇಳಿದರು.

ಅವರು ಇನ್ಸ್‌ಪೆಕ್ಟರು, ಸ್ಕೂಲು ಮೇಷ್ಟರುಗಳನ್ನು ಬೇರೆ ಇನ್ನು ಯಾರೂ ಹಾಗೆ ಮಾತನಾಡಿಸುವುದಿಲ್ಲ. ಮೇಷ್ಟರುಗಳನ್ನೂ ಎಲ್ಲರೂ ಮಾತನಾಡಿಸುವುದು ಒಂದು ರೀತಿ. ಇನ್ಸ್‌ಪೆಕ್ಟರುಗಳನ್ನು ಮಾತನಾಡಿಸುವುದೇ ಒಂದು ರೀತಿ. ನಾನು ಹೇಳುವ ಮಾತಿಗೆ ಯಾರೂ ಕೋಪಿಸಬಾರದು. ಹೇಳುವುದು ಕೂಡ ಸ್ವಲ್ಪ ತಮಾಷೆಗೂ ಹೆಳುತ್ತೇನೆ. ಇಲಿಗಳನ್ನು ಹಿಡಿಯುವ ಶೌರ್ಯ ಬೆಕ್ಕಿಗೆ ಹೇಗೋ ಹಾಗೆ ಸ್ಕೂಲು ಮೇಷ್ಟರುಗಳ ಮೇಲೆ ಇನ್ಸ್‌ಪೆಕ್ಟರುಗಳಿಗೆ ಅಧಿಕಾರ. ಇವರ ಪ್ರಶ್ನೆಯನ್ನು ಕೇಳುತ್ತಲೂ ಮೇಷ್ಟರಿಗೆ ಅವರು ಇನ್ಸ್‌ಪೆಕ್ಟರೆಂದು ಗೊತ್ತಾಯಿತು. "ಹೌದು ಮಹಾಸ್ವಾಮಿ" ಎಂದು ಅವರು ಜವಾಬು ಕೊಟ್ಟರು.

ಇನ್ಸ್‌ಪೆಕ್ಟರು “ರುಮಾಲು ಹಾಕಿಕೊಳ್ಳಿರಯ್ಯ, ಬರೀ ತಲೆಯಲ್ಲಿ ಇದೀರಿ ಇದೇನು?” ಎಂದರು.

ನಮ್ಮ ಮೇಷ್ಟರು ಶಾಸ್ತ್ರವನ್ನು ಬಲ್ಲರು, ವೇದವನ್ನು ಬಲ್ಲರು, ರಘುವಂಶವನ್ನು ಎಲ್ಲಿಂದ ಎಲ್ಲಿಗಾದರು ಬಾಯಿಪಾಠ ಒಪ್ಪಿಸುವರು. ತತ್ವಾರ್ಥದ ವಿಚಾರವನ್ನು ಯಾರಿಗಾದರೂ ಹೇಳಿಕೊಟ್ಟಾರು. ಮನಸ್ಸೋನಿಷ್ಕಲ್ಮಷ. ಈಚೆಗೆ ನನಗೆ ಮನುಷ್ಯರ

ಸ್ವಭಾವ ಅಷ್ಟಿಷ್ಟು ತಿಳಿದಿದೆ. ನನ್ನ ಎಳೆಯ ಮಕ್ಕಳನ್ನು ನೋಡಿ, ಮಕ್ಕಳ ಮನಸ್ಸು ಎಷ್ಟು ಅಚ್ಚ, ಎಷ್ಟು ಮೆಚ್ಚಾಗಿದದ್ದೆಂದು ತಿಳಿದಿದೆ. ನಮ್ಮ ಮೇಷ್ಟರ ಮನಸ್ಸು ಮಗುವಿನ ಮನಸ್ಸಿನ ಹಾಗೆ ನೋಡಿ. ಬಹು ಅಚ್ಚವಾದದ್ದು ಬಹು ಎಳಸು ಬಹು ಮೆಚ್ಚಾದದ್ದು. ಅವರು ಒಬ್ಬರ ಕಷ್ಟವನ್ನು ನೋಡಿ ಧರಿಸರು ಆದರಿಂದಲೇ ಅವರಲ್ಲಿ ಆಗಾಗ ಉಪಿಪಗೆ ಕಾಸಿಲ್ಲದೆ ಹೋಗುತ್ತಿತ್ತು. ಅಕುಟಿಲವೆಂದರೆ ಅವರ ಮನಸ್ಸಿನಂತೆ ಬೇರೆ ಇರಲರದು. ಒಂದು ರೀತಿಯಲ್ಲಿ ಬಹಳ ಧೈರ್ಯಶಾಲಿಗಳೂ ಹೌದು. ಒಂದು ಸಲ ಬೀದಿಯಲ್ಲಿ ಕೆಲವು ಮಕ್ಕಳು ಆಡುತ್ತಿರುವ ಕಡೆಗೆ ನಾಗರಹಾವು ಬರುತ್ತಿರುವುದನ್ನು ಕಂಡು ಅವರು, ನಾಗರಹಾವನ್ನು ಕೊಲ್ಲಕೂಡದೆಂಬ ಶಾಸ್ತ್ರವನ್ನು ತಿಳಿದಿದ್ದರೂ ಅದನ್ನು ಒಂದು ಕಡೆ ಇಟ್ಟೂ, ಅದು ತನ್ನ ಮೇಲೆ ಬಿದ್ದರೆ ಸಾವೇ ನಿಜವೆಂದು ತಿಳಿದಿದ್ದರೂ ಆ ಭಯವನ್ನು ಒಂದು ಕಡೆ ಇಟ್ಟು ಹಾವನ್ನು ನೋಡಿ ಬಡಿದುಕೊಂದರು. ಜನಬವೆಲ್ಲಾ ಸುತ್ತಲೂ ಸೇರಿ ಹಾರುವನ ಧೈರ್ಯವನ್ನು ಹೊಗಳುತ್ತಿರುವಾಗ ಮೇಷ್ಟರು ನಸ್ಯದ ಬುರುಡೆಯನ್ನು ತೆಗೆದು ಒಂದು ದೊಡ್ಡ ಚಿಟಿಕೆ ನಸ್ಯವನ್ನು ಆ ಹಾವಿನ ತಲೆಯ ಮೇಲೆ ಹಾಕಿದರು. ಹಾವನ್ನು ಹಿಡಿಯಬೇಕಾದರೆ ಹಾವಾಡಿಗರು ಆದರ ಬಾಯಲ್ಲಿ ಒಂದು ಚಿಟಿಕೆ ನಸ್ಯವನ್ನು ಹಾಕುವರೆಂದು ಅದರಿಂದ ಅದು ತಲೆ ತಿರುಗಿ ಬೀಳುವುದೆಂದೂ, ಆಗ ಅವರು ಅದನ್ನು ಹಿಡಿದು ಅದರ ಕೋರೆಹಲ್ಲುಗಳನ್ನು ಕೀಳುವರೆಂದೂ ಕತೆ ಉಂಟಷ್ಟೆ? ನಮ್ಮ ಮೇಷ್ಟರು ಆ ಹಾವಿನ ತಲೆಗೆ ನಸ್ಯವನ್ನು ಹಾಕಿದಕ್ಕೂ ಇದೆ ಉದ್ದೇಶ. ಇವರ ಕೈಯಲ್ಲಿ ನಸ್ಯ ಹಾಕಿಕೊಳ್ಳುವಷ್ಟು ತೆಪ್ಪಗಾಗಿರುವ ಹಾವಿಗೆ ಅದರ ರುಚಿ ತಿಳಿಯುವುದಿಲ್ಲವೆಂದು ಅವರಿಗೆ ತಿಳಿಯದು. ಶುದ್ದ ಮಗುವಿನತಂಹ ಸಿಷ್ಕಪಟವಾದ ಮನಸ್ಸು, ನಿಷ್ಕಪಟವಾದ ಬುದ್ದಿ.ಇಷ್ಟು ಧೈರ್ಯಶಾಲಿಯಾದರೂ ನಮ್ಮ ಮೇಷ್ಟರಿಗೆ ಎರಡು ವಸ್ತುವನ್ನು ಕಂಡರೆ ಮನಸ್ಸಿಗೆ ಭಯ. ಒಂದು ಅವರ ಹೆಂಡತಿ, ಎರಡನೆಯದು ಇನ್ಸ್‌ಪೆಕ್ಟರು. “ರುಮಾಲು ಹಾಕಿಕೊಳ್ಳಿರಯ್ಯಾ”ಎಂದು ಇನ್ಸ್‌ಪೆಕ್ಟರು ಹೇಳುತ್ತಲೂ ಅಂಜುವವರ ಮೇಲೆ ಕಪ್ಪೆ ಹಾಕಿದ ಹಾಗಾಗಿ ಮೇಷ್ಟರು ಮೇಜಿನ ಮೇಲಿದ್ದ ರುಮಾಲನ್ನು ಎತ್ತಿ ಗಾಬರಿಯಲ್ಲಿ ಹಿಂದುಮುಂದಾಗಿ ಇಟ್ಟುಕೊಂಡರು. ಭಯದಿಂದ ಮುಖವೆಲ್ಲ ಬೆವತುಹೋಗಿತ್ತು.ಆಗ ಅವರ ಭಯವನ್ನು ನೋಡಿ ನನಗೆ ಅಯ್ಯೋ ಪಾಪ ಎನ್ನಿಸಿತು. ವೇಷವನ್ನು ನೋಡಿದರೆ ನಗು ಬರುವಂತಿತ್ತು.

ರುಮಾಲು ಹಿಂದುಮುಂದಾದ್ದನ್ನು ನೋಡಿ ಇನ್ಸ್‌ಪೆಕ್ಟರು “ರುಮಾಲನ್ನು ಸರಿಯಾಗಿ ಇಟ್ಟುಕೊಳ್ಳಿರಯ್ಯಾ”ಎಂದರು, ಎನ್ನುತ್ತಲೂ ಮೇಷ್ಟರು ರುಮಾಲನ್ನು ತೆಗೆದು ‘ಮಹಾಸ್ವಾಮಿ’ ಎನ್ನುತ್ತ ಅದನ್ನು ಸರಿಯಾಗಿ ಇಟ್ಟುಕೊಳ್ಳಹೋದರು.ಅವರ ಅದೃಷ್ಟಕ್ಕೆ ತಕ್ಕಹಾಗೆ ಅದು ಬಿಚ್ಚಿಹೋಯಿತು.ಮೊದಲೇ ಸರಿ.ಇನ್ನು ಆ ಗಲಭೆಯನ್ನು ಕುರಿತು ಹೇಳಬೇಕಾದದ್ದಿಲ್ಲ.ಇತ್ತ ರುಮಾಲು ಬಿಚ್ಚಿಹೋಯಿತು.ಇನ್ಸ್‌ಪೆಕ್ಟರೋ ಕೋಪಗೊಂಡಿರುವಂತಿದೆ.ಹುಡುಗಿಯರು ಚೆನ್ನಾಗಿ ಓದಿದವರು ಯಾರೂ ಇಲ್ಲ.ಪರೀಕ್ಷೇ ಮಾಡಿದರೆ ಕೆಲಸಕ್ಕೆ ಊನ ಬಂದೀತೆಂದು ಹೆದರಿಕೆ. ತನ್ನ ಹೆಂಡತಿ ಬೇರೆ ಬಂದು ಸ್ಕೂಲಿನೊಳಗೆ ಕುಳಿತಿದ್ದಾಳೆ.ಇನ್ಸ್‌ಪೆಕ್ಟರಿಗೆ ಆ ಸಮಾಚಾರ ತಿಳಿದು ತನ್ನ ಪಾಡು ಏನಾಗುವುದೋ ಎಂದು ಮನಸ್ಸಿನಲ್ಲಿ ತತ್ತರ. ಅವರು, ಇವರು ಯಾರು, ಎನ್ನುತ್ತ ಈಕೆ ಯಾರು, ಎಮದು ತನ್ನ ಹೆಂಡತಿಯನ್ನು ತೋರಿಸಿ

ಕೇಳದರೆ ಏನು ಜವಾಬನ್ನು ಹೇಳುವುದು? ಎಂದು ಮೊದಲಾಗಿ ಯೋಚಿನೆಯಿಂದ ಮೇಷ್ಟರ ಮನಸ್ಸು ಕಳವಳಿಸುತ್ತಿತ್ತು. ಕಳವಳವೆಷ್ಟೆಂದು ಊಹಿಸಿಕೊಳ್ಳಿ. ನಾನು ಹೇಳುವುದು ಸಾಧ್ಯವಿಲ್ಲ.

ಇನ್ಸ್‌ಪೆಕ್ಟರು ಮೇಷ್ಟರ ಹೆಂಡತಿಯ ಕಡೆ ತಿರುಗಿ "ಈಕೆ ಯಾರು? ಒಬ್ಬ ಮೇಷ್ಟರೋ?" ಎಂದು ಕೇಳಿದರು.

ನಮ್ಮ ಮೇಷ್ಟರು ಗಾಬರಿಯಿಂದ ಏನೂ ತೋರದೆ ರುಮಾಲನ್ನು ಸರಿ ಮಾಡುವಂತೆ ತೋರಿಸಿಕೊಳ್ಳುತ್ತ "ಮಹಾಸ್ವಾಮಿ" ಎಂದರು.

ಇನ್ಸ್‌ಪೆಕ್ಟರು ಇನ್ನೇನು ಹೇಳುತ್ತಿದ್ದರೋ, ಇನ್ನೇನು ಆಗುತ್ತಿತ್ತೋ, ಅಷ್ಟರಲ್ಲಿ ಮೇಷ್ಟರ ಹೆಂಡತಿ ತಾನು ಮಾಡಿದ್ದು ತಾನು ಎಣಿಸಿದ್ದಕ್ಕಿಂತ ಕಷ್ಟಕ್ಕೆ ಬಂತೆಂದು ತಿಳಿದು, ಏನಾದರೂ ಮಾಡಿ ಈ ತಂಟೆಯಿಂದ ತಟಹಾಯಬೇಕೆಂದು 'ಅಲ್ಲ' ಎಂದು ಸಮಯಕ್ಕೆ ಸರಿಯಾಗಿ ಉತ್ತರ ಕೊಟ್ಟರು.

"ವಿದ್ಯಾರ್ಥಿಯೋ? ಎಂದು ಇನ್ಸ್‌ಪೆಕ್ಟರು, ಕೇಳಿದರು.

ಮೇಷ್ಟರು "ಮಹಾಸ್ವಾಮಿ" ಎಂದರು.

ಮೇಷ್ಟರ ಹೆಂಡತಿ "ಹೌದು," ಎಂದರು.

ಇನ್ಸ್‌ಪೆಕ್ಟರು ಮೇಷ್ಟರ ಕಡೆ ತಿರುಗಿ "ಏನಯ್ಯ ಒಳ್ಳೆ ಬಲಿತ ಹುಡುಗಿಯನ್ನೇ ಹಿಡಿದಿದ್ದೀರಿ?" ಎಂದರು.

ಮೇಷ್ಟರ ಹೆಂಡತಿ ಮುಖದಲ್ಲಿ ಕೋಪವನ್ನೂ ತೋರಿಸುತ್ತಾ ಮಾತಾಡದೆ ನೇರವಾಗಿ ಬಾಗಿಲ ಕಡೆ ಹೋಗಿ, "ಬಲಿತ ಹುಡುಗಿಯಂತೆ, ಬಲಿತ ಹುಡುಗಿ, ಯಾರೋ ಎಳೆಯ ನಿಂಬೇಕಾಯಿ," ಎಂದು ಹೇಳುತ್ತಾ ಹೊರಟು ಹೋದರು. ಇನ್ಸ್‌ಪೆಕ್ಟರು "ಇದೇನಯ್ಯಾ ಇದು? ಮಾತನಾಡದೆ ಹೊರಟು ಹೋದರು. ಇನ್ಸ್‌ಪೆಕ್ಟರು "ಇದೇನಯ್ಯಾ ಇದು? ಮಾತನಾಡದೆ ಹೊರಟು ಹೋದರು. ಆಕೆ ಯಾವ ಕ್ಲಾಸು?" ಎಂದರು.

ಮೇಷ್ಟರು "ಮಹಾಸ್ವಾಮಿ," ಎಂದರು.

ಇನ್ಸ್‌ಪೆಕ್ಟರಿಗೆ ಬೇಜಾರಾಯಿತು. "ಇದೇನಯ್ಯಾ ಮಹಾಸ್ವಾಮಿ, ಮಹಾ ಸ್ವಾಮಿ ಎಂತ ಒಂದೇ ಮಾತು ಆಡುತ್ತಾ ಇದ್ದೀರಿ ನಿಮಗೇನು ಬಂತು"? ಎಂದರು.

ಮೇಷ್ಟರು "ಮಹಾಸ್ವಾಮಿ", ಎಂದರು.

ಇನ್ಸ್‌ಪೆಕ್ಟರು "ಆಕೆ ಕೋಪಿಸಿಕೊಂಡರೇನಯ್ಯ?" ಎಂದರು

ಇನ್ಸ್‌ಪೆಕ್ಟರು "ಹೌದಪ್ಪ. ಬಲಿತ ಹುಡುಗಿ ಎಂದದ್ದು ತಪ್ಪಾಯಿತು" ಎಂತ ಹೇಳುತ್ತಾ "ಹೋಗಲಿ, ಈ ಕ್ಲಾಸು ಯಾವುದನ್ನಾದರೂ ಪರೀಕ್ಷೆ ಮಾಡೋಣವೋ" ಎಂದರು.

"ಮಹಾಸ್ವಾಮಿಯವರಿಗೆ ಪ್ರಯಾಣದಿಂದ ಆಯಾಸವಾಗಿ ಇರಬಹುದು. ನಾಳೆ ಪರೀಕ್ಷೆ ಮಾಡಿದರೆ ಅನುಕೂಲ," ಎಂದು ಮೇಷ್ಟರು ಉತ್ತರ ಕೊಟ್ಟರು. "ಹಾಗೆ ಆಗಲಿ. ಈಗ ಚೆನ್ನಾಗಿ ಹಾಡುವ ಹುಡುಗಿಯ ಕೈಲಿ ಒಂದು ಹಾಡನ್ನು ಹಾಡಿಸಿ. ಕೇಳೋಣ ಸಾಕು." ಎಂದು ಇನ್ಸ್‌ಪೆಕ್ಟರು ಹೇಳಿದರು.

ಚೆನ್ನಾಗಿ ಹಾಡುವವಳು ಲಕ್ಷ್ಮಿ. ಮೇಷ್ಟರು "ಲಕ್ಷ್ಮಮ್ಮ ಹಾಡಮ್ಮ ಶ್ರೀಜಾರ್ಜು ಹಾಡು" ಎಂದರು.

ಲಕ್ಷ್ಮಿ ಎದ್ದುನಿಂತು ಹಾಡುವುದಕ್ಕೆ ಪ್ರಾರೊಭಿಸಿದಳು. ಮಡಿಲಲ್ಲಿ ಬೆಕ್ಕಿನ ಮರಿ. ಹಾಡುವುದನ್ನು ಸರಿಯಾಗಿ ಕೇಳುವುದಕ್ಕೆ ಇನ್ಸ್‌ಪೆಕ್ಟರು ಹತ್ತಿರ ಬಂದು ನಿಂತರು. ಲಕ್ಷ್ಮಿ ಹಾಡುವುದಕ್ಕೆ ಪ್ರಾರಂಭಿಸುತ್ತಲು ಬೆಚ್ಚಗೆ ಮಡಿಲಲ್ಲಿ ನಿದ್ದೆ ಹೋಗುತ್ತಿದ್ದ ಗರುಡಮರಿ ಎಚ್ಚರಗೊಂಡು ಹೊರಗೆ ಬರಲು ಸ್ವಲ್ಪ ಅಲುಗಾಡುವುದಕ್ಕೇ ಪ್ರಾರಂಭಿಸಿತು.

ಇನ್ಸ್‌ಪೆಕ್ಟರ್ ದೃಷ್ಟಿ ಕದಲುತ್ತಿದ್ದ ಮಡಿಲಿನ ಮೇಲೆ ಬಿತ್ತು. ಅವರು ಅದೇನಮ್ಮಾ ಎಂದು ಬೆರಳು ತೋರಿಸಿ ಕೇಳಿದರು.

ಲಕ್ಷ್ಮಿಗೆ ಹೇಳಬಹುದೋ ಕೂಡದೋ ಎಂದು ಸಂದೇಹ. ಅವಳು ನನ್ನ ಕಡೆ ತಿರುಗಿ ನೋಡಿದಳು. ಇನ್ಸ್‌ಪೆಕ್ಟರು, "ನಿನ್ನ ಮಗುವೋ?" ಎನ್ನುತ್ತ ಇದೇನೋ ಎಂದು ನೋಡುವುದಕ್ಕೋಸ್ಕರ – ಲಕ್ಷ್ಮಿ ಕೂಸು, ಅವರ ಮೊಮ್ಮಗಳಾಗಿರಬಹುದು ನೋಡಿ, ಅಷ್ಟು ಚಿಕ್ಕವಳು – ಅವಳ ಮಡಿಲಲ್ಲಿ ಕೈ ಇಟ್ಟರು.

ಗರುಡಮರಿ ಹೊರಗೆ ಬರಲು ಪ್ರಯತ್ನಪಟ್ಟು ಆಗದೆ ಕೋಪದಲ್ಲಿತ್ತು ಸ್ವಲ್ಪದರಲ್ಲೇ ಲಕ್ಷ್ಮಿಯ ಹೊಟ್ಟೆಯನ್ನು ಪರಚಬೇಕು. ಅಷ್ಟರಲ್ಲಿ ಇನ್ಸ್‌ಪೆಕ್ಟರ ಕೈ ಬಂದು ತಗುಲಿತೋ ಇಲ್ಲವೋ, ಯಾರೋ ಹುಡುಗಿಯರು ಬಾಲವೆಳೆಯುವುದಕ್ಕೆ ಬಂದರೆಂದು ಭ್ರಮೆಯಿಂದ ಸಿರ್ರೆಂದು ಹಾರಿ ಅವರ ಕೈಯನ್ನು ಚೆನ್ನಾಗಿ ಪರಚಿಟ್ಟಿತು. ಇನ್ಸ್‌ಪೆಕ್ಟರು ಸರ್ರನೆ ಹಿಂದಕ್ಕೆ ಎಳೆದುಕೊಂಡರು.
ಗರುಡಮರಿಯ ಉಗುರನ್ನು ಅದರ ಕೈಲಿ ಪರಿಚಿಸಿಕೊಂಡರು ಬಲ್ಲರೆಂದು ನಾನು ಮೊದಲೇ ಹೇಳಿದ್ದೇನೆ. ಅಂದು ಇನ್ಸ್‌ಪೆಕ್ಟರಿಗೆ ಅದರ ಪರಿಚಯ ಉಂಟಾಯಿತು, "ಇದೇನು ಸ್ಕೂಲಯ್ಯಾ, ನಿಮ್ಮದು? ಆ ಹುಡುಗಿ ಕೋಪಿಸಿಕೊಂಡು ಹೋದಳು. ಈ ಹುಡುಗಿಯ ಹತ್ತಿರ ಬೆಕ್ಕಿನ ಮರಿ. ಇದೇನಪ್ಪಾ ಇದು?" ಎಂದು ಅವರೂ ಮೇಷ್ಟರನ್ನು ಕೇಳಿದರು.

ಮೇಷ್ಟರು, "ಮಹಾಸ್ವಾಮಿ, ನಾನು ಪಡುತ್ತಿರುವ ಕಷ್ಟವನ್ನು ಆ ದೇವರು ಬಲ್ಲ. ಹುಡುಗಿಯರು ದೊಡ್ಡವರಾದರೆ ಅವರಿಗೆ ಕೋಪ ಹೆಚ್ಚಾಗುತ್ತದೆ, ತುಟಿ ಪಿಟಕ್ಕೆನ್ನ ಬಾರದು. ಪಾಠವನ್ನೇ ಓದುವುದಿಲ್ಲ. ಸ್ಕೂಲಿನಲ್ಲೂ ನಿಲ್ಲುವುದಿಲ್ಲ.

ಚಿಕ್ಕವರಾದರೆ ಬೆಕ್ಕಿನಮರಿ. ಅದು ಬೇಡಮ್ಮ ಎಂದರೆ ಸ್ಕೂಲಿಗೆ ಬರುವುದಿಲ್ಲ ಮಹಾಸ್ವಾಮಿಯವರು ಕೊಡುವ ಉಪ್ಪಿಗೆ ಎರಡೆಣಿಸಬಾರದೆಂದು ಕೆಲಸ ಮಾಡುತ್ತಿರುವುದಾಗಿದೆ, ಮಹಾಸ್ವಾಮಿ ತಾವೇ ನೋಡೋಣವಾಯಿತು. ಈ ಸ್ಕೂಲಿನಲ್ಲಿ ಪಾಠ ಹೇಳಿ ನನ್ನ ಎದೆಗೂಡು ಒಣಗಿಹೋಯಿತು, ಮಹಾಸ್ವಾಮಿ," ಎಂದರು. ಇನ್ಸ್‌ಪೆಕ್ಟರು, "ಅಯ್ಯಾ, ನಿಮಗೆಷ್ಟು ಸಂಬಳ"? ಎಂದು ಕೇಳಿದರು.
ಮೇಷ್ಟರು, "ಒಂದು ತಿಂಗಳು ದುಡಿದರೆ ಹತ್ತು ರೂಪಾಯಿ," ಎಂದರು. "ಈ ಹೊತ್ತು ಬರೆದು ಹಾಕುತ್ತೇನೆ ಸುಮ್ಮನಿರಿ, ಹನ್ನೆರಡು ರೂಪಾಯಿಗೆ ಪ್ರಮೋಷನ್ ಆಗುವಹಾಗೆ," ಎಂದು ಇನ್ಸ್‌ಪೆಕ್ಟರು ಹೇಳಿದರು. ಅಂದಿಗೆ ಸ್ಕೂಲು ಮುಗಿಯಿತು.

ಮೂರು ದಿನದ ಹಿಂದೆ ನಮ್ಮ ಮೇಷ್ಟರು ನಮ್ಮ ಮನೆಗೆ ಬಂದಿದ್ದರು. ನಾನು ಇಲ್ಲಿಗೆ ಬರುವ ವೇಳೆಯಲ್ಲಿ ಹೋಗಿಬರುತ್ತೇನೆಂದು ಹೇಳುವುದಕ್ಕೇ ಹೋಗಿದ್ದೆ. ಅವರು "ಅಮ್ಮಯ್ಯ, ನೀನು ಒಳ್ಳೆ ಗಂಡನನ್ನು ಮದುವೆಯಾಗುತ್ತಿಯ ಎಂದು ಹೇಳಿದ್ದೆ. ಹಾಗೆಯೇ ಆಯಿತು. ನಿಮ್ಮ ಮನೆಗೆ ಯಾವಾಗಲಾದರೂ ಬರುತ್ತೇನೆ. ಜ್ಞಾಪಕವಿರಲಮ್ಮ." ಎಂದು ಹೇಳಿದ್ದರು. ಮೂರು ದಿನದ ಹಿಂದೆ ಬಂದರು. ನಮ್ಮ ಯಜಮಾನರಿಗೆ ಹೇಳಿ ತನಗೆ ಪ್ರಮೋಷನ್ ಮಾಡಿಸಬೇಕೆಂದು ನನ್ನನ್ನು ಕೇಳಿದರು. ನಮ್ಮ ಯಜಮಾನರಿಗೆ ಹೇಳಿದೆ. ಅವರು ಆಗಲಿ ಎಂದರು. ನಮ್ಮ ಮೇಷ್ಟರ ವಿಷಯವನ್ನು ತಿಳಿಸುವುದಕ್ಕಾಗಿ ಈ ಕತೆಯನ್ನು ಅವರಿಗೆ ಹೇಳಿದೆ. ಅವರು ಬಹಳ ನಕ್ಕರು. ಅಯ್ಯೋ ಪಾಪ, ಎಂದು ಹೇಳಿ ಅವರಿಗೆ ಸಂಬಳ ಹೆಚ್ಚು ಮಾಡಿಸಿದರು. ಈಗ ಹುಕುಂ ಆಯಿತಂತೆ. ಮೇಷ್ಟರು ಬಂದಿದ್ದಾಗ "ಸೀತಮ್ಮ, ನೀನು ಏನು ಸಹಾಯ ಮಾಡಿದರೂ ಅವಳೇನೂ ಅನುಭವಿಸುವ ಹಾಗಿಲ್ಲ," ಎಂದರು. ಅವಳು ಯಾರು ಎಂದು ಕೇಳುವಂತಿಲ್ಲ; ಈಗಿನವರಿಗೆ "ಅವಳು" ಎನ್ನುವವರು ಹೆಚ್ಚಾಗಿರಬಹುದು: ಹಿಂದಿನ ಕಾಲದವರಿಗೆ "ಅವಳು" ಒಬ್ಬಳೇ. "ಅವಳು ಅನುಭವಿಸುವ ಹಾಗಿಲ್ಲ" ಎಂದರೂ. ನಾನು "ಯಾಕೆ ಮೇಷ್ಟರೆ"? ಎಂದೆ. ಅವರು "ಅಮ್ಮಯ್ಯ, ಅವಳು ತೀರಿ ಹೋದಳು. ಒಂದು ಹೆಣ್ಣು ಕೂಸನ್ನು ಬಿಟ್ಟು ಹೋಗಿದ್ದಾಳೆ ಅದನ್ನು ನೋಡಿಕೊಳ್ಳಬೇಕು" ಎಂದು ಕಣ್ಣೀರು ಸುರಿಸಿಕೊಂಡು "ಕಷ್ಟದಲ್ಲೇ ಹೋದಳು ತಾಯಿ. ಈಗ ಇದ್ದಿದ್ದರೆ ಒಳ್ಳೆ ಸೀರೆಯನ್ನು ತೆಗೆದುಕೊಡುತ್ತಿದ್ದೆ. ಉಟ್ಟು ಸಂತೋಷಪಡುತ್ತಿದ್ದಳು. ನಾನು ಕೇಳಿಬರಲಿಲ್ಲ," ಎಂದರು. ನಾನು ವ್ಯಸನದಿಂದ ಏನೂ ಹೇಳಲಾರದೆ ಸುಮ್ಮನೆ ಇದ್ದೆ. "ಅವಳ ಪ್ರೀತಿ ಬಹಳ ಪ್ರೀತಿ ಸೀತಮ್ಮ. ಕೊನೆಗೆ ನನ್ನ ಕಾಲನ್ನು ಹಿಡಿದುಕೊಂಡು ನಾನು ಹೋಗುತ್ತೇನೆ. ನನ್ನ ಮೇಲೆ ಏನೂ ಕೋಪವನ್ನು ಇಟ್ಟುಕೊಳ್ಳಬೇಡಿ. ನಿಮಗೆ ಕಷ್ಟವಾಗುವ ಹಾಗೆ ಮಾಡಿದೆ ಎಷ್ಟೋ ಸಲ ಎಂದಳು. ನಾನು ನನ್ನಪ್ಪ. ನನಗೆ ನೀನು ಏನು ಕಷ್ಟವನ್ನೂ ಕೊಡಲಿಲ್ಲ, ನನ್ನಿಂದ ನೀನು ಯಾವ ಸುಖವನ್ನೂ ಪಡೆಯಲಿಲ್ಲ' ಎಂದೆ. 'ನಿಮಗೆ ತಿಳಿಯದು, ನಾನು ಸುಖವಾಗಿಯೇ ಇದ್ದೆ. ಅದು ಆಗ ನನಗೆ ತಿಳಿಯಲಿಲ್ಲ. ಈಗ ನಿಮ್ಮನ್ನು ಬಿಡುವ ಕಾಲ ಬಂತು, ಈಗ ತಿಳಿಯಿತು' ಎಂದಳು. ಅವಳ ಪ್ರೀತಿ ಒಳ್ಳೆಯ ಪ್ರೀತಿ ಸೀತಮ್ಮ. ಆ ನಿಷ್ಕಾಪಟ್ಯವೋ ತಾಯಿ. ಆಡುವುದು ಸ್ವಲ್ಪ ಒರಟು ಮಾತು; ಮನಸ್ಸು ಬೆಣ್ಣೆಯಂತಹ ಮನಸ್ಸು. ನಿಷ್ಕಾಪಟ್ಯಕ್ಕೆ ಹೇಳುತ್ತೇನೆ. ಆ ಇನ್ಸ್‌ಪೆಕ್ಟರು ಬಂದ ದಿನ ಜ್ಞಾಪಕ ವಿದೆಯೇ ನಿನಗೆ? ಆ ದಿನ 'ಇನ್ಸ್‌ಪೆಕ್ಟರು ಪ್ರಮೋಷನ್ ಕೊಡುತ್ತಾರೆ' ಎಂತ ಹೇಳಿದೆ. ಎಲ್ಲಾವನ್ನು ಕೇಳಿ. 'ಅವರು ನಾನು ಒಬ್ಬ ಹುಡುಗಿ ಎಂದುಕೊಂಡು ನನ್ನಂತಹವರಿಗೆ ಪಾಠ ಹೇಳುವ ಕಷ್ಟಕ್ಕೋಸ್ಕರ ಎಂತ ಪ್ರಮೋಷನ್ ಕೊಟ್ಟಾರು, ನಿಜವನ್ನು ಹೇಳಿಬಿಡಿ ಎಂದಳು. 'ಅವರು ನಿನ್ನನ್ನು ಬಲಿತ ಹುಡುಗಿ ಎಂದದ್ದು ಬೇರೆ ಯಾರ ಕಿವಿಗಾದರೂ ಬಿದ್ದೀತು ಎಂದು ಗಾಬರಿಯಾಗಿದ್ದಾರೆ' ಎಂದೆ. ಥೇ ಅವರಿಗೆ ಬುದ್ಧಿ ಇಲ್ಲ. ಹುಡುಗಿಯರ ಸ್ಕೂಲಿನಲ್ಲಿ ಹಗೆಲ್ಲಾ ಮಾತನಾಡುವುದೇ? ಹ್ಯಾಗೋ, ಅವರು ಎಂತಹವರೋ ನಮಗೇನು? ನಾನು ಬಂದದ್ದನ್ನು ಇರುವ ಮಾತು ಇರುವ ಹಾಗೆ ಹೇಳಿ, ನಾನು ಓದುವ ಹುಡುಗಿಯಲ್ಲ ಎಂದು ತಿಳಿಸಿಬಿಡಿ' ಎಂದಳು. ಸೀತಮ್ಮ, ಹೇಳಿಯೇ ಬಿಟ್ಟೆ. ಇನ್ಸಪೆಕಟರು ಮೊದಲು ಸ್ವಲ್ಪ ಕೋಪಿಸಿಕೊಂಡು ಆಮೇಲೆ ಘೊಳ್ಳೆಂದು ನಕ್ಕರು. ನಕ್ಕು, 'ಆಗಲಯ್ಯ ಮೇಷ್ಟರೆ, ಆಕೆ ನಿಮ್ಮ ವಿದ್ಯಾರ್ಥಿಯೆಂದು ಹನ್ನೆರಡು ರೂಪಾಯಿಗೆ ಶಿಫಾರ್ಸು ಮಾಡಿದೆ. ಹೆಂಡತಿ ಎಂದಿದ್ದರೆ ಹದಿನೈದು ರೂಪಾಯಿಗೆ ಮಾಡುತ್ತಿದ್ದೆನಯ್ಯ. ಆಕೆ ನಿಮ್ಮ ಹೆಂಡತಿಯೇ? ಅಯ್ಯೋ ನಮ್ಮಪ್ಪ' ಎಂದರು. ಅವರೇನು ಬಲ್ಲರು ಪಾಪ? ನಮ್ಮ ಮೇಷ್ಟರು ಮಾತನ್ನು ಮುಗಿಸಿ ಸ್ವಲ್ಪ ಯೋಚಿಸುತ್ತಾ ಕುಳಿತರು.ಯಾರ ಜೀವನದ ವಿಚಾರವನ್ನೂ ಯಾರು ಬಲ್ಲರು?

*****

ನಾಲ್ಕು ಮೊಳ ಭೂಮಿ

–ಚದುರಂಗ

ಅಂಚೆಯ ಪೇದೆ "ಮನಿಯಾರ್ಡರ್, ಸಾರ್," ಎಂದು ಕೂಗಿದುದು ಅವನಿಗೆ ಕೇಳಿಸಲಿಲ್ಲ. ಅವನ ಮನಸ್ಸು ಬಿಚ್ಚಿದ ಕಾಗದದ ಸುರುಳಿಯಾಗಿತ್ತು. ಮನೆಯಲ್ಲಿ ಹೆಂಡತಿಯಿಲ್ಲ ; ಹೃದಯದೊಳಗೆ ನಲವಿಲ್ಲ. ವ್ಯಾಜ್ಯದ ಕಟ್ಟುಗಳನ್ನು ಮೇಜಿನ ಮೇಲೆ ಹರಡಿಕೊಂಡೇ ಅವನು ಯೋಚನೆಯ ವ್ಯೂಹದೊಳಗೆ ಸಿಕ್ಕಿದ್ದ. 'ಹಾಳು ಕೆಲಸ. ಇದಕ್ಕೆಂದಿಗೆ ಕೊನೆ ? ' ಎಂದು ಬೇಸರದ ಒಳದನಿ ಕೂಗಿ ಕೇಳುತ್ತಿತ್ತು. 'ವ್ಯಾಜ್ಯ, ವ್ಯಾಜ್ಯ, ವ್ಯಾಜ್ಯ..... ಈ ವ್ಯಾಜ್ಯಗಳಿಗೆ ಮುಕ್ತಾಯವೇ ಇಲ್ಲವೇ ?___ ಬೆಳಗಾಯಿತೆಂದರೆ ಕೋರ್ಟು, ಕಛೇರಿ ಈ ವ್ಯವಹಾರಗಳಲ್ಲೇ ಜೋಕಾಲಿಯಾಡುವುದೆಂದರೆ ಬದುಕಿಗೆ ಯಾವ ಸೊಗಸು ?' ಎಂದು ಆಂತರ್ಯ ತರ್ಕದ ತುರಿಮಣೆಯ ಮೇಲೆ ಘಾಸಿಗೊಂಡಿತ್ತು.

"ಮನಿಯಾರ್ಡರ್, ಸಾರ್__"

ನಾಲ್ಕು ಮೊಳ ಭೂಮಿ.... ನಾಲ್ಕೇ ನಾಲ್ಕು ಮೊಳ ಭೂಮಿಗಾಗಿ ಎಂಥೆಂಥ ಕಲಹಗಳು, ಎಂಥೆಂಥ ಅಕೃತ್ಯಗಳು ನಡೆಯುತ್ತವೆ ! ಮಾನವನ ಸುಗುಣಗಳು ಕರಗಿ ಹೋಗಿ ಸ್ವಾರ್ಥದ ಹುಚ್ಚುಕಳ್ಳಿ ತನಕೆ ತಾನಾಗಿ ಬೆಳೆಯುತ್ತದೆ.... ಸ್ವಾರ್ಥ !___ ಭೂಮಿಯ ಹಂಬಲ !!.... ನ್ಯಾಯಾಲಯಕ್ಕೆ ಬರುವ ವ್ಯಾಜ್ಯಗಳಲ್ಲಿ ಹೆಚ್ಚಿನ ಸಂಖ್ಯೆ ಭೂಮಿಗೇ ಸಂಬಂಧಪಟ್ಟವು...... ಭೂಮಿ_ಭೂಮಿ_ಭೂಮಿ.... ಎಂಥ ಹುಚ್ಚು ?

"ಮನಿಯಾರ್ಡರ್, ಸಾರ್...."

ಈಗಲೀಗ ಪೇದೆಯ ಸ್ವರ ಸ್ಪಷ್ಟವಾಗಿ ಕೇಳಿಬಂದಿತು. ಕುಳಿತಲ್ಲಿಯೆ ಬಾಗಿದ ಬೆನ್ನು ನೇರವಾಯಿತು. ಮನಿಯಾರ್ಡರ್ !.... ಎಲ್ಲಿಂದ ಬಂದಿವೆ ಈ ಮನಿಯಾರ್ಡರ್ ?

ಎದ್ದು ಹೋಗಿ ಬಾಗಿಲು ತೆರದ. ಮುಖವನ್ನು ಆಚಿಟವಾಳದ ಕಾಯಿಯ ಹಾಗೆ ಸೊಟ್ಟಗೆ ಮಡಿಕೊಂಡು ಅಂಚೆಯ ಪೇದೆ ಮನಿಯಾರ್ಡರ್ ಫಾರಮ್ಮನ್ನು ಮುಂದೆ ಹಿಡಿಯುತ್ತ,

"ಅಮ್ಮಾವರು ಇದ್ದಾರೆಯೇ ಸಾರ್ ? "

ಸೋಜಿಗದ ತೆರೆಯ ಮೇಲೆ ನಡೆದಂತಾಯಿತು. ತನ್ನ ಹೆಂಡತಿಗೆ ಮನಿಯಾರ್ಡರ್ ! __ ಅವಳಿಗೆಲ್ಲಿಂದ ಬಂದಿದೆ ?

"ಇಲ್ಲವೇ ಸಾರ್ ? "

"ಇಲ್ಲ. ಅವರ ತೌರಿಗೆ ಹೋಗಿದಾರೆ. "

"ಯಾವಾಗ ಬರ್‍ತಾರೆ, ಸಾರ್ ? "

"ನಾಳೆ ಬರ್‍ತೇನೆ , ಎಂತ ಪತ್ರ ಬರೆದಿದಾರಪ್ಪ."

"ಬರುವುದು ಖಂಡಿತವೇ ಸಾರ್ ? "

"ಬಹುಶಃ ತಪ್ಪಲಾರರು. "

"ಹಾಗಿದ್ದರೆ ಇದನ್ನ ನಾಡಿದ್ದು ತರ್‍ತೇನೆ ಸಾರ್ ? "

"ಆಗಲಿ" ಎಂದನು, ಪೇದೆ ನಾಲ್ಕು ಹೆಜ್ಜೆ ಹೋಗುವುದರೊಳಗೆ ಏನೋ ಯೋಚಿಸಿಕೊಂಡು, ಚಪ್ಪಾಳೆ ತಟ್ಟಿ "ಪೋಸ್ಟ್‌ಮನ್—" ಎಂದು ಕರೆದ. ಪೇದೆ ಮುಖವನ್ನು ಮತ್ತು ಕಸಿವಿಸಿ ಮಾಡಿಕೊಂಡೇ ಬಂದ, "ಎಲ್ಲಯ್ಯಾ— ಆ ಮನಿಯಾರ್ಡರ್ ಫಾರಮ್ಮನ್ನ ಇಲ್ಲಿ ಕೊಡು. ಅದು ಎಲ್ಲಿಂದ ಬಂದಿದೆ ಎಂತ ಓದಿ ನೋಡಿಕೊಳ್ತೇನೆ."ಪೇದೆ ಫಾರಮ್ಮನ್ನ ಬೇಸರದಿಂದಲೇ ತೆಗೆದುಕೊಟ್ಟ. ಸೂಕ್ಷ್ಮವಾಗಿ ಫಾರಮ್ಮಿನ ಅಕ್ಷರಗಳ ಮೇಲೆ ಅವನ ದೃಷ್ಟಿ ಓಡಾಡಿತು. ಒಡನೆಯೇ ಅವನಿಗೆ ವಿಚಿತ್ರವೆನಿಸಿತು. ತನ್ನ ಹೆಂಡತಿಗೆ ಮನಿಯಾರ್ಡರ್ ಬಂದಿದೆ, ಎಂದು ಮೊದಲೇ ಅವನಿಗೆ ಆಶ್ಚರ್ಯವಾಗಿತ್ತು. ಆ ಮನಿಯಾರ್ಡರ್ ಎಲ್ಲಿಂದ, ಏತಕ್ಕಾಗಿ ಬಂದಿದೆ, ಎಂದು ತಿಳಿದಮೇಲಂತೂ ಅವನು ಮೂಕನಾದ. ಸೋಜಿಗದ ಅಲೆ ಅವನನ್ನು ತನ್ನ ಮೇಲೆ ನಿಲ್ಲಿಸಿ, ಎತ್ತರ, ಎತ್ತರ ಎತ್ತಿಕೊಂಡು ಹೋಗಿ ಶಿಖರಾಗ್ರಕ್ಕೇ ಎಸೆದಂತಾಯಿತು.— ಹೆಂಡತಿಗೆ ಮನಿಯಾರ್ಡರ್ ಬಂದಿದೆ. ಇನ್ನೂರು ರೂಪಾಯಿಗಳಷ್ಟು ಭಾರಿ ಮೊಬಲಗು ! .... ಅದೂ ಅವಳು ಬರೆದ ಒಂದು ಕಥೆಗಾಗಿ !!

ಪೇದೆ ಹೊರಟು ಹೋಗಿ ಎಷ್ಟೋ ವೇಳೆ ಕಳೆದ ಮೇಲೂ ಆತ ಹಾಗೆಯೇ ಸ್ತಂಭೀಭೂತನಾಗಿ ನಿಂತಿದ್ದ.... ಒಂದು ಕಥೆಗೆ ಇನ್ನೂರು ರೂಪಾಯಿ !....ಅದೂ ಕನ್ನಡ ಭಾಷೆಯಲ್ಲಿ !!.... ತಾನು ಕೋರ್ಟಿನಲ್ಲಿ ಐದು ಕೇಸುಗಳನ್ನು ನಡೆಸಿದರೂ ಅಷ್ಟು ಹಣ ಗಳಿಕೆಯಾಗದು.... ಕಾಲ ಸಹಜವಾಗಿಯೂ ಅತಿ ತೀವ್ರಗತಿಯಲ್ಲಿ ಪರಿವರ್ತನೆಗೊಳ್ಳುತ್ತಿದೆ. ಕೆಲವು ವರ್ಷಗಳ ಹಿಂದೆ ಕನ್ನಡ, ತಾಯಿಯಿಲ್ಲದ ತಬ್ಬಲಿ. ಅದನ್ನು ಕೇಳುವವರೇ ಇಲ್ಲ. ಒಂದು ಸಾವಿರ ಪ್ರತಿಗಳು ಖರ್ಷಾಗಬೇಕಾದರೆ ಏಳೆಂಟು ವರುಷ. ಆದರೆ ಇಂದು ? ನಾಲ್ಕೈದು ಸಾವಿರ ಪ್ರತಿಗಳನ್ನು ಅಚ್ಚು ಹಾಕುವ ಸಾಹಸವನ್ನು ಪ್ರಕಟನಕಾರರು ಮಾಡುತ್ತಿದಾರಂತೆ. ಅಷ್ಟು ಪ್ರತಿಗಳು ಹೆಚ್ಚೆಂದರೆ ಎರಡು ವರ್ಷಗಳಲ್ಲಿ ಪೂರ್ತಿಯಾಗಿ ಮಾರಾಟವಾಗುತ್ತವಂತೆ.... ಹಿಂದೆಯೂ ಕಥಾಸ್ಪರ್ಧೆಗಳು ನಡೆಯುತ್ತಿದ್ದವು. ಅವುಗಳ ಪ್ರಥಮ ಬಹುಮಾನ ಉಪಚಾರದ, ಬೆನ್ನು ತಟ್ಟುವ ಮಾತು. ಆದರೆ ಈಗ ನಡೆಯುವ ಕಥಾ ಸ್ಪರ್ಧೆಗಳು ನೂರಾರು ರೂಪಾಯಿಗಳ ಬಹುಮಾನ ಕೊಡುವ ಯೋಗ್ಯತೆ ಪಡೆದಿವೆ....

ಯಾರೋ ಕಕ್ಷಿಗಾರರು ಬಂದರು. ಅವರುಗಳ ಅಹವಾಲು ಕೇಳಿ, ತಿಳಿದುಕೊಂಡು ಅವರಿಗೆ ಆಡಬೇಕಾದ ಮಾತು ಆಡಿ ಅವರನ್ನು ಕಳಿಸಿ ಕೊಟ್ಟು, ಬಾಕಿಯಾಗಿದ್ದ ಇನ್ನೂ ಕೆಲವು ರೆಕಾಡುಗಳನ್ನು ಪರಿಶೀಲಿಸಿ, ಊಟಕ್ಕೆದ್ದ. ಹೋಟಲಿನ ಊಟ ಏಕೊ ರುಚಿಸಲಿಲ್ಲ. ಪ್ರಾಯಶಃ ಮಾರನೆಯ ದಿನವೇ ಬರಲಿದ್ದ ನಲ್ಲೆಯ ಆಗಮನ ಇದಕ್ಕೆ ಕಾರಣವಿರಬಹುದು. ಅಂತೂ ಹೇಗೊ ಊಟದ ಶಾಸ್ತ್ರ ಮುಗಿಸಿ ಮಲಗುವ ಕೋಣೆಗೆ ನಡೆದ. ಆ ದಿನ ಕೋರ್ಟಿಗೆ ರಜವಿದ್ದುದರಿಂದ ವಿರಾಮ, ಮುಗಿಯದ ರಸ್ತೆಯಾಗಿತ್ತು. ಹೋಗಿ ಮಂಚದ ಮೇಲೆ ಉರುಳಿಕೊಂಡ. ಮತ್ತೊಮ್ಮೆ ಕೆಲಸವಿಲ್ಲದ ಮನಸ್ಸು ಆಲೋಚನೆಯ ಸರೋವರದಲ್ಲಿ ಈಜತೊಡಗಿತು.... ತನ್ನ ಹೆಂಡತಿಗೆ ಬಹುಮಾನ !.... ಕಥಾಸ್ಪರ್ಧೆಯಲ್ಲಿ ಅವಳು ಬರೆದ ಒಂದು ಕಥೆಗೆ ಪ್ರಥಮ ಸ್ಥಾನ !!.... ಅವನ ಹೃದಯ ಮುದಗೊಂಡು ಅರಳಿದ ಹೂವಾಯಿತು. ಚಿತ್ತ ನೆನಪಿನ ಕುದುರೆಯೇರಿ ಹೊರಟಿತು...... ಹಿಂದೆ ವಿವಾಹವಾದ ತರುಣದಲ್ಲಿ, ಅವರಿಬ್ಬರ ನಡುವೆಯೂ ನಡೆದ ಇಂದು ಸಂಗತಿಯ ಸ್ಮೃತಿ ಹಠಾತ್ತನೆ ಜಾಗ್ರತವಾಯಿತು—

ಒಂದು ಮಧ್ಯಾಹ್ನ— ಹೀಗೇ ಕೋರ್ಟಿಗೆ ರಜವಿದ್ದ ಒಂದು ಮಧ್ಯಾಹ್ನ. ಭೋಜನ ಮುಗಿಸಿ ತಾನು ನಿದ್ದೆ ಹೋಗಿದ್ದ. ಮಗ್ಗಲು ಸೇರಿದ್ದ ತನ್ನಾಕೆಯೂ ತನ್ನಂತೆ ನಿದ್ದೆ ಮಾಡುವಳೆಂದು ಯೋಚಿಸಿದ್ದ. ಆದರೆ ನಿದ್ದೆಯ ಆಲಿಂಗನದಿಂದ ಮುಕ್ತನಾಗಿ ಎದ್ದಾಗ ಪಕ್ಕದಲ್ಲಿಲ್ಲದುದನ್ನು ಕಂಡು ಚಕಿತನಾದ. ನಿಶ್ಯಬ್ದವಾಗಿ ಎದ್ದು ಮನೆಯನ್ನೆಲ್ಲಾ ಅರಸಿದ. ಅವಳು ತನ್ನ ಕೋಣೆಯಲ್ಲಿ ಏನನ್ನೋ ಬರೆಯುವುದರಲ್ಲಿ ತಲ್ಲೀನಳಾಗಿದ್ದಳು. ಅವನ ವಿಸ್ಮಯಕ್ಕೆ ಉಪ್ಪರಿಗೆ ಬಂದಂತಾಯಿತು. ನಿದ್ದೆ ಮಾಡದೆ ಅವಳು ಏನನ್ನು ಬರೆಯುತ್ತಿರಬಹುದು ?.... ತಂದೆಗೊ, ಅಣ್ಣನಿಗೊ ಪತ್ರ ಬರೆಯುತ್ತಿರಬಹುದೇ ?

ಅವನು ಕೆಮ್ಮಿದ ಸದ್ದು ಕೇಳಿ ಅವಳು ಹೊರಳಿ ನೋಡಿದಳು. ಭಾವ ಸಮಾಧಿಯಿಂದ ಎಚ್ಚೆತ್ತವರಂತೆ ಇತ್ತು ಅವಳ ನೋಟ. ಸಮಿಪಕ್ಕೆ ಹೋಗಿ "ನೀನೆಲ್ಲಿ ಹೊರಟುಹೋದೆಯೊ, ಎಂತ ದಿಗಿಲಾಗಿತ್ತು," ಎಂದು ನಕ್ಕ. ಅವಳ ಕಣ್ಣುಗಳೂ ನಗುತ್ತಿದ್ದವು.

"ನೀವೂ ಸರಿ. ನಾನೆಲ್ಲಿ ಹೋಗ್ತೇನೆ ? "

"ಅದೇನು ಬರೀತಾ ಇದೀಯೆ ?— ಪತ್ರವೋ"

"ಹೌದು. ಪ್ರೇಮಪತ್ರ," ಎನ್ನುತ್ತ ತುಂಟತನವನ್ನು ಕುಡಿಗಣ್ಣಿನಿಂದ ಚೆಲ್ಲಿದಳು.

"ಪ್ರೇಮಪತ್ರ !— ಯಾರಿಗೆ ಎಂತ ಕೇಳಬಹುದೆ ?" ಅವನೂ ಚೆಲ್ಲಾಟವಾಡುತ್ತಿದ್ದ.

ಅದಕ್ಕುತ್ತರವಾಗಿ, ಬಲಹಸ್ತದ ಬೆರಳುಗಳನ್ನು ಮೋಹಕವಾಗಿ ತಿರುವುತ್ತ, ಸಾಭಿನಯಪೂರ್ವಕ ಅವಳು.

"ಯಾ_ರಿ_ಗೊ...." ಎಂದಳು. ಅದರೊಡನೆ ಕಂಡೂ ಕಾಣದಂತೆ ನಕ್ಕಾಗ ಅವಳ ಶರೀರ ಸುಳಿಗಾಳಿಗೆ ಬಳುಕುವ ತಾವರೆಯ ದಂಟಿನಂತೆ ಅಲುಗಾಡಿತು.

ಅವಳ ಹುಡುಗಾಟಿಕೆ ಅವನಿಗೆ ಯಾವಾಗಲೂ ಪ್ರಿಯವಾದುದು. ಅದಕ್ಕೆ ಉಚಿತವಾದ ಪ್ರತಿಫಲ ಕೊಟ್ಟು, ಏನು ಬರೆದಿರಬಹುದೆಂದು ಮೇಜಿನ ಮೇಲೆ ಬಾಗಿ ನೋಡಿದ.

"ಏನಿದು ?...... ಪ್ರೇಮಪತ್ರ_ಸಣ್ಣಕಥೆ...... ಓ, ಕಥೆ ಬರೀತಾ ಇದೀಯೋ ! ಯಾವಾಗಿನಿಂದ ಹಿಡೀತು ಈ ಗೀಳು ನಿನಗೆ ? "

"ಯಾಕ್ರೀ ಗೀಳು ಅಂತೀರಾ, ಕಥೆ ಬರೆಯೋದು ಗೀಳೇ ? "

"ಒಂದು ಅರ್ಥದಲ್ಲಿ ಅದು ಗೀಳೇ."

"ಹೇಗೆ ?"

"ಕಥೆ ಎಂದರೆ ಕಗ್ಗ. ಅದರಿಂದ ಯಾರಿಗೆ ಪ್ರಯೋಜನ ?"

"ಪ್ರಯೋಜನವಾಗುವುದಾದರೆ ಒಂದು ಕೆಲಸ ಮಾಡಬೇಕು, ಇಲ್ಲದಿದ್ದರೆ ಕೂಡದು ಎಂತಲೊ. ನಿಮ್ಮ ಅಭಿಪ್ರಾಯ ? "

"ಹೌದು ನಿಷ್ಪ್ರಯೋಜಕ ಕಾರ್ಯದಲ್ಲಿ ನನಗೆ ಆಸಕ್ತಿಯಿಲ್ಲ."

"ಭೇಷ್, ಭೇಷ್ ವಕೀಲಿ ವೃತ್ತಿಗೆ ಯುತ್ತವಾದ ರೀತೀಲಿ ಮಾತಾಡ್ತಾ ಇದ್ದೀರಿ, ಪರವಾಗಿಲ್ಲ."

"ನೋಡಿದೆಯಾ, ನನ್ನ ಮಾತನ್ನು ನೀನು ಸರಿಯಾಗಿ ಅರ್ಥಮಾಡಿ ಕೊಳ್ಳಲಿಲ್ಲ. ಕಥೆಗೂ ಜೀವನಕ್ಕೂನಿಕಟ ಸಂಬಂಧವಿರಬೇಡವೇ ನೀನೇ ಹೇಳು. ವಿಪುಲವಾಗಿ ಈಗ ಪ್ರಕಟವಾಗ್ತಾ ಇರುವ ಕಥೆಗಳು ಕನ್ನಡ ಜನಪದದ ಬದುಕಿನ ಅಂಚನ್ನಾದರೂ ಮುಟ್ಟವೆಯೇ ?.... ಅದಕ್ಕಾಗಿ ಅಷ್ಟು ಕಠೋರವಾಗಿ ನುಡಿದೆ ಅಷ್ಟೆ.... ನನ್ನ ರಾಣಿ ಕಥೆ ಬರೀತಾಳೆ ಅಂದರೆ ನನಗೆ ಸಂತೋಷವಿಲ್ಲವೆ ? ನಿನಗೆ ನಿಜ ಹೇಳಬೇಕಾದರೆ ನಾನು ಹೆಮ್ಮೆಯಿಂದ ಹಿಗ್ಗಿ ಹೋಗಿದೇನೆ."

ಅವನ ರಾಣಿಯೂ ಆ ಮಾತು ಕೇಳಿ ಹಿಗ್ಗಿ ಹೋದಳು.

"ಆದರೆ ನನ್ನ ರಾಣಿಯೂ ಇತರರಂತೆ ಕಗ್ಗ ಬರೆದರೆ ನನಗೆ ಪ್ರಿಯವಾಗದು. ಬಾಳನ್ನು ಕಣ್ಣು ತೆರೆದು ನೋಡಿ, ವಿವೇಚಿಸಿ, ಅರ್ಥಮಾಡಿಕೊಂಡು ಬರೆಯಬೇಕು. ಆಗ_ ಕಥೆ ಜೋಳ್ಳಾಗುವುದಿಲ್ಲ; ನಾದವಿಲ್ಲದ ಕೊಳಲಾಗುವುದಿಲ್ಲ_ ಎಂತ ನನ್ನ ಭಾವನೆ. "

"ನವಾಬರ ಆಜ್ಞೆಯನ್ನು ಪಾಲಿಸಲು ಪ್ರಯತ್ತಿಸುತ್ತೇನೆ" ಎನ್ನುವಾಗ ಅವಳ ಮೇಲ್ತುಟಿಯ ಅಂಚು ಹುಸಿನಗೆಯಿಂದ ಬಿಲ್ಲಿನಂತೆ ಮೇಲೆದ್ದು ಬಾಗಿತು.

— ಈ ಸಂಗತಿ ನಡೆದ ಮೇಲೆ ವಕೀಲಿವೃತ್ತಿ ಅವನ ಕಾಲವನ್ನೂ ಬುದ್ಧಿಯನ್ನೂ ಪೂರ್ಣವಾಗಿ ಉಪಯೋಗಿಸಿಕೊಂಡಿತ್ತು. ಹೆಂಡತಿ ಬರೆಯುತ್ತಿದಾಳೆಯೇ ? ಏನನ್ನು ಕುರಿತು ಬರೆಯುತ್ತಿದಾಳೆ ?

ಅವಳು ಬರೆಯುತ್ತಿರುವ ಕಥೆಗಳಲ್ಲಿ ಏನಾದರೂ ನವೀನತೆ ಮತ್ತು ಸತ್ವಗಳು ಅಡಕವಾಗಿವೆಯೇ ?— ಎಂದು ವಿಚಾರಮಾಡಿ ಅರಿಯಲು ಅವನಿಗೆ ಬಿಡುವೇ ಸಿಗಲಿಲ್ಲ.

ಯೋಚಿಸುತ್ತ, ಯೋಚಿಸುತ್ತ ಅವನು ಒಂದು ಮಗ್ಗಲಿನಿಂದ ಇನ್ನೊಂದು ಮಗ್ಗಲಿಗೆ ಹೊರಳಿದ. ಏನು ಮಾಡಿದರೂ ನಿದ್ದೆ ಬಾರದು. ಕೊನೆಗೆ ಬೇಸತ್ತು ಯಾವುದಾದರೂ ಪುಸ್ತಕವನ್ನೋದುವುದೆಂದು ಎದ್ದು ಹೋಗಿ ಪುಸ್ತಕದ ಕಪಾಟಿಗೆ ಕೈಯಿಟ್ಟು ತನಗೆ ಪ್ರಿಯವಾದ ಜಿನ್ ಕ್ರಿಸ್ ಟೋಫೆ ಕಾದಂಬರಿಯನ್ನು ತೆಗೆದುಕೊಂಡು ಹತ್ತಿರವೇ ಇದ್ದ ವಿರಾಮ ಕುರ್ಚಿಯ ಮೇಲೆ ಕುಳಿತ. ಆ ಹೊತ್ತಿಗೆಯ ಹಾಳೆಗಳನ್ನು ಮಗುಚಿದಾಗ ಒಳಗೆ ಮಡಿಸಿಟ್ಟ ಕೆಲವು ಹಾಳೆಗಳು ಕಂಡವು. ಕುತೂಹಲದಿಂದ ಆ ಹಾಳೆಗಳನ್ನು ಬಿಚ್ಚಿ ನೋಡಿದ. ಅವು ತನ್ನ ಹೆಂಡತಿ ಬರೆದ ಒಂದು ಕಥೆಯ ಮನುಸ್ಕೃತಿಯಾಗಿತ್ತು. ಕಥೆಯ ಹೆಸರು : ನಾಲ್ಕು ಮೊಳ ಭೂಮಿ.

ಸಿಳ್ಳು ಹಾಕಿ ಅವಳ ಕಥೆಯನ್ನು ಓದಲಾರಂಭಿಸಿದ—

ವೈಶಾಖದ ಸುಡುಬಿಸಿಲಿನ ಕಥಕ್ಕಳಿ. ಅದರ ರಿಂಗಣಗುಣಿತಕ್ಕೆ ಮರದ ಎಲೆಗಳ ಹಸುರು ಹಣ್ಣಿಗುತ್ತಿದೆ. ಆ ಹೊತ್ತಿನಲ್ಲಿ ಕಾಳಿಂಗಯ್ಯ ಶಿರಬಾಗಿ ಉಳುತ್ತಿದಾನೆ. ಪಕ್ಕದಲ್ಲೇ ಅವನನ್ನು ಅನುಸರಿಸಿ ಹೆಜ್ಜೆ ಹಾಕುವ ಅವನ ವಾಮನ ನೆರಳು. ಆ ಬೆಳಕಿನ ಝಳಕ್ಕೆ ಕಣ್ಣು ಕತ್ತಲಗುವುದು. ದೇಹಕ್ಕಂತೂ ಬೆವರಿನ ಕಾವೇರಿ ಸ್ನಾನ.

ನೇಗಿಲು ನಿಧಾನವಾಗಿ–ಆದರೆ ದೃಢವಾಗಿ–ಭೂಮಿಗೆ 'ತೆರೆ'ಯ ಬೈತಲೆಗಳನ್ನು ತೆಗೆಯುತ್ತ ಸಾಗಿದೆ. ನೇಗಿಲ ನೊಗಕ್ಕೆ ಕಟ್ಟಿದ ಬಿಳಿ ಬಣ್ಣದ ಎತ್ತುಗಳು, ಅವನ ಕಪ್ಪು ದೇಹ, ಆ ದೇಹಕ್ಕೆ ಸುತ್ತಿದ ಬಿಳಿಯ ತುಂಡಿನ ಪಂಚೆ, ಹಿಂಬದಿಗಿದ್ದ ಗುಡ್ಡದ ಸಾಲಿನ ಮಂಕು ನೀಲಿ–ಹಸುರಿನ ಹಿನ್ನಲೆಯಲ್ಲಿ ಆ ನೋಟವನ್ನು ದೂರದಿಂದ ನೋಡುವವರಿಗೆ, ಚಿತ್ರಪಟದಂತೆ– ಪಟದೊಳಗಿನ ಚಿತ್ರ ಚಲಿಸುವಂತೆ–ಅದು ತೋರುವುದು. ಆದರೆ ಆ ದೃಶ್ಯದ ಒಂದು ಅಂಶವಾಗಿದ್ದ ಕಾಳಿಂಗಯ್ಯನಿಗೆ ಮಾತ್ರ ಅದರ ಸೌಂದರ್ಯವನ್ನು ಸವಿಯುವುದು ಸಾಧ್ಯವಿರಲಿಲ್ಲ. ಅವನು ಕೇವಲ ಉಳುವ ಯಂತ್ರವಾಗಿದ್ದ. ಸೂರ್ಯನೇಳುವ ಮುನ್ನ ಎದ್ದು 'ಆರು' ಕಟ್ಟಿದನೆಂದರೆ ಹೊಲದಿಂದ ಅವನು ಮತ್ತೆ ಮನೆಗೆ ಮರಳುವುದು ಸಾಯಂಕಾಲವೇ !

ಕಾಳಿಂಗಯ್ಯ ಉಳುತ್ತಕಲೇ ಇದ್ದ. ಅವನ ಮನಸ್ಸು ಸಾಧಾರಣವಾಗಿ ನೀರಿಲ್ಲದ ಮಡಕೆಯಂತೆ ಬರಿದು. ಆದರೆ ಇಂದು ಮಾತ್ರ ಆ ಮಡಿಕೆಯಲ್ಲಿ ಚಿಂತೆಯ ಸಣ್ಣ ಕಲ್ಲೊಂದು ಬಿದ್ದಿದೆ. ಚಿಂತೆಗೆ ಕಾರಣ ನಾಲ್ಕು ಮೊಳ ಭೂಮಿ.

ನಾಲ್ಕು ಮೊಳ ಭೂಮಿ!

ಕೇವಲ ನಾಲ್ಕೇ ನಾಲ್ಕು ಮೊಳ ಭೂಮಿ!!

ಕಾಳಿಂಗಯ್ಯನ ಮುದಿಕಣ್ಣುಗಳ ದೃಷ್ಟಿ ಯಾವುದೋ ಅವ್ಯಕ್ತ ಭೀತಿಯ ಆಗರವಾದಂತಿತ್ತು.

ತಾನು ಚಿಕ್ಕವನಾಗಿದ್ದಾಗ ಹರಿಕಥೆ ದಾಸನೊಬ್ಬ ನೆರೆಹಳ್ಳಿಯಲ್ಲಿ ಕಥೆ ಮಾಡುತ್ತಿದ್ದಾಗ ನುಡಿದಿದ್ದ : ' ಭೂಮಿಗೆ ವಿಪರೀತವಾದ ಆಸೆ ಪಡಬೇಡಿ. ಅದರ ದೆಸೆಯಿಂದಲೇ ಕುರುವಂಶ ನಿರ್ನಾಮವಾಯಿತು.'

ಅಹುದಲ್ಲವೆ ? ಪಾಂಡವರ ಪರವಾಗಿ ಶ್ರೀಕೃಷ್ಣ ಪರಮಾತ್ಮ ಕೊನೆಗೆ ಐದೇ ಐದು ಗ್ರಾಮಗಳನ್ನು ಪಾಂಡವರಿಗೆ ಬಿಟ್ಟುಕೊಟ್ಟರೂ ರಾಜಿಮಾಡಿಸುವುದಾಗಿ ಆಶವಾಸನೆ ಕೊಡಲಿಲ್ಲವೆ? ಆಗಲೂ ಅವಿವೇಕಿ

ದುರ್ಯೋಧನ ಸೊಕ್ಕಿನಿಂದ 'ಐದು ಗ್ರಾಮಗಳ ಮಾತು ಹಾಗಿರಲಿ, ಐದು ಹೆಜ್ಜೆ ಭೂಮಿಯನ್ನೂ ಸಹ ಪಾಂಡವರಿಗೆ ಕೊಡಲಾರೆ' ಎಂದು ಹಠ ಹಿಡಿದು ಸರ್ವನಾಶ ಮಾಡಿಕೊಳ್ಳಲಿಲ್ಲವೆ ?

ಹಾಗೆಯೇ ತನ್ನ ವರ್ತನೆಯೂ ಮುಂದಿನ ದಿನಗಳಲ್ಲಿ ಅವಿಚಾರದ ಜಾರುಬಂಡೆಯ ಮೇಲೆ ಹೆಜ್ಜೆಯಿಟ್ಟಿತ್ತು. ಹೌದು, ಕೇವಲ ನಾಲ್ಕು ಮೊಳ ಭೂಮಿಗಾಗಿ, ನಾಲ್ಕೇ ನಾಲ್ಕು ಮೊಳ ಭೂಮಿಗಾಗಿ.

ಕೌರವರ ಕಥೆಯೇನೋ ಎಂದೋ ಮುಗಿಯಿತು. ಆದರೆ ತನ್ನ ಕಥೆ ? ಇದರ ಮುಕ್ತಾಯ ಹೇಗೊ ?ತಾನು ಮಾಡಿದ ಯಃಕಶ್ಚಿತ ಕೆಲಸ ಯಾವ ದಂಡವನ್ನು ತೆಗೆದುಕೊಳ್ಳಲಿರುವುದೊ ?

ಕಾಳಿಂಗಯ್ಯ ಉಳುತ್ತಲೇ ಇದ್ದ. ನೇಗಿಲು ಮುಂದುವರಿದಂತೆ ಭೂಮಿ ಬಾಯಿತೆರೆದಂತಾಗಿ ಎರಡೂ ಪಕ್ಕಕ್ಕೆ ಕೆಂಪು ಮಣ್ಣಿನ ರಾಶಿರಾಶಿ ಬೀಳುತ್ತ ಹೋಗುವುದು. ಅವನು ಅದನ್ನು ನೋಡುತ್ತಲೇ ನಡೆದಿದ್ದ. ಓ, ಕುಂಕುಮದಂತಹ ಮಣ್ಣು ! ಅವನ ಕಣ್ಣಿಗೆ ಅದೆಷ್ಟು ಹಿತಕರ ! ಅದನ್ನೇ ದಿಟ್ಟಿಸುತ್ತಿದ್ದಂತೆ ಒಮ್ಮೊಮ್ಮೆ ತನ್ನ ಮನೆಯನ್ನೇ , ಕೊನೆಗೆ ಲೋಕವನ್ನೇ ಅವನು ಮರೆಯುತ್ತಿದ್ದುದುಂಟು.

ನಾಲ್ಕು ಮೊಳ ಭೂಮಿ. ಇನ್ನೊಬ್ಬನಿಗೆ ಸೇರಿದ ಭೂಮಿ, ಅದಕ್ಕೆ ತಾನು ಆಸೆಪಟ್ಟಿದ್ದ— ಇನ್ನೊಬ್ಬನ ಹೆಂಡತಿಗೆ ಆಸೆಪಟ್ಟಂತೆ (ಅಹಲ್ಯೆಗೆ ಆಸೆ ಪಟ್ಟ ಇಂದ್ರ).... ಪಕ್ಕದ ಭೂಮಿ ತೆಂಗಿನಮರದ ಹಟ್ಟಿ ದೇವಪ್ಪನದು. ಅದರಲ್ಲಿ ತಾನು ನಾಲ್ಕು ಮೊಳ ಭೂಮಿಯನ್ನು ಬಲಾತ್ಕಾರದಿಂದ, ಅಕ್ರಮವಾಗಿ ಉತ್ತು 'ಒತ್ತುವರಿ' ಮಾಡಿಕೊಂಡಿದ್ದ. ದೇವಪ್ಪನಿಗಿದ್ದ ಜಮೀನೆಲ್ಲಾ ಒಟ್ಟು ಮೂರು ಎಕರೆ ಚಿಲ್ಲರೆ ಆಗುವುದು ;- ಹೆಚ್ಚು ಕಮ್ಮಿ ತನ್ನ ಜಮೀನಿನಷ್ಟೇ. (ಇದು ಮೈಸೂರಿನ, ಕನ್ನಡ ದೇಶದ, ಭಾರತದ ಬಹುಸಂಖ್ಯೆಯ ರೈತರ ಜಮೀನಿನ ಕಥೆ) ಇಂಥ ಅಲ್ಪ ಜಮೀನಿನಲ್ಲೂ ಆದ ಈ ಆಕ್ರಮಣದಿಂದ ದೇವಪ್ಪ ದಿಕ್ಕು ಕೆಟ್ಟ ನಾವಿಕನಂತಾದ. ಬೈಗಳ ಮಳೆ ಸುರಿಸಿದ. ಕೊನೆಗೆ ತಾಳಲಾರದೆ ಇಳಿಜಾರಿನಲ್ಲಿ ಬ್ರೇಕ್ ಕೆಟ್ಟು ಹೋದ ಮೋಟಾರಿನಂತೆ ಜಗಳಕ್ಕೇ ಬಂದ. ಕೈಗೆ ಕೈ ಮಿಲಾಯಿಸಿತು, (ಭೀಮ-ದುರ್ಯೋಧನರ ಕಾಳಗ) ಕಾಳಿಂಗನು ಭೀಮಕಾಯ. ಅವನಿಗೇ ಜಯ ಲಭಿಸಿತು. ದೇವಪ್ಪ ಗ್ರಾಮಪಂಚಾಯಿತಿಗೆ ದೂರುಕೊಟ್ಟ. ನಮ್ಮ ಹಳ್ಳಿಗಳಲ್ಲಿ ಗ್ರಾಮ ಪಂಚಾಯಿತಿಯ ನ್ಯಾಯವೆಂದರೆ ಬಲಾಢ್ಯನ ಬಾಯಿಗೇ ಬೀಳುವ ದೋಸೆ. ನ್ಯಾಯ ಕಾಳಿಂಗನಂತೆಯೇ ಆಯಿತು. ಅದಕ್ಕೂ ಧೃತಿಗೆಡದೆ ದೇವಪ್ಪ ಅಮಲ್ದಾರರಿಗೆ ದೂರುಕೊಟ್ಟ. ಮೋಜುಂದಾರರು ಅಳತೆಗೆ ಬಂದರು. ಹೊಲಕ್ಕೆ ಅಳತೆಗೆ ಹೋಗುವ ಮುನ್ನ ಕಾಳಿಂಗ ಮೋಜುಂದಾರ ದೇವರಿಗೆ ಮನೆಯಲ್ಲಿ ಉಪ್ಪಿಟ್ಟು, ಕಾಫಿ ಪೂಜೆ ಮಾಡಿ, ಐದು ರೂಪಾಯಿಯ ನೈವೇದ್ಯ ಮಾಡಿದ. ಈ ವಿಶೇಷ ಪೂಜೆಯಿಂದ ತೃಪ್ತರಾದ ಮೋಜುಂದಾರರು ಕಾಳಿಂಗಯ್ಯ 'ಒತ್ತುವರಿ' ಮಾಡಿದ್ದ ನಾಲ್ಕು ಮೊಳ ಭೂಮಿಯ ಪ್ರದೇಶವನ್ನು ಉದ್ದಕ್ಕೂ ಅಳತೆ ಮಾಡಿ, ಅವನ ಜಮೀನಿಗೇ ಸೇರಿಸಿ, ಕಲ್ಲು ನೆಡಿಸಿಬಿಟ್ಟರು.....

ಕಾಳಿಂಗಯ್ಯ ಉಳುತ್ತಲೇ ಇದ್ದ, ಮೇಲೆ ಉರಿಯುವ ಸೂರ್ಯ ; ಒಳಗೆ ಕುದಿಯುವ ವಿಷಾದದ ಲಾವಾರಸ—

..... ಕಲ್ಲು ನೆಡಿಸಿಬಿಟ್ಟರು. ದೇವಪ್ಪನ ಎದೆಗೇ ಗುರಿಯಿಟ್ಟು ಹೊಡೆದ ಶಿಲೆ. ದೇವಪ್ಪ ದಿಗ್ಭ್ರಾಂತನಾದ. ಸೂರ್ಯ, ಚಂದ್ರರಷ್ಟೇ ಶಾಶ್ವತವೆಂದು ಅವನು ನಂಬಿದ್ದ ಭೂಪ್ರದೇಶ ಇನ್ನು ಅವನದಲ್ಲ. ದೇಶದ ಕಾನೂನು ಹಾಗೆ ಹೇಳಿಬಿಟ್ಟಿದೆ. ಮುಂದೇನು ಮಾಡುವುದು ? ಬುದ್ಧಿ ಕುಂಠಿತವಾಗಿದೆ. ಎದುರಿಗೆ ವಿಸ್ತಾರವಾಗಿ ಹರಡಿದ ಶೂನ್ಯದ ಕಡಲು. ದೇವಪ್ಪ ಕೊರಗಿನಿಂದ ಹಾಸಿಗೆ ಹಿಡಿದ.

ಕಾಳಿಂಗಯ್ಯ ಉಳುತ್ತಲೇ ಇದ್ದ. ಅವನ ಕಾಲುಗಳು ಸಣ್ಣಗೆ ನಡುಗುತ್ತಿದ್ದವು—

.... ಹಾಸಿಗೆ ಹಿಡಿದ. ಪುನಹ ಮೇಲೆ ಏಳಲೇ ಇಲ್ಲ.

ಕಾಳಿಂಗಯ್ಯನ ಕಾಲುಗಳೂ ಮೊಳೆ ಹೊಡೆದಂತಾಗಿ ಮುಂದೆ ಏಳಲೇ ಇಲ್ಲ. ಅವನ ನೇತ್ರಗಳು ಮಿಂಚು ಕಂಡಂತೆ ಮಂಜಾದವು. ತಲೆ ಗಿರಗಿರನೆ ಸುತ್ತುವ ಬುಗುರಿ—

"ನನ್ನ ನೆಲ ತಕ್ಕೊಂಬುಟ್ಟಿಯಾ ?.... ಆ ಮಣ್ಣಿಗೆ ನನ್ನ ರಕ್ತ ಸುರಿಸಿವ್ನಿ ಕಣೋ....ಪಾಪಿ, ದೇವರು ನಿಂಗೆ ಏಳಿಗೆ ಕೊಟ್ಟಾನಾ ?– ನನ್ನ ವಡವೇಗೆ ಅಪೇಕ್ಸೆ ಮಾಡಿ ನನ್ನ ಜೀವ ಕೊಂದು ಬುಟ್ಟಿದ್ದೀಯೆ. ಇರಲಿ. ನನ್ನ ಮಗ ನಿಚ್ಚಯವಾಗಿ ಸೇಡು ತೀರಿಸಿಕೋತ್ತಾನೆ, ನೆಪ್ಪಿಡು. ರಕ್ತಕ್ಕೆ ರಕ್ತ ಕೆಡವಿ ಆ ನೆಲಾನ ತಿರುಗ ಸಂಪಾದ್ನೆ ಮಾಡ್ತಾನೆ.... ಹುಸಾರು, ಗೆದ್ದೆ ಅಂದುಕೊ ಬ್ಯಾಡ. ನಿನ್ನ ಕತೆ ಮುಗಿದ ಹೊರತೂ ನನ್ನ ಕತೆ ಮುಗಿಯಾಕಿಲ್ಲ ; ಗೊತ್ತಾಯಿತಾ ? "

ಸತ್ತ ದೇವಪ್ಪನ ಧ್ವನಿಯೇ ನಿಸ್ಸಂದೇಹವಾಗಿಯೂ. ಮುದುಕ ಕಾಳಿಂಗಯ್ಯ ಥರಥರನೆ ನಡುಗಲಾರಂಭಿಸಿದ. ಅವನ ಕಣ್ಣು ಹೆದರಿ ಹೆದರಿ ಪಕ್ಕದ ಹೊಲದಲ್ಲೇ ಉಳುತ್ತಿದ್ದ ದೇವಪ್ಪನ ಮಗನ ವಜ್ರಕಾಯವನ್ನು ನೋಡಿತು.... "ನಾನು ಮುದುಕನಾದೆ. ಮಕ್ಕಳೂ ಇಲ್ಲ. ದೇವಪ್ಪನ ಮಗ ಈಗ ಬಲವಾಗಿದ್ದಾನೆ. ಅವನು ಖಂಡಿತವಾಗಿಯೂ ಸೇಡು ತೀರಿಸಿಕೊಳ್ತಾನೆ. ಆ ಜಮೀನನ್ನು ನಾನು ಮಾಡಿದ ಹಾಗೇ ಜುಲುಮೆಯಿಂದ ಉತ್ತು ಮತ್ತೆ ತನ್ನ ವಶಪಡಿಸಿಕೊಳ್ತಾನೆ. ವಶಪಡಿಸಿಕೊಂಡೇ ಬುಡ್ತಾನೆ. ಸಕ್ತಿ ಇದ್ದೋನ ಕಾರ್ಯ. ಮುಗಿದು ಹೋಯ್ತು. ಎಲ್ಲಾ ಮುಗಿದು ಹೋಯ್ತು.... ಆ ಮೋಜುಂದಾರನಿಗೆ ಅನ್ಯಾಯವಾಗಿ ಐದು ರೂಪಾಯಿ ಕಳೆದೆನಲ್ಲಾ ?.... ಅಯ್ಯೋ, ಕೆಟ್ಟೆ, ಕೆಟ್ಟೆ...."

ಕಾಳಿಂಗಯ್ಯ ತೂರಾಡಿ, ತೂರಾಡಿ ಕೆಳಗೆ ಬಿದ್ದುದನ್ನು ಕಂಡು ದೇವಪ್ಪನ ಮಗ 'ಆರು' ನಿಲ್ಲಿಸಿ ಧಾವಿಸಿ ಬಂದ. ಕಾಳಿಂಗಯ್ಯನಿಗೆ ಪ್ರಜ್ಞೆ ಹೋದಂತಿತ್ತು. ಒಡನೆಯೇ ಕೆರೆಗೆ ಓಡಿಹೋಗಿ ನೀರು ತಂದು ಶುಶ್ರೂಷೆ ಮಾಡಿದ. ಸ್ವಲ್ಪ ಹೊತ್ತಿನ ಮೇಲೆ ಕಾಳಿಂಗಯ್ಯ ನಿಧಾನವಾಗಿ ಕಣ್ಣು ತೆರೆದ. ದೇವಪ್ಪನ ಮಗನ ಮುಖವನ್ನು ಕಂಡು ಮೃತ್ಯುದರ್ಶನ ಮಾಡಿದವನಂತಾದ. (ಗರುಡನನ್ನು ನೋಡಿದ ಹಾವು) ಬಿಟ್ಟ ಕಣ್ಣು ಥಟ್ಟನೆ ಮುಚ್ಚಿಹೋಯಿತು. ಬಾಯಿ ದುರ್ಬಲವಾಗಿ ಆಡಿತು : "ನಾಕು ಮೊಳ ಭೂಮಿ– ನಾಕೇ ನಾಕು ಮೊಳ ಭೂಮಿ.... ಕೋಪ ಮಾಡಕೋ ಬ್ಯಾಡ. ಸಂಸಾರ ಸಾಕಕ್ಕೆ ಆ ಕೆಲಸ ಮಾಡಿಬಿಟ್ಟೆ ಕನಪ್ಪಾ–ಸಂಸಾರ ಸಾಕಕ್ಕೆ...." ದೇವಪ್ಪನ ಮಗ ಏನೊಂದೂ ಅರ್ಥವಾಗದೆ ಮಿಕಿಮಿಕಿ ನೋಡುತ್ತಿದ್ದ. ಮುಚ್ಚಿದ ಕಣ್ಣು ತೆರೆಯಲೇ ಇಲ್ಲ. –ಕಥೆಯನ್ನು ಓದಿ ಲಾಯರು ತಲೆದೂಗಿದ. ಆದರೆ ಏಕೊ ಅವನಿಗೆ ಸಂಶಯವಾಯಿತು. ಮನುಸ್ಕೃತಿ ಗಂಡಸಿನ ಕೈ ಬರಹದಂತಿತ್ತು. ಸೂಕ್ಷ್ಮವಾಗಿ ಪರೀಕ್ಷಿಸಿದಾಗ ಕೊನೆಯಲ್ಲಿ ಪುಟ್ಟದಾಗಿ 'ಸಂಜೀವಿ' ಎಂದು ಬರೆದಿತ್ತು. ಅದನ್ನು ಶಾಯಿಯಿಂದ ಚೆನ್ನಾಗಿ ಹೊಡೆದಿತ್ತು. ಲಾಯರ ಸಂಶಯ ದೃಢವಾಯಿತು.... ಸಂಜೀವ—ತನ್ನ ಹೆಂಡತಿಯ ಸೋದರಮಾವ !.... ಅವನು ಮೊನ್ನೆ ಮೊನ್ನೆ ಮೃತನಾದ. ಅವನು ಲಲಿತಳನ್ನು ಬಹುವಾಗಿ ಪ್ರೀತಿಸುತ್ತಿದ್ದನೆಂದು ಅವಳೇ ಆಗಾಗ ಹೇಳುತ್ತಿದ್ದಳು. ಲಲಿತ ಹಾಗಾದರೆ ಅವನ ಕಥೆಗಳನ್ನೇ ತನ್ನ ಹೆಸರಿನಲ್ಲಿ ಪ್ರಕಟಿಸುತ್ತಿದ್ದಳೆ ? ನಾಲ್ಕು ಮೊಳ ಭೂಮಿ !. ಇದು ಅವನು ಬರೆದಕಥೆಯೇ ?

*****

ಕವಿ ಪರಿಚಯ

ಚದುರಂಗ (1916–1998) : ಇವರ ಪೂರ್ಣ ಹೆಸರು ಸುಬ್ರಮಣ್ಯರಾಜ್ ಅರಸ್. ಚದುರಂಗ ಇವರು ಕಾವ್ಯ ನಾಮ 1916 ಜನವರಿ 01ರಂದು ಮೈಸೂರಿನ ಕಲ್ಲಹಳ್ಳಿಯಲ್ಲಿ ಅರಸು ಮನೆತನದಲ್ಲಿ ಹುಟ್ಟಿದರು. ಕತೆ, ಕಾದಂಬರಿ, ನಾಟಕ ಮುಂತಾದ ಪ್ರಕಾರಗಳಲ್ಲಿ ಗಣನೀಯ ಗ್ರಂಥಗಳನ್ನು ನೀಡಿರುವ ಅಪರೂಪದ ಲೇಖಕರು. ಶವದ ಮನೆ, ಅಂಕ, ಇಣುಕು ನೋಟ, ಮೀನಿನ ಹೆಜ್ಜೆ, ಬಣ್ಣದ ಬೊಂಬೆ, ನಾಲ್ಕು ಮೊಳ ಭೂಮಿ ಇವು ಕಥಾ ಸಂಕಲನಗಳು. ಉಯ್ಯಾಲೆ, ವೈಶಾಖ, ಸರ್ವಮಂಗಳ ಕಾದಂಬರಿಗಳು.

ಕತೆಯಾದಳು ಹುಡುಗಿ

–ಯಶವಂತ ಚಿತ್ತಾಲ

‘Yet if nothing else, each time a new baby is born there is a possibility of reprieve. Each child is a new being, a potential prophet , a new spiritual prince, a new spark of light, precipitated into the outer darkness. Who are we to decide that it is hopeless?

- R.D. Laing In politics of experience

ಬನ್ನಿ ಕುಳಿತುಕೊಳ್ಳಿ, ಒಂದು ಕತೆ ಹೇಳುತ್ತೇನೆ. ಯಾಕೆ ಹೇಳುತ್ತೇನೋ ಗೊತ್ತಿಲ್ಲ. ನಿಮಗೆಲ್ಲ ಕೇಳಬೇಕು ಅನ್ನಿಸಿದ್ದರಿಂದಲೇ ಹೇಳುತ್ತಿದ್ದೇನೆ ಎಂದು ಇಟ್ಟುಕೊಳ್ಳಿ. ಕತೆಯನ್ನು ಇಲ್ಲಿಂದಲೇ ಆರಂಭಿಸಲಿಕ್ಕೆ ಕಾರಣ ಅದನ್ನು ಎಲ್ಲಿಂದಲೂ ಆರಂಭಿಸಬಹುದು ಎನ್ನುವದೇ.

ಹದಿಮೂರು ವರುಷದ ಜಾನಕಿ ತೀರಿಕೊಂಡಳು. ಅವಳ ರಕ್ತಕ್ಕೆ ಕ್ಯಾನ್ಸರ್ ಆಗಿತ್ತು. ಮುಂಬಯಿಯ ಆಸ್ಪತ್ರೆಯೊಂದರಲ್ಲಿ ಹದಿಮೂರೇ ದಿನ ಹಾಸಿಗೆಯಲ್ಲಿದ್ದವಳು ಒಂದು ದಿನ ಹಾಸಿಗೆಯಲ್ಲಿದ್ದವಳು ಒಂದು ದಿನ ನುಸುಕಿನಲ್ಲಿ ಬೆಳಕನ್ನು ಚಿಳಿಮಿಳಿಗೊಳ್ಳುತ್ತಿರುವಾಗ ಕಣ್ಣು ಮುಚ್ಚಿದಳು. ನನ್ನನ್ನು ಉಸಿರುಗಟ್ಟಿಸುವ ಮಟ್ಟಿಗೆ ಕಾಡುತ್ತಿದ್ದದ್ದು ಮುಗ್ದ ಜಾನಕಿ ಸಾಯುವ ಕೆಲವೇ ತಾಸುಗಳ ಮೊದಲು ಮಾಡಿದ – ನನಗಿನ್ನೂ ಅರ್ಥವಾಗಿರದ – ತೀರ ಸರಳವಾದ ಒಂದು ಪ್ರಾರ್ಥನೆ: ಅಣ್ಣಾ ನನ್ನ ಬಗ್ಗೆ ಒಂದು ಕತೆ ಬರೆಯುತ್ತೀಯಾ? ಎಲ್ಲಾ ಬಿಟ್ಟು ಈ ಕೋರಿಕೆ ಯಾಕೆ? ಅಂದೇ ಯಾಕೆ? ಇಡೀ ದಿನ ನಗುನಗುತ್ತ ನಗಿಸುತ್ತ ಇದ್ದವಳಿಗೆ ಡಾಕ್ಟರರಿಗೂ ಗೊತ್ತಿಲ್ಲದ್ದು ತಿಳದಿತ್ತೇ ಈಗಲೂ ನೆನೆದರೆ, ಕಣ್ಣ ಮುಂದೆ ನಿಲ್ಲುತ್ತಿದ್ದದ್ದು: ಎರಡು ಗಲ್ಲಗಳಲ್ಲಿ ಕುಳಿ ಮೂಡಿಸಿ, ಮುತ್ತುಗಳಂತಹ ಹಲ್ಲುಗಳ ಸಾಲುಗಳನ್ನು ತೋರಿಸಿ ನಗುವ ಅವಳ ಮೋರೆ, ನಗುವಾಗ ಕಣ್ಣುಗಳಲ್ಲಿ ನೀರಾಡುವ ಹೊಳಪು. ಚಿತ್ರ ಬಿಡಿಸಿದಂತಹ ಮೃದುವಾದ ತುಟಿಗಳನ್ನು ಬೇಕಷ್ಟೇ ಬಿಚ್ಚಿ ಬಂದಿತ್ತು, ಮುಗ್ಧತೆಯೇ ಹೆಪ್ಪುಗಟ್ಟಿ ಬಂದಂತಿದ್ದ ಚಿಕ್ಕ ಪ್ರಶ್ನೆ:

“ನನ್ನನ್ನು ನಿನ್ನ ಕತೆಯಲ್ಲಿ ಹಾಕುತ್ತೀಯಾ”? ನಾನು ಈ ಪ್ರಶ್ನೆಯಿಂದ ಚಕಿತನಾಗಿ ಕಣ್ಣರಳಿಸಿದಾಗ – “ ಆ ಕತೆಯಲ್ಲಿ ನಮ್ಮ ಮೇರಿಯನ್ನೂ ಹಾಕು. ಹಾಗೂ ಡಾಕ್ಟರ್ ಆನಂದರನ್ನೂ”? ಮೇರಿ ಜಾನಕಿಯನ್ನು ನೋಡಿಕೊಳ್ಳುತ್ತಿದ್ದ ನರ್ಸಳ ಹೆಸರು. ಡಾಕ್ಟರ್ ಹಾಗೂ ನರ್ಸ್ ಜಾನಕಿಯನ್ನು ತುಂಬ ಹಚ್ಚಿಕೊಂಡಿದ್ದರು.

ಕೊನೆ ಅಷ್ಟು ಹತ್ತಿರವಿರಬಹುದೆಂಬ ಕಲ್ಪನೆಯೇ ಇಲ್ಲದ ನಾನು ವಿಚಾರ ಮಾಡುವ ಮೊದಲೇ ಹೂಂ ಎಂದಿದ್ದೆನಷ್ಟೇ ಅಲ್ಲ, "ನೀನೇ ಮನೆಗೆ ಬಂದಮೇಲೆ ಏನೇನು ಬರೆಯಬೇಕೆನ್ನುವುದನ್ನು ಹೇಳು ಮಗೂ, ನಾನು ಬರೆದುಕೊಳ್ಳುತ್ತೇನೆ. ಆಗದೇ? ನಿನ್ನ ಹೆಸರಿನಲ್ಲೇ ಕತೆ ಪ್ರಕಟಿಸೋಣ" ಎಂದಿದ್ದೆ. ಆ ಗಳಿಗೆಯಲ್ಲಿ ಏನು ಹೇಳಬೇಕೆನ್ನುವುದು ತಿಳಿಯದೇ ಹಾಗೆ ಹೇಳಿರಬೇಕು. ಜಾನಕಿ ಮತ್ತೆ ಮಾತನಾಡಲಿಲ್ಲ, ಕ್ಷೀಣವಾಗಿ ಆದರೂ ತುಂಬ ಸುಂದರವಾಗಿ ನಕ್ಕಳು. ಅದೇ ಅವಳ ಕೊನೆಯ ಮಾತಾಗಿತ್ತು, ಕೊನೆಯ ನಗುವಾಗಿತ್ತು ಎಂಬುದು ಲಕ್ಷ್ಯಕ್ಕೆ ಬಂದದ್ದು ಮುಂದೆ, ಬಹಳ ದಿನಗಳ ನಂತರ, ಕತೆ ಬರೆಯಲು ಕೂತ ನಂತರವೇ. ಡಾಕ್ಟರರಿಗೂ ಈ ಅಂತ್ಯ ತೀರ ಅನಿರೀಕ್ಷಿತವಾದದ್ದಿರಬೇಕು: ಈ ರೋಗ ಗುಣವಾಗುವಂತಹದಲ್ಲವೆಂದು ಗೊತ್ತಿದ್ದೂ ಜರ್ಮನಿಯಿಂದ ಸದ್ಯವೇ ಬಂದ ಒಂದು ಹೊಸ ಔಷಧಿಯಲ್ಲಿ ಡಾಕ್ಟರರಿಗೆ ಭರವಸೆ ಇದ್ದಂತಿತ್ತು. ಸದ್ಯ ಚಾಲೂ ಇದ್ದ 'ಕ್ಲಿನಿಕಲ್ ಟೆಸ್ಟ್ಸ್' ಮುಗಿದದ್ದೇ ಈ ಔಷಧಿಯನ್ನು ಆರಂಭಿಸುವ ವಿಚಾರದಲ್ಲಿದ್ದವರ ಮೋರೆಯ ಮೇಲೆ ಹತಾಶಭಾವ ಒಡೆದು ಕಾಣಿಸುತ್ತಿತ್ತು. ಮುಗ್ಧ ನಿಶ್ಚಿಂತ ಮೋರೆಯ ಮೇಲೆ ಬಿಳಿಯ ಬಟ್ಟೆಯ ಮುಸುಕೆಳೆಯುವಾಗ ಸಾವಿನ ಅನುಭವವಿದ್ದ ಕಣ್ಣುಗಳಲ್ಲಿ ಕೂಡ ನೀರು ಕಲೆತಿತ್ತು. ಮೇರಿ ಹಾಗೂ ಅವಳ ಜೊತೆಗಾರರಂತೂ ಎಲ್ಲ ಸಂಕೋಚವನ್ನೂ ಬಿಟ್ಟುಕೊಟ್ಟು ಅತ್ತಿದ್ದರು. ಹದಿಮೂರು ವರ್ಷ ನನ್ನ ಬದುಕಿನ ಅನ್ಯೋನ್ಯ ಅಂಗವಾಗಿದ್ದ ಜಾನಕಿ ಇವರೊಡನೆಯ ಹದಿಮೂರೇ ದಿನಗಳ ಸಹವಾಸದಲ್ಲಿ ಇವರೆಲ್ಲರಿಗೂ ಹತ್ತಿರದವಳಾಗಿಹೋಗಿದ್ದಳು. ಎಲ್ಲದರ ಪ್ರಸ್ತುತತೆಯನ್ನೇ ಪ್ರಶ್ನಿಸಿಬಿಡುವ ಪ್ರಶ್ನಾರ್ಥಕ ಚಿಹ್ನೆಯ ಆಕಾರದಲ್ಲಿ ಹೊದಿಕೆ ಹೊದ್ದ ದೇಹದ ಬಳಿ ನನ್ನನ್ನು ಬಿಟ್ಟು ರೂಮನ್ನು ಬಿಡುವಾಗ ಕಣ್ಣಲ್ಲಿ ಕಲೆತ ನೀರನ್ನು ತೋರಿಸುವ ಮನಸ್ಸಿಲ್ಲದವರ ಹಾಗೆ ನನ್ನ ಬೆನ್ನ ಹಿಂದಿನಿಂದ ಹೆಗಲ ಮೇಲೆ ಕೈಯಿಟ್ಟು: "Be brave; she was a brave girl" ಎಂದವರೇ ಅಲ್ಲಿಂದ ಹೊರಟುಹೋಗಿದ್ದರು, ಡಾ. ಆನಂದ.ಹೆದರಬೇಡಿ, ನನ್ನ ಜಾನಕಿಯ ಬಗ್ಗೆ ಕತೆ ಹೇಳಲು ಹೊರಟಿಲ್ಲ. ನೀವು ಮೆಚ್ಚಲು ಕಲಿತುಕೊಂಡ ಕತೆಯಲ್ಲಿ ಜಾನಕಿಗೆ, ಅವಳ ಸಾವಿಗೆ, ಅದನ್ನೆದುರಿಸುವುದರಲ್ಲಿ ಅವಳು ವ್ಯಕ್ತಪಡಿಸಿದ ಧೈರ್ಯಕ್ಕೆ ಸ್ಥಾನವಿಲ್ಲ ಎನ್ನುವುದನ್ನು ನಾನು ಬಲ್ಲೆ. ಯಾಕೆಂದರೆ ಈ ಸಾವಿಗೆ, ಈ ದುಃಖಕ್ಕೆ ಯಾವ ಸಾಮಾಜಿಕ ಮಹತ್ವವೂ ಇಲ್ಲ ಎಂದು ನಮಗೆಲ್ಲ ಹೇಳಿಕೊಟ್ಟು ಜಾಣರನ್ನಾಗಿ ಮಾಡಿದ ನಮ್ಮ ಜಾಣರನ್ನು ನಾನು ಮರೆತಿಲ್ಲ. ಪ್ರಸ್ತುತದ ಹಂಗು ತೊರೆಯದೇ ಬರೆಯಬೇಕೆನ್ನುವ ಅವರ ವೀರಾವೇಶದ ವಾಣಿ ನನ್ನ ಕಿವಿಗಳಲ್ಲಿನ್ನೂ ಮೊಳಗುತ್ತಿರುವಾಗ ಒಬ್ಬ ಮುಗ್ಧ ಜಾನಕಿಯ ನಿಷ್ಪಾಪ ಸಾವಿನ ಬಗ್ಗೆ ಬರೆಯುವ ಬೇಜವಾಬ್ದಾರಿಗೆ ಯಾಕೆ ಕೈ ಹಾಕಿಯೇನು.

ಆದರೂ ಅವಳನ್ನು ನೀವೂ ಕಂಡಿದ್ದರೆ...? ವಸಂತ ಋತುವಿನಲ್ಲಿ ಕೆಂಪು ಚಿಗುರೆಲೆ ಬಿಡುವ ಮಾವಿನ ಸಂತ ಉತ್ಸಾಹವನ್ನು; ಬಿಸಿಲಲ್ಲಿ ನೊರೆ ಮಿಂಚಿಸುತ್ತ ತೆರೆ ಎಬ್ಬಿಸಿ ಕುಣಿದಾಡುವ ಸಾಗರದ ಉನ್ಮತ್ತ ಉತ್ಸಾಹವನ್ನು; ಸದ್ದಿಲ್ಲದೇ ಹೊಟ್ಟೆಯೊಳಗಿನ ಸಂತೋಷವನ್ನು ಹೂವಾಗಿಸುವ ಗುಲಾಬಿಯ ಲವಲವಿಕೆಯನ್ನು ನೆನಪಿಗೆ ತರುವ ಜಾನಕಿಯನ್ನು ನೀವೂ ಭೇಟಿಯಾಗಿದ್ದರೆ...? ಡಾಕ್ಟರರಿಗೆ ಅವಳು ಕೇಳಿದ ಪ್ರಶ್ನೆಗಳನ್ನು ನೀವೂ ಕೇಳಿದ್ದರೆ...? ಬೇಸರ ಬಂದಿತು ಅಲ್ಲವೇ? ಬಲ್ಲೆ ಜಾಣರು ಒದಗಿಸಿದ ಆದಿಯಲ್ಲಿ ಇವಾವುಗಳ ಉಲ್ಲೇಖವೇ ಇಲ್ಲ ಎಂಬುದನ್ನು. ನಮ್ಮೆಲ್ಲರ ಮನಸ್ಸಿನಲ್ಲಿ ದೊಡ್ಡದೊಡ್ಡ ಪ್ರಶ್ನೆಗಳನ್ನು ಉರಿಯಲು ಹಚ್ಚಿದವರ ಮೋರೆಗಳ ಮೇಲಿನ ಆತಂಕಕ್ಕೆ ಕಾರಣವಾದ ಒಜ್ಜೆಭಾರದ ತಾತ್ವಿಕ, ಬೌದ್ಧಿಕ ಕಾಲಜಿಗಳ ಪರಿಚಯವಿದ್ದ ನಾನು ಜಾನಕಿ ಸಾಯುವ ಗಳಿಗೆಯಲ್ಲೂ ಬದುಕಿನ ಬಗ್ಗೆ, ಸಾವಿನ ಬಗ್ಗೆ ಡಾಕ್ಟರರಿಗೆ ಕೇಳಿದ ಪ್ರಶ್ನೆಗಳ ಪ್ರಸ್ತಾಪ ಏಕೆ ಮಾಡಲಿ? 'ಸಾವಿಗೆ ಹೆದರಿ ಸಾವನ್ನೇ ಬಿತ್ತುತ್ತಿರುವವರ ದುಷ್ಟ ಅಹಂಕಾರಕ್ಕೆ ಪುಟ್ಟ ಜಾನಕಿ ಕೇಳಿದ ಪ್ರಶ್ನೆಗಳು ಎಂದಾದರೂ ತಟ್ಟಿಯಾವೇ'? ಎಂದು ಡಾಕ್ಟರರು ತೆಗೆದ ಉದ್ಗಾರ.... ಅದೆಲ್ಲ ಬೇಡವೆನ್ನುತ್ತೀರಾ? ನಿಮಗೂ ಹೆದರಿಕೆಯಾಗುತ್ತಿರಬೇಕು ಅಲ್ಲವೇ? ನಮ್ಮದೆಲ್ಲವೂ ಶಾಸ್ವತ ಎನ್ನುವಂತಹ ಅಹಂಭಾವವೇ ಮನಸ್ಸಿಗೆ ಹೆಚ್ಚು ಸಮಾಧಾನಕಾರಕ ಅಲ್ಲವೇ?

ಅದಕ್ಕೇ.... ಈ ಭಯಗಳನ್ನು ಮನಸ್ಸಿನಲ್ಲಿಟ್ಟುಕೊಂಡೇ, ಅದಕ್ಕಿಂತ ಹೆಚ್ಚಾಗಿ ನಮ್ಮ ಜಾಣರು ನಮಗೆಲ್ಲ ಒದಗಿಸಿದ ವಿಷಯ ಸೂಚಿಯನ್ನು ಕಣ್ಣಮುಂದೆ ಇಟ್ಟುಕೊಂಡೇ ಕತೆ ಬರೆಯಲು ಆರಂಭಿಸಿದೆ. ನನಗೆ ಅರಿವಾಗುವ ಮೊದಲೇ ಜಾನಕಿ ಇಲ್ಲಿಯದೇ ಜೋಪಡಪಟ್ಟಿಯೊಂದರಲ್ಲಿ ವಾಸಿಸುವ ಹುಡುಗಿಯಾಗಿದ್ದಳು. ಬಾಂದ್ರಾದಲ್ಲಿ – ಮಾಹೀಮ್ ಕಾಜ್ ವೇ ಹಾಗೂ ವಿಮಾನ ನಿಲ್ದಾಣಕ್ಕೆ ಹೋಗುವ ಹಾಯ್‌ವೇಗಳ ಕೂಟಸ್ಥಾನದ ಆದಿಬದಿಗಳಲ್ಲಿ – ಎದ್ದುನಿಂತ ಜೋಪಡಪಟ್ಟಿಗಳ ವರ್ಣನೆಯಿಂದ ಕತೆ ಆರಂಭವಾಗುತ್ತ ನೇರವಾಗಿ ಪ್ರಸ್ತುತದೊಡನೆ ಗುದುಮುರಿಗೆ ಹಾಕುತ್ತಿದೆ ಎನ್ನುವ ಸಮಾಧಾನ ಕೊಡುತ್ತಿರುವ ಗಳಿಗೆಯಲ್ಲೇ ಬರೆಯುತ್ತಿದ್ದ ಕೈ ತಂತಾನೆ ನಿಂತು ಬಿಟ್ಟಿತು. ದಿನವೂ ಆಫೀಸಿಗೆ ಹೋಗುವಾಗ ಬರುವಾಗ ಕಣ್ಣ ಪಟಲದ ಮೇಲೆ ಮೂಡಿ ಮೂಡಿ ಮಾಯವಾಗುತ್ತಿದ್ದ ನಿತ್ಯ ಪರಿಚಯದ ಈ ಪರಿಸರ ವಿಶೇಷ ಅತ್ಯಂತ ಕಾವ್ಯಾತ್ಮಕವಾದ ಗದ್ಯದಲ್ಲಿ ಮೂಡಿಬಂದು ತನ್ನೆಲ್ಲ ದುರಂತವನ್ನು ತೆರೆದು ತೋರಿಸುತ್ತ ನಿಂತುಬಿಟ್ಟಾಗಲೇ ನಾನು ತೊಡಗಿಸಿಕೊಂಡ ಉದ್ಯೋಗದ ಅರ್ಥವಾಯಿತೆನ್ನುವಂತೆ ಈವರೆಗೂ ಕೇಳಿಕೊಂಡಿರದ ಪ್ರಶ್ನೆ ಧುತ್ ಎಂದು ಇದಿರಾಯಿತು. ಇದೆಲ್ಲದರಿಂದ ನಾನು ಸಾಧಿಸಲು ಹೊರಟಿದ್ದೇನು? ಎರಡು ರಾತ್ರಿ ಸತತವಾಗಿ ಕೂತು ಬರೆದ ಈ ಕೃತಿ ಈ ಜೋಪಡಪಟ್ಟಿಗಳಿಗೆ ಏನೂ ಮಾಡಲಾರದ್ದೆಂದು ಗೊತ್ತಿದ್ದೂ ಇಂತಹ ದುರಂತ ಅವಸ್ಥೆಯನ್ನೂ ಕೂಡ ಒಂದು ಕಲಾಕೃತಿಯ ಕಚ್ಚಾಮಾಲನ್ನಾಗಿ ಉಪಯೋಗಿಸಿ ಏನು ಮಾಡುತ್ತಿದ್ದೇನೆ? ದೊಡ್ಡ ಪತ್ರಿಕೆಯೊಂದರಲ್ಲಿ ಅದರ ಪ್ರಕಟನೆ– ದೊಡ್ಡದೊಡ್ಡ ಅಕ್ಷರಗಳಲ್ಲಿ ಮುದ್ರಿಸಿದ ಹೆಸರಿನೊಂದಿಗೆ ಆ ಮೇಲೆ ಕನ್ನಡ ಸಾಹಿತ್ಯದಲ್ಲಿ ದೊಡ್ಡ ಕ್ರಾಂತಿ ಮಾಡಿದ ಮಾನದ ಸ್ಥಾನ ಕಥಾ ಸಾಹಿತ್ಯಕ್ಕೆ ಈವರೆಗೂ ಬಂದಿರದ ವಸ್ತುವನ್ನು ತಂದದ್ದರ ಬಗ್ಗೆ ಅದನ್ನು ಕಣ್ಣಿಗೆ ಕಟ್ಟುವಂತೆ ಹಿಡಿಯುವಷ್ಟು ಪಾರದರ್ಶಕವಾದ, ಸ್ಫಟಿಕದಷ್ಟು ಸ್ವಚ್ಚವಾದ ಹೊಸ ನುಡಿಕಟ್ಟಿನ ಸಾಧನೆಯ ಬಗ್ಗೆ ಇಂಥದ್ದರ ದಾರಿಕಾಯುತ್ತ ಕುಳಿತ ನಮ್ಮ ಜಾಣರ ಪ್ರಶಂಸೆ ಸಾವು ಬದುಕುಗಳ ಬಗೆಗಿನ ಮೂಲಭೂತವಾದ ಪ್ರಶ್ನೆಗಳಿಗೆ ಮಹತ್ವ ಇಲ್ಲವಾದ ಮೇಲೆ ಸೃಷ್ಟಿಕಾರ್ಯಕ್ಕೇ ಸಂಬಂಧಪಟ್ಟ ಈ ಪ್ರಶ್ನೆಗಳೇನು ಮಾಹ ಕಥೆಯನ್ನು ಪ್ರಕಟಿಸುವಾಗ ಕಾರ್ಲ್‌ಮಾರ್ಕ್ಸ್, ಎಂ. ಎನ್. ರಾಯ್ ಇಲ್ಲ ಜೇಪಿಯವರಿಗೆ ಅರ್ಪಿಸಿದರಾಯಿತು ಎಂದುಕೊಂಡಾಗ ನನ್ನ ವಿಚಾರದಿಂದ ನನಗೆ ಮುಜುಗರವಾಯಿತು. ಜಾನಕಿಯ ಕೊನೆಯ ಬಯಕೆಯನ್ನು ಪೂರೈಸಲೂ ಬರೆಯುವ ಕತೆಗೆ ಇಷ್ಟೊಂದು ಆತ್ಮಸಮರ್ಥನೆಯ ಆಡಂಬರವೇಕೆ? ಕೋನೆಗೂ ಕತೆ ಬರೆಯುತ್ತಿದ್ದದ್ದು ಜಾನಕಿಯ ಸಮಾಧಾನಕ್ಕೇ ತಾನೆ? ಕತೆ ಬರೆದು ಮುಗಿಸುವತನಕವೂ ಇನ್ನೆಂತಹ ವಿಚಾರವೂ ಬೇಡ...

ಶಬ್ದಗಳಲ್ಲಿ ಮೂಡಿಬಂದ ಜಾನಕಿಯನ್ನು ಕಂಡದ್ದೇ ನನಗೆ ಏಕಕಾಲಕ್ಕೆ ನಗು ಅಳು ಎರಡು ಬಂದವು. ಹದಿಮೂರು ವರುಷದ ನಿಷ್ಪಾಪ ಮಗುವಿನ ಸಾವು ನಿಮಗೆ ತಟ್ಟುವಂತೆ ಮಾಡಲು ಕೂಡ ಅವಳಿಗೆ ಕೊಡಬೇಕಾದ ವೇಷಭೂಷೆ ನಗಲು ಹಚ್ಚಿದರೂ ಕೊಡಬೇಕಾದ ಅವಶ್ಯಕತೆ ವಿಷಾದಕ್ಕೆ ಕಾರಣವಾಯಿತು. ಆಸ್ಪತ್ರೆಯಲ್ಲಿ ಕಾಟಿನ ಮೇಲೆ ಮಲಗಿದ್ದ – ಆಸ್ಪತ್ರೆಯವರೇ ಒದಗಿಸಿದ ರೋಗಿಗಳ ಸಮವಸ್ತ್ರ ಸುತ್ತಿಕೊಂಡ – ಅಸಾಹಾಯ ದೇಹ. ಹೆಸರು ಅಮುಖ್ಯ ಜಾತಿ, ಪಂಥ ಇಟ್ಟುಕೊಂಡ ನಂಬಿಕೆಗಳು ಆ ಗಳಿಗೆಗೆ ವ್ಯರ್ಥ. ಆಸ್ಪತ್ರೆಗೆ ಬಂದ ಉದ್ದೇಶವೊಂದೇ ಬದುಕಿರಬೇಕು. ಯಾಕೆ ಬದುಕಬೇಕು ಎಂಬ ಪ್ರಶ್ನೆ ಹುಟ್ಟುತ್ತಿರಲೇ ಇಲ್ಲ. ಹ್ಯಾಗೆ ಬದುಕಿರಬೇಕೆಂಬ ಪ್ರಶ್ನೆ ಕೂಡ ಹುಟ್ಟುವ ವಯಸ್ಸಲ್ಲ. ಅದೇ ವಯಸ್ಸಿನ ಎಷ್ಟೋಂದು ದೇಹಗಳು ಈ ಮೊದಲೇ ಅದೇ ಸಮವಸ್ತ್ರದಲ್ಲಿ ಮಲಗಿ ಎದ್ದಿದ್ದುವೋ ಜಾನಕಿಯ ಹಾಗೇ ಬದುಕುವುದು ಎಂದರೆ ಅಮ್ಮ– ಅಪ್ಪ, ಅಣ್ಣ – ತಂಗಿ, ಗೆಳೆಯ – ಗೆಳತಿ, ಟೀಚರ್, ಡಾಕ್ಟರ್ – ನರ್ಸ್, ಇವರ ಪ್ರೀತಿಯ ಬೆಚ್ಚಗಿನ ಕಾವು ಎಂದು ತಿಳಿದುಕೊಂಡಿದ್ದುವೋ ಅನುಭವಕ್ಕೆ ಬಂದ ಬಿಸಿ ಇನ್ನೂ ಅನುಭವಕ್ಕೆ ಬಂದಿರದ ಬರ್ಫದಂತಹ ತಂಪಿಗೆ ತಿರುಗುವ ಸಾಧ್ಯತೆಯ ಕಲ್ಪನೆ ಹುಟ್ಟಿಸಿದ ಭಯದಿಂದ ನಡುಗಿದ್ದುವೋ ಸಾವಿನ ನಿಷ್ಠುರ ಹಿನ್ನಲೆಯಲ್ಲೇ ಬದುಕಿನ ಅರ್ಥ ತಿಳಿಯುವ ತಾತ್ವಿಕ ತವಕದ ಈಚೆಯ ದಡದಲ್ಲಿ ಮಾತ್ರ ಹೆಪ್ಪುಗಟ್ಟಿದ ಆತಂಕ ಕಣ್ಣ ಮುಂದೆ ನಿಂತವಳು ಚಿಂದಿಯಾದ ಕಿರುಗಣೆ ಉಟ್ಟ ಪುಟ್ಟ ಹುಡುಗಿ.

ಕಿರುಗಣೆಯ ದಾರ ಸುತ್ತಿಕೊಂಡ ಸೊಂಟ ಎಷ್ಟೋಂದು ಸಪೂರವಾಗಿತ್ತೆಂದರೆ ಗೇಣಳತೆಯಿಂದ ಅಳೆದು ನೋಡಬೇಕೆನ್ನುವ ಕುತೂಹಲ ತಿಂಗಳುಗಟ್ಟಲೆ ಸ್ನಾನ ಕಂಡಿರದ ಕೂದಲು ಅಲ್ಲಲ್ಲಿ ಜಡೆಗಟ್ಟಿಯೂ ಕೆದರಿಕೊಂಡಿತ್ತು. ಗ್ರೀಜ್ ಹತ್ತಿದ ಹಾಗೆ ತಕತಕನೆ ಹೊಳೆಯುತ್ತಿದ್ದ ಮೋರೆಗೆ ಕಪ್ಪು ಮೆತ್ತಿಕೊಂಡಿತ್ತು. ಎವೆಯಿಕ್ಕದೇ ನಿಮ್ಮನ್ನೇ ನೋಡುತ್ತಿದ್ದ ಕಣ್ಣುಗಳಲ್ಲಿ ಮಾತ್ರ ಎಲ್ಲಿಲ್ಲದ ಹೊಳಪು. ಈ ಲೋಕಕ್ಕೆ ಸಂಬಂಧಪಟ್ಟದ್ದೇ ಅಲ್ಲ ಎನ್ನುವಂತಹ ಪ್ರಶ್ನಾರ್ಥಕ ದೃಷ್ಟಿ. ಅವಳ ಅಪ್ಪ – ಅಮ್ಮರನ್ನು ಮಾತ್ರ ಎಷ್ಟೋಂದು ಪ್ರಯತ್ನಪಟ್ಟರು ಚಿತ್ರಿಸಿಕೊಳ್ಳುವುದಾಗಲಿಲ್ಲ. ಜಂಗು ಹಿಡಿದ ತಗಡು, ತೂತು ಬಿದ್ದ ಚಾಪೆ ರಟ್ಟು ಮೊದಲಾದ ಆಯ – ಆಕಾರಗಳಿಲ್ಲದ ವಸ್ತುಗಳಿಂದ ಕಟ್ಟಿದ ಒಂದು ಹರಕು ಮುರುಕು ಗುಡಿಸಲಿನ ಇದಿರು ಒಬ್ಬಳೇ ನಿಂತಿದ್ದಳು. ಸೂರ್ಯ ಎಂದೋ ಮುಳುಗಿ ಕತ್ತಲೆ ಕವಿಯಹತ್ತಿತ್ತು. ಮಾಹೀಮ್ ಖಾಡಿಯ ದುರ್ಗಂಧ ಗುಮ್ ಎನ್ನುತ್ತ ಗಾಳಿಯಲ್ಲಿ ಹಬ್ಬಿಕೊಂಡಿತ್ತು. ಹೈವೇದ ಎರಡೂ ಸೀಳುಗಳಲ್ಲಿ ವಾಹನಗಳು ಅವ್ಯಾಹತವಾಗಿ ಸಾಲುಗಟ್ಟಿ ಓಡಾಡುತ್ತಿದ್ದವು. ಕೂಟಸ್ಥಾನದಲ್ಲಿಯ ಟ್ರಾಫಿಕ್ ಸಿಗ್ನಲ್ ಹಸಿರಿನಿಂದ ಕೆಂಪಿಗೆ ತಿರುಗಿದ್ದೇ ವಿಮಾನನಿಲ್ದಾಣದ ಕಡೆಗೆ ಹೊರಡುವ ವಾಹನಗಳ ಓಡಾಟ ಗಕ್ಕನೆ ನಿಂತಿತು. ಇದ್ದನ್ನೇ ಕಾಯುತ್ತಿದ್ದವರ ಹಾಗೆ ಸ್ಕೂಟರ್ ಒಂದರ ಮೇಲೆ ಬಂದ ಇಬ್ಬರೂ ಯುವಕರು ರಸ್ತೆಯ ಅಂಚೆಗೆ ಉದ್ದೋ ಉದ್ದವಾಗಿ ಮಲಗಿದ ನೀರಿನ ದೊಡ್ಡ ಪೈಪ್‌ಗೆ ಹತ್ತಿರವಾಗಿ ಸ್ಕೂಟರ್ ನಿಲ್ಲಿಸಿ, ಪ್ಪಾಪ್ ಹತ್ತಿಜಿಗಿದು, ಉರುಳುರುಳುತ್ತ ಇಳಿದವರ ಹಾಗೆ ರಸ್ತೆಯಂಚನ್ನು ಇಳಿದು, ನೇರವಾಗಿ ಹತ್ತು – ಹನ್ನೆರಡು ಫೂಟ್ ಕೆಳಗಿದ್ದ ಗುಡಿಸಲಿನ ಬಾಗಿಲಿಗೇ ಬಂದು ನಿಂತರು. ಎಲ್ಲೋ ಆಕಾಶದಲ್ಲಿಯ ಚಿಕ್ಕಗಳಲ್ಲಿ ದೃಷ್ಟಿ ನೆಟ್ಟು ನಿಂತ ಮುಗ್ದ ಬಾಲೆಯ ಕಾಲುಗಳಷ್ಟೆ ಈ ನೆಲದಲ್ಲಿದ್ದಂತಿದ್ದುವು. ಧುತ್ ಎಂದು ಹಾಜರಾದ ಅಪರಿಚಿತರು ಕಣ್ಣುಗಳಲ್ಲಿ ಪ್ರತಿಬಿಂಬಗಳಾಗುವ ಮೊದಲೇ ಅವರಲ್ಲೊಬ್ಬನ ಅಂಗೈ ಬಾಯಿ ಮುಚ್ಚಿದ ರಭಸಕ್ಕೆ ಕಣ್ಣುಗಳಲ್ಲಿ ಕತ್ತಲೆ ಕವಿಯಹತ್ತಿತು. ಕಾಲು ಸೋತು ಬಂದಂತಾಗಿ ನೆಲಕ್ಕೆ ಕುಸಿಯುತ್ತಿರುವ ಹೊತ್ತಿಗೇ ಇಬ್ಬರೂ ಅವಳನ್ನು ಎತ್ತಿ ಗುಡಿಸಿಲಿನ ಒಳಗೆ ಹೊತ್ತು ನಡೆದರು. ಕೈಗಳೆರಡನ್ನೂ ಕರವಸ್ತ್ರದಿಂದ ಕಟ್ಟಿದರು. ಬಾಯಿ, ಕಣ್ಣುಗಳನ್ನೂ ಕೂಡ ಕಿರಗಣೆಯ ದಾರ ಬಿಚ್ಚಿ ದರಕಾರು ಇಲ್ಲದವರ ಹಾಗೆ ನಿಷ್ಪಾಪ ಕಾಲುಗಳನ್ನು ಮುಚ್ಚಿದ ಬಟ್ಟೆಯ ಚಿಂದಿಯನ್ನು ಎಳೆದು ಬಿಸುಟ್ಟಿದ್ದೇ...

"ಅಮ್ಮಾ ..... ಜಾನಕೀ....."

"ಏನಾಯ್ತು ಏನಾಯ್ತು? ಅರೆ ಕುರ್ಚಿಯಲ್ಲೇ ನಿದ್ದೆ ಮಾಡಿದಿರಾ? ಜಾನಕಿಯ ಕನಸು ಬಿತ್ತೇ?... ಬನ್ನಿ, ಹಾಸಿಗೆಯಲ್ಲಿ ಬಂದು ಮಲಗಿಕೊಳ್ಳಿ. ಅರೆ ಹೀಗೇಕೆ ಬೆವತಿದ್ದಿರಿ?..."

ಟವಲ್ಲಿನಿಂದ ಮೈ ಒರೆಸುತ್ತ ಮಾತನಾಡುವ ಹೆಂಡತಿಗೆ ಯಾವ ಉತ್ತರವನ್ನು ಕೊಡುವ ಸ್ಥಿತಿಯಲ್ಲಿರಲಿಲ್ಲ ನಾನು. ಆದ ಅನುಭವದ ಸಂಪೂರ್ಣ ಅರ್ಥ ನನಗೇ ಆಗಿರಲಿಲ್ಲ. ನನ್ನ ಜಾನಕಿ ನಿಜವಾಗಿಯೂ ಸತ್ತದ್ದೇ ಇದೀಗ, ಐದೇ ಮಿನಿಟುಗಳ ಮೊದಲು ಎನ್ನುವುದನ್ನು ನಂಬದಿರಲು ಸಾಧ್ಯವಾಗುತ್ತಿರಲಿಲ್ಲ. ಸತ್ತ ರೀತಿ ನೆನೆದರಂತೂ – ನೆನಪಿಗೆ ಬಂದಬಂದ ಹಾಗೆ ಮೈ ನಡುಗುತ್ತಿತ್ತು. ರಾತ್ರಿ ಹನ್ನೇರಡರ ಮೇಲಾಗಿರಬೇಕು. ನನ್ನ ಕಡೆಗೇ ಸಹಾನುಭೂತಿಯಿಂದ ನೋಡುತ್ತ ಕುಳಿತುಬಿಟ್ಟ ಹೆಂಡತಿಯ ಕಣ್ಣುಗಳಲ್ಲೂ ಸತ್ತುಹೋದ ಮಗುವಿನ ನೆನಪು ಹುಟ್ಟಿಸಿದ ನೋವು ಮೂಡುತ್ತಿದ್ದುದನ್ನು ನೋಡಿಯೂ "ಕಾಫಿ ಮಾಡಿಕೊಡುತ್ತೀಯಾ"? ಎಂದು ಕೇಳಿದೆ. "ಮಾಡುತ್ತೇನೆ, ಆದರೆ ಹೀಗೆ ಬಿಳಿಚಿಕೊಳ್ಳುವಂತಹದನ್ನು ಅದೇನು ನೋಡಿದಿರೋ"? ಸ್ವತಃ ತನಗೂ ಇಲ್ಲದ ಧೈರ್ಯ ನಟಿಸುತ್ತ ಕೇಳುತ್ತಿದ್ದವಳ ದನಿ ಅಳುವಿಗೆ ತಿರುಗುವುದರಲ್ಲಿತ್ತು.

ಮಾನವೀಯ ಯಾತನೆ ಕೂಡ ಇಂಥಿಂಥ ರೂಪದಲ್ಲಿ ಬಂದರೆ ಮಾತ್ರ ತಟ್ಟಿಸಿಕೊಳ್ಳಲು ಸಿದ್ಧರಿದ್ದೇವೆ ಎಂದುಕೊಂಡವರ ಜೋಮು ಹಿಡಿದ ಅಂತಃಕರಣವನ್ನು ಕಲಕಲು ಜಾನಕಿಯ ಸಾವು ಧರಿಸಿಕೊಂಡ

ಹೊಸ ರೂಪ ಮನಸ್ಸನ್ನು ವ್ಯಾಪಿಸಿ ನಿಂತ ರೀತಿಗೆ ಜೀವವೆಲ್ಲ ತತ್ತರಿಸಿಹೋಗಿತ್ತು. ಮೊದಲೇ ಹಾಕಿಕೊಂಡ ಹೊಂಚಿನ ಪ್ರಕಾರವೇ ಬಂದಂತಿದ್ದ ಸ್ಕೂಟರ್ ಸವಾರರು ಪಶುವಿಗೂ ಕಡೆಯಾಗಿ ಆ ಅಸಹಾಯಕ ದೇಹದ ಮೇಲೆ ಎಸಗಿದ ಅತ್ಯಾಚಾರಕ್ಕೆ ನಿಶ್ಚೇಷ್ಟನಾಗಿ ಬಿದ್ದ ಮಗುವನ್ನು ಅಷ್ಟಕ್ಕೇ ಬಿಡದೆ ಚಾಕುವಿನಿಂದ ಇರಿದು ಅಲ್ಲಿಂದ ಓಟಕಿತ್ತಿದ್ದರು. ರಕ್ತದ ಮಡುವಿನಲ್ಲಿ ಮಲಗಿದ ಮಗುವನ್ನು ನೋಡಿದಾಗಲೇ "ಅಮ್ಮಾ" ಎಂದು ಒದರುತ್ತ ನಾನು ಎಚ್ಚರಗೊಂಡದ್ದು... ಕಾಫಿ ಕುಡಿದರೂ ಹತ್ತಿದ ನಡುಕ ದೂರವಾಗಲೇ ಇಲ್ಲ. ಏನೋ ಕೇಳುವ ಕಾತರದಲ್ಲಿ ಕೂತ ಹೆಂಡತಿಯ ದೃಷ್ಟಿಯನ್ನು ಇದಿರಿಸಲಾಗಿದೇ– "ಬಾ. ತುಂಬ ರಾತ್ರಿಯಾಗಿದೆ. ಬರೆಯುತ್ತ ಕೂತಲ್ಲೇ ಜೊಂಪು ಹತ್ತಿರಬೇಕು. ಜೊಂಪು ಹತ್ತಿದಲ್ಲೇ ಏನೇನೋ ಹೊಳೆದಿರಬೇಕು... ಬೆಳಗ್ಗೆ ಹೇಳುತ್ತೇನೆ" ಎಂದು ಮೈದಡವಿ ಸಮಾಧಾನ ಹೇಳಿದೆ. ದೀಪ ಆರಿಸಿ ಹಾಸಿಗೆಯಲ್ಲಿ ಆಡ್ಡಾದಾಗ ಕಣ್ಣು ಮುಚ್ಚುವದೇ ಅಸಾದ್ಯವಾಯಿತು. ಆ ಅಸಹಾಯ ಮುಗ್ಧ ದೇಹ ಮತ್ತೆ ಮತ್ತೆ ಕಾಲು ಬಡೆಯುತ್ತಿದ್ದ ರೀತಿ ಮನಃಪಟಲದಿಂದ ಸರಿಯದಾಯಿತು. ವಾಂತಿಯಾಗುವ ಭಯವಾಗಿ ಭಡಕ್ಕನೆ ಎದ್ದು ಕುಳಿತವನೇ ಬಚ್ಚಲುಮನೆಗೆ ಓಡಿದೆ. ವಾಂತಿಯಾಗುವ ಭಯವಾಗಿ ಭಡಕ್ಕನೆ ಎದ್ದು ಕುಳಿತವನೇ ಬಚ್ಚಲುಮನೆಗೆ ಓಡಿದೆ. ವಾಂತಿಯ ಸದ್ದು ಹೆಂಡತಿಗೆ ಕೇಳಿಸದಿರಲಿ ಎಂದು ಕದ ಮುಚ್ಚಿ ಬಕಬಕನೆ ಕಾರಿಕೊಂಡೆ. ತುಸು ಸಮಾಧಾನವೆನಿಸಿದರೂ ನಿದ್ದೆ ಮಾಡುವದು ಅಸಾಧ್ಯವಾಗಿ ತೋರಿತು. ಮೇಜಿನ ಖಣದಿಂದ ಸದ್ಯ, ಆಗೀಗ ತೆಗೆದುಕೊಳ್ಳುತ್ತಿದ್ದ ಕಾಮ್‌ಪೋಜಿನ ಗುಳಿಗೆಯೊಂದನ್ನು ಹೊರತೆಗೆದು ನೀರಿನೊಂದಿಗೆ ನುಂಗಿದೆ...

ಬೆಳ್ಳಿಗ್ಗೆ ಎಚ್ಚರವಾದಾಗ ಹೊತ್ತು ಚಲೋ ಏರಿತ್ತು. ಆದರೂ ಹಾಸಿಗೆ ಬಿಟ್ಟು ಏಳುವ ಮನಸ್ಸಾಗಲಿಲ್ಲ. ಹೆಂಡತಿ ಅಡುಗೆಮನೆಯಲ್ಲಿರಬೇಕು; ಪಾತ್ರೆಗಳ ಸದ್ದು ಕೇಳಿಸುತ್ತಿತ್ತು. ಹಿಂದಿನ ಕಾಂಪೌಂಡಿನಲ್ಲಿ ಆರು ಮಜಲೆಯ ದೊಡ್ಡ ಕಟ್ಟಡವೊಂದು ಏಳುತ್ತಿತ್ತು. ಕಾಮಾಠಿ ಜನರ ಮೂರು – ನಾಲ್ಕು ಕುಟುಂಬಗಳು ತಳಮಜಲೆಯಲ್ಲಿ ಬಿಡಾರ ಹೂಡಿದ್ದವು. ಅವರೂ ಎದ್ದಿರಬೇಕು. ಅವರಲ್ಲಿಯ ಒಬ್ಬ ಹುಡುಗಿ ಜಾನಕಿಯ ಗೆಳತಿ, ಹೆಸರು ಕೇಳಿದಾಗ ಸರಸ್ವತಿ ಎಂದಿದ್ದಳು. ನನ್ನ ಕತೆಯಲ್ಲಿ ಮೂಡಿಬಂದ ಮಗುವಿನಲ್ಲಿ ಜಾನಕಿಯೊಡನೆ ಸರಸ್ವತಿಯೂ ಸೇರಿಕೊಂಡದ್ದು ಈಗ ಅರಿವಿಗೆ ಬಂತು. ಮೊದಲೇ ಇಷ್ಟು ದೊಡ್ಡವಾದವುಗಳನ್ನು ಇನ್ನಷ್ಟು ದೊಡ್ಡವು ಮಾಡಿ ನೋಡುತ್ತಿದ್ದ ಕಣ್ಣುಗಳಲ್ಲಿ ನಿಗೂಢ ಭಯ ತುಂಬಿದ ವಿಷಾದ. ಸರಸ್ವತಿಯನ್ನೇ ಸಾಕಲು ತೆಗೆದುಕೊಂಡರೆ ಹೇಗೆ? ಎಂಬ ವಿಚಾರ ಮನಸ್ಸಿನಲ್ಲಿ ಸುಳಿದುಹೋದದ್ದೆ ಮೈತುಂಬ ಮುಳ್ಳೆದ್ದು ನಿಂತವು. ಬಡವರಾದರೇನಂತೆ – ಹೊಟ್ಟೆಯ ಮಗುವನ್ನು ದೂರ ಮಾಡಿಯಾರೆ? ಅನಾಥಾಶ್ರಮದಿಂದ ಮಗುವೊಂದನ್ನು ತಂದು ಸಾಕಿದರೆ ಹೇಗೆ? ಮಗುವಿಲ್ಲದ ಮನೆ ಏಕೋ ಭಣಭಣ ಎನ್ನಿಸುತ್ತದೆ: ಮರುಗಳಿಗೆ, ಇದು ಮಾತ್ರ ಮಗುವಿನ ಒಳಿತಿಗೆ ಅಲ್ಲವೇನೋ ಎಂದು ತೋರಿದಾಗ, ಕ್ಷಣಗಳ ಮೊದಲಷ್ಟೇ ಆಸೆಯ ಗೆರೆಯೊಂದು ಮಿಂಚಿದ ಮನಸ್ಸು ಇದ್ದಕ್ಕಿದ್ದಂತೆ ಮ್ಲಾನಗೊಂಡಿತು. ದಿಕ್ಕಿಲ್ಲದ ತಬ್ಬಲಿ ಕೂಸು ಕೂಡ ನನ್ನ ಮಗಳಾಗಿ ಬೆಳೆದ ಮಾತ್ರಕ್ಕೆ ಸಾವಿರಾರು ವರ್ಷಗಳ ಇತಿಹಾಸದ ಶಾಪದ ಗೆರೆಯನ್ನು ಹಣೆಯಲ್ಲಿ ಹೊತ್ತೇ ಬೆಳೆಯಬೇಕದೀತೇನೋ ಎಂದು ಅನ್ನಿಸಿದ್ದೆ ಹಾಸಿಗೆಯಲ್ಲಿ ಎದ್ದೇ ಕುಳಿತುಕೊಳ್ಳುವಷ್ಟು ವಿಹ್ವಲನಾದೆ. ಅಡುಗೆ ಮನೆಯಲ್ಲಿದ್ದ ಹೆಂಡತಿಯನ್ನು ಕೂಡಲೇ ಬಾ ಎಂದು ಕರೆಯುವಷ್ಟು ಭಯವಾಯಿತು. ನಾಷ್ಟಾ ಮುಗಿಸಿದ್ದೇ ಮಹಿಮ್ ಖಾಡಿಯ ಜೋಪಡಿಯೊಂದರಲ್ಲಿ ನಡೆದ ಅತ್ಯಾಚಾರದ ಬಗ್ಗೆ ಬರೆಯಬೇಕೆಂದು ಕೊಂಡವನಿಗೆ ಈಗ ಬೇರೆಯೇ ಒಂದು ಪ್ರಶ್ನೆ ಧುತ್ ಎಂದು ಇದಿರಾಯಿತು. ಸ್ಕೂಟರ್ ಸವಾರರ ಪಾಶವೀ ಅತ್ಯಾಚಾರಕ್ಕೆ ಬಲಿಯಾದ ಮುಗ್ಧ ಬಾಲೆಯ ಸಾವು ತನ್ನಷ್ಟಕ್ಕೆ ಸಾಮಾಜಿಕ ಮಹತ್ವವನ್ನು ಪಡೆದಿತೇ? ಅಂಥದ್ದನ್ನು ಪಡೆಯದೆ ನಮ್ಮ ಅತಃಕರಣವನ್ನು ಮುಟ್ಟೀತೆ? ಸತ್ತವಳ ಕೊಂದವರ ಜಾತಿ, ಧರ್ಮ, ವರ್ಗ, ಅಂತಸ್ತು ಮೊದಲದವು ಗೊತ್ತಾಗುವ ಮೊದಲೇ ನಮ್ಮ ಕಣ್ಣುಗಳು ತಟಕ್ಕನೆ ಹನಿಗೂಡಿಯಾವೆ? ಫಕ್ಕನೆ ಹನಿಗೂಡಿಬಿಟ್ಟಿದ್ದೇ ಆದರೆ – ಹಾಗೆ ಆಗುವದು ತಾತ್ವಿಕ, ಬೌದ್ಧಿಕ ಕಾಳಜಿಗಳಿಲ್ಲದ ಪೆದ್ದುತನವೆಂದೂ, ಬರೇ ಬೆರಗುಗೊಳಿಸುವುದಕ್ಕೇ ತಂದ ಕೊಲೆಯೆಂದೊ ತೋರದೆ ಇದ್ದೀತೆ? ಹಾಗದರೆ ಸತ್ತವಳು ಯಾವ ಜಾತಿಯವಳಾಗಿ ಕೊಂದವರು

ಯಾವ ಜಾತಿಯವರಾದರೆ, ಇಲ್ಲ ಧರ್ಮದವರಾದರೆ, ಇಲ್ಲ ವರ್ಗದವರಾದರೆ ಈ 'ಅತ್ಯಾಚಾರ' ಮಹತ್ವಪೂರ್ಣವಾದಿತು? 'ಸಮಕಾಲೀನ' ಸಾಹಿತ್ಯದ ವಸ್ತು ವಾಗುವ ಯೋಗ್ಯತೆ ಪಡೆದು ನಾವು ಸುರಿಸಬಹುದಾದ ಕಣ್ಣಿರಿಗೆ ಸಾರ್ಥಕತೆ ತಂದುಕೊಟ್ಟೀತು? ಬರೆಯುವ ಕೈ ಬರೆಯಲು ಕೂರುವ ಮೊದಲೇ ಜೋಮು ಹಿಡಿಯುತ್ತಿದ್ದ ಅನ್ನಿಸಿಕೆ ಬರೆಯುವ ಹುರುಪೇ ನಷ್ಟವಾಗುತ್ತಿದ್ದ ಗಳಿಗೆಯಲ್ಲೇ ಹುಟ್ಟಿಬಂದದ್ದು ನಿಮ್ಮೆಲ್ಲರ ಮನಸ್ಸನ್ನು ಕಲಕಿಬಿಟ್ಟ ನನ್ನ ಮಹತ್ವಪೂರ್ಣ ಕತೆ–'ಚಸ್ನಲಾ'.

ಜಾನಕಿ – ಇದ್ದಕ್ಕಿದ್ದ ಹಾಗೆ ಚಸ್ನಾಲಾದ ಕೋಲ್ ಮೈನುಗಳ ಕಾರ್ಮಿಕನೊಬ್ಬನ ಮಗಳಾಗಿ ಹುಟ್ಟಿದ್ದಳು. ಚಸ್ನಾಲಾ ನಾಡಿಗೆ ನಾಡೇ ದೊಡ್ಡ ದೊಡ್ಡ ಪೇಪರುಗಳ ಮುಖಾಂತರ ಓದಿ ತಿಳಿದ ದುರಂತ. ಯಾರಿಗಿಂತ ಯಾರು ಮೊದಲು ಎಂಬಂತೆ ಈ ದುರಂತದ ಎಲ್ಲಾ ಮಗ್ಗುಲಿಗಳನ್ನೂ ಕೆಮರಾದ ಮೂಲಕ ಹಿಡಿಯಲೂ ನಡೆಸಿದ ಮೇಲಾಟದ ಫಲವಾಗಿ ಮೂಡಿಬಂದ – ಪೇಪರುಗಳು ತಮ್ಮ ಮುಖಪುಟದ ತುಂಬೆಲ್ಲ ಪ್ರಕಟಿಸಿದ – ಛಾಯಾಚಿತ್ರಗಳಲ್ಲಿ ಮೂಡಿ ನಿಂತಿತ್ತು. ಮುನ್ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಜೀವಂತ ಜಲಸಮಾಧಿ ಹೊಂದಿದ ಹೃದಯವಿದ್ರಾವಕ ಘಟನೆ. ಬೆಳಗ್ಗೆ ಎದ್ದದ್ದೇ ಸುದ್ದಿ ಸೇವಿಸುವುದು ಚಟವಾಗಿಬಿಟ್ಟ ನಾವೆಲ್ಲ ಪೇಪರು ಓದುತ್ತ ಬ್ರೇಕ್‌ಫಾಸ್ಟ್ ಸೇವಿಸುವ ಹೊತ್ತಿಗೆ 'ಮಾಯ್ ಗೋಶ್' ಎನ್ನುತ್ತ ಬಾಯಿ ಚಪ್ಪರಿಸಲು ಕಾರಣವಾದ ಭೀಕರ ದುರ್ಘಟನೆ. ಚಸ್ನಾಲಾ ಸರಿಯಾಗಿ ಎಲ್ಲಿದೆ ಎನ್ನುವುದು ಮರೆತು ಹೋಗಿತ್ತು. ಬಿಹಾರ್? ಒರಿಸ್ಸಾ? ವೆಸ್ಟ್ ಬೆಂಗಾಲ್? ಕೋಲ್ ಮೈನುಗಳು ಹೇಗಿರುತ್ತವೆ ಎನ್ನುವುದು ಸರಿಯಾಗಿ ಗೊತ್ತಿರಲಿಲ್ಲ. 'ಟ್ಯಾಮ್ಸ್ ಆಫ್ ಇಂಡಿಯಾ'ದ ಹಳೆಯ ಸಂಚಿಕೆಗಳನ್ನು ಇನ್ನೊಮ್ಮೆ ಓದಿನೋಡುವ ಮನಸ್ಸಾಯಿತು. ಆದರೂ ಅಷ್ಟು ವರ್ಷಗಳ (ಎಷ್ಟು ವರ್ಷಗಳು ಎನ್ನುವುದೂ ಮರೆತುಹೋಗಿದೆ) ಹಿಂದಿನ ಸಂಚಿಕೆಗಳನ್ನೆಲ್ಲ ನೋಡುವುದು ಕಷ್ಟದ್ದೆನಿಸಿತು. ಕಾರ್ಮಿಕರ ಜೋಪಡಿಪಟ್ಟಿಗಳನ್ನು ನೆನೆದಾಗ ಕಣ್ಣ ಮುಂದೆ ನಿಲ್ಲುತ್ತಿದ್ದದ್ದು ಬಾಂದ್ರಾದ ಜೋಪಡಪಟ್ಟಿಗಳೇ. ಈ ಮೊದಲೇ ಬರದಿಟ್ಟ ಜೋಪಡಪಟ್ಟಿಗಳ ವರ್ಣನೆಯನ್ನು ಏನೇನೂ ಬದಲಿಸದೆ ಹಾಗೇ ಇರಿಸಲು ನಿಶ್ಚಯಿಸಿದೆ. ಎರಡು ರಾತ್ರಿ ಸತತವಾಗಿ ಕೂತು ಭಾಷೆಯಲ್ಲಿ ಹಿಡಿದದ್ದು ಕಣ್ಣಿಗೆ ಕಟ್ಟುವಷ್ಟು ಸ್ಪಷ್ಟವಾಗಿ ಮೂಡಿತ್ತು. ಚಸ್ನಾಲಾವನ್ನು ನೆನೆದಾಗ ಕಣ್ಣು ಮುಂದೆ ಮೂಡಿ ನಿಂತದ್ದಕ್ಕೇ ಚಸ್ನಾಲಾ ಎಂದು ಹೆಸರಿಟ್ಟೆ. ಬಾಂದ್ರಾದ ಬದಲು ಚಸ್ನಾಲಾ ಎಂಬ ಹೆಸರನ್ನು ಪಡೆದುಕೊಂಡದ್ದೆ ನಿತ್ಯಪರಿಚಯದ ಪರಿಸರವೇ ಇದ್ದಕ್ಕಿದ್ದ ಹಾಗೆ ಪ್ರಸ್ತುತದ ಮೆರುಗಳನ್ನು ಪಡೆದು ನಿಂತ ರೀತಿಗೆ ನಾನೇ ಬೆರಗುಗೊಂಡೆ. ಮೊದಲು ಹೊಳೆದಿರದ ವಿವರಗಳು ತಮ್ಮಿಂದ ತಾವೇ ಸೇರಿಸಿಕೊಂಡವು...

ಹಲವಾರು ವರ್ಷಗಳಿಂದ ಇದ್ದಲು ಅಗೆಯಲು ಉಪಯೋಗದ್ದಲ್ಲವೆಂದು ಬಿಟ್ಟುಕೊಟ್ಟ ಖನಿ ಈಗ ನೀರಿನಿಂದ ತುಂಬಿಕೊಂಡಿತ್ತು. ಮಗ್ಗುಲ ಖನಿಯಲ್ಲೀಗ ಇದ್ದಲು ಅಗೆಯುವ ಕೆಲಸ ಸಾಗಿತ್ತು. ಮುನ್ನೂರಾ ಅರವತ್ತು ಜನ (ಆಫಿಸಿನ ಸಹೋದ್ಯೋಗಿಯೊಬ್ಬಾತ ತನ್ನ ಅದ್ಭುತ ಸ್ಮರಣ ಶಕ್ತಿಯ ಬಗ್ಗೆ ಇಟ್ಟುಕೊಂಡ ಅಭಿಮಾನದಿಂದ ಒದಗಿಸಿದ ಅಂಕೆ) ಎಂದಿನಂತೆಯೇ ಬೆಳಿಗ್ಗೆ ಖನಿಯಲ್ಲಿ ಇಳಿದು ಕೆಲಸಕ್ಕೆ ತೊಡಗಿರುವಾಗಲೇ ಎರಡೂ ಖನಿಗಳ ನಡುವಿನ ಗೋಡೆ ಬಿರುಕು ಬಿಟ್ಟು ಒಂದರೊಳಗೆ ಕಂಠಮಟ್ಟ ತುಂಬಿ ನಿಂತಿದ್ದ ನೀರು ಇನ್ನೊಂದರಲ್ಲಿ ಹರಿಯಹತ್ತತ್ತು. ಹಾಹಾ ಎನ್ನುವುದರಲ್ಲಿ ಗೋಡೆ ಕುಸಿದು, ಹೊಸತಾದದ್ದರಿಂದ ತೀರ ಇಕ್ಕಟ್ಟಾದ ಖನಿಯೆಲ್ಲ ನೀರಿನಿಂದ ತುಂಬಿ ಪ್ರತಿಯೊಬ್ಬ ಕಾರ್ಮಿಕನು ಕೆಲಸ ಮಾಡುತ್ತಿದ್ದ ಜಾಗದಲ್ಲೇ ಜಲಸಮಾಧಿ ಹೊಂದಿದ್ದ. ನನ್ನ ಸೃಷ್ಟಿಶೀಲತೆಯ ಸರ್ವಸ್ವವನ್ನೂ ಬಳಸಿ ಹುಟ್ಟಿ ಬರುತ್ತಿದ್ದ ದುರಂತದ ವಿವರಗಳು ಒಂದಕ್ಕೊಂದು ಹೊಂದಿಕೊಳ್ಳುತ್ತಿದ್ದ ರೀತಿಗೆ ನಾನೇ ಥಕ್ಕಾಗುತ್ತಿದ್ದೆ. ತೆರೆದುಕೊಳ್ಳುತ್ತಿದ್ದ ಹೊಚ್ಚಹೊಸ ಅರ್ಥಪ್ರಪಂಚಕ್ಕೆ ಕೂಡ. ಸೃಷ್ಟಿಕರ್ಮಕ್ಕೇ ಪ್ರಚೋದನೆಯಾದ ಸಾವಿನ ಮೂಲವಿಗ್ರಹ ಕೂಡ ಒಮ್ಮೆಗೇಲೇ ಹುಡಿಹುಡಿಯಾಗಿ ಮತ್ತೇ ಕ್ರಮೇಣ ಹೊಸತೇ ಒಂದು ಆಕಾರದಲ್ಲಿ ಹರಳುಗಟ್ಟುತ್ತಿತ್ತು. ಬಾಂದ್ರಾದಲ್ಲಿಯಂತಹದೇ ಮುಸ್ಸಂಜೆ, ಚಸ್ನಾಲಾದಲ್ಲಿ ಕೆಲವರಾದರೂ

ಬದುಕಿರಬಹುದೇ? ಒಬ್ಬೋಬ್ಬರೇ ಮೇಲಕ್ಕೆ ಬಂದು ಧುತ್ ಎಂದು ಮೋರೆ ತೋರಿಸಬಹುದೇ? ಎಂಬ ಜೀವ ಹಿಂಡುವ ಆತಂಕದಲ್ಲಿ ಕಾರ್ಮಿಕರ ಕೇರಿಗೆ ಕೇರಿಯೇ ಖನಿಗಳ ಸುತ್ತ ನೀರು ಅನ್ನ ಕೂಡ ಮರೆತು ಬೆಳಗಿನಿಂದಲು ತಮ್ಮ ತಮ್ಮವರ ಹಾದಿ ಕಾಯುತ್ತ ನೆರೆದ ದುರ್ದಿನದ ಮುಸ್ಸಂಜೆ. ಜಾನಕಿ ತನ್ನ ಗುಡಿಸಲಿನಲ್ಲಿ ಒಬ್ಬಳೇ. ಅಮ್ಮ ಉಳಿದ ಮೂವರೂ ಮಕ್ಕಳೊಂದಿಗೆ ಅಪ್ಪನ ಹಾದಿ ಕಾಯುತ್ತ ಖನಿಯ ಹತ್ತಿರ ನಿಂತವಳು ಇನ್ನೂ ಹಿಂತಿರುಗಿರಲಿಲ್ಲ. ಮೂರು ತಿಂಗಳ ತೊಟ್ಟಿಲ ಕೂಸನ್ನು ಅವಳ ಜೊತೆಗೆ ಬಿಟ್ಟು ಹೋಗಿದ್ದಳು. ಕತೆಗೆ ವಸ್ತುವಾದ ದುರಂತ ಪ್ರಸಂಗ ನಡೆಯುವ ಹೊತ್ತಿಗೆ ಕೇರಿಯ ಮೇಲೆ ಒದಗಿ ಬಂದ ಆಪತ್ತಿನಿಂದ ಕಂಗಾಲಾಗಿ, ಜೋಪಡಿಯ ಬಾಗಿಲಲ್ಲಿ ತುದಿಗಾಲಿನಲ್ಲಿ ನಿಂತು ಅಪ್ಪ ಅಮ್ಮರ ಹಾದಿ ಕಾಯುತ್ತಿದ್ದಳು. ಸ್ಕೂಟರ್ ಸವಾರರು ಬಂದದ್ದು ಆಗ. ಮುಂದೆ ನಡೆದದ್ದೆಲ್ಲ ನಮಗೆಲ್ಲ ಗೊತ್ತೇ ಇದೆ. ಇಷ್ಟೇ. ಈಗ ಅತ್ಯಾಚಾರಕ್ಕೆ ಬಲಿ ಬಿದ್ದವಳ, ಅತ್ಯಾಚಾರವನ್ನೆಸಗಿದವರ ವರ್ಗಸಂಬಂಧ ಸುಸ್ಪಷ್ಟವಾಗಿತ್ತು. ಚಸ್ನಾಲಾದ ಮೈನಿಂಗ್ ಇತಿಹಾಸದಲ್ಲೇ ತತ್ಸಮವಿಲ್ಲದ ದುರ್ದಿನದ ಮುಸ್ಸಂಜೆಯಲ್ಲೇ ನಡೆದ ಇನ್ನೊಂದು ದುರ್ಘಟನೆ ಸಮಕಾಲೀನ ಮಾನವನ ಅತಃಕರಣವನ್ನು ತಟ್ಟಲು ಬೇಕಾದ ಎಲ್ಲಾ ಕರಾರುಗಳನ್ನು ಪೂರೈಸಿಯೇ ಮಾತಿನಲ್ಲಿ ಒಡಮೂಡಿತ್ತು. ಸತ್ತವಳು ಕಾರ್ಮಿಕನ ಮಗಳಾಗಿದ್ದರು. ಎಳೆಯ ಬಾಲೆಯ ಸಾವಿಗೆ ಈಗ ಸಾಮಾಜಿಕ ಸ್ವರೂಪ ತಾನೇತಾನಾಗಿ ಬಂದು ಕಣ್ಣಿದ್ದ ಯಾರ ಕಣ್ಣುಗಳಲ್ಲೂ ನೀರು ತರಿಸಲು ಸಿದ್ದವಾಗಿತ್ತು.

ಕೊನೆಗೂ ನನ್ನ ಮುದ್ದು ಜಾನಕಿ ಕತೆಯಾಗಿದ್ದಳು –‘ಚಸ್ನಾಲಾ’.

ಏನೇನು ಬರೆದಿದ್ದೆನೋ ನನಗೆ ಗೊತ್ತಿರಲಿಲ್ಲ. ಧೈರ್ಯ ಕುಸಿಯುವ ಮೊದಲೇ ಪ್ರಕಟನೆಗೆ ಕಳಿಸಿದ್ದಷ್ಟು ಗೊತ್ತು. ಕಳಿಸುವ ಮೊದಲು ಇನ್ನೊಮ್ಮೆ ಓದಿ ನೋಡುವ ಧೈರ್ಯವಾಗಲಿಲ್ಲ. ಹೇಗೆ ಬರೆದಿದ್ದೆನೆನ್ನುವುದು ತಿಳಿದದ್ದು ಕೂಡ ಬಹಳ ದಿನಗಳ ನಂತರ ಕತೆಯನ್ನು ಮೆಚ್ಚಿ ಸಂಪಾದಕರಿಂದ ಪತ್ರ ಬಂದಾಗ ಕತೆ ಪ್ರಕಟವಾದ ಪತ್ರಿಕೆಯ ಪ್ರತಿಯೊಂದನ್ನು ಹಿಡಿದು ನಮ್ಮ ಮನೆಗೆ ಬಹಳ ದಿನಗಳಿಂದ ಬಂದಿರದ ಮೂವರೂ ಗೆಳೆಯರು ಒಂದು ದಿನ ಬೆಳಗ್ಗೆ ಇದ್ದಕ್ಕಿದ್ದಹಾಗೆ ಮನೆಗೆ ನುಗ್ಗಿದಾಗ ಬರುವಾಗಲೇ ಉತ್ಸಾಹದ ಗುಲ್ಲೆಬ್ಬಿಸುತ್ತಲೇ ಬಂದಿದ್ದರು. ಒಳಗೆ ಕಾಲಿಡುವ ಪುರಸತ್ತೇ ಇಲ್ಲ. ಒಬ್ಬೊಬ್ಬರೇ ನನ್ನನ್ನು ಅಪ್ಪಿಕೊಂಡು “congratulations on the tremendous story we must celebrate this big event, and we have brought the stuff…” ಎನ್ನುತ್ತ ಎತ್ತಿ ತೋರಿಸಿದ ಕೈಚೀಲದಲ್ಲಿ ತಂದದ್ದು ಬಿಯರಿನ ಬಾಟಲಿಗಳಾಗಿದ್ದವು ಎನ್ನುವುದನ್ನು ಅವು ಒಂದಕ್ಕೊಂದು ಅಪ್ಪಳಿಸಿ ಹುಟ್ಟಿಸಿದ ಸದ್ದೇ ಸಾರಿತ್ತು. ಜಾನಕಿ ಸತ್ತು ಮೂರು ತಿಂಗಳಾಗುತ್ತ ಬಂದಿತ್ತಷ್ಟೆ. ಮನಸ್ಸಿಗೆ ಕವಿದ ಸೂತಕದ ಭಾವನೆ ಇನ್ನೂ ಕಳೆದಿರಲಿಲ್ಲ. ಅವಳ ಸಾವಿನ ಕಲ್ಪನೆ ಇವರಾರಿಗೂ ಇದ್ದಂತಿರಲಿಲ್ಲ. ಈಗ ಹೇಳುವ ಮನಸ್ಸಾಗಲಿಲ್ಲ. ಟೀಪಾಯಿಯೊಂದರ ಮೇಲೆ ಚೀಲದೊಳಗೆ ತಂದ ಬಾಟಲಿಗಳನ್ನಿರಿಸಿ ಗೆಳೆಯನೊಬ್ಬ ನೇರವಾಗಿ ಅಡುಗೆಮನೆಗೆ ನುಗ್ಗಿದ. ನನ್ನ ಹೆಂಡತಿ ಅಲ್ಲಿ ಇಲ್ಲದ್ದನ್ನು ಕಂಡು ಎಂದಿನ ಸಲುಗೆಯಿಂದ – “ವಹಿನೀ…. ಎಲ್ಲಿದ್ದಿರಿ”? ಎಂದು ಕರೆದಾಗ ಮಲಗುವ ಕೋಣೆಯಲ್ಲಿ ಸದ್ದಾಯಿತು. ಸದ್ಯದ ಪರಿಪಾಠದಂತೆ ಅಡುಗೆಯ ಕೆಲಸವನ್ನು ಬೇಗ ಮುಗಿಸಿ ಹಾಸಿಗೆಯಲ್ಲಿ ಅಡ್ಡಾಗಿರಬೇಕು. ಗೆಳೆಯರ ಉತ್ಸಾಹಕ್ಕೆ ಭಂಗ ತರುವ ಮನಸ್ಸಿಲ್ಲದವಳ ಹಾಗೆ ಒಳಗಿನ ಬೇಗುದಿಯನ್ನು ಎಳ್ಳಷ್ಟೂ ತೋರಗೊಡದೇ ಹೊರಗೆ ಬಂದಳು. ಅವಳು ಬರುವ ದಾರಿಯನ್ನೇ ಕಾಯುತ್ತಿದ್ದವರ ಹಾಗೆ – ನಾ ಮುಂದೆ ತಾ ಮುಂದೆ ಎನ್ನುವ ರೀತಿಯಲ್ಲಿ ತಾವು ಬಂದಂಥ ಕಾರ್ಯವನ್ನು ಜಾಹೀರುಪಡಿಸಿ ಬಿಯರಿನ ಜೊತೆಗೆ ಏನಾದರೂ ತಿನ್ನಲು ಬೇಕೆಂದರು. ಹೇಳದೇ ಬಂದದ್ದರಿಂದ ಊಟ ಹಾಕಲು ಒತಾಯಪಡಿಸಲಾರೆವೆಂದರು. ಹೆಂಡತಿ – “ಕುಳಿತುಕಳ್ಳಿ. ಬಿಸಿಬಿಸಿ ಪಕೋಡಾ ಮಾಡಿ ತರುತ್ತೇನೆ” ಎಂದು ಅಡುಗೆಮನೆಗೆ ನಡೆದಳು. ‘ಗ್ರೇಟ್’ ಎಂದು ಏಕಕಂಠದಲ್ಲಿ ಒದರಿ ಬಿಯರಿನ ಕಡೆಗೆ ಲಕ್ಷ್ಯ ಹರಿಯಿಸಿದರು. ಬಾಟಲಿಗಳನ್ನು ಚೀಲದಿಂದ ಹೊರಗೆ

ತಗೆಯುತ್ತ "ವಹಿನೀ, ನಾಲ್ಕು ಗ್ಲಾಸುಗಳು ಬೇಕು" ಎಂದರು. ಬಿಯರ್ ಕುಡಿಯುವವರಲ್ಲಿ ನನ್ನನ್ನೂ ಸೇರಿಸಿಕೊಂಡಾಗಿತ್ತು. ನಾನೇ ಒಳಗೆ ಹೋಗಿ ಮೂರು ಗ್ಲಾಸುಗಳನ್ನು ಹೊರಗೆ ತಂದು, " ನನ್ನ ಆರೋಗ್ಯದ ಬಗ್ಗೆ ನಿಮಗಾರಿಗೂ ಗೋತ್ತಿದ್ದಂತಿಲ್ಲ. I am under medical observation... ಅವಶ್ಯ ಬಿದ್ದರೆ ಈಸೀಜೀ ಕೂಡ ತೆಗೆಯಿಸಬೇಕಾದಿತು... ನೀವು ತೆಗೆದುಕೊಳ್ಳಿ. I will enjoy vicariously" ಎಂದೆ. ಈಸೀಜೀಯ ಉಲ್ಲೇಖ ಮೂವರೂ ಹುಬ್ಬೇರಿಸುವುದಕ್ಕೆ ಕಾರಣವಾಯಿತು. "ಆಡುಟಿ'ಣ ಣಜುಟುಟ me?" "hope nothing serious?" "you worry too much" ಎಂಬ ಉದ್ಗಾರಗಳು ಹುಟ್ಟಿ ಬರುತ್ತಿರುವಾಗಲೇ ಬಾಟಲಿಗಳೊಳಗಿನ ಬಿಯರು ಗ್ಲಾಸುಗಳಲ್ಲಿ ತುಂಬಿ ನಿಂತಿತು. 'ಚಿಯರ್ಸ್' ಎಂಬ ಹರ್ಷೋದ್ಗಾರ ಮುಗಿದದ್ದೇ ಮಾತು ಸಾಹಿತ್ಯದ ಕಡೆಗೆ ತಿರುಗಿ ಪಕೋಡಾ ಬರುವ ಹೊತ್ತಿಗೆ ನನ್ನ ಕತೆಗೆ ಬಂದು ತಲುಪಿತು.

"well,well... at last... "ಅಂತೂ ತೀರ ಹೊಸ ದಾರಿಯೊಂದನ್ನು ತೆರೆಯುವಂತಹ ಕತೆ ಬರೆದೆ... ಇದರಲ್ಲೂ ಸಾವಿದೆ,ನಿನ್ನ ಇತರ ಕತೆಗಳಲ್ಲಿಯಂತೆ.ಆದರೆ ಬರಿಯೇ ಬೆರಗು ಗೊಳಿಸುವುದಕ್ಕೇ ತಂದಿರದೇ ಒಂದು ಮೂರ್ತವಾದ ಸಾಮಾಜಿಕ ಸನ್ನಿವೇಶದಲ್ಲಿ ಹುಟ್ಟಿ ಬಂದದ್ದರಿಂದ ಅರ್ಥಪೂರ್ಣವಾಗಿದೇ...."

"ಇಲ್ಲಿ ಕತೆ ಬರಿಯ ಕಲಾತ್ಮಕ ಅಚ್ಚುಕಟ್ಟುತನಕ್ಕಷ್ಟೇ ಮೀಸಲಾಗಿಲ್ಲ. ಕಾರ್ಮಿಕರ ದುರವಸ್ಥೆ,ಖನಿಗಳ ಒಡೆಯರ ಅಮಾನುಷ ವ್ಯವಹಾರಗಳನ್ನು ವರ್ಣಿಸಿದ ರೀತಿ ಅನನ್ಯವಾಗಿದೆ... ಮಹತ್ವಪೂರ್ಣವಾಗಿದೆ..."

"ಮುಖ್ಯವಾಗಿ ನೀರು ತುಂಬಿದ ಖನಿಯ ವರ್ಣನೆ. ಒಳಗೆ ಸಿಕ್ಕವರು ವಿಲಿವಿಲಿ ಒದ್ದಾಡುತ್ತ ಉಸಿರುಗಟ್ಟಿದಂತಾಗಿ ಕೊರಳ ಸೆರೆಗಳು ಉಬ್ಬಿಕೊಳ್ಳುತ್ತವೆ ನೋಡು... ಇದೋ..."

"And that is the different between journalism and creative literature. I just can't imagine how at all you could conceive this story."

"ನನಗನ್ನಿಸುವ ಮಟ್ಟಿಗೆ ಇಡೀ ಕತೆಯ ಕಲಾತ್ಮಕ ಸಾಧನೆಯ ಉಚ್ಚಾಂಕವೆಂದರೆ ಎಳೆಕೂಸಿನ ಮೇಲೆ ನಡೆಯುವ ಲೈಂಗಿಕ ಅತ್ಯಾಚಾರದ ಭೀಕರ ದೃಶ್ಯ.ಮಹಾ ಪ್ರತಿಭೆಯ ಸೃಷ್ಟಿಕರ್ತರಿಗಷ್ಟೇ ಸಾಧ್ಯವಾಗುವಂತಹುದು.ಬರಿಯೇ ಬಾಯ ಹೊಗಳಿಕೆಗೆ ಹೇಳುತ್ತಿಲ್ಲ.ಮತ್ತೆ.... ತುಂಬ ಮಹತ್ವದ್ದನ್ನು ಕೊನೆಗೂ ಸಾಧಿಸಿದ್ದೀ..."

ಮಾತುಗಳ ವೇಗಕ್ಕೆ ಸರಿಯಾಗಿ ಬಿಯರೂ ಭರಭರನೆ ಖಾಲಿಯಾಗುತ್ತಿತ್ತು. ಬಿಯರಿನ ತಂಪದ ವಾಸನೆ ಮೂಗನ್ನಡರಿದಾಗ ಎಂದೆಂದಿಗೂ ಬಿಯರಿಗೆ ಕೈ ಹಚ್ಚಲಾರೆನೆಂದೂ ಆಣೆ ಮಾಡಿಕೊಳ್ಳುವಷ್ಟರ ಮಟ್ಟಿಗೆ ಹೇಸಿಕೆ ಅನ್ನಿಸಿತು. ಇವರ ಉತ್ಸಾಹದ ಮಾತುಗಳು ಹೆಂಡತಿಯ ಕಿವಿಯ ಮೇಲೆ ಮಾತ್ರ ಬೀಳದಿರಲಿ ದೇವರೆ ಎಂದು ಪ್ರಾರ್ಥಿಸಿದೆ: ಜನಕಿಯ ಬಗ್ಗೆ ಕತೆ ಬರೆದದ್ದು ಅವಳಿಗೆ ಗೊತ್ತಿತ್ತು. ಏನು ಬರೆದಿದ್ದೇನೆ ಎನ್ನುವುದು ಗೊತ್ತಿರಲಿಲ್ಲ: ಇನ್ನೂ ಓದಿ ತೋರಿಸಿರಲಿಲ್ಲ. ನನ್ನ ಕತೆ ಹುಟ್ಟುವ ಮೊದಲೇ ಸಿದ್ದವಾದಂತಿದ್ದ ಗೆಳೆಯರ ಮಾತುಗಳಿಗೆ ಈ ಕತೆಯೇ ಬೇಕಾಗಿದ್ದಂತೆ ತೋರಲಿಲ್ಲ. ಮಾತಿನಲ್ಲಿಯ ಹುರುಪಿನಲ್ಲಿ ಬಿಯರಿನ ಅಮಲಿನ ಹಾಗೇ – ಒಂದು ಶಬ್ದ ಇನ್ನೊಂದರ ಹುಟ್ಟಿಗೆ ಕಾರಣವಾಗುತ್ತಿದ್ದ ಚಮತ್ಕಾರವನ್ನು, ಮಾತನಾಡುತ್ತಿದ್ದಂತೆ ತಮ್ಮ ದನಿಯ ಗಾಂಭೀರ್ಯಕ್ಕೇ ತಾವೇ ಮತ್ತರಾಗುತ್ತಿದ್ದ ವಿಕ್ಷಿಪ್ತ ಬಗೆಯನ್ನೂ ನೋಡಿ ಮೊದಲ ಬಾರಿ ನನ್ನ ಕತೆಯ ಬಗೆಗೇ ಹೇಸಿಕೆ ಅನ್ನಿಸಿತು. ಜಾನಕಿ ಇವರೆಲ್ಲರಿಗೂ ಪರಿಚಿತಳು. ಲುಡುಬುಡು ಲವಲವಿಕೆಯಿಂದ ಮನೆತುಂಬ ಓಡಾಡುತ್ತ, ಹಲ್ಲು ತೋರಿಸಿ ಗಲ್ಲಗಳಲ್ಲಿ ಕುಳಿ ಮೂಡಿಸಿ

ನಗುತ್ತ ಮಾತನಾಡುತ್ತಿದ್ದ ಮಗು ಇವರೆಲ್ಲರಿಗೂ ಬೇಕಾದವಳಾಗಿದ್ದಳು. ಮನೆಯಲ್ಲಿಲ್ಲವೆಂದು ಬಗೆದರೋ, ಮಾತಿನ ಭರದಲ್ಲಿ ನೆನಪೇ ಆಗಲಿಲ್ಲವೋ, ಯಾರೂ ಅವಳ ಬಗ್ಗೆ ವಿಚಾರಿಸಲೇ ಇಲ್ಲ. ಅವಳು ಸತ್ತದ್ದು ಯಾರಿಗೂ ಗೋತ್ತಾಗಲೇ ಇಲ್ಲ... ಏಕೋ ನನ್ನ ಮಗು ಈಗ ಮೊದಲ ಬರಿಗೆ ಸಾಯುತ್ತಿದ್ದಾಳೆ ಅನ್ನಿಸಿತು. ಆಸ್ಪತ್ರೆಯಲ್ಲಿಯ ಕೊನೆಯ ದಿನ ಕೊನೆಯ ರಾತ್ರಿ ನೆನಪಿನಲ್ಲಿ ಮರುಕಳಿಸಹತ್ತಿದಾಗ ಹೊಟ್ಟೆ ಹೊರಳುವ ಅನ್ನಿಸಿಕೆ ಕಿವಿಯ ಮೇಲೆ ಅವ್ಯಾಹತವಾಗಿ ಬೀಳುತ್ತಿದ್ದ – ಮಹತ್ವವಾದಿಗಳ ಬಾಯಿಂದ ತಮ್ಮಿಂದ ತಾವೇ ಹೊರಬೀಳುತ್ತಿದ್ದಂತಿದ್ದ – ಶಬ್ದಗಳು ಅರ್ಥವಿಲ್ಲದ ಸದ್ದಾಗುತ್ತ ಹೆದರಿಕೆ ಹುಟ್ಟಿಸಹತ್ತಿದ್ದವು: "ಅಣ್ಣಾ, ನನ್ನನ್ನು ನಿನ್ನ ಕತೆಯಲ್ಲಿ ಹಾಕುತ್ತೀಯಾ?" ಎಂಥ ವಿಶೇಷ ಮಹತ್ವವೂ ಇಲ್ಲದ ಪುಟಾಣಿ ಪ್ರಶ್ನೆಯೊಂದನ್ನು ಉಸಿರು ಕಟ್ಟಿಸಿ ಇಲ್ಲವಾಗಿಸಿಬಿಟ್ಟಿದ್ದುವು. ಪ್ರಶ್ನೆಯ ಜತೆಗೆ, ಅದನ್ನು ಕೇಳಿದವಳ ಕಣ್ಣುಗಳಲ್ಲಿ ನೀರಾಡಿದ ಹೊಳಪನ್ನೂ.... ತುಟಿಗಳ ಅಂಚಿನಲ್ಲಿ ಮೂಡಿದ ಮುಗ್ಧ ನಗುವನ್ನೂ...

ಕೊನೆಗೊಮ್ಮೆ ತಂದ ಬಾಟಲಿಗಳೆಲ್ಲ ಖಾಲಿಯಾಗುತ್ತ ಬಂದ ಹಾಗೆ ಮಾತು ಕಡಿಮೆಯಾಗುತ್ತ ಬಂದಿದ್ದುವು ಕಾರ್ಲ್‌ಮಾರ್ಕ್ಸ್, ಜಯಪ್ರಕಾಶ ನಾರಾಯಣ, ರಾಮ ಮನೋಹರ ಲೋಹಿಯಾರಿಂದ ಹಿಡಿದು ಸಂಜಯ ಗಾಂಧಿಯವರೆಗೂ ಹರಿದ ರಾಜಕೀಯ ಆಫ್ರೀಕಾ, ಇಸ್ರಾಯಿಲ್, ಇಜಿಪ್ತ್, ಅಮೆರಿಕಾ, ಕ್ಯೂಬಾ... ಎಲ್ಲ ದೇಶಗಳನ್ನು ಸುತ್ತಾಡಿ ಬಂದು ಪ್ರಸ್ತುತದ ಸಾಣೆಯ ಮೇಲೆ ಚುಂಚು ಮಸೆಯುತ್ತ ಅರ್ಥಪೂರ್ಣವಾಗಿ ಹೊಳೆಯುತ್ತಿತ್ತು. ಸಾಹಿತ್ಯ ಈ ಹೊಸ ಹೊಳಪನ್ನು ಹಿಡಿಯುವ ಸಾಮರ್ಥ್ಯ ಪ್ರಕಟಿಸುವಂತೆ ಆಹ್ವಾನಿಸುತ್ತಿತ್ತು...

"ವಹಿನೀ ಬರ್ತೇವೆ...", "ಇನ್ನೊಮ್ಮೆ ಬಂದಾಗ ನಿಮ್ಮ ಪೇಟೆಂಟ ಚಿಕನ್ ಬಿರ್ಯಾಣಿಯೇ ಆಗಬೇಕು..." " ಈ ಹೊತ್ತು ನೀವು ಹೊರಗೆ ಬರಲಿಲ್ಲ...." "ಪಕೋಡಾ ಮಾತ್ರ ಮಸ್ತ ಪೈಕೀ ಆಗಿದ್ದವು..." "ಇನ್ನೂ ಇಂತಹವೇ ಹತ್ತು ಕತೆಗಳನ್ನದರೂ ಬರೆಯಿಸಿ ಈ ಹುಂಬನಿಂದ, ಸಂಗ್ರಹ ಪ್ರಕಟಿಸೋಣ..." "ಕನ್ನಡ ಸಾಹಿತ್ಯ.." ವಾಕ್ಯ ಪೂರ್ತಿಯಾಗುವ ಮೊದಲೇ ವರಾಂಡಾದ ಮೆಟ್ಟಿಲು ಇಳಿದಾಗಿತ್ತು. ಕದ ಮುಚ್ಚಿ ಒಳಗೆ ಬಂದವನೆ ಕುರ್ಚಿಯೊಂದರಲ್ಲಿ ಕುಸಿದುಬಿಟ್ಟೆ. ಮಲಗುವ ಕೋಣೆಯಲ್ಲಿದ್ದ ಹೆಂಡತಿಯನ್ನು ನೋಡುವ ಧೈರ್ಯವಾಗಲಿಲ್ಲ. ಗಂಟೆ ಒಂದರ ಮೇಲಾಗಿತ್ತು. ಹೊಟ್ಟೆ ಅತೀವ ಹಸಿದಿತ್ತು... "ನನ್ನ ಜಾನಕಿ ಈ ಹೊತ್ತು ಮುಂಜಾನೆ ಸತ್ತಳು. ಅವಳನ್ನು ಸ್ಮಶಾನಕ್ಕೆ ಮುಟ್ಟಿಸಿ ನನ್ನೊಡನೆ ಬಂದ ಮೂವರು ಗೆಳೆಯರು ಇದೀಗ ಹೊರಟುಹೋದರು" ಎಂಬಂತಹ ಭಾವನೆಯನ್ನು ತೆಗೆದುಹಾಕುವುದು ಅಸಾಧ್ಯವಾದಾಗ ಇಷ್ಟು ದಿವಸ ಬಂದಿರದ ಕಂಬನಿ ಈಗ ಒಮ್ಮೆಗೆಲೇ ಉಕ್ಕಿಬಂದು ಮಗುವಿನಂತೆ ಅತ್ತುಬಿಟ್ಟೆ. ಎಷ್ಟು ಹೊತ್ತು ಹಾಗೆ ಕೂತಿದ್ದೆನೋ ತಿಳಿಯಲಿಲ್ಲ. ಮಲಗುವ ಕೋಣೆಯ ಕದ ತೆರೆಯುತ್ತಿದ್ದ ಸದ್ದು ಕೇಳಿಸಿದಾಗ ಭಡಕ್ಕನೆ ಎದ್ದು ಬಚ್ಚಲು ಮನೆಗೆ ಧಾವಿಸಿ ಕಣ್ಣು ಮೋರೆ ತೊಳೆದುಕೊಂಡೆ. ಹೊರಗೆ ಬಂದಾಗ, ಕಣ್ಣ ಮುಂದೆ ನಿಂತ ಹೆಂಡತಿಯನ್ನು ನೋಡಿ ದಂಗುಬಡಿದು ಹೋದೆ. ಏನೋ ಕೆಂಗನಸನ್ನು ನೋಡಿ ಬಿಳಿಚಿಕೊಂಡವಳು ನಿದ್ದೆಯಲ್ಲೇ ಎದ್ದು ಬಂದವಳ ಹಾಗೆ ತೂರಾಡುತ್ತ ಬಂದು ನನ್ನನ್ನು ನೇರವಾಗಿ ಸಂಧಿಸಿ ಕೇಳಿದಳು – "ನಿಮ್ಮ ಗೆಳೆಯರಲ್ಲಿ ಒಬ್ಬನಿಗೂ ಮಗೂನ ನೆನಪೇ ಆಗಬಾರದ ಹಗೆ ಅದೆಂಥ ಕತೆ ಬರೆದಿರೋ, ಅವಳ ಬಗ್ಗೇ ಕತೆ ಬರೆಯುತ್ತೇನೆ ಎಂದವರು? ಅಥವಾ ನಿಮ್ಮ ಗೆಳೆಯರೇ ಅಂಥವರೋ? ಬಿಯರ್ ಕುಡಿದು ಪಕೋಡಾ ತಿಂದು ಸಂತೋಷಿಸುವಂತೆ ಅದು ಹೇಗೆ ಹೊಟ್ಟೆಯ ಮಗುವಿನ ಸಾವನ್ನು ಚಿತ್ರಿಸಿದಿರೋ... ಬೆಂಕಿಬಿತ್ತು ನಿಮ್ಮ ಸಾಹಿತ್ಯಕ್ಕೆ... ಸುಟ್ಟುಹಾಕಿ... ಇನ್ನೆಂದಾದರೂ ಕತೆ ಬರೆದಿರಾದರೆ ಮಗುವಿನ ಅಣೆಯಿದೆ ನಿಮಗೆ.." ಫಿಟ್ಸ್ ಬಂದವಳ ಹಾಗೆ ಹಲ್ಲು ಕಡಿಯುತ್ತ ಕುರ್ಚಿಯಲ್ಲಿ ಕುಸಿದಳು. ಅವಳ ಕೈಕಾಲು ಸೆಟೆದ ರೀತಿ ಚಿಂತೆಗೆ ಕಾರಣವಾಗಿ ಡಾಕ್ಟರರನ್ನೂ ಕರೆಯಿಸಬೇಕಾಯಿತು. "she is terribly angry with somebody... ಉದ್ರೇಕಕ್ಕೆ ಕಾರಣವಾಗುವಂತಹದನ್ನು ಏನನ್ನೂ ಆಡಲು ಹೋಗಬೇಡಿ," ಎಂದು ಹೇಳಿ

ಇಂಜೆಕ್ಷನ್ ಚುಚ್ಚಿದರು. ರಾತ್ರಿಮಲಗುವ ಮೊದಲು ಕೊಡಲು ಗುಳಿಗೆ ಕೊಟ್ಟರು. ಟ್ರಂಕ್ವಿಲ್ರಾಜರ್ ಇದ್ದ ಹಾಗೆ ತೋರಿತು.

ರಾತ್ರಿ, ಇನ್ನೂ ಡಾಕ್ಟರರು ಕೊಟ್ಟ ಔಷಧಿಗಳ ಗುಂಗುನಲ್ಲಿ ಮಲಗಿದ ಹೆಂಡತಿಯ ಮಗ್ಗುಲಲ್ಲಿ ಅಡ್ಡವಾದಾಗ ಮಧ್ಯಾಹ್ನದ ಘಟನೆ ನೆನಪಿಗೆ ಬರಹತ್ತಿತ್ತು. ಸಿಟ್ಟಿನಿಂದ ಅವುಡುಕಚ್ಚಿದ ಆವೇಶಕ್ಕೇ ಉಸಿರುಗಟ್ಟಿ ಮಾತೇ ನಿಂತುಹೋದ ಅವಳ ಅವಸ್ಥೆಯನ್ನು ನೆನೆಯುತ್ತಿರುವಾಗ ಸರಕ್ಕನೆ ಹೊಳೆದುಹೋಯಿತು; ಜಾನಕಿಯ ಬಗ್ಗೆ ನೇರವಾಗಿ ಬರೆಯುವುದು ಅಸಾಧ್ಯವಾದಾಗ ನಾನು ಅನುಭವಿಸಿದ ಉಸಿರುಕಟ್ಟೇ ನೀರು ತುಂಬಿದ ಖನಿಯೊಳಗೆ ಸಿಕ್ಕವರು ಉಸಿರುಗಟ್ಟಿ ವಿಲಿವಿಲಿ ಒದ್ದಾಡಿ ಸಾಯುವ ಚಿತ್ರಕ್ಕೆ ಜೀವಕಳೆ ತುಂಬಿತ್ತು ಎನ್ನುವುದು ನನ್ನ ಬರವಣಿಗೆಯ ಬಾಯನ್ನೇ ಕಟ್ಟಿಬಿಟ್ಟ ಜಾಣರು ಹಾಗೂ ಬಾಂದ್ರಾದ ಹಾಯ್ ವೇ ಗುಂಟ ಹರಿದ ನೀರಿನ ಪೈಪು ಕಣ್ಣ ಮುಂದೆ ನಿಂತಾಗ ಚಸ್ನಾಲದ ಖನಿ ಹುಟ್ಟಿಕೊಂಡಿತ್ತು ಎನ್ನುವುದು. ಈ ವಿಚಾರದ ಹಿಂದೆಯೇ ಬಂದ ಇನ್ನೊಂದು ವಿಚಾರದಿಂದ ತಲ್ಲಣಿಸಿ ಹಾಸಿಗೆಯಲ್ಲಿ ಎದ್ದೇ ಕುಳಿತೆ: ಕೊನೆಯ ಗಳಿಗೆಯಲ್ಲಿ ಜನಕಿ ಮಾಡಿದ ವಿಚಿತ್ರ ಪ್ರಾರ್ಥನೆ ನಮ್ಮ ನೆನಪಿನಲ್ಲಿ ಉಳಿಯುವ ಅವಳ ಬಯಕೆಯ ಫಲವಾಗಿತ್ತೇ? ನಾವು ತನ್ನನ್ನು ಮರೆಯಬಹುದೆಂದು ಬಗೆದು ಹೆದರಿಕೊಂಡಳೇ ಹುಡುಗಿ?

ಹಾಸಿಗೆಯಲ್ಲಿ ಕುಳಿತಲ್ಲೇ, ಹಿಂದೆ ಎಂದೂ ಮಾಡಿರದ ಹಾಗೆ ಕೈ ಮುಗಿದು ಪ್ರಾರ್ಥಿಸಿದೆ: " ದೇವರೇ, ಎಲ್ಲರಿಗೂ ಅನ್ನ, ಬಟ್ಟೆ, ಇರಲು ಜಾಗ, ವಿದ್ಯೆ, ಬುದ್ದಿ ನೌಕರಿ ಇರುವಂತಹ ಜಾತಿಗಳಿಲ್ಲದ, ವರ್ಗಭೇದವಿಲ್ಲದ, ಶೋಷಣೆ ಇಲ್ಲದ ಸುಖೀ ಸಮಾಜ ಹುಟ್ಟಿಬಂದಾಗ ಅದರಲ್ಲಿ ನಮ್ಮ ಚಿಕ್ಕ ಜಾನಕಿಯ ಬಗ್ಗೆ ಕತೆ ಬರೆಯುವ, ಬರೆದಾಗ ಪ್ರೀತಿಯಿಂದ ಓದುವ ಜನರೂ ಇರಲಿ..."

ಅಪ್ಪನನ್ನೇ ಅಣ್ಣಾ ಎಂದು ಕರೆಯುತ್ತಿದ್ದ ನಮ್ಮ ಜಾನಕಿ ಆ ರಾತ್ರಿ ಮೊದಲ ಬಾರಿಗೆ ನನ್ನ ಕನಸಿನಲ್ಲಿ ಬಂದು ಸಿಹಿಯಾಗಿ ನಕ್ಕಳು. ಎಷ್ಟು ಸಿಹಿಯಾಗಿ ಎಂದರೆ ಬೆಳಿಗ್ಗೆ ಎಚ್ಚರವಾಗಿ ಹಾಸಿಗೆಯಿಂದ ಏಳುತ್ತಿರುವಾಗಲೇ ಮನಸ್ಸನ್ನು ಮುತ್ತಿ ಹುಡುಕುವುದರಲ್ಲಿ ತೊಡಗಿರುವಂಥ ಅನ್ನಿಸಿಕೆ. ಹೆಂಡತಿ ಹಾಸಿಗೆಯಲ್ಲಿರಲಿಲ್ಲ. ಅಡಿಗೆಯ ಮನೆಯಲ್ಲಿ ಚಹದ ಸಿದ್ದತೆಯಲ್ಲಿರಬೇಕು ಎಂದುಕೊಳ್ಳುವಷ್ಟರಲ್ಲಿ ನಿನ್ನೆ ನಡೆದದ್ದೆಲ್ಲವೂ ನೆನಪಿಗೆ ಬರಹತ್ತಿದ್ದೇ ನನ್ನ ಮನಸ್ಸು ಒಳಗೊಳಗೇ ಒಂದು ದೊಡ್ಡ ನಿರ್ಧಾರಕ್ಕೆ ಸಿದ್ದವಾಗುತ್ತಿದೆ ಎನ್ನುವಂಥ ಅರಿವು ಹಾಗೆ ಸಿದ್ದವಾಗುವುದೇ ಕತೆ ಬರೆದದ್ದರ ಹಿಂದಿನ ಪ್ರೇರಣೆಯಾಗಿದ್ದಿರಬಹುದೆಂಬ ಗುಮಾನಿ ಮೂಡಿ ನಿಂತ ರಭಸಕ್ಕೆ ಹಸಿಗೆ ಬಿಟ್ಟಿದ್ದು ಮೋರೆ ತೊಳೆಯುವ ಪುರಸತ್ತೂ ಇಲ್ಲದವನ ಹಾಗೆ ಹೆಂಡತಿಯನ್ನು ಹುಡುಕಿ ಅಡಿಗೆಯ ಮನೆಗೆ ಧಾವಿಸಿದೆ. ಅವಳು ಕಂಡದ್ದೇ; "ಹಿಂದೊಮ್ಮೆ ನೀನೇ ಹೇಳಿದ್ದೆಯಲ್ಲ, ಅದಕ್ಕೀಗ ನಾನು ಸಿದ್ದನಾಗಿದ್ದೇನೆ. ನಾಷ್ಟಾ ಮುಗಿಸಿದ್ದೇ ಹೊರಡೋಣ" ಎಂದೆ. ಸಣ್ಣ ಮಗುವಿನ ಹಾಗೆ ಬಡಬಡಿಸಿದ್ದರ ತುದಿ ಬುಡ ಗೊತ್ತಾಗದೇ ನನ್ನನ್ನೇ ಮಿಕಿಮಿಕಿ ಕಣ್ಣುಬಿಟ್ಟು ನೋಡುತ್ತ ನಿಂತುಬಿಟ್ಟ ಹೆಂಡತಿಯ ಕುತೂಹಲ ನಿವಾರಿಸುವ ಗೋಜಿಗೆ ಹೋಗದೇ ಪ್ರಾತರ್ವಿಧಿಗಳನ್ನು ಮುಗಿಸಲು ಹೊರಟೆ. ನಾಷ್ಟಾಗೆ ಕುಳಿತಾಗ ಹೇಳಿದೆ "ಅನಾಥಾಶ್ರಮಕ್ಕೆ ಹೋಗಿ ಒಂದು ಮಗು ತರೋಣ" ಎನ್ನುವಷ್ಟರಲ್ಲಿ ಗಂಟಲು ಬಿಗಿದುಬಂದಂತಾಗಿ ಮಾತು ಮುಂದುವರಿಸದೆ ಹೆಂಡತಿಯ ಕಣ್ಣುಗಳಲ್ಲಿ ದೃಷ್ಟಿ ನೆಟ್ಟು ಕೂತೆ. ಅವಳು ಅದನ್ನೇ ಯೋಚಿಸುತ್ತಿದ್ದಳು ಎನ್ನುವ ಹಾಗೆ ಮಂದವಾಗಿ ನಕ್ಕು ಸಮ್ಮತಿ ಸೂಚಿಸಿದಳು. ಟ್ಯಾಕ್ಸಿ ಮಾಡಿ ಪರೇಲ್ ಕಡೆಗೆ ಹೊರಟಾಗ ಯಾರೂ ಮಾತನಾಡಲಿಲ್ಲ. ಅನಾಥಶ್ರಮದಿಂದ ಮಗು ತರುವ ಸೂಚನೆ ಹೆಂಡತಿ ಮಾಡಿದ್ದು ಹತ್ತು ವರ್ಷಗಳ ಹಿಂದೆ, ಜಾನಕಿಗೆ ಆಗ ಮೂರು ವರುಷ. ಮತ್ತೆ ಮಕ್ಕಳಾಗುವುದು ಹೆಂಡತಿಯ ಆರೋಗ್ಯಕ್ಕೆ ಅಪಾಯಕರವೆಂದು ಡಾಕ್ಟರರು ಹೇಳಿದ್ದರಿಂದ ಅಪರೇಷನ್ ಮಾಡಿಸಿಕೊಂಡಿದ್ದೆ. ಹೆಂಡತಿಗೋ ಗಂಡು ಮಗುವೊಂದು ಮನೆಯಲ್ಲಿರಬೇಕೆಂಬ ಆಸೆ. ಮಾತೃಸಹಜ ಅಂತಃಕರಣದಿಂದ ಮಾಡಿದ ದೊಡ್ಡ ಧೈರ್ಯದ ಈ

ಸೂಚನೆಗೆ ಒಪ್ಪುವ ಎದೆಗಾರಿಕೆ ನನಗಿರಲಿಲ್ಲ; ನಾನು ಸಾಕಲು ತಂದ ಮಗು ಕೂಡ ನನ್ನ ಕೊರಳ ಸುತ್ತಲೂ ಬಿಗಿಯುತ್ತಿದ್ದ ಮೂರು ಸಾವಿರ ವರುಷಗಳ ಜಂಗು ಹಿಡಿದ ಸರಪಣಿಯಲ್ಲಿ ಇನ್ನೋಂದು ಕೊಂಡಿಯಾಗಿ ಪಡಬಹುದಾದ ಯಾತನೆಯ ಕಲ್ಪನೆಯಿಂದಲೇ ಹೆದರೆ ಬೇಡವೆಂದಿದ್ದೆ – ಆಗ, ಈಗ ಮತ್ತೇ ಹಿಂದೆಗೆಯುವುದು ಬೇಡವೆನ್ನಿಸಿತು ಸಹಜ ಸ್ಫೂರ್ತಿಯಿಂದ ಒದಗಿದ ಈ ಕೃತ್ಯದ ಫಲವಾಗಿ ಮನೆಗೆ ಬಂದ ಮಗು ನಮ್ಮ ಮಗುವಾಗಿ ಬೆಳೆದ ಮಾತ್ರಕ್ಕೇ ಕಷ್ಟಪಡುವಂತಾಗುವುದಾದರೆ ಹೆದರಬೇಕಾಗಿಲ್ಲ. ಎಂಥ ಕಠಿಣ ಪರಿಸ್ಥಿತಿಯಲ್ಲೂ ಅನ್ಯಾಯಕ್ಕೆ ಬಾಗದೇ ತಲೆಯೆತ್ತಿ ನಿಲ್ಲುವ ತಾಕತ್ತು, ಹೋರಾಡುವ ಧೈರ್ಯ ಮಾನವ ಚೈತನ್ಯಕ್ಕೇ ಇದ್ದೇ ಇರುತ್ತವೆ…

ಟಾಕ್ಸಿ ಶಿವಾಜಿ ಪಾರ್ಕನ್ನು ಸಮೀಪಿಸುತ್ತಿರುವಾಗ, ನಾನು ತರಬಯಸಿದ್ದು ಹೆಣ್ಣು ಮಗುವೆಂದು ಹೆಂಡತಿಗೆ ಹೇಗೆ ತಿಳಿಸುವುದು ಎಂಬ ವಿಚಾರದಲ್ಲಿ ತೊಡಗಿರುವಗ ಅವಳೇ ಕೇಳಿದಳು; "ನಾವೀಗ ತರಲು ಹೊರಟದ್ದು ಹೆಣ್ಣುಮಗುವನ್ನೋ ಗಂಡುಮಗುವನ್ನೋ ಎಂಬುದನ್ನು ಹೇಳಲೇ ಇಲ್ಲ?" ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಆದರೆ ಅದರತ್ತ ಲಕ್ಷ್ಯವಿಲ್ಲದ ಹೆಂಡತಿ "ಹೆಣ್ಣು ಮಗುವನ್ನೇ ತರೋಣ, ಆಗದೇ? ಅವಳನ್ನು ಜಾನಕಿಯೆಂದೇ ಕರೆಯೋಣ" ಎಂದಳು. ಹಾಗೆ ಅನ್ನುವಾಗ ನನ್ನ ಕಡೆಗೆ ನೋಡುತ್ತಿರಲಿಲ್ಲ ಮಾತ್ರ. ಕಣ್ಣುಗಳಲ್ಲಿ ನೀರು ತುಂಬಿಬಹುದೆಂಬ ಅನುಮನ ಬಂತು… ಕೊನೆಗೂ ನಮ್ಮ ಜತೆಗೆ ಮನೆಗೆ ಬಂದದ್ದು ಹೆಣ್ಣುಮಗುವೇ. ಟ್ಯಾಕ್ಸಿಯಲ್ಲಿ ಕುಳಿತು ಮನೆಗೆ ಹಿಂತಿರುಗುವಾಗ ಆರು ದಿನಗಳ ಎಳೆಜೀವ ಬಿಳಿಯ ಬಟ್ಟೆಯೊಂದರಲ್ಲಿ ಸುತ್ತಿದ ಸಣ್ಣ ಪೊಟ್ಟಣವಾಗಿ ಹೆಂಡತಿಯ ತೊಡೆಗಳ ಮೇಲೆ ಮಲಗಿದ ದೃಶ್ಯ ಇನ್ನೂ ನೆನಪಿನಿಂದ ಮಾಸಿಲ್ಲ. ಈ ಮಗುವನ್ನೇ ನಾವು ತರಲು ಕಾರಣವಾದ ವೃದ್ಧ ದಾದಿಯ ಮಾತುಗಳನ್ನೂ ಮರೆತಿಲ್ಲ "ದೇವರು ಕಳಿಸಿದ ಹಗೆ ಬಂದಿರಿ. ನೋಡಿ, ಈ ನಿಷ್ಪಾಪ ಜೀವದ ಮುದ್ದೆಯನ್ನು. ಮಾಹೀಮ್ ಖಾಡಿಯ ಜೋಪಡಪಟ್ಟಿಗಳ ಇದಿರಿನ ನೀರಿನ ಪೈಪ್ ಹತ್ತಿರ ಬಿಟ್ಟು ಹೋಗಿದ್ದರಂತೆ. ಎಷ್ಟು ಸುಂದರವಾಗಿದೆ ನೋಡಿ. ಇಷ್ಟು ಸಣ್ಣ ಮಗುವನ್ನು ನೋಡಿಕೊಳ್ಳುವ ವ್ಯವಸ್ಥೆ ಇಲ್ಲಿ ಇಲ್ಲವೇ ಇಲ್ಲ. ಸತ್ತೇ ಹೋದಿತೇನೋ. ಮನೆಗೆ ಒಯ್ದು ಬದುಕಿಸಿಕೊಳ್ಳಿ. ದೈವದಲ್ಲಿದ್ದರೆ ದೊಡ್ಡ ಜೀವವಾಗಿ ಬೆಳೆದೀತು…" ಆಶ್ರಮಕ್ಕೆ ಬಂದ ಪ್ರತಿಯೊಬ್ಬರಿಗೂ ಅಭ್ಯಾಸಬಲದಿಂದಲೇ ಆಡುತ್ತಿದ್ದ ಮಾತಾಗಿರಬಹುದಾದರೂ ನಮ್ಮನ್ನು ಮಾತ್ರ ಕಲಕಿಬಿಟ್ಟಿತ್ತು. ಕತೆಯೊಳಗೆ ಬಂದ ಮಾಹೀಮ್ ಖಾಡಿಯೇ ಈಗ ವಾಸ್ತವ ಘಟನೆಯೋಂದಕ್ಕೆ ಗಂಟುಹಾಕಿಕೊಂಡಿದ್ದರ ಆಕಸ್ಮಿಕ ಕೂಡ ಆ ಕ್ಷಣದಲ್ಲಂತೂ ಮನಸ್ಸಿಗೆ ನಾಟಲಿಲ್ಲ…

ಜಾನಕಿಗೀಗ ಒಂದು ವರ್ಷ. ಬರುವ ರಲಿವಾರ ಅವಳ ಮೊದಲ ಹುಟ್ಟುಹಬ್ಬ. ಡಾಕ್ಟರ್ ಆನಂದ ಹಾಗೂ ನರ್ಸ್ ಮೇರಿ ಬಹಳ ಸಂತೋಷದಿಂದ ಬರಲು ಒಪ್ಪಿಕೊಂಡಿದ್ದಾರೆ. ನೀವೂ ಬನ್ನಿ. ನಮ್ಮಿಬ್ಬರನ್ನು ಮತ್ತೆ ಬದುಕಿನತ್ತ ಮುಖ ಮಾಡಲು ಹಚ್ಚಿದ ಈ ಚೈತನ್ಯವನ್ನೂ ನೀವೂ ನೋಡಿ ಮಲಗಿದಲ್ಲೇ ಮಲಗಿರದೇ ಎದ್ದು ಕೂಡ್ರಬೇಕು ಎನ್ನುವ, ಕೂರಿಸಿದಲ್ಲೇ ಕೂತಿರದೆ ಎದ್ದು ನಿಲ್ಲಬೇಕು ಎನ್ನುವ, ಪುಟಾಣಿ ಕೈಗಳೆರಡರಲ್ಲಿ ನಾಲ್ಕೂ ದಿಕ್ಕುಗಳನ್ನು ಹಿಡಿಯಬೇಕೆನ್ನುವ ಅದರ ಹುಮ್ಮಸ್ಸಿನ ಕೇಕೆಯನ್ನು ನೀವೂ ಕೇಳಿ.. ನನ್ನ 'ಚಸ್ನಾಲಾ' ಕತೆಯನ್ನು ತಲೆಯ ಮೇಲಿರಿಸಿ ಕುಣಿದಾಡಿದ ಮೂವರೂ ಜಾಣರನ್ನೂ ಕರೆದಿದ್ದೆ. ಆದರೆ ಅವರನ್ನು ನೀವು ಕಾಣಲಾರಿರಿ. 'ಚಸ್ನಾಲಾ'ದ ನಂತರ ನಾನು ಕತೆಯನ್ನೇ ಬರೆಯದಿದ್ದುದರಿಂದ ಬಹಳ ಸಿಟ್ಟುಗೊಂಡ ಅವರೂ ಬೇರೆಬೇರೆ ನೆಪ ಹೇಳಿ ತಪ್ಪಿಸಿಕೊಂಡರು. ಫೋನ್ ಮೇಲೆ ಮಾತಾಡಿಸಿದಾಗ – Wishing the function every success" J£ÀÄßªÀ §zÀ®Ä "Please accept greeting number twentyone" ಎಂದಿದ್ದ ಒಬ್ಬಾತ, ತನ್ನ ಮತಿನ ವ್ಯಂಗ್ಯವನ್ನು ತಾನೇ ಮೆಚ್ಚುತ್ತ. ಅವನಿಗಂದು ರಾತ್ರಿ ಪಾಳಿಯಂತೆ. ಇನ್ನಿಬ್ಬರಿಗೆ ತೇಂಡೂಲ್ಕರರ 'ಘಾಶೀರಾಮ ಕೋತ್ವಾಲ್' ಮರಾಠಿ ನಾಟಕಕ್ಕೆ ಹೋಗುವದಿತ್ತು ಅದೇ ದಿನ. ಹಿಂದೆ ನೋಡಿದ ನಾಟಕವೇ. ಆದರೆ ಯಾವುದೋ

ಒಂದು ಸೆಮಿನಾರಿನಲ್ಲಿ ಈ ನಾಟಕದ ಸಾಮಾಜಿಕ ಮಹತ್ವವನ್ನೂ, ಇತಿಹಾಸದ ಹೊಟ್ಟೆಯೊಳಗಿನಿಂದಲೇ ಎದ್ದುಬಂದ ವಸ್ತುವಾದರೂ ನಾಟಕವಾಗುವ ವರ್ತಮಾನದ ಮೇಲೆ ಹೊಸ ಬೆಳಕು ಬೀರುತ್ತ ಸಮಕಾಲಿನರಿಗೆ ಅರ್ಥಪೂರ್ಣವಾಗುವ ಅದ್ಭುತ ರೀತಿಯನ್ನು ತೋರಿಸಿಕೊಟ್ಟ ಅವರ ವಿಶ್ಲೇಷಣಾತ್ಮಕ ಪ್ರಬಂದವನ್ನು ಬಹಳವಾಗಿ ಮೆಚ್ಚಿದ್ದ ತೇಂಡೂಲ್ಕರರೇ ಸದ್ಯದ ಪ್ರಯೋಗಕ್ಕೇ ಎರಡು ಕಾಂಪ್ಲಿಮೆಂಟರಿ ಪಾಸುಗಳನ್ನು ಕಳಿಸಿದ್ದಾರಂತೆ. ತುಂಬ ಖುಷಿಯಲ್ಲಿದ್ದರು. ಫೋನ್ ಕೆಳಗಿಡುವ ಮೊದಲು ನನಗಾದ ನಿರಾಸೆಯನ್ನು ಊಹಿಸದವರಂತೆ – "Tell you what" ಎಂದರು. "ಈ ಹೊಸ ಅನುಭವವನ್ನೂ ಒಂದು ಕತೆಯಾಗಿಸು. sequel to 'chasnala'. ಆಗ ಬರುತ್ತೇವೆ..." ಎಂದರು. ನೀವು ಮಾತ್ರ ಬರದಿರಬೇಡಿ. 'ಚಸ್ನಾಲಾ'ದ ನಂತರದ ಕೃತಿ ನಮ್ಮ ಮನೆಯ ತೊಟ್ಟಿಲಲ್ಲಿ ನಗುತ್ತಿರುವುದನ್ನು ನೋಡುವಿರಂತೆ. ಮನೆ ಸ್ವಲ್ಪ ಚಿಕ್ಕದು. ಆದರೇನಂತೆ ಸಾಂತಕ್ರೂಝಿನಲ್ಲಿ ಲಿಂಕಿಂಗ್ ರೋಡಿನ ಮೇಲೆ ಪೋಸ್ಟಾಫಿಸು ಇದೆಯಲ್ಲ, ಅದರ ಮಗ್ಗುಲಲ್ಲೇ ಎರಡು ಮಜುಲುಗಳ ಒಂದು ಹಳೇ ಕಟ್ಟಡವಿದೆ. ಅದರ ತಳ ಮಜಲೆಯಲ್ಲೇ ನಮ್ಮ ಮನೆ. ಇನ್ಶೂರೆನ್ಸ್ ಏಜೆಂಟರ ಮನೆಯೆಂದರೆ ಯಾರೂ ಹೇಳುತ್ತಾರೆ. ಇನ್ನೂ ಹೆಚ್ಚಿನ ಗುರುತು ಬೇಕಾದರೆ ಮನೆಯ ಇದಿರಲ್ಲೇ ನುಗ್ಗಿ ಮರವಿದೆ. ಸಣ್ಣ ಬಾಳೆಯ ಹಿಂಡು, ಸೀತಾಫಲದ ಗಿಡಗಳಿವೆ. ಜಗಲಿಯ ಮೇಲೆ ನಮ್ಮ ಜಾನಕಿಯೇ ಹಚ್ಚಿದ ಗುಲಾಬಿ ಗಿಡಗಳ ಎರಡು ಕುಂಡಗಳಿವೆ. ಅಷ್ಟೆಲ್ಲ ಯಾಕೆ – ಅಂಗಳದಲ್ಲಿ ಬಂದು ನಿಂತರೆ ಸಾಕು, ಒಳಗಿನಿಂದ ಬರುವ ಜಾನಕಿಯ ಉಲ್ಲಾಸದ ಹುಂಕಾರ ಕೇಳಿಸುತ್ತದೆ. ಬನ್ನಿ.

****

ಮಾರಿಕೊಂಡವರು

– ದೇವನೂರು ಮಹಾದೇವ

ಸಂಜೆಯ ಕೆಂಪಿಗೆ ಮೊಖಹಾಕಿ ಕುಂತ ಬೀರನ ತಲೆ ಒಳಗೆ ಕಿಟ್ಟಪ್ಪ ಥರಾವರಿ ಮೂಡತೊಡಗಿದನು. ಕಿಟ್ಟಪ್ಪ ಮದುವೆಗೆ ಒಪ್ಪಿ ಸಾಯುವ ಅಪ್ಪನಿಗೆ ನೆಮ್ಮದಿ ತರಲಿಲ್ಲ. ಅವನಿಗೆ ಅವನ ಹಠವೆ ದೊಡ್ಡದಾಯ್ತು. ಮಣ್ಣಾಕುವಾಗ ಆಗ ಗ್ವಣಕಾತಿ ಹಿಂದೆ ಸುತ್ತಿ ಫೇಲಾಗಿ ಹಟ್ಟಿಗೆ ಬಂದರೂ ಅವಳ ಹುಚ್ಚು ಬಿಡಲಿಲ್ಲ. ವಾರ ಹದಿನೈದು ದಿನಕ್ಕೆ ಮೈಸ್ರರಿಗೆ ಹೋಗುವುದೂ ತಪ್ಪಲಿಲ್ಲ. ಗೌಡರು ಹೇಳುವವರೆಗೂ ಹೇಳಿದರು, ಬೈದರು, ಕೇಳಲಿಲ್ಲ. ವಯಸ್ಸಿಗೆ ಬಂದ ಮಗ, ಈಗೀಗಂತು ಗ್ನಾಡರು ಕಿಟ್ಟಪ್ಪ ಏನ ಮಾಡಿದರೂ ಕೇಳುವುದೇ ಇಲ್ಲ. 'ನಾ ಸಾಚೊವರ್ಗೆ ಆದ್ರೂ, ಸುಮ್ಗಿರೂ ಬಡ್ಡೀಮಗ್ನೆ ಅಚಿದ್ರೂ ಕೇಳೊಲ್ಲ, ಇನ್ನು ನಾನೇನು ಮಾಡ್ಲಿ ? ಮನೆ ಮಾರಿದ್ರೂ ಚಿಂತಿಲ್ಲ, ಎಚಿದೊ ಹಾಳಾಯ್ತು, ಈ ಖದೀಮ ಬೊಡ್ಡೆದ್ನ ಪಳ್ಳಿಗೆ ಕಳಿಸ್ದೆ ನೀಗಿಲು ಹಿಡಿಸಬೇಕಿತ್ತು, ನಾನೆ ತಪ್ಪು ಮಾಡಿ ಅವ್ನ ಅನ್ನೋದು ಅಚಿದರೆ ' ಪೂರ್ತಿ ಹೇಲದ ಉಳಿದುದ ನುಂಗಿ ಲಂದು ಸಲ ಕಹಿ ಮೋರೆ ಮಾಡಿ ನಕ್ಕು ಬಿಡುವರು. ಕೂತು ಉಂಡರೂ ಮುಗಿಯದಂಥ ಆಸ್ತಿಲಿ ಕಿಟ್ಟಪ್ಪ ಹೆಂಗಿರಬೇಕು ? ಅದು ಬಿಟ್ಟು ಈ ಗುಳ್ಳಲ್ಲೆ ಎಷ್ಟು ದಿನ

ಕುಡಿದು ಬಿದ್ದಿಲ್ಲ ? ವಾರ ಹದಿನೈದು ದಿನಕ್ಕೆ ಇದನ್ನೆ ಪಟ್ಟಾಗಿ ಹಿಡಿದು ಬುಟ್ಟವನೆ, ಎಷ್ಟು ಹೇಳಿದರೂ ವಸಕಿಬಿಡುತ್ತಾನೆ, ಹೆಚ್ಚಿಗೆ ಮಾತಾಡೋಕೆ ಅನ್ನ ಹಾಕುವ ದಣಿ

ಬರುವ ಯುಗಾದಿಗೆ ಇಲ್ಲಿಗೆ ಒಂದು ವರ್ಷ ಸಂದುತ್ತದೆ. ದಿಕ್ಕುದೆಸೆ ಕಾಣದೆ ಗಂಟು ಮೂಟೆ ಕಟ್ಟಿ ಲಕ್ಷ್ಮಿ ಯೊಡನೆ ಹೊರಟಾಗ ಕೈಲಿ ಬಿಡುಗಾಸಿಲ್ಲ. ರಾತ್ರಿ ರೈಲು ಹತ್ತಿ ಹಿಂದಲ ಡಬ್ಬೀಲಿ ಕೂತು ಮೈಸೂರು ತಲುಪಿದಾಗ ಹೊತ್ತು ಮೀರಿತ್ತು. ಸ್ಟೇಷನ್ನಿನಲ್ಲೆ ಮಲಗಿದ್ದು ನಲ್ಲೀಲಿ ಮೊಖ ತೊಳೆದು ಏನು ಮಾಡಲು ತೋಚದೆ ತಲೆ ಮೇಲೆ ಕೈ ಹೊತ್ತು ಕೂತಾಗ ಲಕ್ಷ್ಮಿಯೇ ನಚಿಜನಗೂಡು ಕಡೆಗೆ ಹೋಗುವ ಅಂದದ್ದು. ಆಗಲಿ ಎಚಿದು ಹೊರಟಿದ್ದ ರೈಲು ಹತ್ತಿ ಕೂತು ಟಿಕೇಟು ಕೇಳಲು ಬಂದವರಕೈಲಿ ಸಿಕ್ಕಿ ಫಜೀತಿ ಪಡುವಾಗಲೆ ಗೌಡರು ಅವರಿಗೆ ಸಮಾಧಾನ ಮಾಡಿ ಕಳಿಸಿ ಯಾರು ಎಂತು ಎತ್ತ ಅಂತ ವಿಚಾರಿಸಿ, ಕೆಲಸಕ್ಕಾಗಿ ಊರು ಬಿಟ್ಟು ಬಂದಿದ್ದೀವಿ ಅನು ತಲೆ ವಸಿ ಹೊತ್ತು ಯೋಚಿಸಿ 'ನಮ್ಮ ತೋಟದಲ್ಲೆ ಕೆಲ್ಸ ಮಾಡಾಕೆ ತಳವಾಗಿ ಇರೊ ಎರಡಳು ಬೇಕು. ಅಲ್ಲೆ ಮನೆವ್ಮಠವಿದೆ, ನೀವು ಇರೋದಾದ್ರೆ ' ಅಂದರು ಗೌಡರು ದೇವರಂತೆ ಕಂಡರು.

ಊರ ಕಡೆ ಬೀರ ತಿರುಗಿ ನೋಡಿದನು. ಆಗಲೇ ಹೊತ್ತು ಮುಳಗಿ ಕತ್ತಲಾಗಿತ್ತು. ಇಷ್ಟಕ್ಕಾಗಲೆ ಕಿಟ್ಟಪ್ಪ ಬರಬೇಕಿತ್ತಲ್ಲ ಎಚಿದು ಯೋಚಿಸುತ್ತ ಬೀಡಿ ಹತ್ತಿಸಿದನು. ದೂರದಲ್ಲಿ ಒಚಿದು ಬ್ಯಾಟರಿ ಬೆಳಕು ಹತ್ತಿರವಾಗುತ್ತಿತ್ತು. ಕತ್ತಲ ಸೀಳಿ ಹತ್ತಿರವಾಗುತ್ತಿದ್ದ ಬ್ಯಾಟರಿ ಬೆಳಕನ್ನೇ ನೋಡುತ್ತ ಅದು ಓಡಿದ ಕಡೆ ಕ್ಷಣ್ಣಾಡಿಸುತ್ತ ಹತ್ತಿರ ಬರುತ್ತಲೆ ನೋಡಿದಾಗ ಮಿಲ್ಲಿನ ಹುಡುಗ ಪಾಷ ಬಂದು ನಿಂತನು. ಬಂದವನೆ ' ಮೋಡರ್ನ್ನ ಕಾಯಲು ಕೆಟ್ಹೋಯ್ತಲೆ ಕಿಟ್ಟಪ್ಪನೋರು ಮೈಸೂರ್ಗೆ ತಕ್ಕಂಡೊದ್ರು, ಬರಕಿಲ್ವಂತೆ' ಅಂದ. 'ಅಂಗಾ' ಅಂದಾಗ ಪಾಷ ತಲೆಚುೂಡಿಸಿ 'ಹೋಗ್ತೀನಿಕಣ್ಣೋ' ಅಂದನು. 'ಆಗಲ್ಲಕನಣ್ಣಾ ಜನ ಜಾಸ್ತಿ ಕಾದವ್ರೆ ಮಿಲ್ನಲ್ಲಿ. ಈಗ ಸಣ್ಣ ಮಿಲ್ಲ ಓಡಿಸ್ತ ಅವ್ನಿ, ಹೇಳು ಅಚಿದ್ರು. ಹೇಳಾಕೆ ಬಂದಿ ಅಷ್ಟೆ' ಎಂದು ಸರಸರನೆ ಹೆಜ್ಜೆ ಇಟ್ಟನು. ಬೀರ ಕೆಮ್ಮಿ ಹತ್ತಿಸಿದ್ದ ಬೀಡಿ ಕೈಗೆ ಸುಡಲು ಮತ್ತೊಂದು ತೆಗೆದು ಅದಕ್ಕೆ ಮುತ್ತಿಕ್ಕಿಸಿ ಗುಡಿಸಲ ಒಳಕ್ಕೆ ನುಗ್ಗಿದನು.

ಲಕ್ಷ್ಮಿ ಅಂದುಕೊಂಡಳು : ಈಗೀಗ ತುಂಬ ಚಳಿ ಹಿಡಿಯುತ್ತೆ. ಒಳಗಿದ್ದರೂ ಇಷ್ಟು ಚಳಿ, ಇನ್ನು ಹೊರಗೆ ? ಅಪ್ಪನ ಆಸ್ತಿ ಅಚಿತ ಬೀರ ಯಾವಾಗಲೂ ಆ ಕಲ್ಲಿನ ಮೇಲೆ ಕೂತಿರುತ್ತಾನೆ. ಹೊರಕ್ಕೆ ಹೋಗಿದ್ದಾಗ ಬೇಕು ಅಂತ ಕೆಮ್ಮಿದರೂ ತಿರುಗಿ ನೋಡಲಿಲ್ಲ. ಕೊತಕೊತನೆ ಮರಳುತ್ತಿದ್ದ ಸಾರಿಗೆ ಉಪ್ಪು ಹಾಕಿದಳು. ಗಮ್ಮನೆ ವಾಸನೆ ಗುಡಿಸಲಿನ ಪೂರ್ತಿ ಹರಡಿತು. ನೆರಕೆ ಸದ್ದಾಗಲು ಬಗ್ಗಿ ನೋಡಿದಾಗ ಬೀರ ಬರುತ್ತಿದ್ದು ಕಿಟ್ಟಪ್ಪ ಇರಲಿಲ್ಲ. 'ಈವತ್ತು ಕಿಟ್ಟಪ್ಪ ಬರಕ್ಕಿಲ್ಲವಚಿತೆ ಕಮ್ಮಿ ಮೈಸೂರ್ಗೆ ಹೋಗುವನಚಿತೆ, ಪಾಷ ಹೇಳೋದ' ಎಚಿದವನೆ ಇಟ್ಟಿದ್ದ ಸರಾಪುಬಾಟಲಿ ಕಡೆ ನಡೆದನು. ಇಚಿದು ಕಿಟ್ಟಪ್ಪ ಬರದಿದ್ದರೆ ಎಲ್ಲವನ್ನು ಈ ದೈತ ಕುಡಿದು ಏನು ಅವಾಂತರ ಮಾಡುವನೋ ಎಂದು ಸಮಾಧಾನವೂ ಆಯ್ತು. ಅದರೊಡನೆ ನಗೂನು ಬಂತು.

ಅತ್ತ ಬೀರ ಹರಿವಾಣದ ಮುಂದೆ ಕೂತು ಸರಾಪಿನ ಎರಡು ಬಾಟಲಿಯ ಬಿರಡೆಗಳನ್ನೂ ಕಳೆದು ಪಕ್ಕದಲ್ಲಿ ಇಟ್ಟುಕೊಂಡನು. ಹಿಟ್ಟಿನೊಡನೆ ಬಂದ ಲಕ್ಷ್ಮಿಗೆ ನಗು ಬಂತು. ' ಐ ನಿನ್ನ ದರಿದ್ರ ಆಸೆಗೆ ಮಣ್ಣಾಕ–ವಸಿಕೊಡಿ' ಅಂದಳು. ಬೀರ ಕಕಕ ನಕ್ಕು 'ಈವೊತ್ತು ಹೊಟ್ಟೆ ಇರೊ ಅಷ್ಟು ಕುಡಿದು ತಿಂದು ನಿನ್ನ ಸುಲಿದುಬಿಡಬೇಕು ಅಚಿತ' ಅಚಿದನು. ಈಗ ಸುಮ್ಮನೆ ಅಚಿದರೂ ಕುಡಿದ ಮೇಲೆ ಹೇಳಿದ ಹಾಗೆ ಮಾಡುತ್ತಿದ್ದ ಅವ. ಚಳಿ ಅನಿಸಲು ಲಕ್ಷ್ಮಿ ಒಳಕ್ಕೆ ಬಂದು ಬೂದಿ ಮುಚ್ಚಿದ ಕೆಂಡ ಕೆದಕಿ ಕೈ

ಕಾಯಿಸತೊಡಗಿದಳು. ಬೀರ ಒಚಿದೆ ಸಮ ಗ್ಟುಟಗಟ ಕುಡಿಯೋದು ಮೂಳೆ ಕಡಿಯೋದು ಕೇಳಿಸುತ್ತಿತ್ತು. 'ಇನ್ನೊಸಿ ತಕ್ಕಂದು ಬಾಮ್ಮಿ' ಅಂದಾಗ ಲಕ್ಷ್ಮಿಗೆ ಅಚ್ಚರಿಯಾಗಿ ಅರೆ ಅವ್ನ ಎಷ್ಟು ತಿಂತಾನಪ್ಪ ದಯ್ಯ ಹಿಡಕಂಡವರಂತೆ ಅಂದುಕೊಂಡು ಮುಚ್ಚಲು ತುಂಬ ಮಾಂಸ ತುಂಬಿ ಕೋಣೆಯಿಚಿದ ಬಂದಳು. ಬೀರನ ಸುತ್ತ ಮೂಳೆಗಳು ಬಗೆಬಗೆಯಾಗಿ ಬಿದ್ದಿದ್ದವು. ಸರಾಪು ಒಂದುವರೆ ಬಾಟಲಿಯಷ್ಟು ಖಾಲಿಯಾಗಿತು. 'ಅವ್ವೀ ಇದೇನ ಮಾರಾಯ ದಯ್ಯದಂಗೆ ತಿನ್ತಿ ಅನ್ನಲು ಬಾಯಿಗೆ ಬಂದರೂ, ಕುಡಿದಿರುವನೆಂದು ಸುಮ್ಮನಾಗಿ ಮುಚ್ಚಲಲ್ಲಿ ಇದ್ದುದನ್ನು ಹರಿವಾಣಕ್ಕೆ ಬಗ್ಗಿಸಿದಳು. ಬೀರನ ಸುತ್ತ ಗಬ್ಬುವಾಸನೆ ಹರಡಿತ್ತು. ಲಕ್ಷ್ಮಿಗೆ ತಲೆ ತಿರುಗಿ ಓಕರಿಕೆ ಬರುವಂತಾಗಲು ಬಾಯಿಗೆ ಸೆರಗಿನ ಬಟ್ಟೆ ತುರುಕಿ ಕೋಣೆಗೆ ಓಡಿ ಬಂದು ಕುಂತಳು. ಬೀರ ಈಗೀಗ ಬದಲಾಯಿಸಿ ಹೋಗವನೆ. ಕುಡಿಯೋದು ಆಮೇಲ ಉಸಿರು ತೆಗೆದರೂ ಬೀಡಿ ಬೀಡಿ ಅಂತ ಇಳಿದುಹೋಗವನೆ, ಮೊದಲ ಕಳೆಯೇ ಇಲ್ಲ. ಎಷ್ಟು ಹೇಳಿದರೂ ತಳ್ಳಿ ಬಿಡುತ್ತಾನೆ. ಮಲ್ಲಿಪುರದ ಸಾವ್ಕಾರ್ರು ಕುಡಿದು ಎದೆಯೊಡೆದು ಸತ್ತೋದ ವಿಷ್ಯ ಹೇಳ್ತಲೆ ವಸಿ ಹೊತ್ತು ಸುಮ್ಮನಿದ್ದು 'ಯಾರು ಶಾಶ್ವತ ಹೇಳು' ಅಚಿದು ಒಚಿಥರಾ ನಕ್ಕ. ಅದಕ್ಕೆ ಕುಡಿಯೋದು ಬಿಟ್ಟರೆ ಮುಳುಗಿಹೋಗದು ಏನ ?' ಅಂದುದಕ್ಕೆ ಒಚಿದು ರೀತಿ ನನ್ನನ್ನೆ 'ನಾನು' ಅಂದು ನುಂಗಿಕೊಂಡನು.

ಬಗ್ಗಿ ನೋಡಿದರೆ ಬೀರ ಕಾಲುಚಾಚಿ ಆರಾಮ ಬಿದ್ದುಕೊಂಡಿದ್ದನು. ಒಚಿದು ತೊಟ್ಟು ಸರಾಪೂ ಇರಲಿಲ್ಲ. ಹರಿವಾಣದಲ್ಲಿ ಎರಡು ತುಕುಡ ಮಾಂಸ ಉಳಿದಿತ್ತು. 'ಥೂ ಇವ್ನ ಗೋಳೆ ಇಷ್ಟು' ಎಚಿದು ಗೊಣಗಿ ಹೊರಕ್ಕೆ ಬಂದು ಸುತ್ತ ಇದ್ದ ಮೂಳೆ ಗೋರಿ ಹರಿವಾಣಕ್ಕೆ ಹಾಕಿದಳು. ಅರೆಗಣ್ಣು ಬಿಟ್ಟಿದ್ದ ಬೀರ ಅಗಲವಾಗಿ ಕಣ್ಣು ತೆಗೆದರೆ ಕೆಂಡ ಕಂಡಂತಾಯ್ತು. ಅವನು ಒಚಿದೆರಡು ಸಲ ಹಾಹೊ ಅಚಿದು 'ಯಾವನೊ ಅವ್ನಿ ನನ್ನ ತವಕ ಬಂದಿರೊ ಧೀರ ?' ಅಂದನು. ಲಕ್ಷ್ಮಿ ಕ್ಯಾಣಸಾರದಿಂದ 'ಸುಮ್ಕೆಬಿದ್ಕೊ ಇನ್ನು' ಅಂದಾಗ 'ಓಯ್ ನನ್ನ ಲಚಮಿ ಬಾಚಿನ್ನ ಬಾ ನಾ ಯಾರೊ ಅಂತೀನಿ' ತವೆಯಲು ಯತ್ನಿಸಿ ಆಗದೆ ನೆಲಕ್ಕೆ ಒರಗಿ ಕಣ್ಣು ಮುಚ್ಚಿ ಲಚಮಿ ಲಚಮಿ ಎಚಿದು ಗೊರಗುಟ್ಟತೊಡಗಿದನು. ಲಕ್ಷ್ಮಿ ಕೋಣೆಯ ಮೂಲೆಯಲ್ಲಿ ಚಾಪೆಹಾಸಿ ಗೋಡೆಕಡೆಗೆ ತಿರುಗಿ ಬಿದ್ದು ಕೊಂಡಳು. ರಗ್ಗನ್ನು ಮೊಖತುಂಬ ಹೊದ್ದು ದೀಪವಾರಿಸಿದಳು.

ಕತ್ತಲು ಕವಚುತ್ತಲೆ 'ನಮ್ಮ ಸೂರ್ಯಪ್ಪ ಕಿತ್ಕೊಂಡವ ಯಾರ್ಲ ' ಬೀರ ನಿಧಾನವಾಗಿ ಕೇಳಿದನು. ಲಕ್ಷ್ಮಿಗೆ ತಡೆಯಲಾಗಲಿಲ್ಲ. ನಗುಬಂತು. ಗಟ್ಟಿಯಾಗಿ ನಕ್ಕುಬಿಟ್ಟಳು. 'ನಕ್ತಿಯಾ ? ನಗು ನಗು, ನೀನಲ್ಲೋ ರಾವುಗೀವು ಇರ್ಬೇಕು.' ಅದಕ್ಕೂ ಲಕ್ಷ್ಮಿ ಕಿಸಕಿಸ ನಕ್ಕಳು. 'ನೀ ಎಲ್ಲೋದ್ರೂ ಬುಡಕಿಲ್ಲ ನೋಡು. ಒಳ್ಳೆ ಮಾತ್ನಲ್ಲಿ ಬುಡು, ಇಲ್ದಿದ್ರೆ ' ಗಟ್ಟಿಯಾಗಿ ಕೂಗಿದ್ದಕ್ಕೆ ಲಕ್ಷ್ಮಿಗೆ ತಲೆ ಚಿಟ್ಟೆನಿಸಿತು. 'ಸುಮ್ನೆ ಬಿದ್ಕೊಳ್ಳದ ಕಲ್ತಗೊ, ಇನ್ನು ನನ್ನ ಗೋಳುಹುಯ್ಕೋಬೇಡ' ಅಂದಳು. ಬೀರ ಸ್ವಲ್ಪ ಹೊತ್ತು ಸುಮ್ಮನಿದ್ದನು. ದನಿ ಗುರುತು ಹಿಡಿದವನಂತೆ ನಕ್ಕು 'ಹೊಯ್ ಈಗ, ಗೊತ್ತಾಯ್ತು. ನನ ಲಚಮಿ, ಚಂದುಳ್ಳಿ ಲಚಮಿ' ಅಂದನು. ಲಕ್ಷ್ಮಿ ಮಾತಾಡಲಿಲ್ಲ 'ಇನ್ನೂ ನಾಚ್ಕೆಯಾ ನಿಂಗೆ ?' ಈಟು ದಿನ ಆದ್ರೂ ! ಬಾ ಅಂದರೆ ಬರ್ಬೇಕು. ಲಕ್ಷ್ಮಿ ಈಗಲೂ ಮಾತಾಡಲಿಲ್ಲ. ಎಳೆ ಕೂಸಂತೆ ನಕ್ಕಳು. ಬೀರನಿಗೆ ಕೋಪ ನೆತ್ತಿಗೇರಿತು. 'ನಾ ಕರೆದ್ರೂ ನೀ ಬರಾಕಿಲ್ವಮ್ಮಿ' ಅಂತಲೆ ಲಕ್ಷ್ಮಿ 'ಸುಮ್ನೆ ಬಿದ್ಕೊ ಇನ್ನು' ಗಡಸಿನಿಂದ ಹೇಳಿದಳು. ಏನಮ್ಮಿ ನಿನ್ನ ಧಿಮಾಕು ಇಷ್ಟಕ್ಕೂ ಬಂದುಬಿಟ್ಯಾ ಚೀರಿದ. ಲಕ್ಷ್ಮಿ ಏನನ್ನೊ ಗೊಣಗಿದಳು. 'ನೀ ಮಾತಾಡದಿಲ್ವ? ನನ್ನೊಂದ್ಗ ಯಾಕೆ ಮಾತಾಡ್ತಿ ಹೇಳು ಕಿಟ್ಟಪ್ಪನೊಂದಿಗೆ ಮಾತಾಡೋದ ಬಿಟ್ಟು. ಎಷ್ಟಾದ್ರೂ ಅವ ನಿನ್ನ ಮಿಂಡಾ ಅಲ್ವಾ ? ' ಎಂದನು. ಲಕ್ಷ್ಮಿಗೆ ಬಾನೇ ಬಂದು ಮೊಗಚಿಕೊಂಡಂತಾಯ್ತು. ಮೈಕೈ ಸಣ್ಣಕ್ಕೆ ನಡುಗಿದವು. ತುಂಬಾ ಧೈರ್ಯ ತಂದು 'ನೀ ಯ್ಯಾನ್ನ ಅನ್ನೋದು ?' ಅಂದು ಕಿವಿನಿಮಿರಿಸಿ

ಕೂತುಕೊಂಡಳು. 'ನಾ ಯ್ಯಾನ್ನ ಅನ್ನೋದು ಅಂತಿಯೇನಮ್ಮಿ. ಕೊತ್ತಿಕಣ್ಮಚ್ಕಂಡು ಹಾಲ್ಕುಡಿದ್ರ ಗೊತ್ತಾಗಲ್ವಂತೆ ! ಹೆಹ್ಹೆಹ್ಹೆ ಗತಿಕಾಣಿಸ್ತೀನಿ ಕಂದಾ.. ಬೆಳಾಗ್ಗಾಲಿ. ನೀನು ಇಲ್ಲ, ಅವ್ನೊ ಇಲ್ಲ. ಬಾವ್ಲ ತರದ್ ತರದ್ ಹಾಕ್ತೀನಿ. ನನ್ನನ್ನು ಅಷ್ಟಕ್ಕು ತಪರ ಅಂತ ತಿಳ್ಕಂಡಿವಿರಿ ! ಈಗ ಏನಾಯ್ತು ತಕ್ಕೊ ಬೆಳಗಾಗೋದೆ ಇಲ್ವಾ ? ನಾಳೆ ಅವ್ನು ಬರೋದೆ ಇಲ್ವಾ ? ಬಂದೆ ಬತ್ತಾನೆ. ಮಿಂಡಗಾತಿ ಮೊಖ ನೋಡಕೆ ' ಹಹಾ ನಕ್ಕು ಸ್ವಲ್ಪ ಹೊತ್ತು ಎಡಬಿಡದೆ ಕೆಮ್ಮಿ ಕ್ಯಾಕರಿಸಿ ಅಲ್ಲೆ ಉಗಿದು 'ಉಸ್ಸಪ್ಪೊ' ಅಂದು ಉಗುಳು ನುಂಗಿದನು. 'ಮಚ್ಚು ಮಡಗಿವನಿ ತೊಲೆ ಮ್ಯಾಗ.. ರಡಿ ರಡಿಯಾಗ್ಯೆತೆ' ಅಂದದ್ದು ಗಟ್ಟಿಯಾಗಿತ್ತು. ನೆಲಕ್ಕೆ ಕೈಯೂರಿ ಕೂತಳು. ಅವ ನಕ್ಕ. ಕೆಮ್ಮಿದ. ಉಸ್ಸಪ್ಪೊ ಅಂದ. ಕ್ಯಾಕರಿಸಿ ಉಗಿದ. ಚರ ಹೊತ್ತು ಸದ್ದಿಲ್ಲ. ಲಕ್ಷ್ಮಿ ಕುಳಿತೇ ಇದ್ದಳು. ತಲೆಗಿರ್ ಅನ್ನುತ್ತಿತ್ತು. ತೊಡೆಗಳುನಡುಗುತ್ತಿದ್ದವು. ಎದೆ ಡವಡವ ಹೊಡೆದುಕೊಳ್ಳುತ್ತಿತ್ತು. ವಸಿಹೊತ್ತಾದ ಮೇಲೆ ಗೊರಕೆ ಯಮದ ಗೊರಕೆ ಕೇಳಿಸಿತು.

ಲಕ್ಷ್ಮಿಗೆ ಗರ ಹಿಡಿದಂತಾಯ್ತು. ಕುಡಿದು ಮಾತಾಡಿದ ಅಂತ ತಳ್ಳಿಹಾಕುವಂತಿಲ್ಲ. ಸುಳಿವು ಹತ್ತದೆ ಮಾತು ಹೆಂಗೆ ಬತ್ತದೆ ? ಕುಡಿದು ಮಾತಾನಾಡಿದರೂ ? ಬೀರನಿಗೆ ಎಲ್ಲವೂ ಗೊತ್ತಾಗಿದೆ. ಏನೊ ಮಾಡುವನೊ ದೇವರೆ. ಅವನ ಆಟವ ಈಗೇನು ನೋಡುತ್ತಿಲ್ಲ. ಎರಡು ಬೇಳೆ ಪೈರಿನಿಂದಲೂ ಚೆಂದಾಗಿ ಗೊತ್ತು. ಹಾಸ್ಟಲಿನ ಊಟದ ಬೆಲ್ಲು ಹೊಡೆದು ಸುಮಾರೆ ಹೊತ್ತಾಗಿತ್ತು. ಈಗೀಗ ಸಮರಾತ್ರಿ ಹತ್ತಿರವಾಗಿರಬೇಕು. ಗುಡಿಸಲ ಪೂರ್ತ ಗೊರಕೆ, ಸರಾಪಿನ ನಾತ ಗಬ್ಬೊ ಅನ್ನಿಸುಸಿತ್ತು ಬೀರ ಹೊರಳಾಡಿದ. ಸ್ವಲ್ಪ ಹೊತ್ತು ಸಮಾ ಕೆಮ್ಮಿದ. ಆಮೇಲೆ ಲಕ್ಷ್ಮಿಗೆ ಮಲಗಬೇಕೆನಿಸಿತು. ಆಕಳಿಸಿದಳು. ತಲೆಯನ್ನು ಮಂಡಿಗೆ ಅದುಮಿ ಕುಂತು ಕಣ್ಣು ಮುಚ್ಚಿದಳು. ತೋಟಕ್ಕೆ ಕಾಲಿರಿಸಿದ ಮಾರನೆ ದಿನವೆ ಕಿಟ್ಟಪ್ಪ ಬಂದದ್ದು. ಬೀರ 'ನಮ್ಮ ಸಾವ್ಕಾರ್ರ ಮಗನೋರು' ಅಂದ. ಕಿಟ್ಟಪ್ಪ ನನ್ನನ್ನೇ ಒಂಥರಾ ನೋಡಿದರು. ಬೀರ ಕೆಮ್ಮಿದ. ನಾನು ಕತ್ತನ್ನು ಬಾವಿ ಕಡೆ ತಿರುಗಿಸಿ ನೆಲನೋಡುತ್ತಿದ್ದು ಬೆವತು ನಿಲ್ಲಲೂ ಆಗದೆ ಕಸ ಗುಡಿಸಬೇಕೆಂದು ಒಳಕ್ಕೆ ನುಗ್ಗಿದೆ. ಹೊರಗೆ ಇದ್ದರೂ ಇನ್ನೂ ನನ್ನನ್ನೇ ನೋಡುತ್ತಿರವನೇನೋ ಅನ್ನಿಸುತ್ತಿತ್ತು. ಹೊಗುವವರೆಗೂ, ಹೋದ ನಂತರವೂ

ಒಂದು ದಿನ ಸರಾಪಿನ ಬಾಟಲಿಗಳನ್ನು ಬೀರನೆ ಹಲ್ಲುಕಿರಿಯುತ್ತ ತಂದನು. ಅವತ್ತಿನ ಮಾಂಸವೂ ಹೆಚ್ಚಾಗಿಯೇ ಇತ್ತು. ಇಂದು ಕಿಟ್ಟಪ್ಪ ಬರುವರು ಅಂದ. ಅದಕ್ಕೇನೂ ಮಾತಾಡಲಿಲ್ಲ. ಮಾಡಿಕೊಟ್ಟೆ. ಕತ್ತಲಾಗಿ ಚಣಹೊತ್ತು ಕಳೆಯಲುನ ಕಿಟ್ಟಪ್ಪ ಬಂದರು. ತುಂಬವೆ ಶಿಸ್ತು ಮಾಡಿಕೊಂಡಿದ್ದರು. 'ಏನಾರ ಮದ್ವೆ ಹೆಣ್ಣ ನೋಡಾಕ ಬಂದಿದಿರಾ ಕಿಟ್ಟಪ್ಪ ?' ಬೀರ ನಗುನಗುತ್ತ ಅಂದಾಗ ಕಿಟ್ಟಪ್ಪನೂ ನಕ್ಕನು. ಹುಟ್ಟುಟ್ಟುತ್ತಲೆ ನಗುತ್ತ ಹುಟ್ಟಿದನೇನೊ ಅವ.

ತಿಂದರು. ಇಬ್ಬರು ತಿಂದರು. ಕುಡಿದರು. ಬೀರನೆ ಹೆಚ್ಚು ಬಗ್ಗಿಸಿಕೊಂಡನು. ಆಮೇಲ ಕಣ್ಣು ತೇಲಿಸಿ ಕಾಲುಚಾಚಿ ಬಿದ್ದುಕೊಂಡನು. ಕಿಟ್ಟಪ್ಪ ಎಷ್ಟು ಹೊತ್ತಾದರೂ ಹೋಗಲಿಲ್ಲ. ನಾನು ಕೋಣೆ ಒಳಕ್ಕೆ ಹೋದೆ. ಕಿಟ್ಟಪ್ಪ ಕೆಮ್ಮಿ ನಾವು ಬರುವುದಕ್ಕೆ ಮುಂಚಿನಿಂದಲೂ ಇದ್ದ ಹಗ್ಗದ ಹುರಿ ಮಂಚದ ಮೇಲೆ ಕುಂತು ಹಾಗೆ ಇದ್ದು ಆಮೇಲ ನಿಧಾನಕ್ಕೆ ಅಲ್ಲೆ ಒರಗಿದನು. ಜೀವ ಕೈಲಿಡಿದು ಕೋಣೆ ಒಳಗೆ ಕಂಬಳಿ ಹಾಸಿ ಮಲಗಿ ರಗ್ಗು ಹೊದ್ದು ದೀಪವಾರಿಸಿದೆ. ಕತ್ತಲಾಯಿತು, ಕಣ್ಣು ಮುಚ್ಚಿದರೂ ನಿದ್ದೆ ಸುಳಿಯಲಿಲ್ಲ. ಏನೇನೋ ಊರಕಡೆಯ ನೆನಪುಗಳು

ಸ್ವಲ್ಪ ನಿದ್ದೆಯ ಮಂಕು. ಹಜಾರದಿಂದ ಬೀರನ ಗೊರಕೆ ಚೆನ್ನಾಗಿ ಕೇಳಿಸುತ್ತಿತ್ತು. ಕಿಟ್ಟಪ್ಪನ ಆಗಾಗಲ ಕೆಮ್ಮು. ಹೊರಳಿದಾಗ ಸರಸರ ಸದ್ದು. ಬೀಡಿ ಎಳದಾಗಿನ ಕೆಂಪು ಬೆಳಕು. ಪುನಃ ಬೀರನ ಗೊರಕೆ. ಎಲ್ಲವನ್ನೂ

ಕಾಣದ ಹಾಗೆ ಕರಗಿಸಿಕೊಂಡಿರುವ ಗವಗತ್ತಲು. ಬಿಗಿಯಾಗಿ ಕಣ್ಣು ಮುಚ್ಚಿದರು ನಿದ್ದೆಯ ಸುಳಿವೇ ಇಲ್ಲ. ಕೆಮ್ಮುವುದೂ ಕಷ್ಟ. ಉಗುಳು ನುಂಗಲೂ ಆಗದು. ನುಂಗಿದರೆ ಗೊಳಕ್ ಅಂತ ಸದ್ದಾಗುತ್ತದೆ. ಸುತ್ತಲೂ ಎಂಥದೂ ಸದ್ದಿಲ್ಲ. ಅದೇ ದೊಡ್ಡದಾಗಿ ಕೇಳಿಸುತ್ತದೆ. ಬೀರನೇನೊ ಗೊರಕೆ ಹೊಡೆಯುತ್ತಿದ್ದಾನೆ. ಕಿಟ್ಟಪ್ಪನಂತೂ ಕಣ್ಣು ಮುಚ್ಚಿಲ್ಲ ಅಂತ ಕಾಣುತ್ತೆ. ಬೀಡಿ ಸೇದೋದು ಕೆಮ್ಮುವುದು ಮಾಡುತ್ತವನೆ, ಕಳೆ ಕೀಳಲು ಬಂದಿದ್ದ ಪುಟ್ಟಿ ಕಿಟ್ಟಪ್ಪನ ಚರಿತ್ರಾನೆ ಒದರಿ ಹೋಗುವಳೆ. ನಂಗೂ ನಿದ್ದೆ ಇಲ್ಲ ಗೊತ್ತಾಗಿಬಿಟ್ಟರೆ ? ಥೂ."ಲಕ್ಷ್ಮೀ" ಮೆಲ್ಲನೆ ಕರೆದು ಮೈಮುಟ್ಟಿ ಅಲ್ಲಾಡಿಸಿದಾಗ ತಟ್ಟನೆ ಎಚ್ಚರವಾಗಿ ಬೆಚ್ಚಿಬಿದ್ದಳು. ಯೋಚನೆ ದಿಗಿಲಿನ ಮಧ್ಯೆ ಯಾವಾಗ ನಿದ್ದೆ ಬಂತೊ ಗೊತ್ತಿರಲಿಲ್ಲ. ಜೋಪಡಿ ಹಾರಿಹೋಗುವಂತೆ ಎದೆಬಡಿದುಕೊಳ್ಳತೊಡಗಿತು. ಮೆಲ್ಲನೆ ಮೈಸವರಿದ. ಉಸಿರ ಹಿಡಿದ ತಪ್ಪಿತು. ಒಂದು ಕಯ್ಯ ತೊಡೆಯ ಮೇಲೆ ಇಟ್ಟು ಇನ್ನೊಂದು ಕಯ್ಯಿಂದ ಗಲ್ಲ ಹಿಡಿದು ಅಲ್ಲಾಡಿಸಿದನು. ಇನ್ನು ಸರಿಯಿಲ್ಲ ಅಂದುಕೊಂಡು ಬೆಚ್ಚಿತ್ತವಳಂತೆ 'ಯಾರು?' ಅಂದಾಗ 'ನಾನು ಕಿಟ್ಟಪ್ಪ' ಅಂದನು. ಬೀರನ ಗೊರಕೆ ಕೇಳಿಸಿದಾಗ ಮೈ ನಡುಗಿತು. ಕಿಟ್ಟಪ್ಪನ ಕೈ ತೊಡೆ ಸವರುತ್ತಿತ್ತು. ತೋಚದೆ ಬೆಬಗುಟ್ಟುತ್ತ 'ಬೀರ ಮಲಗವನೆ' ಅನ್ನಲು ಕಿಟ್ಟಪ್ಪ ಅಂದದ್ದು – ಛ್ಥಿ ಕುಡಿದು ಬಿದ್ದೈತೆ. ಹೊತ್ತು ಮೂಡಲು ಎಚ್ಚರವಾಗಿ ಮೈಮಾಲು ಮುರಿಯಲು ಬೀರನಿಗೆ ಹಗೂರವಾದಂತೆ ತೋರಿತು. ಹಾಗೂ ಬೀರನಿಗೆ ವಸಿ ರಾತ್ರಿ ನಿಶ ಉಳಿದಿತ್ತು. ಎರಡು ಕೈಯನ್ನು ಗಸಗಸನೆ ತೀಡಿ ಮೊಖಕ್ಕೆ ಎದುರು ತಂದು ಅಂಗೈ ನೋಡಿಕೊಂಡು ಮೆಲ್ಲನೆ 'ಲಚಮಿ' ಎಂದಾಗ ಉತ್ತರ ಬರಲಿಲ್ಲ. ಇಷ್ಟು ಹೊತ್ತಾದರೂ ಹೆಂಗಸಿಗೆ ಅಷ್ಟು ನಿದ್ದೆಯೆ ಅಂದುಕೊಂಡು ಬಲಮೊಗ್ಗಲಿಗೆ ಹೊರಳಿ ಕಂಬಳಿ ಸರಸಿ ಕೋಣೆ ಕಡೆ ನೋಡಿದಾಗ ಲಕ್ಷ್ಮಿ ಮೊಖದ ತುಂಬಾ ಹೊದ್ದು ಕೊಕ್ಕರಿಸಿಕೊಂಡು ಮಲಗಿದ್ದಳು. ಅವಳು ಹೊದ್ದಿದ್ದ ಪಟ್ಟೆ ಪಟ್ಟೆ ರಗ್ಗಿಗೆ ದಿಟ್ಟಿ ನೆಟ್ಟಿತು. ಕಳೆದ ಸೋಮವಾರ ಕಿಟ್ಟಪ್ಪ ರಗ್ಗು ಚಾಚಿ ತಕ್ಕೋ ಬೀರ ಬರೋದು ಚಳಿಗಾಲ ಅಂದುಕೊಟ್ಟರು. ರಾತ್ರಿ ಮಲಗುವಾಗ ಲಚಮಿ ಒಳಗೊಳಗೆ ನಗುತ್ತ ಅದನ್ನು ತನ್ನ ಕಡೆ ಎಳೆದುಕೊಂಡು 'ಇದು ನಂಗೇಬೇಕು' ಎಂದು ಬಿಮ್ಮನೆ ಬೀರಿ ಹಿಡಿದುಕೊಂಡಳು. ಅವಳನ್ನೇ ಬಾಚಿ ತಪ್ಪಿಕೊಂಡು ಎದೆಗೆ ಅಮುಕಿ 'ಹೋಗ್ಲಿ ಅದನ್ನ ನೀನೆತಕ್ಕೊ ನಿನ್ನನ್ನ ನಂಕೊಡು. ಅದ್ಕಿಂತ ನೀನೆ ಬೆಚ್ಚಗೆ' ಅಂದಾಗ ಕಿಸಕಿಸ ನಕ್ಕಳು. ಈಗ ಅವಳಿಗೆ ಬೆಚ್ಚಗಾಗುತ್ತಿರಬೇಕು

ಕಿಟ್ಟಪ್ಪ ಕೊಟ್ಟಿರುವ ರಗ್ಗು ಲಚಮಿನ ಕವಚಿಕೊಂಡಿದೆ. ಕಿಟ್ಟಪ್ಪ ಕಟ್ಟಿಸಿರುವ ಮನೆ ಇಬ್ಬರನ್ನೂ ಕವಿಚಿಕೊಂಡಿದೆ. ನನ್ನನ್ನ ಆದರೆ ಚಿಂತಿಲ್ಲ. ಲಚಮಿಯನ್ನಾದರೆ ಪಟೇಲರ ಹಟ್ಟಿಗೆ ಚಲ್ಲಣ ಸಿಕ್ಕಿಸಿಕೊಂಡು ಬಂದಿದ್ದವ ಲಚಮಿನ ಕೆಣಕಿದಂತೆ ಅಂತ ಕಿವಿಗೆ ಬಿದ್ದುದೆ ತಡ. ಜಗಲಿಮ್ಯಾಗ ಕಾಲಮ್ಯಾಲ ಕಾಲ ಹಾಕಿ ಕುಳಿತಿದ್ದವನ ಕತ್ತಿನ ಪಟ್ಟಿ ಹಿಡಿದು ಎಳೆದು 'ನಿನ್ನ ಸಾವ್ಕಾರಿಕೆ ಇದ್ರ ನಿನ್ನ ಹಟ್ಟಿಗೆ ಕನ್ಲ. ನಂಗೂ ವಸಿ ತೋರಿಸೋಕೆ ಬತ್ತೀಯ ?' ಎಂದು ಬಿಗೀಬೇಕು ಅಷ್ಟಕ್ಕೆ ಪಟೇಲರು ಮಧ್ಯಕ್ಕೆ ಬಂದು ಕೈ ಮುಗಿದು ಬೇರೆ ಊರ್ನ ಹೈದ ಏನೊ ತಿಳಿದೇ' ಅಂತ ಸುಮ್ಮನಾಗಿಸಿದರು. ಹಟ್ಟಿಗೆ ಬಂದಾಗ ಲಚಮಿ ಎದೆಗೆ ಆತು ಬಿದ್ದಳು.

ಎಡಗೈಯಿಂದ ಹೊಟ್ಟೆ ಸವರಿ ಮೇಲಕ್ಕೆ ತಂದು ಎದೆಯ ಮೇಲಿಟ್ಟನು. ಎದೆಯೊಳಗೆ ಸಣ್ಣಕ್ಕೆ ನೋವು ಹರಿಯಿತು. 'ಕುಡಿಬೇಡಿ ಅಂತ ಎಷ್ಟು ಬಡ್ಕಂಡ್ರೂ ಕೇಳೊಲ್ಲ. ಮಲ್ಲಿಪುರ್ದ ಸಾವ್ಕಾರ್ರು ಕುಡ್ದು ಎದೆ ಒಡೆದು ಸತ್ತೋದ್ರಂತೆ. ಕುಡ್ದರೆ ಕಳ್ಳನ್ನೆಲ್ಲ ಕೊರೆದು ಹಾಕ್ಬಿಡ್ತದಂತೆ.' ಏನಾರು ಸಾವ್ಕಾರರಿಗೆ ಆದಂಗೆ ನಂಗೂ ಆಗಿಬಿಟ್ಟರೆ ? ಲಚಮಿಗೆ ದಿಕ್ಕು ? ಯಾಕೆ ? ಹೆಂಗೆಂಗೋ ಆಗತೊಡಗಿತು. ಬೀಡಿ ಸೇದಬೇಕೆನಿಸಿ ದಿಂಬು

ಸರಿಸಿ ನೋಡಿದರೆ ಇರಲಿಲ್ಲ. ಹೊರಗೆ ಇಬ್ಬನಿ ಬೀಳುತ್ತಿತ್ತು. ಮೊದಲೆ ಚಳಿ. ಬೀಡಿನೂ ಇಲ್ಲ. ಬಿಸಲು ಬರುವವರೆಗೂ ಹಿಂಗೇ ಇರಬೇಕು.

'ಇನ್ನೂ ಬೆಳೆಯೊ ಹೊತ್ತು. ಮಲ್ಗವಳೆ ಎಳೆಕೊಸಂಗೆ. ನಾಚ್ಕೆ ಆಗಾಕಿಲ್ವ ನಿನ್ನ ಘಟಕ್ಕೆ ? ಇಷ್ಟು ಮೊಬ್ಬಿಗೆ ಕಿಟ್ಟಪ್ಪ ?'ಚಳಿ ಬಿಟ್ಟವನಂತೆ ಕಂಬಳಿ ಹೊದ್ದು ಮೇಲಕ್ಕೆ ಎದ್ದು ಕೋಣೆ ಕಡೆ ನೋಡಲು ಲಚಮಿ ಇನ್ನು ಮಲಗವಳೆ. ಏಳಿಸಬೇಕೆನಿಸಿದರೂ ಮನಸಾಗಲಿಲ್ಲ. ಬಲಗಡೆ ನೇತು ಹಾಕಿದ್ದ ಚಾಮುಂಡವ್ವನ ಪೋಟೊಗೆ ಕೈಮುಗಿದು ತಡಿಕೆ ಬಿಚ್ಚಲು ಮೂಡಣ ದಿಕ್ಕಿಗೆ ಎದುರಾಗಿದ್ದ ಜೋಪಾಡಿ ಒಳಕ್ಕೆ ಬೆಳಕು ಚಲ್ಲಿತು. ನೋಡಿದರೆ ಕಿಟ್ಟಪ್ಪ ನಿಂತಿದ್ದರು.

ಲಕ್ಷ್ಮಿ ಎದ್ದು ಚಣಹೊತ್ತು ಸುಧಾರಿಸಿಕೊಂಡರೂ ಮಂಕು ಆರಿರಲಿಲ್ಲ. ರಾತ್ರಿಯ ನೆಪ್ಪು ಮೈಚುರುಗುಟ್ಟಿಸಲು ತೊಲೆಕಡೆ ಕಣ್ಣೋಡಿದಾಗ ಮಚ್ಚು ಅಲ್ಲೆ ಇತ್ತು. ಹೇಗೆಗೊ ಆಗಿ ಹೊರಕ್ಕೆ ಬಗ್ಗಿ ನೋಡಿದಳು. ಬೀರ ಆಗಲೆ ಎದ್ದು ಹೊರಗೆ ಯಾರ ಜೊತೆಯಲ್ಲೊ ಮಾತಾಡುತ್ತಿದ್ದನು. ಸದ್ದು ಮಾಡದೆ ಬಾಗಿಲ ಬಳಿ ಬಂದು ನೆರಕೆ ಕಿಂಡಿಗೆ ಕಣ್ಣು ಹಾಕಿದಾಗ ಅಚ್ಚರಿ ಆಯ್ತು. ಕಿಟ್ಟಪ್ಪ ನಿಂತಿದ್ದನು.

ಯಾತಕ್ಕೊ ಕಿಟ್ಟಪ್ಪ ನಕ್ಕ.
ಬೀರನೂ ನಕ್ಕನು.

*****

ಲಲಿತ ಪ್ರಬಂಧಗಳು :

ವಿಮೆ ಯಮನನ್ನೇ ಹೆದರಿಸಿತು

- ಗೊರೂರು ರಾಮಸ್ವಾಮಿ ಐಯ್ಯಂಗಾರ್

ನೀವು ಅನೇಕ ಬಗೆಯ ಜಿಪುಣರನ್ನು ನೋಡಿರಬಹುದು. ನಮ್ಮ ಊರ ಪುಟ್ಟ ಜೋಯಿಸ ಅವರನ್ನೆಲ್ಲಾ ಮೀರಿಸಿದವನು. ಯುದ್ಧ ಕಾಲವಲ್ಲದಿದ್ದರೂ ಸೀಮೆಎಣ್ಣೆಯ ಖರ್ಚನ್ನುಳಿಸಲು ಕತ್ತಲಾಗುವುದಕ್ಕೆ ಮುಂಚೆ ಊಟ ಮಾಡಿ ಮಲಗುತ್ತಿದ್ದ ಶಾಮಾಚಾರ್ಯರನ್ನು ಕಂಡು ಜೋಯಿಸನು ಕನಿಕರದಿಂದ "ಪಾಪ,ಈ ಪ್ರಾಣಿಗೆ ಈ ಶಾಸ್ತ್ರದಲ್ಲಿ ಈಗ ತಾನೆ ಶ್ರೀ ಓನಾಮ ಆಹುತ್ತಿದೆ" ಎನ್ನುತ್ತಿದ್ದನು. ನರಸಿಂಹಾಚಾರ್ಯರ ಹಸು ಕರು ಹಾಕುವುದಕ್ಕೆ ಎರಡು ತಿಂಗಳ ಮುಂಚೆ ಹಾಲು ಕರೆಯುವುದನ್ನು ತಪ್ಪಿಸಿಕೊಂಡಾಗ, ಅವರ ಹಿಡಿತವನ್ನು ಕಂಡಿದ್ದ ನಮ್ಮ ಊರವರು "ಇನ್ನು ಮೇಲೆ ಹಸುವಿನ ಬಾಲದ ಕಡೆಯಿಂದ ಹಾಲು ಕರೆದುಕೊಳ್ಳಬೇಕು, ಜೀವ ಹೋದರೂ ಇವರು ಮಾತ್ರ ಬೇರೆ ಹಸುವನ್ನು ಕೊಳ್ಳುವರಲ್ಲ" ಎಂದರು. ಆದರೆ ನರಸಿಂಹಾಚಾರ್ಯರು 'ತಮಗೆ ತುಂಬ ಹಾಲು ಕರೆಯುವ ಹಸು ಬೇಕು. ನಾಲ್ಕು ಹೆಚ್ಚಾಗಿ ಖರ್ಚಾದರೂ ಚಿಂತೆಯಿಲ್ಲ' ಎಂಬುದಾಗಿ ನಮ್ಮ ಊರ ಸುತ್ತಮುತ್ತಲಿನ ಹಳ್ಳಿಗಳನ್ನು ತಿರುಗಲು ಪ್ರಾರಂಭಿಸಿದಾಗ ನಮ್ಮೂರವರಿಗೆಲ್ಲಾ ಆಶ್ಚರ್ಯವಾಯಿತು. ಕೆಲವರಂತೂ ಈ ವಿನಾಷಕರವಾದ ಸ್ವಭಾವ ಅವರನ್ನು ಬೇಗ ಬಿಟ್ಟುಹೋಗಲೆಂದು ಗ್ರಾಮ ರಕ್ಷಣೆಗಾಗಿ ಊರ ಮುಂದಿನ ಹನುಮಂತರಾಯನಿಗೆ ಕರ್ಪೂರಾರಾತಿಯನ್ನು ಮಾಡಿಸಿದರು. ನರಸಿಂಹಾಚಾರ್ಯರು ಹಾಲು ಕರೆದು ನೋಡಬೇಕೆಂದು ಒಂದೊಂದಾಗಿ ಹಸುಗಳನ್ನು ಮನೆಗೆ ಹೊಡೆದುಕೊಂಡು ಬರಲು ಪ್ರಾರಂಭಿಸಿದಾಗಲಂತೂ ಊರಿನವರಿಗೆಲ್ಲಾ ದಂಗು ಬಡಿದುಹೋಯಿತು. ಆದರೆ ಪುಟ್ಟ ಜೋಸಿಸ ಮಾತ್ರ ತಿಳಿದವನಂತೆ ಹುಸಿನಗು ನಗುತ್ತಲೇ ಇದ್ದನು. ನರಸಿಂಹಾಚಾರ್ಯರು ಮೊದಲು ಒಡ್ಡರಹಳ್ಳಿ ಈಡಿಗನ ಹಸುವನ್ನು ಹೊಡೆದುಕೊಂಡು ಮನೆಗೆ ಬಂದರು.

ಅದು ಒಂದು ಹೊತ್ತಿಗೆ ಕರುವಿಗೆ ಬಿಟ್ಟು ಕಳ್ಳಿಯ ಹಾಲಿನಂತೆ ಬುಟ್ಟಾದ ಒಂದೂವರೆ ಸೇರು ಹಾಲು ಕೊಡುತ್ತಿದ್ದಿತು. ನರಸಿಂಹಾಚಾರ್ಯರು ಅಂತಹ ಕ್ಷೀರಸಮುದ್ರವನ್ನು ಆವರೆಗೆ ಕಂಡಿರಲಿಲ್ಲ. ಆದರೆ ಅವರು ಈಡಿಗನೊಂದಿಗೆ ಹಸುವಿನ ಬೆಲೆಯನ್ನು ಕುರಿತು ಉಸಿರೇ ಎತ್ತಿರಲಿಲ್ಲ. 'ಇರಲಿ ಹಾಲು ಕರೆದು ನೋಡುತ್ತೇನೆ' ಎಂದಿದ್ದರು. ನಾಲ್ಕನೇಯ ದಿನ ಈಡಿಗನು ವಿಚಾರಿಸಲು ಬಂದಾಗ ನರಸಿಂಹಾಚಾರ್ಯರು "ಇದರ ಮೈ ಅಸಾಧ್ಯವಾದ ಮೀನಿನ ವಾಸನೆ. ನಿತ್ಯ 2 ಆಣೆ ಧೂಪ ಹಾಕಿದರೂ ಮೀನಿನ ವಾಸನೆ ಮನೆಯಿಂದ ಹೋಗಿಲ್ಲ. ಅದರ ಹತ್ತಿರಕ್ಕೆ ಹೋದರೆ ಮೂಗಿನ ಸಲೆ ಒಡೆದುಹೋಗುತ್ತದೆ. ನಾಲ್ಕು ದಿನಗಳಿಂದ ಹಾಲನ್ನು ಕರುವುಗೇ ಕುಡಿಸುತ್ತಿದ್ದೇನೆ. ಇನ್ನು 2-3 ದಿನ ಬಿಟ್ಟು ಬಾ' ಎಂದರು. ಈ ರೀತಿ ನರಸಿಂಹಾಚಾರ್ಯರು ಒಂದೊಂದು ಹಸುವನ್ನು ಒಂದೊಂದು ವಾರದಂತೆ ಇಟ್ಟುಕೊಂಡು ಆರು ಏಳು ವಾರ ಪರೀಕ್ಷೆ ಮಾಡುವುದರೊಳಗಾಗಿ ಅವರ ಸ್ವಂತ ಹಸುವೇ ಅವರಿಗೆ ತೃಪ್ತಿಯನ್ನುಂಟುಮಾಡಲಿಲ್ಲ. ಒಂದಕ್ಕೆ 'ಚಾಳಿ ಚೆನ್ನಾಗಿಲ್ಲ'-

ಮತ್ತೊಂದು 'ನೋಡುವುದಕ್ಕೆ ಬಲರಾಮ ಗೋವು'- ಮೂರನೆಯದು "ಜಾತಿ ವೈರಿ, ಕರುವನ್ನೇ ಒದೆಯುತ್ತದೆ'-ನಾಲ್ಕನೆಯದು ಎಲ್ಲಾ ವಿಧದಲ್ಲೂ ಸಮರ್ಪಕವಾಗಿದ್ದರೂ 'ಸಿಳಿಹೀನ'- ಐದನೆಯದರ 'ಹಾಲು ನೀರು, ಅದರಲ್ಲಿ ಬನಿಯಿಲ್ಲ'-ಆರನೆಯದು 'ಸೋರು ಬಿಡುವುದು ಬಹಳ ನಿಧಾನ'-

ಏಳನೆಯದರ ಹೊಟ್ಟೆ ಹೆಮ್ಮಾರಿ' ಇತ್ಯಾದಿ. ಹಸುಗಳು ಒಂದು ವಾರ ನರಸಿಂಹಾಚಾರ್ಯರ ಮನೆಯಲ್ಲಿ ಕರೆದ ಹೊರತು ಅದರ ಯೋಗ್ಯತೆ ಪತ್ತೆಯಾಗುತ್ತಿರಲಿಲ್ಲ.ಆ ಎರಡು ತಿಂಗಳಲ್ಲಿ ನರಸಿಂಹಾಚಾರ್ಯರಿಗೆ ವಿಪರೀತ ಬೊಜ್ಜು ಬಂದು ಕಣ್ಣುಮೂಗುಗಳು ಹೊಳೆಯಲಾರಂಭಿಸಿದವು. ಅವರ ಹೆಂಡತಿಯವರು ಮುಂದಿನ ಆರು ತಿಂಗಳಿಗೆ ಬೇಕಾದಷ್ಟು "ಅನ್ನಶುದ್ಧಿಯನ್ನು"(ತುಪ್ಪ) ಸಂಗ್ರಹಿಸಿಬಿಟ್ಟರು. ಅವರ ಸ್ವಂತ ಹಸುವೂ ಕೂಡ ಕಲಗಚ್ಚಿನ ಬದಲು ಅರೆಗಡೆದ ಮೊಸರನ್ನೇ ಕುಡಿಯುತ್ತಿದ್ದೀತು. ಅವರ ಪರೀಕ್ಷೆಗಾಗಿ ಬಂದಿದ್ದ ಇತರ ಹಸುಗಳು ಮಾತ್ರ ಹೊಟ್ಟೆಗೆ ಬೆನ್ನನ್ನು ಅಂಟಿಸಿಕೊಂಡು ಅವರ ಮನೆಯಿಂದ ಹೋದವು. ಯೋಗಿಗಳ ಸಾಧನೆಯನ್ನು ನಮ್ಮ ಊರಿನವರು ಮುಗ್ಧರಾಗಿ ನೋಡುತ್ತಿದ್ದರು. ಪುಟ್ಟಜೋಯಿಸ ಮಾತ್ರ 'ಈ ಮರುಳನಿಗೆ ಇಷ್ಟಕ್ಕೆ ತಲೆ ನಿಲ್ಲುವುದಿಲ್ಲ. ಕಾಸು ಉಳಿಸುವುದನ್ನು ಕಲಿಯಬೇಕಾದರೆ ಇನ್ನು ತುಂಬ ರಾಗಿ ಬೀಸಬೇಕು'ಎನ್ನುತ್ತಿದ್ದನು. ಬ್ರಾಹ್ಮಣನಾದ ಶಿಂಗ್ರಯ್ಯ ಎಲೆಯ ಖರ್ಚನ್ನು ಉಳಿಸಬೇಕೆಂದು, ನಮ್ಮೂರ ಆಚಾರಿ ತನ್ನಲ್ಲಿ 9 ಆಣೆಗೆ ಅಡವಿಟ್ಟಿದ್ದ ಗಂಗಳದಲ್ಲಿ ಊಟ ಮಾಡಲು ಪ್ರಾರಂಭಿಸಿದಾಗ ಊರವರೆಲ್ಲಾ ಶಿಂಗ್ರಯನನ್ನು ಬಯ್ಯುತ್ತಿದ್ದರೂ ಪುಟ್ಟಜೋಯಿಸ ಮಾತ್ರ 'ಈ ವಿದ್ಯದ ಮೊದಲನೆಯ ಮೆಟ್ಟಿಲನ್ನು ಇವನು ಹತ್ತಿದ್ದಾನೆ, ಇನ್ನೂ ನೂರಾರು ಮೆಟ್ಟಿಲುಗಳನ್ನು ಹತ್ತಬೇಕು' ಎನ್ನುತ್ತಿದ್ದನು.

ಇಷ್ಟರಿಂದಲೇ ಪುಟ್ಟಜೋಯಿಸನ ಸ್ವಭಾವ ನಿಮಗೆ ಗೊತ್ತಾಗಬಹುದು, ಅವನಿಗೆ ನಲವತ್ತು ವರ್ಷಗಳಿಂದ ನಶ್ಯ ಹಾಕುವ ಅಭ್ಯಾಸವಿದ್ದರೂ ಅವನು ನಶ್ಯಕ್ಕಾಗಿ ಒಂದು ದಿನವೂ 'ಒಂದು ಕಾಸನ್ನು ಖರ್ಚು ಮಾಡಿದವನಲ್ಲ. ಹೆಚ್ಚೇಕೆ, ಪುಟ್ಟ ಜೋಯಿಸ 'ಒಂದು ಕಾಸು ಖರ್ಚು ಮಾಡಿದರೆ ಒಬ್ಬ ಮನುಷ್ಯನ ತಲೆ ಒಡೆದಂತೆ' ಎಂದು ದೃಢವಾಗಿ ನಂಬಿದ್ದನು. ಇಂಥ ಮನುಷ್ಯ ಜೀವವಿಮೆ ಮಾಡಿದಾಗ ನಮ್ಮೂರಿನವರಿಗೆ ಉಂಟಾದ ಆಶ್ಚರ್ಯಕ್ಕೆ ಸಮನಾದದು ಇದುವರೆಗೆ ಯಾವುದೂ ಇಲ್ಲ.

ಕೆಂಬೂತಯ್ಯನು ಮೊದಲು ವಿಮಾ ಕಂಪನಿಗೆ ನಮ್ಮೂರಿನಲ್ಲಿ ಏಜೆಂಟ್ ಆದಾಗ ಅವನು ಯಾವುದೋ ದರೋಡೆಕೋರರ ಗುಂಪಿಗೆ ಸೇರಿದವನೆಂದೇ ಜನರೆಲ್ಲಾ ಭಾವಿಸಿದ್ದರು. ವಿಮಾ ಏಜೆಂಟಿನ ನಡವಳಿಕೆಯನ್ನು ಕುರಿತು ವಿಮಾ ಪತ್ರಿಕೆಯಲ್ಲಿ ಬಂದ ಸಲಹೆಗಳಂತೆ ಕೆಂಬೂತಯ್ಯನು ವಿಧೇಯನಾಗಿ ಜನರೊಂದಿಗೆ ಮಾತುಕತೆಯಾಡಲು ಪ್ರಾರಂಭಿಸಿದ ಮೇಲೆ ಗ್ರಾಮಸ್ಥರು ಇವನೇನೋ ಪಿತೂರಿ ಮಾಡುತ್ತಿದ್ದಾನೆ. ಇಲ್ಲದಿದ್ದರೆ ಇಷ್ಟು ವಿಧೇಯತೆ ಯಾಕೆ? ನೆನ್ನೆ, 'ಬಾರೋ ಹೋಗೂ' ಎನ್ನುತ್ತಿದ್ದವನು ಇವತ್ತು 'ಬಾರಯ್ಯ ಏನಯ್ಯ' ಎನ್ನುತ್ತಾನೆ.ಹೇಳಬೇಕಾದನ್ನು ದಡಬಡನೆ ಒದರುತ್ತಿದ್ದವನು ಈಗ ಪುರುಸುತ್ತಿದೆಯೆ?ಸ್ವಲ್ಪ ಮಾತನಾಡಬೇಕಲ್ಲಾ' ಎನ್ನುತ್ತಾನೆ. ಒಂದೊಂದು ದಿನ ಒಂದೊಂದು ವೇಷ ಬದಲಾಯಿಸುತ್ತಾನೆ. ಇವನು ಘಾತಕ, ಧೂರ್ತ ಎಂದುಕೊಳ್ಳಲು ಪ್ರಾರಂಭಿಸಿದರು. ಪುಟ್ಟಜೋಯಿಸನು 'ವಿಮಾ ಏಜೆಂಟಿನಂತಹ ಪರಾವಲಂಬಿ ಯಾರೂ ಇಲ್ಲಾ. ಇವನಿಗಾಗಿ ಇತರರು ಕೆಲಸ ಮಾಡುತ್ತ ವಿಮೆ ಹಣವನ್ನು ಕಟ್ಟುತ್ತಿರಬೇಕು. ಇವನು ಮಾತ್ರ ಕೂತಲ್ಲಿ ಕೂತು ಅದರ ಕಮಿಷನ್ ತಿನ್ನುತಿರಬೇಕು' ಎನ್ನುತ್ತಿದ್ದನು.'ಮನುಷ್ಯ, ತನಗೆ ಇರುವ ಯೋಗ್ಯತೆಯನ್ನು ಕಳೆದುಕೊಳ್ಳಬೇಕಾದರೆ ಅವನು ವಿಮಾ ಏಜೆಂಟಾದರೆ ಸಾಕು" ಎಂದು ನರಸಿಂಹಾಚಾರ್ಯರು ಹೇಳತೊಡಗಿದರು. 'ವಿಮೆ ಎನೋ ನಾನು ಮಾಡುತ್ತೇನೆ, ಆದರೆ ತಿಂಗಳು ತಿಂಗಳ ಪ್ರೀಮಿಯಂ ನೀನು ಕಟ್ಟಿಕೊ' ಎಂದರು ಕೆಲವರು. ಎಲ್ಲರ ಮಾತುಗಳಿಂದ ನಮ್ಮ ಪುಟ್ಟ ಜೋಯಿಸರ ವಾದ ವಿಚಿತ್ರವಾಗಿತ್ತು. ಘಾಟಿ ಎನ್ನಿಸಿಕೊಂಡಿದ್ದ ಕೆಂಬೂತಯ್ಯನೇ ಅವನ ಎದುರಿಗೆ ವಾದಿಸಲು ತಬ್ಬಿಬ್ಬಾಗುತ್ತಿದ್ದನು. ಅವನ ವಾದ ಇದು–'ನೀನೇನೋ ವಿಮೆ ಮಾಡು ಎಂದು ಹೇಳುತ್ತೀಯೆ. ವಿಮೆ ಮಾಡಿದ ಕೂಡಲೆ ಒಂದೋ ಎರಡೋ ಕಂತು ಹಣ ಕೊಟ್ಟು ಅನಂತರ ಸತ್ತುಹೋಗಬೇಕು.ಹಾಗೆ ಸಾಯದಿದ್ದರೆ ವಿಮಾ ಕಂಪನಿಗೆ ಲಾಭವುಂಟಾಗುವುದು.

ಒಂದು ವೇಳೆ ಹಾಗೆ ಸತ್ತೆವೆಂದು ಇಟ್ಟುಕೊಳ್ಳೋಣ! ಅನಂತರ ಆ ಹಣದಿಂದ ಆ ಹಣದಿಂದ ತಾನೆ ಏನು ಪ್ರಯೋಜನ?' ಎಂದು ಪುಟ್ಟಾಜೋಯಿಸ ಹೇಳುತ್ತಿದ್ದ ಮಾತು ಎಲ್ಲರಿಗೂ ಸರಿಯೆಂದು ತೋರುತ್ತಿದ್ದಿತು. ಕೆಂಬೂತಯ್ಯನು 'ನೀವು ಯಾಕೆ ಸಾಯಬೇಕು, 55ನೆಯ ವಯಸ್ಸಿಗೆ ನಿಮ್ಮ ಕೈಗೆ ಹಣ ಬರುವುದು' ಎಂದರೆ, 'ಅದಕ್ಕೆ ನಿನ್ನ ಹತ್ತಿರ ಯಾಕೆ ಕೊಟ್ಟು ಇಟ್ಟಿರಬೇಕು. ಕಂತುಗಳನ್ನೆಲ್ಲಾ ನಾನೇ ಒಟ್ಟಾಗಿ ಸೇರಿಸಿದರ್ ಹಣ ಗಂಟಾಗುವುದಿಲ್ಲವೆ? ವಿಮೆ ಮಾಡಿದ ಮೇಲೆ ಒಂಡು ದಿವಸ ಬದುಕಿದ್ದರೂ ಭೂಮಿಗೆ ಭ್ಹಾರವೇ' ಎನ್ನುತ್ತಿದ್ದನು. ಪೂಜಾರಿ ಹನುಮಂತಯ್ಯನು ಕೆಂಬೂತಯ್ಯನ ಮಾತುಗಳಿಂದ ಸಂತುಷ್ಟನಾಗಿ ವಿಮೆ ಮಾಡಿದ ಮೇಲೆ ಪುಟ್ಟಜೋಯಿಸ 'ನಿಮ್ಮಂತಹ ಅವಿವೇಕಿಗಳಿಂದಲೇ ಅಷ್ಟು ದೊಡ್ದ ದೊಡ್ದ ಕಂಪನಿಗಳು ಸಾವಿರಾರು ಬೆಳೆದಿರುವುದು. ಅವುಗಳ ಕಟ್ಟಡಗಳನ್ನು ನೋಡಿಯಾದರೂ ವಿಮೆ ಮಾಡಿದ ಮೇಲೆ ಸಾಯಬೇಕೆನ್ನುವುದು ನಿಮಗೆ ತಿಳಿಯಬೇಡ' ಎನ್ನುತ್ತಿದ್ದನು. ಈ ವಾದ – ವಿಮೆ ಮಾಡುತ್ತೀರಾ ಎಂದರೆ 'ನಾನು ಬದುಕಿರುವುದು ನಿಮಗೆ ಇಷ್ಟವಿಲ್ಲ. ಸಾಯಬೇಕು ಅಂತ ಕಾಣುತ್ತೆ' ಎಂದು ಪುಟ್ಟಜೋಯಿಸ ಹೇಳುವವರೆಗೂ ಹೋಗಿದ್ದಿತು.

ಆದರೆ ಕೆಂಬೂತಯ್ಯ ನಿರಾಶನಾಗಿಲ್ಲ. ಯಾವ ವಿಮಾ ಏಜೆಂಟನೂ ತನ್ನ ಬಲೆಗೆ ಬೀಳುವ ಪ್ರಾಣಿಗಳ ವಿಚಾರದಲ್ಲಿ ನಿರುತ್ಸಾಹನಾಗುವುದಿಲ್ಲ. ಕೆಂಬೂತಯ್ಯನು 'ನೋಡಿ ಕಾನ್ಪುರದಲ್ಲಿ ಒಬ್ಬ ನೂರು ರೂಪಾಯಿ ಕಂತು ಕೊಟ್ಟು ಸತ್ತುಹೋದ; ಅವನ ಮನೆಯವರಿಗೆ ಐದು ಸಾವಿರ ರೂಪಾಯಿ ಬಂದಿತು. ಅಲಹಬಾದಿನಲ್ಲಿ ಒಬ್ಬ ಮೂರು ಸಾವಿರಕ್ಕೆ ಮಾಡಿದ್ದ, ಪಾಲಿಸಿಯನ್ನು ಒಂದು ತಿಂಗಳು ಹಿಂದೆ ಎಂಟು ಸಾವಿರಕ್ಕೆ ಹೆಚ್ಚಿದ. ಏಂಟು ದಿವಸದೊಳಗೆ ಸತ್ತುಹೋದ. ಅವನ ಹೆಂಡತಿಗೆ ಆಗಲೇ ಎಂಟು ಸಾವಿರ ರೂಪಾಯಿ ಬರುವಂತಾಯಿತು' ಎಂದು ಮುಂತಾಗಿ ದೂರ ದೂರದ ಸಂಗತಿಗಳನ್ನು ಹೇಳಿದಾಗ ಪುಟ್ಟಜೋಯಿಸನು 'ಹೌದು, ಒಂದು ಕಂತು ಕೊಟ್ಟು ಸಾಯಬೇಕು, ಆಗ ಮಾತ್ರ ಲಾಭ.ಆದರೆ ಸತ್ತ ಮೇಲೆ ಆ ಹಣ ಕಟ್ಟಿಕೊಂಡು ಮಾಡುವುದೇನು?' ಎನ್ನುತ್ತಿದ್ದನು.

ಆ ವೇಳೆಗೆ ನಮ್ಮೂರಿಗೆ ಪ್ಲೇಗು ಬಂದಿತು. ಹಳ್ಳಿಗಾಡಿನ ಮನೆಗಳು, ಮನೆಯಲ್ಲಿ ಎಲ್ಲಿ ನೋಡಿದರೂ ಅನವಶ್ಯಕವಾದ ಕಸ, ಹಳೆ ಕಾಗದಗಳು, ಬುಟ್ಟಿಗಳು, ಅವು ನೂರಾರು ವರ್ಷಗಳಿಂದ ಬೇಡದವುಗಳಾಗಿದ್ದರೂ ಜನರಿಗೆ ಅವುಗಳನ್ನು ಹೊರಕ್ಕೆ ಎಸೆಯಲು ಇಷ್ಟವಿರಲಿಲ್ಲ. ಹೀಗೆ ಪ್ರತಿ ಮನೆಯಲ್ಲೂ ನಾಲ್ಕಾರು ಗಾಡಿ ಕಸ ಬಿದ್ದಿರುತ್ತಿದ್ದವು. ಅವುಗಳ ಸಂದಿಯಲ್ಲಿ ಇಲಿಗಳು ಸುಖವಾಗಿ ಮನೆಗಳನ್ನು ಮಾಡಿಕೊಂಡು ನಾಲ್ಕಾರು ಶತಮಾನಗಳಿಂದ ವಂಶ ಪಾರಂಪರ್ಯವಾಗಿ ಜೀವಿಸುತ್ತಿರುವವು. ಪ್ಲೇಗಿನಲ್ಲಿ ಮತ್ತೆಲ್ಲೂ ಸಾಯದಷ್ಟುಇಲಿಗಳು ನಮ್ಮೂರಿನಲ್ಲಿ ಸತ್ತವು. ಮೊದಮೊದಲು ಪ್ರತಿ ಮನೆಯಲ್ಲೂ ಹತ್ತು ಇಪ್ಪತ್ತು ಬೀಳುತ್ತಿದ್ದುದು ಬರಬರುತ್ತ ಹತ್ತು ಇಪ್ಪತ್ತು ಮೊರಗಳ ತುಂಬ ಬೀಳಲು ಪ್ರಾರಂಭವಾಯಿತು.ಮೊದಲು ರಾತ್ರಿ ಮಾತ್ರ ಬೀಳುತ್ತಿದ್ದುದು ಆಮೇಲೆ ಹಗಲೂ ಬೀಳಲು ಪ್ರಾರಂಭವಾಯಿತು. ಆದರೆ ನಮ್ಮೂರವರು ಇಲಿಗಳಿಗೆ ಹೆದರಲೇ ಇಲ್ಲ. ವಿಷಕ್ರಿಮಿ ನ್ಯಾಯದಂತೆ ಇಲಿಗಳ ವಾಸನೆ ಅವರಿಗೆ ಒಗ್ಗಿಯೇ ಹೋಯಿತು.'ಇವತ್ತು ಬಿದ್ದದು ಭೂಪತಿ; ಇಲಿಗಳ ರಾಜ. ನಿನ್ನೆ ಬಿದ್ದುದು ಇದರ ಹೆಂಡತಿ ಮೂಷಿಕ ರಾಣಿ; ಸರಿ, ರಾಜ ಹೋದ ದಾರಿಯಲ್ಲಿ ಮಂತ್ರಿಗಳೂ ಸೇನಾಪತಿಗಳೂ ಹೊರಡಬೇಕು. ಅವರ ಸ್ವಾಗತಕ್ಕೆ ಸಿದ್ದತೆ ಮಾಡಿಕೊಳ್ಳಿ. ಇಲಿಗಳಿಗೆ ಡಾಕ್ಟರು ಇಲ್ಲವೇನೋ ! ಅವನು ಇವುಗಳಿಗೆ ಇನಕುಲೇಷನ್ ಮಾಡುವುದೆಲ್ಲವೇನೂ! ಅಥವಾ ಫೀಜು ಹೆಚ್ಚಾಗಿ ಕೇಳುತಾನೇನೋ ಮುಂತಾಗಿ ಅವರು ವಿನೋದ ಮಾಡುತ್ತಾ ಇಲಿಗಳನ್ನು ಹೊಳತೊಡಗಿದರು ಹೊರಗಿನಿಂದ ಬಂದವರು ನಮ್ಮೂರಲ್ಲಿ ಪ್ಲೇಗ್ ಇದೆಯೆಂದು ಕೇಳಿದ ಕೂಡಲೆ ಒಂದೆ ಉಸಿರಿಗೆ 10 ಮೈಲಿ ಓಡುತ್ತಿದ್ದರು.

ಸಾಯುತ್ತಿದ್ದ ಇಲಿಗಳ ರಾಶಿಯನ್ನು ಕಂಡು ಅವರಿಗೆ ನಡಕವುಂಟಗುತ್ತಿತ್ತು. ಆದರೆ ನಮ್ಮ ಊರಿನವರನ್ನು ಯಾರಾದರೂ 'ನಿಮ್ಮ ಹಳ್ಳಿಯಲ್ಲಿ ಪ್ಲೇಗ್ ಇದೆಯೇ?' ಎಂಬುದಾಗಿ ಕೇಳಿದರೆ 'ಏನೋ ಕಾಣಲಿಲ್ಲಾ. ಇಲಿಗಳು ಮಾತ್ರ ಸಾಯುತ್ತಿವೆ ಎನ್ನುತ್ತಿದ್ದರು, ಕೆಲವರಿಗೆ 'ಪ್ಲೇಗ್' ನಿಜವಾಗಿಯೂ ಇಲಿಗಳೀಗೆ ಸಂಬಂಧಪಟ್ಟ ಜಾಡ್ಯ, ನಮಗೂ ಇದಕ್ಕೂ ಸಂಬಂಧವಿಲ್ಲ ಎಂಬ ನಂಬಿಕೆಯೇ ದೃಡವಾಗಿತ್ತು.

ಆದರೆ ಅವರ ನಂಬಿಕೆ ಕೆಡುವ ಕಾಲ ಬಂದಿತು. ಇದ್ದಕ್ಕಿದ್ದಂತೆ ಪ್ಲೇಗ್ ಮನುಷ್ಯರಿಗೆ ಮುಟ್ಟಿಸಲು ಪ್ರಾರಂಭಿಸಿತು.ಆಗಿನ ಅದರ ಜೋರು ಅಸಾಧ್ಯವಾಗಿದ್ದಿತು. ನಿತ್ಯ ಮೂರು ಜನರು ಸಾಯಲು ಮೊದಲಾಯಿತು. ಅದುವರೆಗೂ ಪ್ಲೇಗಿಗೆ ಸ್ವಲ್ಪವೂ ಹೆದರದಿದ್ದ ನಮ್ಮ ಊರವರು ಸಾವಿನ ಮುಖವನ್ನು ಕಂದ ಕೂಡಲೇ ನಡುಗಲು ಪ್ರಾರಂಭಿಸಿದರು. ಪುಟ್ಟಜೋಯಿಸನ ಭಯವಂತೂ ವಿಪರೀತವಾಯಿತು. ದುಡ್ಡಿಗೆ ಅಂಟಿಕೊಂಡಿರುವವರೆಗೆ ಜೀವನದ ಮೇಲಿನ ಆಸೆಯೂ ಹಚ್ಚೆಂದು ಕಾಣುತ್ತದೆ.

ಪುಟ್ಟಜೋಯಿಸನ ಮಗ್ಗುಲ ಮನೆಯ ಧಾಂಡಿಗ ರಾಮುವಿಗೆ ಪ್ಲೇಗು ತಗುಲಿ ಯಮನೊಂದಿಗೆ ಚರ್ಚಿಸಲು ಅವನು ಹೋದಾಗಲಂತೂ ಊರಿಗೆ ಮಂಕು ಪೂರ್ತ ಕವಿದುಕೊಂಡಿತು. ಪ್ಲೇಗಿನ ಕೈಯಿಂದ ಯಾರೂ ತಪ್ಪಿಸಿಕೊಳ್ಳುವಂತೆ ತೋರಲಿಲ್ಲ. ಪುಟ್ಟಜೋಯಿಸನಂತೂ ಪ್ಲೇಗು ತನಗೆ ತಗಲುವುದನ್ನೇ ನಿರೀಕ್ಷಿಸುತ್ತಾ ಹೆದರಿ ಹಣ್ಣಾದನು.

ಇದ್ದಕ್ಕಿದ್ದಂತೆ ಜೋಯಿಸನಿಗೆ ಒಂದು ಯೋಚನೆ ಹೊಳೆಯಿತು ಅದರಿಂದ ಅವನು ಮಧ್ಯದಲ್ಲಿದ್ದರೂ ಸ್ವಲ್ಪ ಧೈರ್ಯ ಬಂದಿತು."ಈ ಕೆಂಬೂತಯ್ಯ 'ಜೀವ ವಿಮೆ ಮಾಡು' ಎಂದು ಅನೇಕ ತಿಂಗಳಿಂದ ಕೇಳುತ್ತಿದ್ದಾನೆ. ಅದಕ್ಕೆ ಇದೇ ಸಮಯ. ಈ ಪ್ಲೇಗಿನಿಂದ ನಾವಂತೂ ತಪ್ಪಿಸಿ ಕೊಳ್ಳಲಾರೆ. ಎಲ್ಲರೂ ಸಾಯುವುದು ಖಂಡಿತ, ಆದರೆ ಮನೆಯವರಿಗೇನಾದರೂ ಸ್ವಲ್ಪ ಹಣ ಬಂದರೆ ನನ್ನ ನಂತರ ಅವರು ಸುಖವಾಗಿರಬಹುದು, ಹೀಗೆ ಮಾಡಿದರೆ ಇನ್ ಷ್ಯೂರೆನ್ಸ್ ನಿಂದ ಆಗಬೇಕಾಗಿರುವ ಪೂರ್ಣ ಪ್ರಯೋಜನವನ್ನು ನಾನು ಹೊಂದಿದಂತಾಗುತ್ತದೆ.ಒಂದು ಪ್ರೀಮಿಯಂ ಕೊಡುವುದರಲ್ಲಿ ನಾನು ಸಾಯುವುದು ಖಂಡಿತ ಎಂದುಕೊಂಡನು."ಆ ಯೋಚನೆಗಳಿಂದ ಪುಟ್ಟಜೋಯಿಸನಿಗೆ ಸ್ವಲ್ಪ ಶಾಂತಿಯಾದರೂ ಸಾವಿನ ಭಯ ಮಾತ್ರ ತಪ್ಪಲಿಲ್ಲ. 'ಇನ್ ಷ್ಯುರ್ ಮಾಡಿದರೂ ಚಿಂತೆಯಿಲ್ಲ, ಪ್ರೀಮಿಯಂ ಕೊಟ್ಟರೂ ಚಿಂತೆಯಿಲ್ಲ, ಆದರೆ ಮಾತ್ರ ಪ್ಲೇಗಿಗೆ ತುತ್ತಾಗದಿದ್ದರೆ ಸಾಕು.ವಿಮೆ ಮಾಡುವುದರಿಂದ ಸಾವು ತಪ್ಪುವುದಾದರೆ ಎಷ್ಟು ಲಕ್ಷಕ್ಕೆ ಬೇಕಾದರೂ ಮಾಡಿಬಿಡುತ್ತಿದ್ದೆ. ಆದರೆ ವಿಮೆಯಂತಹ ಅಲ್ಪಪ್ರಾಣಿಗೆ ಸಾವಿನ ಭಯವನ್ನು ತಪ್ಪಿಸುವ ಶಕ್ತಿ ಎಲ್ಲಿಂದ ಬರಬೇಕು? ಆಗಲಿ ಕೆಂಬೂತಯ್ಯನನ್ನು ಕರೆಸಿ ಹತ್ತು ಸಾವಿರ ರೂಪಾಯಿಗೆ ಒಂದು ಪಾಲಿಸಿ ತೆಗೆದುಕೊಂಡನು.

ಆದರೆ ಕೆಂಬೂತಯ್ಯನಿಗೆ ಮೊದಲು ಬಹಳ ಆಶ್ಚರ್ಯವಾಯಿತು. ಅವನು ಅದುವರೆಗೂ ಅನೇಕರಿಂದ ವಿಮೆ ಮಾಡಿಸಿದ್ದರೂ ಒಟ್ಟಿಗೆ ಯಾರೂ ಒಂದೇ ಸಲ ಹತ್ತುಸಾವಿರಕ್ಕೆ ಮಾಡಿರಲಿಲ್ಲ.ಆದ್ದರಿಂದ ಅವನ ಉತ್ಪತ್ತಿ ಇದ್ದಕಿದ್ದಂತೆ ಒಂದಕ್ಕೆ ಒಂದುವರೆಯಾಯಿತು. ಜೋಯಿಸರು ಬದುಕಿದ್ದ ದಿನಗಳಿಗೆ ಮಾತ್ರ ಕೆಂಬೂತಯ್ಯನಿಗೆ ಬೋನಸ್ಸು ಸಿಕ್ಕುತ್ತಿದ್ದುದರಿಂದ ಅವನು ಜೋಯಿಸರು ಅನೇಕ ಕಾಲ ಬದುಕಲಿ' ಎಂಬುದಾಗಿ ಪ್ರಾರ್ಥಿಸತೊಡಗಿದನು. ಡಾಕ್ಟರನ್ನು ಕರೆತಂದು ಜೋಯಿಸನಿಗೆ ಇನ್ನ್ಯಾಕ್ಯುಲೇಷನ್ ಮಾಡಿಸಿದನು. ಜೋಯಿಸನೊಂದಿಗೆ ಬೆಳ್ಳಗೆ ಸಾಯಂಕಾಲ ಸಂಚಾರಕ್ಕೆ ಹೋಗುತ್ತಿದ್ದನು.ಪ್ಲೇಗು, ಸಾವು, ಇಲಿ, ಇವುಗಳ ಯೋಚನೆ ಜೋಯಿಸನ ಮನಸ್ಸಿಗೆ ಹೆಚ್ಚಾಗಿ ಹಿಡಿಯದಂತೆ ಅವನೊಂದಿಗೆ ಮಾತುಕತೆಯಡುತ್ತಾ ಸ್ವಲ್ಪ ಹೆಚ್ಚು ಕಡಮೆ ಯಾವಾಗಲೂ ಅವನ ಜೊತೆಯಲ್ಲಿಯೇ ಇರತೊಡಗಿದನು.

ಆದರೆ ಜೋಯಿಸನಿಗೆ ಇದಾವುದರಿಂದಲೂ ಸಾವಿನ ಭಯ ತಪ್ಪಲಿಲ್ಲ, ಅವನಿಗೆ ನಮ್ಮೂರಿನ ಇತರರಿಗಿಂತ ತನಗೆ ಸಾವಿನ ಭಯ ಹೆಚ್ಚೆಂಬುದು ಗೊತ್ತಾಯಿತು. ಆದರೆ ಕೂಡಲೆ ಅವನಿಗೆ ಒಂದು ಧೈರ್ಯ ಬಂದಿತು.'ಇರಲಿ ಸಾವು ಬರಲಿ ಸಿದ್ಧವಾಗಿದ್ದೇನೆ, ನನ್ನ ಸಾವಿಗೆ ನಾನೇ ಇನ್ ಷ್ಯುರೆನ್ಸ್ ಕಂಪನಿ ಕೆಂಬೂತಯ್ಯ' ಎಂದುಕೊಂಡನು.

ಸಾವಿಗೆ ಹೆದರಬೇಕಾಗಿಲ್ಲವಾದ್ದರಿಂದ ಧೈರ್ಯದಿಂದ ಜೋಯಿಸನಿಗೆ ತನ್ನ ಹಿಂದೆ ಎಂದೂ ಅನುಭವವಾಗದಿದ್ದ ವಿಚಿತ್ರವಾದ ಮನೋಧಾರ್ಢ್ಯವು ಸ್ಥೆರ್ಯವೂ ಉಂಟಾಯಿತು. ಸುತ್ತಮುತ್ತ ಜನರು ಒಣಗಿದ ಮರದ ಎಲೆಗಳಂತೆ ಉದುರುತ್ತಿದ್ದರೂ ಅವನು ಮಾತ್ರ ಧೈರ್ಯವಾಗಿಯೇ ಇದ್ದನು. ಆಗಿನಿಂದಲೇ ಜೋಯಿಸನ ಜೀವನ ಹೊಸದಾಗಿ ಪ್ರಾರಂಭವಾದಂತೆ ತೋರಿತು. ಯಾವ ದೃಷ್ಟಿಯಿಂದ ಅವನು ನೋಡಿದರೂ ಅವನಿಗೆ ನಿರುತ್ಸಾಹ ತೋರಲಿಲ್ಲ. ಪರೆಬಿಟ್ಟ ಹಾವಿನಂತೆ ಅವನು ಬೇಕಾದ್ದೆಲ್ಲ ಬರಲಿ ಎಂಬುದಾಗಿ ಗೆಲುವಾಗಿ ಇರತೊಡಗಿದನು. ದಿನದಿನಕ್ಕೂ ಅವನ ಲವಲವಿಕೆಯನ್ನು ನೋಡಿ ಕೆಂಬೂತಯ್ಯನ ಉತ್ಸಾಹವೂ ಹೆಚ್ಚಾಯಿತು. ಹಿಂದೆ ಇಲಿಗಳು ಬೀಳುತ್ತಿದ್ದಂತೆ ಈ ಮನುಷ್ಯರ ಹೆಣಗಳೇ ಬೀಳುತ್ತಿದ್ದರೂ, ಬಾಕಿಯವರೆಲ್ಲ ಮಂಕು ಕವಿದಂತೆ ನಿರ್ವೀರ್ಯರಾಗಿದ್ದರೂ ಜೋಯಿಸನು ಮಾತ್ರ ಗೆಲುವಾಗಿಯೇ ಇದ್ದನು. ನರಸಿಂಹಾಚಾರ್ಯನು ಏನಯ್ಯ ಯಾವ ಟಾನಿಕ್ ತೆಗೆದುಕೊಂಡೆ, ಈಗ ಒಂದು ಹೊಸ ಹುರುಪು ನಿನಗೆ ಬರುತ್ತಿದೆಯಲ್ಲಾ' ಎಂಬುದಾಗಿ ಕೇಳಲು ಜೋಯಿಸರು 'ವಿಮೆ ಮಾಡಿದ್ದೇ ಮಾಡಿದ್ದು ಸ್ವಾಮಿ. ನನಗೆ ಯಮನ ಭರುವೇ ತಪ್ಪಿ ಹೋಯಿತು. ಈಗ ನಾನು ಇನ್ನೂ ನೂರಾರು ವರುಷ ಬದುಕಿರುವುದರಲ್ಲಿ ಸಂದೇಹವಿಲ್ಲವೆಂದು ನನಗೆನ್ನಿಸುತ್ತಿದೆ' ಎಂದನು.

ಕೆಂಬೂತಯ್ಯ 'ವಿಮೆ ಯಮನನ್ನೇ ಹೆದರಿಸಿತು, ನೋಡಿ ಜೋಯಿಸರನ್ನು'ಎಂಬುದಾಗಿ ಜಾಹಿರಾತು ಮಾಡುತ್ತಿದ್ದಾನೆ. ಈಗ ಇನ್ನೂ ಅನೇಕರು ನಮ್ಮೂರಲ್ಲಿ ಯಮನನ್ನು ಹೆದರಿಸಲು ಸಿದ್ಧರಾಗುತ್ತಿದ್ದಾರೆ.

*****

ಬೆಂಗಳೂರ ಬೆಳದಿಂಗಳು

- ಚಂದ್ರಶೇಖರ ಕಂಬಾರ

‘ಅಪ್ಪಾ, ಬೆಂಗಳೂರಿಗೆ ಆಕಾಶ, ಸೂರ್ಯ–ಚಂದ್ರ ಇರ್ತಾರ?’

–ಪುಟ್ಟಿ ಕೇಳಿದಳು.

ತಕ್ಷಣ ಭೂಮಿಗೂಂದೇ ಬಾನು, ಬಾನಿಗೂಂದೇ ಸೂರ್ಯ ನಿನಗ್ಯಾಕೆ ಎರಡು ದೊರೆಯೆ’ ಪದ ಯಾಕೆ ನೆನಪಿಗೆ ಬಂತು! ಹಾಡಿನ ಗುಂಗಿನಿಂದ ಹೊರ ಬಂದು ಹೇಳಿದೆ: ಇಲ್ಲ ಪುಟ್ಟಿ,ಇಡೀ ಭೂಮಿಗೆ ಒಂದೇ ಆಕಾಶ, ಒಂದೇ ಸೂರ್ಯ, ಒಂದೇ ಚಂದ್ರ, ಹಿಮಾಲಯದ ಬೆಳ್ಳಿ ಬಟ್ಟಗಳ ಮೇಲೆ, ಹಿಂದೂ ಮಹಾಸಾಗರ, ಅರಬ್ಬೀ ಸಮುದ್ರದಲ್ಲಿ ಉಕ್ಕುತ್ತಿರುವ ಅಲೆಗಳ ಮೇಲೆ, ಗಂಗಾ ಕಾವೇರಿ ನದಿಗಳ ಶುಭ್ರ ಜಲದಲ್ಲಿ, ಬ್ಯಾಟರಾಯನಪುರದ ವೃಷಭಾವತಿಯಲ್ಲಿ ಹರಿವ ವಿಷಜಲದಲ್ಲಿ, ಉತ್ತರಹಳ್ಳಿಯ ರಸ್ತೆಯಲ್ಲಿರುವ ನೂರಾರು ಕೊರಕಲು ಹೊಂಡಗಳಲ್ಲಿ, ಅಲ್ಲಿ ಕಾಣುತ್ತಿರುವ ದೊರೆಕೆರೆಯಲ್ಲಿ .ಎಲ್ಲೆಲ್ಲೂ ಬೆಳಗುವ ಸೂರ್ಯ ಚಂದ್ರರು ಒಬ್ಬರೇ.

‘ಅಪ್ಪಾ ಹಂಗಾದ್ರೆ ಈಗ ಆಕಾಂಕ್ಷ ಅವರ ಊರಲ್ಲೂ ಇದೇ ಥರ ಒಂಚೂರು ಮೋಡ ಇಲ್ಲದೇ ಚಂದ್ರ ಇಷ್ಟೇ ಕಾಣ್ತಿರ್ತಾನ?”

ಒಂದು ಕ್ಷಣ ಅವಾಕ್ಕಾದ ನಾನು ‘ಹೌದು ಪುಟ್ಟಿ’ ಎಂದು ಮೆಲುದನಿಯಲ್ಲಿ ಹೇಳುವಷ್ಟರಲ್ಲಿ, ‘ಅಪ್ಪಾ ನನಗೆ ಡೌಟಪ್ಪಾ, ಇವತ್ತು ನನ್ನ ಸ್ಕೂಲಿಂದ ಕರ್ಕೊಂಬರಬೇಕಾದರೆ ನೀನು ಎಷ್ಟೊಂದು ಮೋಡ ಇದೆ, ಮಳೆ ಬರಬಹುದು ಎಂದೆ. ಆದರೆ ನಮ್ಮನೆ ಕಡೆ ಬಂದಾಗ ಒಂಚೂರು ಮೋಡಾನೆ ಇರಲಿಲ್ಲ. ಅಲ್ಲಿ ಕಂಡ ಮೋಡ ಇಲ್ಲೇಕೆ ಕಾಣಲಿಲ್ಲ. ನನಗನ್ನುಸ್ತೆ ಪ್ರತೀ ಊರಿಗೂ ಬೇರೆ ಆಕಾಶ, ಸೂರ್ಯ–ಚಂದ್ರರು ಇರುತ್ತಾರೆ.’

ಹೌದು ಮರಿ ಪ್ರತೀ ಊರಿಗಲ್ಲ, ಪ್ರತಿಯೊಬ್ಬರಿಗೂ ಅವರದ್ದೇ ಆಕಾಶ, ಅವರ ಕಣ್ಣಿಗೆ ಎಟುಕಿದಷ್ಟು. ‘ ಹೋಗಪ್ಪಾ ಈಗಿನ್ನೂ ಇಡೀ ಭೂಮಿಗೆ ಒಂದೇ ಆಕಾಶ ಎಂದವನು ಈಗ ಪ್ರತಿಯೊಬ್ಬರಿಗೂ ಬೇರೆ ಬೇರೆ ಆಕಾಶ ಅಂತೀಯ, ಏನಾಗಿದೆಯಪ್ಪಾ ನಿನಗೆ .’ಕೊರಳಿಗೆ ಜೋತು ಬಿದ್ದು ಕೇಳಿದಳು. ಖಲೀಲ ಗಿಬ್ರಾನ್ನ ಮಾತುಗಳು ನೆನಪಿಗೆ ಬಂದವು: ‘ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ, ಅವರು ನಿಮ್ಮ ಜೊತೆ ಇರುವುದಾದರೂ ಅವರು ನಿಮಗೆ ಸೇರಿದವರಲ್ಲ. ನಿಮ್ಮ ಪ್ರೀತಿಯನ್ನು ಅವರಿಗೆ ನೀಡಬಹುದು, ಆದರೆ ನಿಮ್ಮ ಆಲೋಚನೆಗಳಾನ್ನಲ್ಲ, ಅವರಂತಿರಲು ನೀವು ಪ್ರಯತ್ನಿಸಬಹುದು ಆದರೆ ಅವರನ್ನು ನಿಮ್ಮಂತೆ ಮಾಡದಿರಿ. ಜೀವನ ಹಿಮ್ಮುಖವಾಗಿ ಹರಿಯದಿರಲಿ’ ಇದು ನಿಜ. ಎಷ್ಟೇ ಬೇಡವೆಂದು ಕೊಂಡರೂ ನಮ್ಮ ಮಕ್ಕಳು ನಮ್ಮಂತೆಯೇ ಇರಬೇಕು. ನಾವು ಆಲೋಚಿಸಿದ್ದನ್ನು ಅವು ಆಲೋಚಿಸಬೇಕು. ನಮಗೆ ರುಚಿಸಿದ್ದು ಅವಕ್ಕೂ ರುಚಿಸಬೇಕು. ಯಾವ ಬೆಳದಿಂಗಳು ನನ್ನೊಳಗೆ ಪ್ರಶ್ನೆಗಳು ಏಳದಂತೆ ಅವುಕುತ್ತಿದೆಯೋ ಅದೇ ಬೆಳದಿಂಗಳು ಅವಳ ಮನದಲ್ಲಿ ಪ್ರಶ್ನೆಗಳ ಸರಮಾಲೆಯನ್ನೇ ಸೃಷ್ಟಿಸುತ್ತಿವೆ. ನನ್ನಂತೆ ಅವಳನ್ನೂ ಬೆಳದಿಂಗಳು ಪ್ರಶ್ನೋತ್ತರಗಳಿಲ್ಲದ ಮೌನ ಜಗತ್ತಿಗೆ ಕೊಂಡೊಯ್ಯಬೇಕೆಂಬುದು ನನ್ನ

ಆಸೆ. ಅವಳಿಗೆ ತಿಳಿಯುವಂತೆ ಹೇಳಲು ನಂತರ ನಿರ್ಮಲ ಆಕಾಶದಲ್ಲಿ ಹೀಗೆ ಇಡಿಯಾಗಿ ಬೆಳದಿಂಗಳು ಸಿಕ್ಕುವುದಿಲ್ಲವಲ್ಲ.

ಅಂತೆಯೇ ನನ್ನ ಕೊರಳಿಗೆ ಹಾಕಿದ ತೋಳಹಾರವನ್ನು ಮೆಲ್ಲಗೆ ತೆಗೆದು ' ಪುಟ್ಟ ಇದರಲ್ಲೆಲ್ಲ ಅಮ್ಮ ತುಂಬಾ ಜಾಣೆ, ಹೋಗಿ ಅಮ್ಮನ್ನ ಕೇಳಪ್ಪ, ನಿನಗೆ ಮನದಟ್ಟಾಗುವಂತೆ ವಿವರಿಸುತ್ತಾರೆ' ಎಂದೆ. 'ಹೋಗಪ್ಪ ಏನು ಕೇಳಿದ್ರು ತಪ್ಪಿಸಿಕೊಳ್ಳೋಕೆ ನೊಡ್ತೀಯ. ನಾನು ಎಲ್ಲೂ ಹೋಗಲ್ಲ. ನೀನೆ ತಾನೆ ನನ್ನನು ಕೆರೆದದ್ದು. ಪುಟ್ಟಿ ಚಂದ್ರ ಎಷ್ಟು ಚೆನ್ನಾಗಿದೆ ನೋಡು ಬಾ ಅಂತ ಅರಚ್ಕಂಡೆ .' ಬೆಂಗಳೂರಲ್ಲಿ ಹುಣ್ಣಿಮೆಯ ಚಂದ್ರ ನೋಡ ಸಿಗುವುದೇ ಅಪರೂಪ. ಮಳೆಗಾಲವಿರಲಿ, ಬೇಸಿಗೆ, ಚಳಿಗಾಲದಲ್ಲಿ ಕೂಡಾ ಇದ್ದಕ್ಕಿದ್ದಂತೆ ಎಲ್ಲೋ ಸೈಕ್ಲೋನ್, ಡಿಪ್ರೆಷನ್ ಅಗಿ ಅದುವರೆಗೂ ಇರದಿದ್ದ ಮೋಡಗಳು ಹುಣ್ಣಿಮೆಯ ಸಂಜೆಯೇ ಪ್ರತ್ಯಕ್ಷವಾಗುತ್ತವೆ. ಅಲ್ಲದೆ ಎಲ್ಲ ಮಳೆಗಳು ಅಮಾವಾಸ್ಯೆ ಹುಣ್ಣಿಮೆಗಳಂದೇ ತೀವ್ರವಾಗುವುದರಿಂದ ಮಳೆಗಾಲದಲ್ಲಂತೂ ಪೂರ್ಣಚಂದ್ರನ ದರ್ಶನ ದುರ್ಲಭ. ಹತ್ತಾರು ಮಾರು ಮೇಲೆ ಬರುವವರೆಗೂ ಕಾಣೂತ್ತಲೇ ಇರಲಿಲ್ಲ. ಕಂಡರೂ ಬಿಳಿಚಿಕೊಂಡವನಂತೆ ಕಾಣುತ್ತಿದ್ದ. ಈಗ ಸಿಟಿಯ ಔಟ್ ಸ್ಕರ್ಟ್ಗೆ ಬಂದ ಮೇಲೆ ಹಲವಾರು ಹುಣ್ಣಿಮೆಗಳು ಬಂದರೂ ಆಕಾಶ ಮೋಡಗಳಿಂದ ಮುಕ್ತಿ ಪಡೆದಿರಲಿಲ್ಲ.

ಹಗಲೆಲ್ಲ ಮೋಡ ಮಳೆ ಇದ್ದರೂ ಅದೇನೋ ಇದ್ದಕ್ಕಿದ್ದಂತೆ ಸಂಜೆ ಆಕಾಶ ನಿರ್ಮಲವಾಯ್ತು. ಮಾಮೂಲಿನಂತೆ ನಮ್ಮ ಸುತ್ತಮುತ್ತಣ ಬಡಾವಣೆಗಳು ಪವರ್ ಕಳೆದುಕೊಂಡು ಕತ್ತಲಲ್ಲಿ ಮುಳುಗಿದ್ದವು. ನನಗೆ ಇದರಿಂದ ಸಂತೋಷವೇ ಆಯ್ತು. ಬತ್ತ ಹಾಲುದುಂಬಿಕೊಂಡು ಹಸಿರಿನಿಂದ ಹೊಂಬಣ್ಣಕ್ಕೆ ತಿರುಗುವಂತೆ ಚಂದ್ರ ಕಿತ್ತಳೆ ಬಣ್ಣ ಕಳೆದುಕೊಂಡು ಹೊನ್ನಿನ ಬಣ್ಣ ತೆಳೆದು ನಂತರ ಕ್ರಮೇಣ ಹಾಲು ತುಂಬಿಕೊಂಡ, ಟೆರೇಸಿನ ಮೇಲಿದ್ದ ನಾನು ನೋಡುತ್ತಿದ್ದೆ. ಬೆಳದಿಂಗಳು ನೆಲದ ಮೇಲೆ ನಿಧಾನವಾಗಿ ಹರಡುತಿತ್ತು. ಚಂದ್ರನಲ್ಲಿ ಸೂರ್ಯನ ಆಕ್ರಮಣಕಾರಿ ಗುಣವಿಲ್ಲ. ಇಡೀ ಇರುಳು ನನ್ನದೇ ಎಂಬ ಆತ್ಮಸ್ಥೈರ್ಯದಿಂದ ಮೊದಲು ಆಕಾಶದ ನೀಲಿಯನ್ನು ಹಾಲಿನಲ್ಲಿ ಅದ್ದಿ, ನಂತರ ಆಕಾಶದತ್ತ ಚಾಚಿದ ಮರದ ರೆಂಬೆ ಕೊಂಬೆಗಳ ಮೇಲೆ ಹಾಲು ಚೆಲ್ಲಿ, ಆಮೇಲೆ ಹಸಿರು ಹಂದರದಲ್ಲಿ ಬಚ್ಚಿಟ್ಟುಕೊಂಡ ಮಲ್ಲಿಗೆ ಮೊಗ್ಗುಗಳ ಒಳಗಿಳಿದ ಮೇಲೆ ವಸುಂಧರೆಗೆ ಅರಿವು ಮೂಡುವ ಮುನ್ನವೇ ಅವಳ ಒಡಲು ಆವರಿಸಿಕೊಳ್ಳುತ್ತಾ ಹೋಗುತ್ತಾನೆ.

ಆದರೆ ಬೆಂಗಳೂರಿನ ಬಹುಭಾಗ ಕಿರಣಗಳು ಭೂಮಿಯನ್ನು ತಲುಪುವುದು ನೋಡುವ ಭಾಗ್ಯದಿಂಡ ವಂಚಿತವಾಗಿದೆ. ಇದಕ್ಕೆ ಕಾರಣ ಹಲವು. ಎಂ.ಜಿ. ರಸ್ತೆ, ಮೆಜೆಸ್ಟಿಕ್ಗಳಲ್ಲಿ ಮಧ್ಯರಾತ್ರಿಯವರೆಗೂ ಕಣ್ಣು ಕೋರೈಸುವ ಕೃತಕ ಬೆಳಕಿನ ಹಾವಳಿಯಲ್ಲಿ ಬಿಳಿಚಿಕೊಂಡು ಎಳೆಯ ಬಸುರಿಯಂತೆ ಕಾಣುವ ಶಶಿಯಲ್ಲಿ ನೆತ್ತಿಗೆ ಬಂದ ಮೇಲೆ ದಿನೇ ದಿನೇ ಮೈದುಂಬಿಕೊಂಡು ಹೊಮ್ಮುವ ತುಂಬು ಬಸುರಿಯ ಕಾಂತಿ, ಹೊಳಪು ಪ್ರಾಶಾಂತತೆ ಬೆಳೆಯುತ್ತಾ ಹೋಗುತ್ತದೆ. ಇಂದಿಗೂ ಬೆಂಗಳೂರಿನ ಹೃದಯದಂತಿರುವ ಕಬ್ಬನ್ ಪಾರ್ಕ್, ಲಾಲ್ ಬಾಗ್ ಸುತ್ತಣ ಹಲವಾರು ಹಸಿರು ವನಗಳಲ್ಲಿ ಹುಣ್ಣಿಮೆ ಕಾಡಿನಲ್ಲಿ ಬೆಳದಿಂಗಳು ಹರಿದಂತೆಯೇ ಇರುತ್ತದೆ. ಆದರೆ ಹಸಿರು ಹೊನ್ನಿನ ಮೇಲೆ ಈ ಹಾಲ ಹೊಳೆ ಹರಿವುದನ್ನು ನೋಡಲು ಕಾಯಬೇಕಷ್ಟೆ. ಬಾಲ ಚಂದ್ರನಿಗೆ ಎಳೆಯ ಸಿಂಹದಂತೆ ನಾಡ ಬೆಳಕನ್ನು ಹೆದರಿಸುವ ಚೈತನ್ಯವಿಲ್ಲ. ಆದರೆ ಚಂದ್ರ ಬಲಿಯುತ್ತ ಹೋದಂತೆ ಈ ಹಸಿರು ಸಿರಿಯನ್ನು ಪ್ರವೇಶಿಸಿ ಜೀವ ಚೈತನ್ಯ ನೀಡುತ್ತಾನೆ(ಇಲ್ಲೇ ಇನ್ನೊಂದು ವಿಚಿತ್ರ ನೆನೆಪಿಗೆ ಬರುತ್ತಿದೆ. ಪ್ರಕೃತಿ ಹೆಣ್ಣು,ಸೂರ್ಯ ಗಂಡು, ಅದರೆ ಕವಿಗಳ, ಜನಸಾಮಾನ್ಯರ ಕಲ್ಪನೆಯಲ್ಲಿ ಅವರವರ ಭಾವಕ್ಕೆ ಅನುಗುಣವಾಗಿ ಹೆಣ್ಣು– ಗಂಡು.ಆದರೆ ಎರಡೂ ಪಾತ್ರವನ್ನು ನಿರ್ವಹಿಸುವುದು ಬಹುಶಃ ಚಂದ್ರ ಮಾತ್ರ: ಹೆಣ್ಣಿಗೆ ಗಂಡಾಗಿ,ಗಂಡಿಗೆ ಹೆಣ್ಣಾಗಿ

ಕಾಡಿತ್ತು ಮಾಯೆ ಎಂಬಂತೆ. ಅಷ್ಟೇ ಅಲ್ಲ, ವಿರಹಿಗಳ ವಿರಹವನ್ನು ಹೆಚ್ಚಿಸುವ; ಪ್ರೇಮಿಗಳ ಸಾಂಗತ್ಯವನ್ನು ಪ್ರೇರೇಪಿಸುವ ದ್ವಿಪಾತ್ರಧಾರಿ ಕೂಡ ಚಂದ್ರನೊಬ್ಬನೇ, ಅಲ್ಲ ಶಶಿಯೊಬ್ಬಳೆ!)

ಬ್ರಿಟೀಷರು ಒಂದು ಕಾಲದಲ್ಲಿ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿದಂತೆ ಬೆಂಗಳೂರಿನ ಅವೆನ್ಯು ರಸ್ತೆಯ ಇಕ್ಕೆಲಗಳಲ್ಲಿರುವ ಚಿಕ್ಕಪೇಟೆ, ಬಳೇಪೇಟೆ ಮುಂತಾದ ಪೇಟೆಗಳ ಹಲವಾರು ಹಳ್ಳಿಗಳಲ್ಲಿ ಸೂರ್ಯ ಚಂದ್ರರು ಭೇದಿಸಲಾಗದಂತಹ ಕಟ್ಟಡ ಸಾಮ್ರಾಜ್ಯ ನಿರ್ಮಾಣವಾಗಿದೆ. ಅಲ್ಲಿನ ಹಲವಾರು ಹೆಂಗಸರು, ಎಳೆಯ ಮಕ್ಕಳು ವರ್ಷಗಳ ಕಾಲ ಸೂರ್ಯಚಂದ್ರರನ್ನು ನೋಡುವುದಿರಲಿ ಅವುಗಳ ಕಿರಣಗಳನ್ನೂ ಕಂಡಿರುವುದಿಲ್ಲ. ಅಪ್ಪಿತಪ್ಪಿ ರಸ್ತೆಗೆ ಬಂದರೂ ಕಟ್ಟಡಗಳ ಮಾಡೇ ಆಕಾಶ, ಬೀದಿ ದೀಪಗಳೇ ಸೂರ್ಯಚಂದ್ರರು; ಮಗ್ಗಗಳ ಸದ್ದೇ ನದಿಯ ಜುಳುಜುಳು.

ಎರಡು ಕಟ್ಟಡಗಳ ನಡುವೆ ಇರಲಿ, ಎರಡು ರಸ್ತೆಗಳ ನಡುವೆಯಾದರೂ ಸ್ವಲ್ಪ ಜಾಗ ಇರುವುದಿಲ್ಲವೇ? ಖಂಡಿತಾ ಇಲ್ಲ. ಇಲ್ಲಿನ ಕಟ್ಟಡಗಳು ಕಾಮನಬಿಲ್ಲಿನಂತೆ ಬಾಗಿರುತ್ತವೆ. ಇಲ್ಲದಿದ್ದರೆ ಪೀಸಾ ಗೋಪುರದಂತೆ ವಾಲಿರುತ್ತದೆ. ಎರಡೂ ಇಲ್ಲದಿದ್ದರೆ ಕಟ್ಟಡಗಳ ಎರಡು ಶೀಟು ಹಾಲಿ ರಸ್ತೆಯಲ್ಲೇ ಅಂಗಡಿಗಳು ಎದ್ದಿರುತ್ತವೆ.

ಸೂರ್ಯನ ಕಿರಣಗಳು ಅಕಸ್ಮಾತ್ತಾಗಿ ತಪ್ಪಿಸಿಕೊಂಡು ಬಂದರೆ ಕ್ಷಣವಾದರೂ ನೆಲವನ್ನು ಸೋಂಕಬಹುದು, ಆದರೆ ಇಲ್ಲಿನ ಜನರಿಗೆ ಚಂದ್ರ ದರ್ಶನ ಮಾತ್ರ ಕರಗದ ದಿನವೇ, ಅಂದಾದರೂ ಮನೆಯಿಂದ ಹೊರಬಂದರೆ! ಅಂದು ಹೊರಬಂದವರು ಕರಗದ ಚಂದ್ರನ ಕಿರಣಗಳನ್ನು ಇಡೀ ವರ್ಷಕ್ಕಾಗುವಷ್ಟು ಕುಡಿದು ಬಿಡಬೇಕು. ಕಿಕ್ಕಿರಿದ ಮನೆಗಳ ಬೇರೆ ಬಡಾವಣೆಗಳ ಜನರ ಬದುಕು ಇದಕ್ಕೆ ತೀರಾ ಹೊರತೇನಲ್ಲ.

ಇಷ್ಟಾಗಿಯೂ ಬೆಂಗಳೂರಿನ ಸೆರಗಿನಲ್ಲಿ ಇಂದಿಗೂ ಕಾಂಕ್ರೀಟಿನಿಂದ ಅಷ್ಟಾಗಿ ಮೈಲಿಗೆಯಾಗದ ಹಲವಾರು ಹಚ್ಚ ಹಸುರಿನ ಗುಡ್ಡ ಸಾಲುಗಳಿವೆ. ಒಮ್ಮೆ ಊರಿಂದ ಮರಳ ಲಾರಿಯಲ್ಲಿ ಬರುತ್ತಿದ್ದೆ. ಬೇಸಿಗೆಯ ಧಗೆಯೊಂದಿಗೆ ಕ್ಯಾಬಿನಿನಲ್ಲಿ ಬೀಡಿ ಸಿಗರೇಟಿನ ಹೊಗೆ, ಇದರಿಂದ ರೋಸಿ ಹೋಗಿ ಡ್ರೈವರ್ ಎಷ್ಟೇ ಹೇಳಿದರೂ ಕೇಳದೆ ಕೆಂಗೇರಿಯ ಬಳಿ ಲಾರಿ ನಿಂತಾಗ ಕ್ಯಾಬಿನ್ನಿನಿಂದ ಹೊರ ಬಂದು ಮೇಲೆ ಹತ್ತಿ ಮರಳ ಮೇಲೆ ಉರುಳಿಕೊಂಡೆ. ಲಾರಿ ಮುಖ್ಯರಸ್ತೆಯಲ್ಲಿ ಹೋಗದೆ ಕೆಂಗೇರಿಯಿಂದ ಉತ್ತರಹಳ್ಳಿಯಲ್ಲಿ ಹೊರಟಿತು. ಅದು ನಾನು ಅಲ್ಲಿಯವರೆಗೂ ಕಂಡಿರದ ಹಾದಿ, ಅಷ್ಟು ಸೆಖೆಯಿದ್ದರೂ ಲಾರಿಯಲ್ಲಿದ್ದ ಒಳಪದರದ ಮರಳ ತೇವ ಇನ್ನೂ ಆರಿರಲಿಲ್ಲ. ಹಾಗೇ ಮರಳ ಮೇಲೆ ಮಲಗಿದ್ದವನು ಮೇಲೆ ನೋಡಿದರೆ ನೀಲಾಕಾಶ, ಅದರಲ್ಲಿ ರಾಜ ಗಾಂಭೀರ್ಯದಿಂದ ಸಾಗುತ್ತಿರುವ ಚಂದ್ರ. ಸುತ್ತಲೂ ಹರಿದ ಗುಡ್ಡಸಾಲು, ಎತ್ತರದ, ತಗ್ಗಿನ, ಏರಳಿತಗಳ ಗುಡ್ಡ ಸಾಲಿನ ಮೇಲೆ ಚಂದ್ರ ತನ್ನ ಹಾಲಕಿರಣಗಳಿಂದ ನೇಯ್ದ ತೆಳ್ಳನೆಯ ಪರದೆಯನ್ನು ಹಾಸಿದಂತೆ, ಚಂದ್ರಿಕೆ ನಿರ್ಮಿಸುತ್ತಿರುವ ಪರದೆಯನ್ನು ಲಜ್ಜೆಯಿಂದ ಮತ್ತಷ್ಟು ಎಳೆದುಕೊಳ್ಳುತ್ತಿರುವ ಇಳೆ. ಆದರೆ ಚಂದ್ರ ಈ ಬೆಳದಿಂಗಳ ಬಲೆಯನ್ನು ಆಸೆಯಿಂದ ಮೇಲೆ ಎಳೆದುಕೊಳ್ಳುತ್ತಿರುವ ಧಾರಿಣಿಯನ್ನು ಕಣ್ಣೆವೆಗಳಲ್ಲಿ ಬಚಿಟ್ಟುಕೊಳ್ಳಲೋ!

ದಿಣ್ಣೆಯನ್ನು ಹತ್ತಲು ಏದುಸಿರು ಬಿಡುತ್ತಾ, ಕಿರ್ರ್ ಎಂದು ಕಿರುಚುತ್ತಾ ಲಾರಿ ನಾನು ಕಟ್ಟಿಸುತ್ತಿದ್ದ ಮನೆಯ ಬಳಿ ಬಂದು ನಿಂತಿತು. ಲಾರಿಯ ಸದ್ದು ಕೇಳಿ ಮರಳ ಗುಡ್ಡೆಯ ಮೇಲೆ, ರಸ್ತೆಯಲ್ಲೇ ಹಾಕಿಕೊಂಡಿದ್ದ ಚಾಪೆಯ ಮೇಲೆ ಮಲಗಿದ್ದವರೆಲ್ಲ ಸರಿಹೊತ್ತಿನಲ್ಲಿ ನಿದ್ದೆ ಕೆಡಸಿದ ಲಾರಿಗೆ ಶಾಪ

ಹಾಕುತ್ತಾ ಎದ್ದು ನಿಂತರು. ಈ ಕೆಲಸಗಾರರ ಗುಂಪಿನಲ್ಲಿ ಅದೇ ತಾನೆ ಮದುವೆಯಾದ ಒಂದು ಜೋಡಿ ಇತ್ತು.ಕೆಲಸಗಾರರಿಗೆಂದೇ ಶೆಡ್ ಇದ್ದರೂ ಅದರಲ್ಲಿ ವಾಚ್ ಮನ್ ಬಿಟ್ಟು ಮತ್ಯಾರೂ ಮಲಗುತ್ತಿರಲಿಲ್ಲ! ವೈಶಾಖದ ಬಿರುಬೇಸಿಗೆಯಲ್ಲಿ ಅವರಿಗೆ ನೆಲವೇ ಹಾಸಿಗೆ, ಆಕಾಶವೇ ಹೊದಿಕೆ. ಸುಖಾಸುಮ್ಮನೆ ಬೆವರಿಕ್ಕಿಸುವ ಧಗೆಯಲ್ಲಿ ನೆಲದ ಹಾಸಿಗೆ, ಆಕಾಶದ ಹೊದಿಕೆಯಂಥ ಸುಪ್ಪತ್ತಿಗೆ ಬೇರಾವುದೂ ಇರಲಾರದು. ಹಗಲ್ಲೆಲ್ಲಾ ಮೈ ಮುರಿದು ದುಡಿದು ರಾತ್ರಿ ಹೆಣಗಳಂತೆ ಮಲಗಿರುತ್ತಿದ್ದ ಅವರಲ್ಲಿ, ಸೂರ್ಯನ ಕಿರಣಗಳು ಮೈಯನ್ನು ಚುಚ್ಚಿದ ಮೇಲೆಯೇ ಜೀವ ಸಂಚಾರವಾಗುತ್ತಿದ್ದದು. ಹೊಸ ಮಧುಮಗ ಪಳನಿ ಒಂದೆರಡು ದಿನದಿಂದ ಮಂಕಾಗಿದ್ದ. ಈಗ ಬೆಳದಿಂಗಳ ಬೆಳಾಕಲ್ಲೂ ಸಪ್ಪೆಯಾಗಿ ಕಾಣುತ್ತಿದ್ದ, ಅವನ ಹೆಂಡತಿ ಅಷ್ಟರಲ್ಲಿ ಒಂದು ಚೊಂಬು ನೀರು ಮತ್ತು ಒಂದು ಗ್ಲಾಸಿನ ತುಂಬಾ ಬ್ಲಾಕ್ ಟೀ ತಂದಿಟ್ಟಳು. ಅವರು ಅತ್ತ ಹೋದ ಮೇಲೆ ಪಳನಿಯನ್ನು ಕರೆದು 'ಯಾಕೋ ಮೂರು ದಿನದಿಂದ ಒಳ್ಳೆ ಮೋಹಿನಿ ಬಡಿದವನಂಗೆ ಇದೀಯಲ್ಲೋ?' ಎಂದು ಎಂದಿನ ಸಲುಗೆಯಿಂದ ರೇಗಿಸಿದೆ. ಅವನು ಮೂವತ್ತೆರಡು ಹಲ್ಲು ಬಿಟ್ಟು ನಿರಾಳವಾಗಿ ನಕ್ಕು ನಂತರ ನಿಟ್ಟುಸಿರು ಬಿಟ್ಟು 'ನಾಲ್ಕು ದಿನದಿಂದ ಈ ಪೌರ್ಣಮಿ ಬೆಳಕಿನ ಕಾಟ ಸಾರ್' ಎಂದ.'ಬೆಳದಿಂಗಳು ಏನ್ಮಾಡ್ತೊ ನಿನಗೆ, ತಂಪಾಗಿ ಚೆನ್ನಗಿರುತ್ತೆ?' ಎಂದೆ.

"ಏನ್ ಚೆಂದ ಸಾರ್, ನಾವು ದಿನಾ ಹೊರಗಡೆ ಮಲಗೋದು. ಅವಳನ್ನು ಹತ್ತಿರಕ್ಕೆ ಕರೆದರೆ ಈ ತಿಂಗಳ ಬೆಳಕಲ್ಲಿ ಮಧ್ಯಾಹ್ನದ ಹಗಲಲ್ಲಿ ಮಲಗಿದಂಹಿರುತ್ತೆ. ಹೋಗಿ ದೂರ ಮಲಕ್ಕೊ ಅಂತಾಳೆ ಸಾರ್" ಎಂದ.

ಅವನ ಮಾತು ಕೇಳಿ ನನಗೆ ಜೋರಾಗಿ ನಗು ಬಂತು. ನಂತರ ಪೆಚ್ಚೆನಿಸಿತು. ಜಗತಿನಾದ್ಯಂತ ಸಹಸ್ರ ಸಹಸ್ರ ವರ್ಷಗಳಿಂದ ಲಕ್ಷ ಲಕ್ಷ ಪ್ರೇಮಿಗಳಿಗೆ ಸ್ಫೂರ್ತಿ ಮತ್ತು ಚೈತನ್ಯ ನೀಡಿದ ಚಂದ್ರನೇ ತಲೆಯ ಮೇಲೆ ಸೂರಿಲ್ಲದೆ ಲಕ್ಷಾಂತರ ಪ್ರೇಮಿಗಳ ಸಾಂಗತ್ಯಕ್ಕೆ ಮುಳುವಾಗುತ್ತಿದ್ದಾನೆಯೆ!

ಆದರೆ ಚಂದ್ರ ಪಕ್ಷಪಾತಿಯಲ್ಲ. ಅವನು ಉಳ್ಳವರನ್ನೂ ಕಾಡುತ್ತಾನೆ. ಮಿತ್ರನೊಬ್ಬ ಸಿಟಿಯ ಹೊರಗೆ ಹೊಸ ಬಡಾವಣೇಯಲ್ಲಿ ಮನೆ ಕಟ್ಟಿಸಿದ.ಕಿಟಿಕಿಯೇ ಇಲ್ಲದ ಬಾಡಿಗೆ ಮನೆಗಳಲ್ಲಿ ಇದ್ದು ತಲೆ ರೋಸಿ ಹೋಗಿದ್ದ ಅವನು ಅದರ ಮೇಲೆ ಸೇಡು ತೀರಿಸಿಕೊಳ್ಳುವವನಂತೆ ಆಳೆತ್ತರದ ಕಿಟಿಕಿಗಳನ್ನು ಇರಿಸಿದ. ಎಲ್ಲ ಬಗೆಯ ಸಾಲಗಳ ಸೌಲಭ್ಯಗಳು ಮನೆ ಕಟ್ಟುವಷ್ಟರಲ್ಲಿ ಖತಂ ಆದ್ದರಿಂದ ಕಿಟಿಕಿಗಳಿಗೆ ಪರದೆಗಳು ಬಿದ್ದಿರಲಿಲ್ಲ. ಒಂದು ದಿನ ಕಚೇರಿಗೆ ಬಂದವನು ನನ್ನ ಮೇಲೆ ಹರಿಹಾಯ್ದ." ಏನಯ್ಯ ನಿಮ್ಮ ಕವಿಗಳು ಚಂದ್ರ ಚಂದ್ರ ಅಂತ ಸಾಯ್ತಾರೆ. ಹುಣ್ಣಿಮೆ ಅಂತೆ, ಬೆಳದಿಂಗಳಂತೆ, ಮಣ್ಣು ನಿನ್ನೆ ರಾತ್ರಿ ಏನಾಯ್ತು ಗೊತ್ತ? ಮಧ್ಯರಾತ್ರೀಲಿ ಎಚ್ಚರ ಆಯ್ತು: ನೋಡ್ತೀನಿ ಬಟಾಬಯಲಲ್ಲಿ, ನಡು ಹಗಲಲ್ಲಿ ಮಲಗಿದ ಹಾಗಿದೆ. ರಾತ್ರಿಯ ಮಂಚ ಹೇಗಿರುತ್ತೆ? ನಿಮ್ಮ ಚಂದ್ರ ಕದ್ದು ನೋಡೋದಲ್ಲ. ನೇರವಾಗಿಯೇ ಮನೆಯೊಳಗೆ ಇಳಿದು ದರ್ಬಾರು ನಡೆಸಿದ್ದ .."

ಈಗಲೂ ಅವನ ಸಿಟ್ಟು ನೆನಸಿಕೊಂಡರೆ ನಗು ಉಕ್ಕುತ್ತದೆ.

ಈ ಬೆಳದಿಂಗಳ ಕನವರಿಕೆಗಳಿಗೆ ತಿಳಿಗಾಳಿಯಲ್ಲಿ ತೇಲಿ ಬಂದ ಮಲ್ಲಿಗೆಯ ಕಂಪು ತಡೆ ಹಾಕಿತು. ನೆರಮನೆಯವರ ಗೇಟಿನ ಕಮಾನಿನ ಮೇಲೆ ಹಬ್ಬಿದ ಮಲ್ಲಿಗೆಯ ಕಂಪು ಅಲೆ ಅಲೆಯಾಗಿ ತೇಲುತ್ತಾ ಚಂದ್ರನತ್ತ ಪಯಣ ಹೊರಟಂತಿತ್ತು. ಆದರೂ ಕಣ್ಣು ಚಂದ್ರನಲ್ಲೇ ನೆಟ್ಟಿತು. ಕಾದ ನೆಲದಲ್ಲಿ ನೀರು ಇಳಿಯುವಂತೆ ಚಂದ್ರಿಕೆ ನನ್ನ ರಕ್ತದಲ್ಲಿ ಬೆರಯಲಾರಂಭಿಸಿತು.

ಆಷ್ಟರಲ್ಲಿ ಪುಟ್ಟಿ ನನ್ನನ್ನು ಜಗ್ಗಿ, ಹಾವು ಕಂಡವಳಂತೆ 'ಅಪ್ಪಾ ಅಪ್ಪಾ ಅಲ್ನೋಡು' ಎಂದು ಕಿರುಚಿಕೊಂಡಳು. ಅವಳು ತೋರಿದ ಕಡೆ ನೋಡಿದರೆ ಎಲ್ಲಿಂದಲೋ ಒಂದು ಕಾರ್ಮೋಡಗಳ ಹಿಂಡು ಇನ್ನೇನು ಚಂದ್ರನನ್ನು ಮುತ್ತಿಗೆ ಹಾಕಲು ಹೊರಟ್ಟಿದ್ದವು. ಮೋಡದ ಸುಳಿವೇ ಇರದಿದ್ದ ಈ ನೀಲಾಕಾಶದಲ್ಲಿ ಇದ್ದಕ್ಕಿದ್ದಂತೆ ಎಲ್ಲಿಂದ ಬಂದವು ಈ ಮೋಡಗಳು ಎಂದು ನೋಡಿದರೆ: ಉತ್ತರಹಳ್ಳಿಯ ಟೆಕ್ಸ್ ಟೈಲ್ ಕಾರ್ಖಾನೆಯಿಂದ ಹೊರಟ ದಟ್ಟವಾದ ಹೊಗೆಯ ಮೋಡಗಳು ಗಾಳಿಯ ದಿಕ್ಕನ್ನು ಅನುಸರಿಸಿ ಚಂದ್ರನನ್ನು ಸಮೀಪಿಸಿದ್ದವು.ಇದನ್ನು ಊಹಿಸಿಯೂ ಇರದಿದ್ದ ನಾನು ದಿಗ್ಭ್ರಾಂತನಾದೆ.

"ಅಪ್ಪಾ ನೋಡಪ್ಪಾ, ಹೊಗೆ ಚಂದ್ರನನ್ನು ಮುಚ್ಚೇ ಬಿಡ್ತು. ಆ ಫ್ಯಾಕ್ಟ್ರೀನೆ ಚಂದ್ರನಿಗಿಂಥ ಗ್ರೇಟ್ ಆಯ್ತಲ್ಲಪ್ಪ, ಅದರ ಹೊಗೆಗೆ ಚಂದ್ರ ಕಾಣ್ತಿಲ್ಲ. ಇನ್ನು ಇಡೀ ಭೂಮಿಗೆ ಏನು ಬೆಳಕು ಕೊಡ್ತಾನಪ್ಪ ..ಅಪ್ಪಾ ಈಗ ಕರೆಕ್ಟಾಗಿ ಹೇಳು. ಭೂಮಿಗೆ ಒಂದೇ ಆಕಾಶ, ಒಂದೇ ಚಂದ್ರ ಇದ್ದರೆ ಆಕಾಂಕ್ಷ ಅವರ ಹಳ್ಳಿಲೂ ಈಗ ಇದೇ ಥರ ಫ್ಯಾಕ್ಟರಿ ಹೊಗೆ ಚಂದ್ರನನ್ನು ಮುತ್ಕೊಂಡಿರುತ್ತಾ?"

ಏನು ಹೇಳಲಿ, ಅಲ್ಲಿ ಇನ್ನೂ ಹೊಗೆಯುಗುಳುವ ಕಾರ್ಖಾನೆ ಯಾವುದೂ ಬಂದಿಲ್ಲ ಎನ್ನುವುದು ಏನು ಗ್ಯಾರಂಟಿ?

*****

ಅಮೇರಿಕಾದಲ್ಲೊಂದು ದನದ ಪೇರಿ

–ವಸುಧೇಂದ್ರ

ನಾನೀಗ ಅಮೇರಿಕಾಕ್ಕೆ ಬಂದಿರುವುದು ಕಾನ್ ಸಾಸ್ ಎಂಬ ಪಟ್ಟಣಕ್ಕೆ. ಭಾರತದ ಮೂರು ಪಟ್ಟು ದೊಡ್ಡದಾದ ಈ ಅಮೇರಿಕಾದ ಮಧ್ಯಭಾಗದಲ್ಲಿ ಈ ನಗರವಿದೆ. ಈ ಪ್ರದೇಶಕ್ಕೆ ಹಾರ್ಟ್ ಲ್ಯಾಂಡ್ ಎಂದು ಕರೆಯುತ್ತಾರೆ. ವ್ಯವಸಾಯ ಇಲ್ಲಿಯ ಮುಖ್ಯ ಉದ್ಯೋಗ. ಕಣ್ಣು ಹಾಯಿಸುವಷ್ಟು ಉದ್ದಗಲಕ್ಕೆ ಹಸಿರು ಕಾಣಿಸುತ್ತದೆ.

ಅಮೇರಿಕಾದಲ್ಲಿಯೇ ನೆಲಗೊಂಡಿರುವ ನನ್ನ ಹತ್ತಾರು ಗೆಳೆಯರಿಗೆ ತುಂಬಾ ನಿರಾಶೆಯಾಗಿದೆ. "ಪಶ್ಚಿಮ ತೀರಕ್ಕೋ ಇಲ್ಲಾ ಪೂರ್ವ ತೀರಕ್ಕೋ ಸಾಫ್ಟ್ ವೇರ್ ಜನರು ಬಂದಿದ್ದು ಕಂಡಿದ್ದೇವೆ. ಇದೇನಿದು ನೀನು ಕಾನ್ ಸಾಸ್ ಗೆ ಬಂದಿರುವುದು? ಅಮೇರಿಕಾದಲ್ಲಿಯೇ ಅತ್ಯಂತ ಹಿಂದುಳಿದ ರಾಜ್ಯವದು" ಎಂದು ನನ್ನನ್ನು ಆರೋಪಿಸಿದರು.ನಾನೇನು ಮಾಡಬಲ್ಲೆ? ನನ್ನ ಕಂಪನಿಗೆ ಗಿರಾಕಿ ಸಿಕ್ಕಿರುವುದೇ ಅಲ್ಲಿ. ಬರೀ ನಾಲ್ಕಾರು ವಾರಗಳ ಸಲುವಾಗಿ ಬಂದಿರುವೆನಾದ್ದರಿಂದ ಅಮೇರಿಕಾದ ಯಾವ ಭಾಗವಾದರೇನು ಎಂಬುದು ನನ್ನ ತರ್ಕ. ಇಲ್ಲಿರುವದನ್ನೇ ನೋಡಿಕೊಂಡು ಹೋದರಾಯ್ತೆಂದು ನನ್ನ ಸಮಾಧಾನ.

ನನ್ನ ಗೆಳೆಯರು ಹೇಳಿದಂತೆ ಹುಡುಕಿದರೂ ಒಂದೂ ಭಾರತೀಯ ಮುಖಗಳು ಇಲ್ಲಿ ಸಿಕ್ಕಲ್ಲ. ನನ್ನ ಸಹೋದ್ಯೋಗಿಗಳೆಲ್ಲರೂ ಅಮೇರಿಕನ್ನರೇ ಆಗಿದ್ದಾರೆ. ಆದರೆ 'ಹಿಂದುಳಿದ ರಾಜ್ಯ' ಎಂಬ

ಕಾರಂಣದಿಂದಲೂ ಏನೋ, ಎಲ್ಲರೂ ಸ್ನೇಹಮಯಿಗಳಾಗಿದ್ದಾರೆ. ನನ್ನನ್ನು ಅತ್ಯಂತ ಪ್ರೀತಿಯಿಂದ ಮಾತನಾಡಿಸುತ್ತಿದ್ದಾರೆ. ನನ್ನ ವಾಸದ ಬಗ್ಗೆ ಕಳಕಳಿಯಿಂದ ವಿಚಾರಿಸಿಕೊಳ್ಳುತ್ತಾರೆ.

ವಾರಾಂತ್ಯದಲ್ಲಿ ನಾನು ಎಲ್ಲಿಗೆ ಹೋಗಬೇಕೆಂಬುದು ಸಾಕಷ್ಟು ಸಲಹೆಗಳನ್ನು ಕೊಡುತ್ತಾರೆ.ಮೊದಲ ವಾರಾಂತ್ಯಕ್ಕೆ ಯಾವುದೋ ಗಲ್ಲಿಗೆ ಹೋಗಬೇಕೆಂದೂ, ಅಲ್ಲಿ ಕಾಲೇಜಿನ ಹುಡುಗ ಹುಡುಗಿಯರು ಕುಡಿದು ಕುಣಿದು ಕುಪ್ಪಳಿಸುತ್ತಾರೆಂದು ಹೇಳಿದರು, ಮೂವತ್ತು ದಾಟಿದ ನನಗೆ ಯಾಕೋ ಆ ಪಡ್ಡೆ ಹುಡುಗರ ಗುಂಪಿನಲ್ಲಿ ಹೋಗುವುದಕ್ಕೆ ಸಂಕೋಚವಾಯ್ತು. ಯಾವುಯಾವುದೋ ಶಾಪಿಂಗ್ ಮಾಲ್ ಗಳನ್ನು ಸುತ್ತಿಬಿಟ್ಟೆ. ಸೋಮವಾರ ನಾನು ಆಫೀಸಿಗೆ ಹೋದ ತಕ್ಷಣ ಅವರು "ಹೋಗಿದ್ದೆಯ?" ಎಂದು ಕೇಳಿದಾಗ ಪೆಚ್ಚು ನಗೆ ನಕ್ಕು ಏನೇನೋ ಸಬೂಬುಗಳನ್ನು ಕೊಟ್ಟು ಜಾರಿಕೊಂಡೆ. ಆದರೆ ಈ ವಾರಾಂತ್ಯಕ್ಕೂ ಮತ್ತೊಂದು ಸಲಹೆಯನ್ನು ತೆಗೆದುಕೊಂಡು ಬಂದರು. ಕಾನ್ ಸಾಸ್ ಪಟ್ಟಣಾದಿಂದ ಕೊಂಚ ದೂರದಲ್ಲಿ ದನಗಳನ್ನು ರಸ್ತೆಗಳಲ್ಲಿ ಓಡಿಸಿಕೊಂಡು ಹೋಗುತ್ತಾರೆಂದೂ, ಅದನ್ನು ನಾನು ತಪ್ಪಿಸಿಕೊಳ್ಳಬಾರದೆಂದು ಹೇಳಿ, ಹೋಗುವುದಕ್ಕೆ ಎಲ್ಲಾ ಮಾರ್ಗದರ್ಶನಗಳನ್ನು ಕೊಟ್ಟರು. ಈ ಬಾರಿ ಮತ್ತೆ ಹೋಗದಿದ್ದರೆ ಮನಸ್ಸಿಗೆಲ್ಲಿ ಬೇಸರ ಮಾಡಿಕೊಳ್ಳುತ್ತಾರೋ ಎಂಬ ಅಂಜಿಕೆಯಿಂದ ಅಲ್ಲಿಗೆ ಹೋದೆ.

ಸುಮಾರು ಹದಿನೈದು ಸಾವಿರ ಜನ ಸೇರಿದ್ದರು! ಅಷ್ಟೊಂದು ಜನರು ಸೇರಿದ್ದು ನೋಡಿ ನನಗೂ ಉತ್ಸಾಹ ಮೂಡಿತು. ಗಂಡಸರು, ಹೆಂಗಸರು, ಮಕ್ಕಳು, ಮರಿಗಳು, ಮುದುಕರು, ಯುವಕರು –ಎಲ್ಲರೂ ಉತ್ಸಾಹದಿಂದ ಅಲ್ಲಿ ಸೇರಿದ್ದರು. ಬಗೆ ಬಗೆಯ ಉಡುಪುಗಳನ್ನು ಧರಿಸಿದ್ದರು. ತಲೆಗೆ ತರೇವಾರಿ ಟೋಪಿಗಳನ್ನು ಹಾಕಿಕೊಂಡು "ಕೌ ಬಾಯ್" ಎನ್ನುವಂತೆ ನಡೆದುಕೊಳ್ಳುತ್ತಿದ್ದರು. ರಸ್ತೆಯಲ್ಲಿ ಓಡಿಸಿಕೊಂಡು ಹೋಗಬೇಕಾದ ದನಗಳನ್ನು ಅಲ್ಲಿಯೇ ಒಂದು ಕೃತಕ ದೊಡ್ಡಿಯಲ್ಲಿ ನಿರ್ಮಿಸಿ ಅದರೊಳಗೆ ಬಂಧಿಸಿದ್ದರು. ಅವುಗಳ ಸುತ್ತಲೂ ಜನರು ತಮ್ಮ ಮಕ್ಕಳ ಜೊತೆ ನಿಂತಿದ್ದರು.ಕ್ಯಾಮರಗಳಿಂದ ಫೋಟೋಗಳನ್ನು ತೆಗೆದುಕೊಂಡರು. ಮಕ್ಕಳ ಕೈಯಲ್ಲಿ ಹಸುಗಳನ್ನು ಮೃದುವಾಗಿ ಮುಟ್ಟಿಸಿದರು. ಆ ಮೃದುತ್ವಕ್ಕೆ ಪುಳಕಗೊಂಡ ಮಕ್ಕಳು ಖುಷಿಯಿಂದ ಕೇಕೆ ಹಾಕುತ್ತಿದ್ದವು. ಹಿರಿಯರೂ ಅವುಗಳನ್ನು ಮುಟ್ಟೀ ಹಿಗ್ಗಿದರು. ಆ ದನಗಳು ತಮ್ಮ ಸಗಣಿ ಗಂಜಲಗಳಿಂದ ಆ ಜಾಗವನ್ನೆಲ್ಲಾ ಗಬ್ಬೆಬ್ಬಿಸಿದ್ದವು. ಕೆಲವರು ಆ ಗಲೀಜನ್ನು ಕ್ಯಾಮೆರಾದಲ್ಲಿ ಕ್ಲಿಕ್ಕಿಸಿದರು! ಅಷ್ಟೊಂದು ಜನಸಂದಣಿಯನ್ನು ಕಂಡರಿಯದ ದನಗಳು ಕಕ್ಕಾಬಿಕ್ಕಿಯಾಗಿದ್ದವು.

ದೂರದರ್ಶನ, ರೇಡಿಯೋ, ವಾರ್ತಾಪತ್ರಿಕೆ,ಇಂಟರ್ ನೆಟ್ ಪತ್ರಿಕೆಯ ಪ್ರತಿನಿಧಿಗಳೇಲ್ಲಾ ಬಂದಿದ್ದರು. ನಿರಂತರವಾಗಿ ಅಲ್ಲಿ ನಡೆಯುತ್ತಿರುವ ವರದಿಯನ್ನು ಬಿತ್ತರಿಸುತ್ತಿದ್ದರು. ಜನರೆಲ್ಲಾ ಪುಟ್ಟ ರೇಡಿಯೋಗಳನ್ನು ಕಿವಿಗೆ ಇಟ್ಟುಕೊಂಡು ಆ ವರದಿಯನ್ನು ಆಲಿಸುತ್ತಿದ್ದರು. ಮನೆಯಿಂದ ಪುಟ್ಟ ಪುಟ್ಟ ಕುರ್ಚಿಗಳನ್ನು ತಂದುಕೊಂಡು ಅವನ್ನು ಹಾಕಿಕೊಂಡು ರಸ್ತೆಯುದ್ದಕ್ಕೂ ಕುಳಿತಿದ್ದರು. ಆ ರಸ್ತೆಯಲ್ಲಿ ವಾಹನ ಸಂಚಾರವನ್ನು ಎರಡೂ ಬದಿ ಹಗ್ಗವನ್ನು ಹಾಕಿ,ಅದನ್ನು ದಾಟಿ ಜನರು ಬರಬಾರದೆಂದು ಹೇಳುತ್ತಿದ್ದರು.

ಒಂದಿಪ್ಪತ್ತು ಮಂದಿ ತಮ್ಮ ಕುದುರೆಯ ಮೇಲೆ ಬಂದಿದ್ದರು. ಅವರೇ ಆ ದನಗಳನ್ನು ಓಡಿಸಿಕೊಂಡು ಹೋಗುತ್ತಾರೆಂದು ಗೊತ್ತಾಯಿತು.ಹವ್ಯಾಸಿ ಕುದುರೆ ಸವಾರರು , ಹಳ್ಳಿಗರು, ಸೆಲೆಬ್ರಿಟಿಗಳು –ಎಲ್ಲರೂ ಕುದುರೆಯನ್ನೇರಿದ್ದರು. ಕುದುರೆ ನಡೆಸಲು ಗೊತ್ತಿಲ್ಲದವರಿಗಾಗಿ ಸಾರೋಟುಗಳು ಸಿದ್ದವಾಗಿದ್ದವು. ಕೆಲವರು ತಮ್ಮ ಹಳೆಯ ಕಾಲದ ಪುಟ್ಟಮ್ಮ ಕಾರಿನಲ್ಲಿ ದನಗಳನ್ನು ಹಿಂಬಾಲಿಸಲು ಸಿದ್ಧರಿದ್ದರು.

ಸರಿಯಾಗಿ ಹನ್ನೊಂದು ಸರಿಯಾಗಿ ಎಲ್ಲರೂ ತಯಾರಾಗಿ “ರೆಡಿ, ಸ್ಟೆಡಿ, ಗೋ” ಎಂದು ಕಿರುಚಿ ಕೃತಕ ದೊಡ್ಡಿಯ ಬಾಗಿಲನ್ನು ತೆರೆದರು. ಆದರೆ ದನಗಳಿಗೆ ಅದೇನು ಮಾಡಬೇಕೋ ತೋಚದಂತಾಗಿದ್ದರಿಂದ ಅಲ್ಲಿಂದ ಹೊರಬರದೆ ನೆಮ್ಮದಿಯಾಗಿ ಸಗಣಿ, ಗಂಜಲಗಳನ್ನು ಹಾಕುತ್ತಾ ನಿಂತ ಜಾಗದಲ್ಲಿಯೇ ನಿಂತುಬಿಟ್ಟವು. ಜನರಿಗೂ ಏನು ಮಾಡಬೇಕೆಂದು ತೋಚದಂತಾಯ್ತು. ಮತ್ತೊಮ್ಮೆ ‘ಗೋ’ ಎಂದು ಕಿರುಚಿದರು. ಊಹೂ! ಅವು ಜಪ್ಪಯ್ಯ ಎಂದರೂ ಕದಲಲಿಲ್ಲ. ಹಾಗೇ ಐದು ನಿಮಿಷ ಕಳೆಯಿತು. ಕಡೆಗೆ ಡ್ರಂ ಒಂದನ್ನು ತೆಗೆದುಕೊಂಡು ಬಂದಿದ್ದ ವಾದ್ಯಗಾರನೊಬ್ಬ ದೊಡ್ಡಿಯ ಹಿಂಭಾಗಕ್ಕೆ ಹೋಗಿ ದಬದಬನೆ ಬಾರಿಸಿಬಿಟ್ಟ. ದಿಗಿಲುಗೊಂಡ ದನಗಳು ಒಂದೊಂದಾಗಿ ದೊಡ್ಡಿಯನ್ನು ಬಿಟ್ಟು ಹೊರಬಂದವು. ದನಗಳೆಲ್ಲಾ ರಸ್ತೆಗೆ ಬರಲಾರಂಭಿಸಿದ್ದು ನೋಡಿ ಜನರೆಲ್ಲಾ ಕೇಕೆ ಹಾಕಿ, ಚಪ್ಪಾಳೆ ತಟ್ಟಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಮುಂದೆ ಹತ್ತು ಕುದುರೆ ಸವಾರರು, ಅವರ ಹಿಂದೆ ನೂರು ದನಗಳು, ಅವುಗಳ ಹಿಂದೆ ಮತ್ತೊಂದಿಷ್ಟು ಕುದುರೆ ಸವಾರರು, ಸಾರೋಟುಗಳು ಹೊರಟವು. ಮದುವೆಯ ಮೆರವಣಿಗೆಯ ರೀತಿಯಲ್ಲಿ ಪೇರಿ ಹೊರಟಿತು. ನನಗೋ ನಿರಾಸೆಯಾಯ್ತು.”ಅವುಗಳನ್ನು ಹಾಗೆ ಓಡಿಸಿಕೊಂಡು ಹೋಗಲ್ವಾ?” ಎಂದು ಅಲ್ಲಿದ್ದವನೊಬ್ಬನನ್ನು ಕೇಳಿದೆ. ನನ್ನ ದುರಾದೃಷ್ಟಕ್ಕೆ ಅವನು ಸಾಕುಪ್ರಾಣಿಗಳ ಅಭಿವೃದ್ಧಿಯ ಸಂಘಕ್ಕೆ ಸೇರಿದವನು.”ಅವುಗಳನ್ನು ಹಾಗೆ ಓಡಿಸುವುದು ಮೃಗೀಯ ಪ್ರವೃತ್ತಿ. ಪ್ರೀತಿಯಿಂದ ನಡೆಸಿಕೊಂಡು ಹೋಗುವುದಷ್ಟೇ ಈ ಕಾರ್ಯಕ್ರಮದ ಉದ್ದೇಶ” ಎಂದು ನನ್ನನ್ನು ದುರುಗುಟ್ಟಿಕೊಂಡು ನೋಡಿದ. ತೆಪ್ಪಗೆ ಅಲ್ಲಿಂದ ಜಾಗ ಖಾಲಿ ಮಾಡಿದೆ.

ಪೇರಿ ಹೊರಟಲ್ಲೆಲ್ಲಾ ಜನರು ಸಂತೋಷದಿಂದ ದನಗಳ ಕಡೆಗೆ ಕೈಯಾಡಿಸಿದರು. ಮಕ್ಕಳನ್ನು ಹೆಗಲ ಮೇಲೆ ಕೂಡಿಸಿಕೊಂಡು ದನಗಳನ್ನು ತೋರಿಸಿದರು. ಮೊಬೈಲ್ ಫೋನಿನ ಕ್ಯಾಮರಾದಲ್ಲಿ ದನಗಳನ್ನು ಸೆರೆ ಹಿಡಿದು ತಮ್ಮ ಪ್ರಿಯರಿಗೆ ರವಾನಿಸಿ, ವರದಿಯನ್ನು ಕೊಟ್ಟರು. ವೀಡಿಯೋ ಕ್ಯಾಮರಾಗಳಲ್ಲಿ ಪೇರಿಯನ್ನು ಸರೆ ಹಿಡಿದರು. ವಾದ್ಯಗಾರರು ಖುಷಿಯಿಂದ ಬ್ಯಾಂಡ್ ಬಾರಿಸಿದರು. ಛದ್ಮ ವೇಷಗಳನ್ನು ಧರಿಸಿದವರು ಕುಣಿಯುತ್ತಾ ಪೇರಿಯ ಜೊತೆ ಸಾಗಿದರು. ಪೇರಿಯ ಹಿಂದಕ್ಕೆ ಸೊಗಸಾಗಿ ಬಟ್ಟೆಗಳನ್ನು ಧರಿಸಿದ್ದ ಮಕ್ಕಳು ಪುಟ್ಟ ಪುಟ್ಟ ರಥಗಳಲ್ಲಿ ತಮ್ಮ ಗೊಂಬೆಗಳನ್ನು ಮಲಗಿಸಿಕೊಂಡು, ಅವನ್ನು ಎಳೆಯುತ್ತಾ ಸಾಗುತ್ತಿದ್ದರು. ಹಾಗೆ ಸಾಗುವಾಗ ಚಾಕೊಲೇಟ್,ಪೆಪ್ಪರಮೆಂಟ್ ಗಳನ್ನು ದಾರಿಯುದ್ದಕ್ಕೂ ತೂರುತ್ತಾ ಸಾಗಿದರು. ಪ್ರೇಕ್ಷಕರಲ್ಲಿದ್ದ ಮಕ್ಕಳು, ದೊಡ್ಡವರು ಎಲ್ಲರೂ ಚಾಕಲೇಟ್ ಗಳನ್ನು ಬಾಚಿಕೊಂಡರು. ತಮ್ಮ ಮಕ್ಕಳಿಗೆ ಆರಿಸಿಕೊಟ್ಟರು. ಪೇರಿ ಮುಂದೆ ಸಾಗಿದ ಕೆಲವೇ ಕ್ಷಣಗಳಲ್ಲಿ ಸುಸಜ್ಜಿತವಾದ ರಸ್ತೆ ಸ್ವಚ್ಛಗೊಳಿಸುವ ಯಂತ್ರವೊಂದು ಬಂದು ಸೆಗಣಿ, ಗಂಜಲಗಳನ್ನು ನಿಮಿಷಾರ್ಧದಲ್ಲಿ ತೊಳೆದು ಸ್ವಚ್ಛ ಮಾಡಿಬಿಟ್ಟಿತು.

ಪೇರಿ ರಸ್ತೆಯ ಆ ಕೊನೆಗೆ ಮುಗಿಯಿತು. ಜನರೆಲ್ಲಾ ಮತ್ತೊಮ್ಮೆ ಚಪ್ಪಾಳೆ ತಟ್ಟಿ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು. ಈಗ ದನಗಳನ್ನೆಲ್ಲಾ ದೊಡ್ಡ ದೊಡ್ಡ ಲಾರಿಗೆ ತುಂಬಿದರು. ಕುರುರೆಗಳನ್ನೂ ದೊಡ್ಡ ದೊಡ್ಡ ಲಾರಿಗೆ ತುಂಬಿದರು. ಲಾರಿಗಳು ಯಾವುದೋ ದಿಕ್ಕಿನಲ್ಲಿ ಹೊರಟು ಮಾಯವಾದವು. ಕುದುರೆ ಸವಾರಿ ಮಾಡಿದವರೆಲ್ಲಾ ತಮ್ಮ ಕಾರಿನ ಕೀಲಿಗಳನ್ನು ಹೊರತೆಗೆದು ಪಾರ್ಕಿಂಗ್ ಕಡೆ ಹೊರಟರು.

ಈ ಹೊತ್ತಿಗಾಗಲೇ ಊಟದ ಹೊತ್ತಾಗಿತ್ತು. ಅಲ್ಲಿಯೇ ಮೈದಾನದಲ್ಲಿ ಊಟ ಕೊಡುವ ಸ್ಟಾಲ್ ಗಳು ತೆರೆದುಕೊಂಡಿದ್ದವು. ಜನರೆಲ್ಲಾ ಅಲ್ಲಿಗೆ ನುಗ್ಗಿದರು. ಪ್ರತಿಯೊಂದು ಸಾಲಿನ ಮುಂದೂ ದೊಡ್ಡ ಕ್ಯೂ ಇತ್ತು. ಹದಿನೈದು ಸಾವಿರ ಜನರ ಊಟವೆಂದರೆ ತಮಾಷೆಯೆ? ನಾನೂ ಒಂದು ಕ್ಯೂನಲ್ಲಿ ನಿಂತುಕೊಂಡೆ. ಎಷ್ಟೇ ಚಿಕ್ಕ ಕ್ಯೂ ಹುಡುಕಿ ನಿಂತರೂ ನನ್ನ ಸರದಿ ಬಂದಾಗ ಅರ್ಧ ಗಂಟೆಯಾಯ್ತು.”ಏನಾದರೂ

ವೆಜಿಟೇರಿಯನ್ ಇದ್ದರೆ ಕೊಡಪ್ಪ" ಎಂದು ಯಥಾಪ್ರಕಾರ ಅಲವತ್ತುಕೊಂಡೆ. ಅಂಗಡಿಯವ ನಕ್ಕುಬಿಟ್ಟ,"ಈವತ್ತು ದನಗಳನ್ನು ಓಡಿಸಿಕೊಂಡು ಬಂದಿದ್ದೇವೆ, ದನದ ಮಾಂಸದ ಹೊರತಾಗಿ ಬೇರೇನೂ ಇಲ್ಲ" ಎಂದ. "ಮತ್ತೆ? ಕ್ರಿಸ್ ಮಸ್ ಹಬ್ಬದ ಕೇಕ್ಕಿದ್ದಂತೆ ಈವತ್ತು ದನದ ಮಾಂಸ" ಎಂದು ಹೇಳಿದ. 'ನಿನಗೇನು ಕೊಡಲಿ?" ಎಂದು ಕೇಳಿದ. "ಏನೂ ಬೇಡ" ಎಂದು ಹೇಳಿ ನಕ್ಕು ಮೈದಾನದಿಂದ ಹೊರಬಂದೆ. ರಸ್ತೆಯಲ್ಲಿ ನಿಂತು ಒಮ್ಮೆ ಜನರ ಗುಂಪಿನತ್ತ ಕಣ್ಣಾಡಿಸಿದೆ. ಎಲ್ಲರೂ ಸಂತೋಷದಿಂದ ತಿನ್ನುತ್ತಿದ್ದರು. ಏನಿಲ್ಲವೆಂದರೂ ನೂರಾರು ದನಗಳ ಆಹುತಿಯಾಗಿರಬಹುದಲ್ಲವೆ? ಎಂದೆನಿಸಿ ಮೈ ಜುಂ ಅಂತು. ಹಾಗೆಲ್ಲಾ ಮತ್ತೊಬ್ಬರ ಆಹಾರ ಕ್ರಮದ ಬಗ್ಗೆ ವಕ್ರವಾಗಿ ಆಲೋಚಿಸಬಾರದು ಎಂದು ಮನಸ್ಸಿನಲ್ಲಿ ತಿದ್ದಿಕೊಂಡು ಸಸ್ಯಾಹಾರವನ್ನು ಹುಡುಕಿಕೊಂಡು ಹೊರಟೆ.

*****

ವೈಚಾರಿಕ ಲೇಖನಗಳು :

ನಮಗೆ ಬೇಕಾಗಿರುವ ಇಂಗ್ಲೀಷ್

–ಕುವೆಂಪು

ಇಂದು ನಮ್ಮ ದೇಶದ ಮನಸ್ಸನ್ನು ಕುದಿಸುತ್ತಿರುವ ಸಮಸ್ಯೆಗಳಲ್ಲಿ ಭಾಷಾಸಮಸ್ಯೆಯೂ ಒಂದು ಪ್ರಮುಖ ಸ್ಥಾನ ಪಡೆದಿದೆ. ಪ್ರಾದೇಶಿಕ ದೃಷ್ಟಿಯಿಂದ, ಜ್ಞಾನಾರ್ಜನೆಯ ದೃಷ್ಟಿಯಿಂದ, ವಿದ್ಯಾಪ್ರಸಾರದ ದೃಷ್ಟಿಯಿಂದ, ಸಂಸ್ಕೃತಿಯ ದೃಷ್ಟಿಯಿಂದ, ನಾನಾ ದೃಷ್ಟಿಗಳಿಂದ ವಿವಿಧಾಭಿಪ್ರಾಯಗಳು ರಣರಂಗದಲ್ಲಿ ತುಮುಲ ಯುದ್ಧ ಹೂಡಿದಂತಿದೆ. ಆಯಾ ಪ್ರದೇಶದ ದೇಶಭಾಷೆಗೆ ಅಲ್ಲಲ್ಲಿ ಪ್ರಾಧಾನ್ಯವಿರಬೇಕೆನ್ನುವವರು ಕೆಲವರು; ಅಖಿಲ ಭಾರತೀಯವೆಂದು ಒಪ್ಪಿಕೊಂಡಿರುವ ಸಂಯುಕ್ತ ಭಾಷೆಗೆ ಪ್ರಥಮ ಸ್ಥಾನವಿರಬೇಕು ಎನ್ನುವವರು ಕೆಲವರು. ಸರ್ವ ವಿದ್ಯಾಶಾಸ್ತ್ರಗಳಿಗೂ ಆಗರವಾಗಿ, ವ್ಯಾವಹಾರಿಕ ದೃಷ್ಟಿಯಿಂದಲೂ ಅಂತರಾಷ್ಟ್ರೀಯವಾಗಿರುವ ಇಂಗ್ಲೀಷ್ ಭಾಷೆಗೆ ಪ್ರಥಮ ಸ್ಥಾನವಿರಬೇಕೆಂದು ಕೆಲವರು.

ಈ ವಿಚಾರಮಂಥನ ನಿನ್ನೆ ಮೊನ್ನೆಯದಲ್ಲ. ಸ್ವಯಂ ಗಾಂಧೀಜಿಯೆ ಇವುಗಳನ್ನು ಕೂಲಂಕುಷವಾಗಿ ಚರ್ಚಿಸಿ, ತಮ್ಮ ನಿರ್ಧಾರಗಳನ್ನು ಸಕಾರಣವಾಗಿ ವಾದಿಸಿ, ನಾಡಿನ ಮುಂದೆ ಇಟ್ಟು ಹೋಗಿದ್ದಾರೆ. ಅಲ್ಲದೆ ದೇಶ ವಿದೇಶಗಳ ತಜ್ಞರು ಮನಃಶಾಸ್ತ್ರೀಯವಾಗಿ ಪರಿಶೀಲಿಸಿ ತಮ್ಮ ಸಿದ್ಧಾಂತಗಳನ್ನು ಮುಂದಿಟ್ಟಿದ್ದಾರೆ. ನಾಡಿನ ಅಗ್ರಗಣ್ಯ ದೇಶಭಕ್ತರೂ ತಮ್ಮ ನಿಷ್ಪಕ್ಷಪಾತವಾದ ನಿರ್ಣಯಗಳನ್ನು ಆಗ್ಗಿಂದಾಗ್ಗೆ ಘೋಷಿಸುತ್ತಾ ಬಂದಿದ್ದಾರೆ. ಈ ವಿಚಾರವಾಗಿ ಇನ್ನು ಸಾಕು ಎಂಷ್ಟು ಚರ್ಚೆ ನಡೆದಿದೆ. ಈ ಸಮಸ್ಯೆ ವಾದ ಪ್ರತಿವಾದ ಎಲ್ಲೆಯನ್ನು ದಾಟಿ ಇತ್ಯರ್ಥದ ಸೀಮೆಯನ್ನು ಮುಟ್ಟಿದೆ ಎಂದು ಹೇಳಬಹುದು.

ಒಟ್ಟಿನಲ್ಲಿ ಆ ಇತ್ಯ್ಥವನ್ನು ಹೀಗೆ ವಿವರಿಸ ಬೇಕು, ಆಯಾ ಪ್ರಾಂತಗಳಲ್ಲಿ ಆಯಾ ಪ್ರಾದೇಶಿಕೆ ಭಾಷೆಗಳಿಗೆ ಪ್ರಥಮ ಸ್ಥಾನ ಸಿಗಬೇಕು. ಅಂತರ ಪ್ರಾಂತೀಯ ವ್ಯವಹಾರ ದೃಷ್ಟಿಯಿಂದ ಮತ್ತು ಕೇಂದ್ರದ ಆಡಳಿತ ದೃಷ್ಟಿಯಿಂದ ಅಖಿಲ ಭಾರತೀಯ ಸಂಯುಕ್ತ ಭಾಷೆಗೆ ಎರಡನೆ ಸ್ಥಾನ ಕೊಡಬೇಕು. ಅಂತರರಾಷ್ಟ್ರೀಯವಾದ ಭಾಷೆಗೆ ಅಥವಾ ಭಾಷೆಗಳಿಗೆ ಐಚ್ಛಿಕಸ್ಥಾನ ಕೊಡಬೇಕು. ಅಲ್ಲಿಯ ಶಿಕ್ಷಣವೆಲ್ಲ

ಎಲ್ಲ ಮಟ್ಟಗಳಾಲ್ಲಿಯೂ ದೇಶಭಾಷಾ ಮಾಧ್ಯಮದಲ್ಲಿಯೆ ಸಾಗಬೇಕು. ಈ ಸ್ಥೂಲ ವಿವರಣೆ ಬಹುಜನ ಸಮ್ಮತವಾಗಿರುವುದರಲ್ಲಿ ಸಂದೇಹವಿಲ್ಲ.

ಆದರೆ ಭಾಷೆಗಳ ಸ್ಥಾನವನ್ನು ಹೀಗೆ ನಿರ್ಣಯಿಸುವಾಗ ಅನೇಕರು ತಪ್ಪು ಅಭಿಪ್ರಾಯಗಳ ದೆಸೆಯಿಂದ ಆತಂಕಗೊಳ್ಳುತ್ತಾರೆ. ಅದರಲ್ಲಿಯೂ ಇಂಗ್ಲೀಷನ್ನು ಚೆನ್ನಾಗಿ ಅಭ್ಯಾಸಮಾಡಿ ಅದರ ಸಾಹಿತ್ಯವನ್ನು ತಣಿಯುಂಡು ಸವಿದು, ಅದರ ವೈಭವಕ್ಕೂ ,ವೈಶಾಲ್ಯಕ್ಕೂ ವಯಸ್ಸಾದವರಿಗೆ ಸಹಿಸಲಸಾಧ್ಯವಾದ ಸಂಕಟವಾಗುತ್ತದೆ. ಇಂಗ್ಲೀಷ್ ಭಾಷೆಯ ಮೂಲಕವೇ ತಮ್ಮ ಲೌಕಿಕ ಅಭ್ಯುದಯವನ್ನು ಸಾಧಿಸಿಕೊಂಡವರಿಗಂತೂ ಆ ಭಾಷೆಯಿಂದಲ್ಲದೆ ಬೇರೆ ಯಾವ ಭಾಷೆಯಿಂದಲೂ ಅಭ್ಯುದಯ ಸಾಧ್ಯವೇ ಇಲ್ಲ ಎಂಬಂತೆ ಭಾಸವಾಗುತ್ತದೆ. ನಮ್ಮ ಪ್ರಾಚೀನವಾದ ದೇಶಭಾಷೆಗಳ ಸಾಹಿತ್ಯದ ಅಥವಾ ಪ್ರಪ್ರಾಚೀನವಾದ ಸಂಸ್ಕೃತ ಸಾಹಿತ್ಯದ ವೈಭವ ವೈಶಲ್ಯಗಳ ಪರಿಚಯವಿಲ್ಲದೆ ಇರುವ ಇಂಗ್ಲಿಷ್ ವಿದ್ವಾಂಸರಿಗೂ ಇಂಗ್ಲಿಷ್ ಭಾಷೆಯನ್ನು ಈ ಗಣ್ಯ ಸ್ಥಾನದಿಂದ ಅಲುಗಿಸಿದರೆ ಭಾರತ ಖಂಡವೆಲ್ಲ ಕಗ್ಗತ್ತಲೆಯಲ್ಲಿ ಅದ್ದಿ ಹೋಗುತ್ತದೆ ಎಂದೇ ನಂಬಿಕೆ. ಅಂಥವರ ಭಯಾಶಂಕೆಗಳ ಸಾಧರ ನಿರಾಧಾರ ಸತ್ಯಾಸತ್ಯತೆಗಳೇನೇ ಇರಲಿ ಅದರ ವಿಶೇಷಣಕ್ಕೆ ಹೋಗದೆ ಇನ್ನು ಮುಂದೆ ಇಂಗ್ಲಿಷಿಗೆ ಭಾವದೃಷ್ಟಿಯಿಂದ, ಸಾಹಿತ್ಯ ದೃಷ್ಟಿಯಿಂದ ನಮ್ಮ ದೇಶದಲ್ಲಿ ಇರಬೇಕಾದ ಸ್ಥಾನವೇನು? ಅದು ಯಾವ ರೂಪದಲ್ಲಿ, ಯಾವ ಪ್ರಮಾಣದಲ್ಲಿ, ಎಷ್ಟರ ಮಟ್ಟಿಗೆ, ಎಷ್ಟು ಜನಕ್ಕೆ ಬೇಕಾಗುತ್ತದೆ, ಎಂಬೆಲ್ಲ ವಿಷಯಗಳನ್ನು ಕುರಿತು ಆಲೋಚಿಸುತ್ತೇವೆ.

ದೇಶಭಾಷೆಗಳಿಗೆ ಪ್ರಪ್ರಥಮಸ್ಥಾನ ಸಲ್ಲಬೇಕು. ದೇಶಭಾಷೆ ಶಿಕ್ಷಣ ಮಾಧ್ಯಮವಾಗಬೇಕು ಎಂದೊಡನೆ ಕೆಲವರು ಇಂಗ್ಲಿಷ್ ಭಾಷಾ ಸಾಹಿತ್ಯಗಳಿಗೆ ಸಂಪೂರ್ಣ ಅರ್ಧಚಂದ್ರಪ್ರಯೋಗವಾಗಿಬಿಡುತ್ತದೆ ಎಂದು ವ್ಯಾಖ್ಯಾನಮಾಡಿ ದೇಶವಾದಿಗಳನ್ನು ಸ್ವಭಾವ ಭ್ರಾಂತರೆಂದೂ ವಿದ್ಯಾ ಸಂಸ್ಕೃತಿ ವಿದ್ವೇಷಿಗಳೆಂದು ಸಂಕುಚಿತ ಮನೋಭಾವದವರೆಂದೂ ಟೀಕಿಸಿ ಖಂಡಿಸುತ್ತಾರೆ. ಇಂಗ್ಲಿಷ್ ಮೋಹಿಗಳ ಈ ಪ್ರಥಮ ಭ್ರಾಂತಿ ಮೊದಲು ನಿರಸನಗೊಳ್ಳಬೇಕು. ಇಂಗ್ಲಿಷ್ ಭಾಷೆಯ ಯೋಗ್ಯತೆ, ಅದರ ವ್ಯಾಪ್ತಿ, ಅದರಿಂದೊದಗುವ ಪ್ರಜ್ಞಾ ವೈಶಲ್ಯ, ಅದು ನಮ್ಮಲ್ಲಿ ಪ್ರಚೋದಿಸುವ ವಿಚಾರ ಬುದ್ಧಿ, ಅದರಿಂದ ಮುಂದೆ ಎಂದೆಂದಿಗೂ ನಮಗೆ ಲಭಿಸಲಿರುವ ಸಂಪರ್ಕ ಸಹಾಯ ಮೊದಲಾದವುಗಳನ್ನೆಲ್ಲ ಅರಿತವರಾದರೂ ಬ್ರಿಟಿಷರನ್ನು ಓಡಿಸಿದಂತೆ ಇಂಗ್ಲಿಷ್ ಭಾಷೆಯನ್ನು ಓಡಿಸಬೇಕೆಂದು ಹೇಳುವ ಅವಿವೇಕಕ್ಕೆ ಹೋಗಲಾರರು. ಹಾಗೆ ಹೇಳುವವರನ್ನು ಪ್ರಚ್ಛನ್ನ ದೇಶದ್ರೋಹಿಗಳೆಂದು ಕರೆಯಬೇಕಾಗುತ್ತದೆ. ಆದ್ದರಿಂದ ಭಿನ್ನಾಭಿಪ್ರಾಯವಿರುವುದಕ್ಕೆ ಅವಕಾಶವೇ ಇಲ್ಲ.

ಇಂಗ್ಲಿಷ್ ಉಳಿಯಬೇಕೆಂದು ನಿಶ್ಚಯಿಸಿದ ಮೇಲೆ ನಮ್ಮ ಮುಂದೆ ಏಳುವ ಪ್ರಶ್ನೆ: ಅದು ಯಾವ ರೂಪದಲ್ಲುಳಿಯಬೇಕು? ಯಾವಪ್ರಮಾಣದಲ್ಲಿ? ಯಾರಿಗೆ? ಏತಕ್ಕೆ? ಯಾವ ಯಾವ ಉದ್ದೇಶಗಳಿಗಾಗಿ? ಇಂಡಿಯಾಕ್ಕೆ ಇಂಗ್ಲಿಷ್ ಬಂದದ್ದು ಮುಖ್ಯವಾಗಿ ರಾಜಕೀಯ ಕಾರಣಗಳಿಂದಾಗಿ. ಇದನ್ನು ಅಧಿಕಾರಿ ಭಾಷೆಯೆಂದೊ ಘೋಷಿಸಿ ಕಡ್ಡಾಯವಾಗಿ ಅದನ್ನೆಲ್ಲರೂ ಕಲಿಯಬೇಕೆಂದು ವಿಧಿಸಿದುದೂ ಅದೇ ಕಾರಣಾಕ್ಕಾಗಿ. ಬಹು ಜನರು ನಮ್ಮ ದೇಶದಲ್ಲಿ ಇಂಗ್ಲಿಷನ್ನು ಕಲಿತುದ್ದಕ್ಕೆ ಕಾರಣವೂ ರಾಜಕೀಯವೇ ಅಥವಾ ಅದರಿಂದ ಉದ್ಭವಿಸುವ ಆರ್ಥಿಕಾದಿ ಪ್ರಯೋಜನಕ್ಕಾಗಿ. ಅದನ್ನೀಗಲೂ ಬಯಸುವ ಬಳಸುವ ಜನರಲ್ಲಿ ಬಹುಪಾಲು ಲೋಕೋಪಯೋಗ ದೃಷ್ಟಿಯನ್ನೇ ಹೊಂದಿರುತ್ತಾರೆ. ಆದರೆ ಈಗ ನಮ್ಮ ರಾಜಕೀಯ ಪರಿಸ್ಥಿತಿ ಬದಲಾಗಿದೆ. ಸ್ವತಂತ್ರ ಭಾರತ ಬೇರೊಂದು ಭಾಷೆಯನ್ನು ತನ್ನ ಅಧಿಕಾರಿ

ಭಾಷೆಯನ್ನಾಗಿ ಆರಿಸಿದೆ. ಈ ಹೊಸ ಪರಿಸ್ಥಿತಿಯಲ್ಲಿ ಇಂಗ್ಲಿಷಿಗೆ ಸಲ್ಲಬೇಕಾದ ಸ್ಥಾನ ಯಾವುದು? ಇಂಗ್ಲಿಷನ್ನು ಬಿಡುವಂತಿಲ್ಲ; ಆದರೆ ಅದಕ್ಕೆ ಹಿಂದಿದ್ದ' ಸ್ಥಾನವನ್ನು ಕೊಡುವಂತೆಯೂ ಇಲ್ಲ.

ಇನ್ನು ಮುಂದೆ ಇಂಗ್ಲಿಷ್ ಹಲವರು ಕಲಿಯುವ ಭಾಷೆಯಲ್ಲ, ಕೆಲವರು ಕಲಿಯಬೇಕಾದ ಭಾಷೆ. ಇನ್ನು ಮುಂದೆ ಅನೇಕರಿಗೆ ಬೇಕಾದ ಇಂಗ್ಲಿಷಿನ ಮಟ್ಟವೆಂದರೆ ಅದನ್ನೋದಿ ಅರ್ಥಮಾಡಿಕೊಳ್ಳುವುದಷ್ಟೇ ಹೊರತು ಅದರಲ್ಲಿ ಸಂಭಾಷಿಸುವುದಾಗಲಿ, ಭಾಷಣಮಾಡುವುದಾಗಲಿ, ಬರೆಯುವುದಾಗಲಿ ಅಲ್ಲ.

ಈ ದೃಷ್ಟಿಯಿಂದ ನಮ್ಮ ಅಧ್ಯಯನ ಕ್ರಮದಲ್ಲಿ ಗಾಂಧೀಜಿ ಕೊಟ್ಟಿರುವ ಐಚ್ಛಿಕ ಭಾಷಾಸ್ಥಾನವೆ ಯೋಗ್ಯವಾದದ್ದು. ಅದಕ್ಕೆ ಈಗ ಕೊಟ್ಟಿರುವ ಪ್ರಥಮ ಭಾಷಾಸ್ಥಾನ ದೇಶಕ್ಕೆ ಹಾನಿಕರ. ನಮ್ಮ ಬಾಲಕರ ಹಾಗೂ ತರುಣರಮನಶ್ಶಕ್ತಿಯನ್ನೆಲ್ಲ ಅಪವ್ಯಯಗೊಳಿಸಿ, ಅವರನ್ನು ಪರೀಕ್ಷೆಗಳಲ್ಲಿ ಅನ್ಯಾಯವಾಗಿ ಅನುತ್ತೀರ್ಣರನ್ನಾಗಿ ಮಾಡುವುದರಿಂದ ಅವರ ಹೃದಯದ ಆಶಾಭಾವನೆಯನ್ನೆ ಮೊಳೆಕೆಯಲ್ಲಿಯೆ ಚಿವುಟಿಹಾಕಿ ನಿರಾಶೆಯನ್ನೂ ಅಧೈರ್ಯವನ್ನೂ ತಂದೊಡ್ಡಿ, ಅವರ ಬದುಕನ್ನೆ ಬಯಲುಗೊಳಿಸುವ ಸಾಧನೆಯಾಗಿದೆ ಈ ಪರಭಾಷೆ! ನಮ್ಮ ಮಕ್ಕಳು ತಮಗೆ 'ಸಹಜ'ವಾದ ನೆಲದ ನುಡಿಯನ್ನು ಕಲಿತು ಇನ್ನೇನು ಭಾಷೆಯಿಂದ ಭಾವಕ್ಕೂ ಜ್ಞಾನಕ್ಕೂ ರೆಕ್ಕೆಹೆದರಿ ಹಾರಬೇಕು ಎನ್ನುವಷ್ಟರಲ್ಲಿ ಈ ಹೊರಭಾಷೆಯ ಕಲ್ಲುಚಪ್ಪಡಿಯನ್ನು ಅವರ ತಲೆಗಳ ಮೇಲೆ ಹೇರುತ್ತೇವೆ! ಸರಿ, ಕನ್ನಡದಲ್ಲಿ ಕಲಿತು ಬಿಟ್ಟಿದ್ದ ಬೆಕ್ಕು ಇಲಿ ಚಾಪೆ ಟೋಪಿಗಳನ್ನೆ ಮತ್ತೆ ಕ್ಯಾಟ್ ರ್‍ಯಾಟ್ ಮ್ಯಾಟ್ ಹ್ಯಾಟ್ ಎಂದು ತಮಗೆ ಅರ್ಥವಾಗದ ಸ್ಪೆಲ್ಲಿಂಗ್ ಸಹಿತವಾಗಿ ಬಾಯಿಪಾಠ ಮಾಡಬೇಕು! ಕನ್ನಡದಲ್ಲಿ ದೊಡ್ಡ ದೊಡ್ಡ ಹೊತ್ತಗೆಗಳನ್ನು ಉಲ್ಲಾಸದಿಂದ ಓದಿ, ಭಾವಕ್ಕೂ ಚಿಂತನಕ್ಕೂ ಕಣ್ಣರಳಿಸಿ ಎದೆಯರಳಿಸಿ, ಸಾಹಸಿಯಾಗಿ ಮುನ್ನುಗ್ಗಲೆಳೆಸುವ ಮಾಧ್ಯಮಿಕಶಾಲೆಯ ಬಾಲಕನ ಹಸುರು ಚೇತನ ಇಂಗ್ಲಿಷ್ ಭಾಷಾಬಂಡೆಗೆ ಮುಗ್ಗುರಿಸಿ ಹಸುರುಗಟ್ಟಿ ಉಸಿರುಕಟ್ಟಿ ಸೋತು ನಿಲ್ಲುವುದನ್ನು ಮಕ್ಕಳಿದ್ದು ಅವರ ಓದಿನ ಕಡೆಗೆ ಗಮನಕೊಟ್ಟವರೆಲ್ಲರೂ ನೋಡಿಯೇ ಇರುತ್ತಾರೆ. ಅಲ್ಲದೆ ಹಳ್ಳಿಹಳ್ಳಿಗೂ ಹೈಸ್ಕೂಲುಗಳೇಳುತ್ತಿರುವ ಈ ಸಮಯದಲ್ಲಿ, ಅಲ್ಲಿ ಇಂಗ್ಲಿಷ್ ಪಾಠ ಹೇಳುವ ಬೋಧಕರ ಮಟ್ಟವೂ ತುಂಬ ಇಳಿದು ಹೋಗಿರುವುದರಿಂದಲೂ, ಬಾಲಕರ ಸಂಖ್ಯೆ ಮತ್ತು ಸಂಸ್ಕಾರ ವೈವಿಧ್ಯಗಳಲ್ಲಿ ಹಿಂದಣಕ್ಕಿಂತ ವಿಪುಲ ವ್ಯತ್ಯಾಸಗಳಾಗಿರುವುದರಿಂದಲೂ, ಮೊದಲಿನಂತೆ ಬೆಂಚಿನ ಮೇಲೆ ನಿಲ್ಲಿಸಿ, ಕಿವಿ ಹಿಂಡಿ, ಚಡಿ ಏಟು ಕೊಟ್ಟು, ಘರಂಗೂಮಣೆ ಕೂರಿಸಿ, ಕಪಾಳಕ್ಕೆ ಬಿಗಿದು, ಬಾಯಿಪಾಠ ಮಾಡಿಸಿ, ವ್ಯಕ್ತಿ ವ್ಯಕ್ತಿಗೆ ಗಮನ ಕೊಡುವ ಇಂಡಿವಿಜುಯಲ್ ಅಟೆನ್ ಷನ್ನಿನ ಕಸರತ್ತಿಗಾಗಲಿ ಕವಾಯತ್ತಿಗಾಗಲಿ ಈಗ ಅವಕಾಶವೆ ಇಲ್ಲ!ಹೀಗೆ ಪರೀಕ್ಷೆ ಪರೀಕ್ಷೆಯಲ್ಲಿಯೂ ಒಂದೊಂದು ಮೆಟ್ಟಲಲ್ಲಿಯೂ 'ಕೃಪೆಯ ರಟ್ಟೆ ಹಿಡಿದು ಎತ್ತಿ ಮೇಲಿನ ಮೆಟ್ಟಿಲಿಗೆ ಹಾಕಿದ್ದ ಹುಡುಗನ ಇಂಗ್ಲಿಷ್ ಜ್ಞಾನದ ದೋಣಿ ಹೇಗೋ? ಕಾಲೇಜಿನ ಜಲಪಾತ ಪ್ರಪಾತದವರೆಗೂ ಸಾಗುತ್ತದೆ. ಅದುವರೆಗೂ ಏನೋ ಎಂತೋ ಅಂತು ಡೊಂಕು ಹರಿವ ಹೊಳೆ ಮಾತ್ರವಾಗಿದ್ದು ಇಂಗ್ಲಿಷು ಬಾಲಕರ ಕಣ್ಣಿಗೆ ಇದ್ದಕ್ಕಿದ್ದಂತೆ ಪ್ರಪಾತಕ್ಕೆ ಧುಮುಕುವ ಜಲಪಾತವಾಗಿ ಪರಿಣಮಿಸುತ್ತದೆ. ಇನ್ನೇನು ಮಾಡುತ್ತಾನೆ? ಪಾಪ, ಅದುವರೆಗೂ ತಾನು ಮಾಡುತ್ತಿದ್ದ ಅಲ್ಪ ಸ್ವಲ್ಪ ಪ್ರಯತ್ನದ ಹುಟ್ಟನ್ನೂ ಹೊಳೆಗೇ ಎಸೆದು, ಸುಮ್ಮನಾಗಿ ದೋಣಿ ಮುರಿದುಬಂದು ತನಗೊದಗುವ 'ಗತಿಯ' ರುದ್ರರಮಣೀಯತೆಯ ರಸಾಸ್ವಾದನೆಯಲ್ಲಿ ತೊಡಗಬೇಕಾಗುತ್ತದೆ: ಅವನಿಗಿರುವ ಧೈರ್ಯ ಒಂದೇ ಒಂದು: ಈ ಅನಾಹುತದಲ್ಲಿ ತನ್ನೊಡನೆ ಸಮಪಾಲುಗೊಳ್ಳಲು ಒಡನಾಡಿಗಳು ಅಸಂಖ್ಯೇಯವಾಗಿದ್ದಾರೆ!

ದಡದಲ್ಲಿ ನಿಂತು ನೋಡುವ ಹಿರಿಯರ ಇತ್ಯರ್ಥವೇನು? ಹುಡುಗರೆಲ್ಲ ಈಚೀಚೆಗೆ ದಡ್ಡರಾಗುತ್ತಿದ್ದಾರೆ! ಸ್ಟಾಂಡರ್ಡ್ ತುಂಬ ಇಳಿದು ಹೋಗಿದೆ! ಹಾಗಾದರೆ ಏನು ಮಾಡಬೇಕು? ಇನ್ನಷ್ಟು ಪಠ್ಯಪುಸ್ತಕ ಹೆಚ್ಚಿಸಿ

ಗ್ರಾಮರ್ ಲೇಹ್ಯ ಇನ್ನೂ ಸ್ವಲ್ಪ ಹೆಚ್ಚಾಗಿ ತಿನ್ನಿಸಿ! ಪರಿಣಾಮ: ಪರೀಕ್ಷೆಯ ಫಲಿತಾಂಶ ಪ್ರಕಟನೆ ಸಮಯದಲ್ಲಿ ಮತ್ತೆ 'ಕೃಪೆ'ಯ ಕೈಹಿಡಿದು ಎತ್ತಬೇಕು, ಮುಂದಿನ ಮೆಟ್ಟಲಿಗೆ.

ಈ ನಾಟಕ–ದುರಂತ ನಾಟಕ – ಇನ್ನು ಸಾಕು. ಇನ್ನು ಮುಂದೆ ಇಂಗ್ಲಿಷಿನ ಈ ನೀರು ಸಮಾರಾಧನೆ, ನಿಲ್ಲಬೇಕು. ಅದಕ್ಕೆ ಬದಲಾಗಿ ಆಯ್ದ ಕೆಲವರಿಗೆ ಮಾತ್ರ ಗಟ್ಟಿ ಇಂಗ್ಲಿಷಿನ ಪುಷ್ಟಿಯೊದಗುವಂತೆ ನಮ್ಮ ವಿಧ್ಯಾಭ್ಯಾಸ ಕ್ರಮದಲ್ಲಿ ಭಾಷೆಗಳ ಸ್ಥಾನ ನಿರ್ಣಯವಾಗಬೇಕು: ಕೆಲವರಿಗೆ ಮಾತ್ರ ಚೆನ್ನಾಗಿಯೇ ಬೇಕು.

ಇಂಗ್ಲಿಷ್ ಕಲಿಯುವವರನ್ನು ಎರಡು ವಿಭಾಗವಾಗಿ ವಿಂಗಡಿಸಬಹುದು ಭಾಷಾ ದೃಷ್ಟಿಯಿಂದ ಕಲಿಯುವವರು; ಸಾಹಿತ್ಯ ದೃಷ್ಟಿಯಿಂದ ಕಲಿಯುವವರು, ಭಾಷಾದೃಷ್ಟಿಯಿಂದ ಕಲಿಯುವವರಿಗೆ ಇಂಗ್ಲಿಷಿನ ಪರಿಚಯ ಚೆನ್ನಾಗಿ ಆಗಬೇಕು. ಅವರು ಆ ಭಾಷೆಯಲ್ಲಿ ಚೆನ್ನಾಗಿ ಓದಲೂ ಬರೆಯಲೂ ಮಾತನಾಡಲೂ ಭಾಷಣಮಾಡಲೂ ಬಲ್ಲವರಾಗಬೇಕು. ಅವರು ನಮಗೂ ಅಂತರಾಷ್ಟ್ರೀಯ ಪ್ರಪಂಚಕ್ಕೂ ಸಾಹಿತ್ಯದಲ್ಲಿ, ಶಾಸ್ತ್ರದಲ್ಲಿ, ರಾಜಕೀಯದಲ್ಲಿ ಸಂಪರ್ಕ ಕಲ್ಪಿಸುವ ಸಾಧನಗಳಾಗಬೇಕು. ಇಂಥವರಿಗೆ ವಿಧ್ಯಾಭ್ಯಾಸದ ಮೇಲಿನ ಮಟ್ಟದಲ್ಲಿ ವಿಶೇಷವಾಗಿ ಸಾಹಿತ್ಯ ವಿಷಯಗಳಲ್ಲಿ, ಇಂಗ್ಲಿಷ್ ಶಿಕ್ಷಣ ಮಾಧ್ಯಮವಾಗಿದ್ದರೆ ಲೇಸು. ಏಕೆಂದರೆ ಅವರ ಉದ್ದೇಶವೇ ಆ ಭಾಷೆಯಲ್ಲಿ ಉದ್ದಾಮ ಪಾಂಡಿತ್ಯ ಸಂಪಾದನೆ. ಆದರೆ ಇಂಗ್ಲಿಷನ್ನು ಆ ಭಾಷೆಯಲ್ಲಿರುವ ವಿಪುಲವಾದ ವಿವಿಧವಾದ ಶ್ರೀಮಂತವಾದ ಸಾಹಿತ್ಯಕ್ಕೆ ಅಭ್ಯಾಸ ಮಾಡುವವರ ವಿಷಯವೆ ಬೇರೆ, ಅವರಿಗೆ ಬೇಕಾದುದು ಭಾಷೆಯಲ್ಲ ; ಕಾವ್ಯ, ಸಾಹಿತ್ಯ ಅಲ್ಲಿಯ ಕವಿಗಳು, ಅಲ್ಲಿಯ ನಾಟಕಕಾರರು,ಅಲ್ಲಿಯ ತತ್ವಜ್ಞಾನಿಗಳು, ಅಲ್ಲಿಯ ರಾಜಕಾರಣಿಗಳು, ಸಹೃದಯರಿಗೆ ಜಿಜ್ಞಾಸುಗಳಿಗೆ ನೀಡುವ ರಸಾಂಶ, ಚಿಂತನಾಂಶ, ಸತ್ವ, ಇಂಗ್ಲಿಷನ್ನು ಅದರ ಸಾಹಿತ್ಯಕ್ಕಾಗಿ ಅಭ್ಯಾಸ ಮಾಡುವವರು ಆ ಭಾಷೆಯಲ್ಲಿ ಮಾತನಾಡುವುದನ್ನು ಅಭ್ಯಾಸಮಾಡಬೇಕಾಗಿಲ್ಲ: ಅದರಲ್ಲಿ ಬರೆಯುವುದಕ್ಕೂ ಶ್ರಮಿಸಬೇಕಾಗಿಲ್ಲ: ಅದನ್ನು ಓದಿ ಅರಿಯಬೇಕಾದುದೆಷ್ಟೋ ಅಷ್ಟೆ. ಆದ್ದರಿಂದ ಅವರು ಇಂಗ್ಲಿಷ್ ಸಾಹಿತ್ಯವನ್ನು ದೇಶಭಾಷಾಮಾಧ್ಯಮದ ಮೂಲಕವೆ ಅಭ್ಯಾಸಮಾಡಬೇಕಾಗಿಲ್ಲ; ಅದರಲ್ಲಿ ಬರೆಯುವುದಕ್ಕೂ ಶ್ರಮಿಸಬೇಕಾಗಿಲ್ಲ; ಅದನ್ನು ಓದಿ ಅರಿಯಬೇಕಾದೆಷ್ಟೋ ಅಷ್ಟೆ, ಅದ್ದರಿಂದ ಅವರು ಇಂಗ್ಲಿಷ್ ಸಾಹಿತ್ಯವನ್ನು ದೇಶಭಾಷಾಮಾಧ್ಯಮದ ಮೂಲಕವೆ ಅಭ್ಯಾಸಮಾಡಿದರೆ ಅದರೆ ರಸಸತ್ವ ಸುಲಭವಾಗಿ ಶೀಘ್ರವಾಗಿ ಜೀರ್ಣವಾಗಿ ರಕ್ತಗತವಾಗುತ್ತದೆ. ಎಲ್ಲ ದೇಶಗಳಲ್ಲಿಯೂ ಪರಭಾಷೆಯ ಸಾಹಿತ್ಯವನ್ನು ಸ್ವಭಾಷೆಯ ಮೂಲಕ ಕಲಿಯುವುದೇ ರೂಡಿ. ಸಹಜ ರೀತಿ, ಏಕೆಂದರೆ ಅವರ ಉದ್ದೇಶ ಆ ಪರಭಾಷೆಯಲ್ಲಿ ಬರೆಯುವ ಮಾತನಾಡುವ ಪಾಂಡಿತ್ಯ ಸಂಪಾದನೆಯಲ್ಲ, ಅವರ ಸಾಹಿತ್ಯದ ಸತ್ವದ ಆಸ್ವಾದನೆ ಮಾತ್ರ. ನಮ್ಮ ದೇಶದಲ್ಲಿ ಪರಕೀಯರ ಸೌಕರ್ಯಾರ್ಥವಾಗಿ ಆ ಭಾಷೆಯಲ್ಲಿ ಬರೆದು ನಮ್ಮ ದೇಶದಲ್ಲಿ ಪರಕೀಯರ ಸೌಕರ್ಯಾರ್ಥವಾಗಿ ಆ ಭಾಷೆಯಲ್ಲಿ ಬರೆದು ಮಾತನಾಡುವುದಕ್ಕಾಗಿಯೆ ನಮ್ಮ ವಿದ್ಯಾಭ್ಯಾಸ ಏರ್ಪಟ್ಟಿದುದರಿಂದ ನಾವು ಪರಭಾಷಾ ಸಾಹಿತ್ಯವನ್ನು ನಮ್ಮ ಭಾಷೆಯ ಮಾಧ್ಯಮದಿಂದಲೆ ಕಲಿಸಿದ್ದರೆ ನಮ್ಮವರಿಗೆ ಈಗ ಒದಗಿರುವ ರಸಪುಷ್ಟಿಗಿಂತಲೂ ಸಾವಿರಪಾಲು ಹೆಚ್ಚಿನ ರಸಪುಷ್ಟಿ ಒದಗುತ್ತಿತ್ತು. ಪರಭಾಷಾ ಮಾಧ್ಯಮದಿಂದಲೆ ಕಲಿಯುವ ವಿಕಾರ ಪರಿಸ್ಥಿತಿ ಎಷ್ಟರಮಟ್ಟಿಗೆ ಮುಂದುವರಿದಿದೆಂಯೆಂದರೆ–ಷೇಕ್ಸ್‌ಪಿಯರ್ ಮಿಲ್ಟನ್, ವರ್ಡ್ಸ್‌ವರ್ತ್, ಮೊದಲಾದ ಕವಿಗಳ ಕೃತಿಗಳನ್ನು ಕನ್ನಡದ ಮೂಲಕ ಪಾಠಹೇಳಬಹುದೆಂಬ ಸಂಗತಿ ಇಂದಿಗೂ ಅನೇಕರಿಗೆ ದಿಗ್‌ಭ್ರಾಂತಿಕರ ವಿಸ್ಮಯವಾಗಿದೆ, ಆದರೆ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಜನೆಮಾಡಿ, ಅಲ್ಲಿಯೆ ಅಧ್ಯಾಪಕರಾಗಿ ಸೇರಿ, ತಾವೇ ವಿದ್ಯಾರ್ಥಿಗಳಾಗಿಯೂ, ಅಧ್ಯಾಪಕರಾಗಿಯೂ, ವಿದ್ಯಾರ್ಥಿಗಳ ಇಂಗ್ಲಿಷ್ ಭಾಷಾ ಸಾಮರ್ಥ್ಯವನ್ನು, ಸಾಹಿತ್ಯ ರಸಸ್ವಾದನಾ ಶಕ್ತಿಯನ್ನೂ ಗಮನಿಸುತ್ತ ಬಂದವರಿಗೆ ನಿಜಸ್ಥಿತಿ ಚೆನ್ನಾಗಿ ಗೊತ್ತು. ಇಂಗ್ಲಿಷ್

ಭಾಷೆಯಲ್ಲಿ ತನ್ನ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವ ಶಕ್ತಿ ಏನೇನೂ ಇಲ್ಲದ ವಿದ್ಯಾರ್ಥಿಗೆ ಪರೀಕ್ಷೆಯಲ್ಲಿ ಮ್ಯಾಕ್ಬೆತ್ ಪಾತ್ರದ ವಿಚಾರವಾಗಿ ಪ್ರಬಂಧ ಬರೆಯುವ ಸಂಕಟ ಒದಗಿದರೆ ಏನು ಮಾಡುತ್ತಾನೆ? ಪೂರ್ವ ಸಿದ್ದತೆ ಮಾಡಿದ ಪ್ರಬಂಧವನ್ನು ಗಟ್ಟಿಮಾಡಿದ್ದರೆ ಅದನ್ನು ಉತ್ತರ ಪತ್ರಿಕೆಗೆ ಇಳಿಸಿ ತೇರ್ಗಡೆಹೊಂದುತ್ತಾನೆ. ಅಂಥಹವನಿಗೆ ನಿಜವಾಗಿಯೂ ಷೇಕ್ಸ್ ಪಿಯರ್ ನಾಟಕ ರಸಾಸ್ವಾಧನೆಯಿಂದ ಅರಿವಾಗುತ್ತದೆ ಎಂದು ಹೇಳಲಾಗುವುದಿಲ್ಲ. ಅದೇ ಇನ್ನೊಬ್ಬ ವಿದ್ಯಾರ್ಥಿಗೆ ಅದರ ಅರಿವು ಸ್ವಲ್ಪ ಮಟ್ಟಿಗೆ ಆಗಿದ್ದರೂ ಅದನ್ನು ಬರೆಯುವ ಭಾಷಾ ಸಾಮರ್ಥ್ಯವಿಲ್ಲದೆ ತಪ್ಪು ತಪ್ಪಾಗಿ ಏನನ್ನೊ ಬರೆದು ಫೇಯಿಲ್ ಆಗುತ್ತಾನೆ. ತನ್ನ ಭಾಷೆಯಲ್ಲಿಯೇ ಉತ್ತರ ಬರೆಯುವ ಸ್ವಾತಂತ್ರ್ಯ ಅವನಿಗಿದ್ದಿದ್ದರೆ ಮ್ಯಾಕ್ ಬೆತ್ ಪಾತ್ರವನ್ನು ಕುರಿತು ಚೆನ್ನಾಗಿಯೇ ಬರೆಯುತ್ತಿದ್ದನೆಂಬುದರೆಲ್ಲಿ ಸಂದೇಹವಿಲ್ಲ. ಈಚೀಚೆಗೆ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಭಾಷೇತರ ವಿಷಯಗಳಲ್ಲಿ ಮೊದಲಿಗಿಂತಲೂ ಸಮಧಿಕ ಪ್ರಮಾಣದಲ್ಲಿ ಅನುತ್ತೀರ್ಣರಾಗುತ್ತಿರುವುದಕ್ಕೆ ಮುಖ್ಯ ಕಾರಣ ಇಂಗ್ಲಿಷ್ ಭಾಷಾ ಮಾಧ್ಯಮವೇ ಹೊರತು ವಿಷಯಗಹನೆತೆಯೂ ಅಲ್ಲ, ವಿದ್ಯಾರ್ಥಿ ಇಂಗ್ಲಿಷನ್ನು ಅದರ ಸಾಹಿತ್ಯಕ್ಕಾಗಿ ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮದಲ್ಲಿಯೆ ಹೇಳಬೇಕು, ಪರೀಕ್ಷೆ ನಡೆಸಬೇಕು. ಇಂಗ್ಲಿಷನ್ನು ಅದರ ಪ್ರಥಮ ಭಾಷಾಸ್ಥಾನದಿಂದ ಸದ್ಯಕ್ಕೆ ದ್ವಿತಿಯ ಸ್ಥಾನಕ್ಕೆ ಇಳಿಸಿ, ಕನ್ನಡವನ್ನು ಪ್ರಥಮ ಭಾಷಾಸ್ಥಾನಕ್ಕೆ ಏರಿಸಿ, ಪ್ರಥಮ ಭಾಷೆಯ ಮೂರು ಪ್ರಶ್ನೆ ಪತ್ರಿಕೆಗಳಲ್ಲಿ ಒಂದನ್ನು ಇಂಗ್ಲಿಷ್ ಸಾಹಿತ್ಯ ಎಂಬ ಹೆಸರಿನಲ್ಲಿ ಇಂಗ್ಲಿಷ್ ಸಾಹಿತ್ಯಕ್ಕೆ ಮೀಸಲಾಗಿರಿಸಿ, ಕನ್ನಡದಲ್ಲಿ ಪಾಠ ಹೇಳಿ, ಕನ್ನಡದಲ್ಲಿಯೇ ಉತ್ತರ ಬರೆಯುವಂತೆ ಮಾಡಿದರೆ, ನಮ್ಮ ಮಕ್ಕಳಿಗೆ ಇಂಗ್ಲಿಷ್ ಭಾಷೆಯ ಹೊರೆಯನ್ನು ತಪ್ಪಿಸುವುದರ ಜೊತೆಗೆ ಇಂಗ್ಲಿಷ್ ಸಾಹಿತ್ಯದ ರಸಾಮೃತವನ್ನು ಪಾನಮಾಡಿಸಿದಂತಾಗಿ, ಅವರ ಪುಷ್ಟಿ ಈಗಿರುವುದಕ್ಕಿಂತಲೂ ನೂರ್ಮಡಿ ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಇಂಗ್ಲಿಷ್ ಹೋದರೆ ಎಲ್ಲ ಕೊಚ್ಚಿ ಹೋಗುತ್ತದೆ ಎಂದು ಕೂಗಿಕೊಳ್ಳುವವರಿಗೆ ಇನ್ನೂ ಒಂದು ಸಮಾಧಾನ ಹೇಳಬೇಕಾಗುತ್ತದೆ. ಮೇಲೆ ವಿವರಿಸಿದಂತೆ, ಇಂಗ್ಲಿಷ್ ಸಂಪೂರ್ಣವಾಗಿ ಹೋಗುವುದಿಲ್ಲ, ಹಲವರಲ್ಲಿ ಸಾಹಿತ್ಯವಾಗಿ ಉಳಿದಿರುತ್ತದೆ. ಕೆಲವರಲ್ಲಿ ಭಾಷೆಯಾಗಿಯೂ ಉಳಿದಿರುತ್ತದೆ ಅಲ್ಲದೆ ಇಂಗ್ಲಿಷ್ ಕಲಿಯದ ಇತರ ಬಹು ಜನರಿಗೆ ಇಂಗ್ಲಿಷ್ ಮೋಹಿಗಳು ಊಹಿಸುವಂತೆ ಯಾವ ತೆರನಾದ ಭಾವನಷ್ಟವಾಗಲಿ ಬುದ್ದಿದಾರಿದ್ರ್ಯವಾಗಲಿ ಸಂಭವಿಸುವುದಿಲ್ಲ. ಏಕೆಂದರೆ ಕನ್ನಡದ ಈಗಿನ ಸ್ಥಿತಿ ಇಪ್ಪತ್ತೈದುಮೂವತ್ತು ಅರ್ಷಗಳ ಹಿಂದೆ ಇದ್ದ ಸ್ಥಿತಿಯಲ್ಲ. ಈಗ ಇಂಗ್ಲಿಷ್ ಒಂದಕ್ಷರ ಬರದಿದ್ದವನೂ ಕೂಡ ಆಗ ಇಂಗ್ಲಿಷಿನ ಮೂಲಕವೇ ಪಡೆಯಬೇಕಾಗಿದ್ದ ಭಾವದ ಮತ್ತು ಬುದ್ಧಿಯ ಪುಷ್ಟಿಗಳನ್ನು ಕನ್ನಡದ ಮೂಲಕವೇ ಯಥೇಚ್ಚವಾಗಿ ಪಡೆಯುವಷ್ಟರಮಟ್ಟಿಗೆ ಕನ್ನಡ ವಾಙ್ಮಯ ಸಾಹಿತ್ಯದ ಮತ್ತು ಶಾಸ್ತ್ರದ ವಿವಿಧ ಶಾಖೆಗಳಲ್ಲಿ ಮುಂಬರಿದಿದೆ; ದಿನ ದಿನಕ್ಕೂ ಬೆಳೆದು ಪ್ರಗತಿ ಹೊಂದುತ್ತಿದೆ. ಅಷ್ಟೇ ಅಲ್ಲ, ಇಂಗ್ಲಿಷ್ ಸಾಹಿತ್ಯವನ್ನು ಆಮೂಲಾಗ್ರವಾಗಿ ಈಜಿದರೂ ಬೆಕ್ಕಸಬಡುವಂತಹ ಸಾಹಿತ್ಯಶೃಂಗಗಳೂ ಕನ್ನಡದಲ್ಲಿ ಕೆಲವಾದರೂ ಮೂಡಿವೆ. ಹಿಂದಿನ ಮತ್ತು ಇಂದಿನ ಕನ್ನಡ ಸಾಹಿತ್ಯದ ರಸ ಸಾಗರದಲ್ಲಿ ಮುಳುಗಿದವನು ತಾನು ಇಲ್ಲಿ ಅನುಭವಿಸದಿದ್ದ ಅಥವಾ ಅನುಭವಿಸಲಾರದಿದ್ದ ಯಾವ ನೂತನತೆಯನ್ನಾಗಲಿ ರಸೋನ್ಮೇಷವನ್ನಾಗಲಿ ಅಲ್ಲಿ ಕಂಡು ಕರುಬುವ ಪರಿಸ್ಥಿತಿಯಿಂದ ನಾವು ಬಹು ದೂರ ಮುಂದುವರೆದಿದ್ದೇವೆ. ತಾವು ವಿದ್ಯಾರ್ಥಿಗಳಾಗಿದ್ದಾಗ ಓದಿದ್ದ ಅಥವಾ ಶಾಲಾಕಾಲೇಜುಗಳಲ್ಲಿ ಕಡಿಮೆ ಸಂಬಳದ ಬಡ ಉಪಾಧ್ಯಾಯರಿಂದ ಪಾಠ ಕೇಳಿದ್ದ ಅಂತಸ್ತಿನಲ್ಲಿಯ ಕನ್ನಡ ಈಗಲೂ ಇದೆ ಎಂದು ಭ್ರಮಿಸಿರುವ ರಾಜ್ಯಲಲಾಟ ಲೇಖನ ನೌಕೆಯ ಕರ್ಣಾಧಾರರಾಗಿರುವ ವಯಸ್ಕ ಮಹಾನೀಯರು ಮಾತ್ರ ಕನ್ನಡದ ಶಕ್ತಿಯ ವಿಚಾರವಾಗಿ ಶಂಕಿಸಬಹುದೆ ವಿನಾ ಉಳಿದ ತಿಳಿದವರಾರೂ ಶಂಕಿಸರು.

******

ಸಮಾಜದ ಕಣ್ಣಿನಲ್ಲಿ ಲೈಂಗಿಕ ಸಂಬಂಧಗಳು

- ಶಿವರಾಮ ಕಾರಂತ

ನಮ್ಮ ಸುತ್ತಣ ಸಮಾಜದ ಜನಗಳಲ್ಲಿ ಲೈಂಗಿಕ ಜೀವನವನ್ನು ಕುರಿತ ನಂಬಿಕೆಗಳು ಹೇಗಿವೆ, ನಡವಳಿಕೆಗಳು ಹೇಗಿವೆ, ಆದರ್ಶಗಳು ಹೇಗಿವೆ– ಎಂದು ತಿಳಿಯುವುದು ಅಷ್ಟೊಂದು ಕಷ್ಟವಾಗದಾದರೂ ಆ ನಂಬಿಕೆಗಳು ಸಾಮಾಜಿಕ ವ್ಯಕ್ತಿಗಳ ಮೇಲೆ ಹೊರಿಸಿದ ನಿಯಮಗಳು ಎಷ್ಟು ಮಟ್ಟಿಗೆ ವ್ಯಕ್ತಿ ಜೀವನಕ್ಕೆ ಸುಖವನ್ನು ತಂದೊಡ್ಡಿವೆ, ಹಾನಿಯನ್ನು ತಂದೊಡ್ಡಿವೆ–ಎಂಬ ಪ್ರಶ್ನೆಗಳನ್ನೂ ನಾವು ನೋಡಬೇಕಾಗುತ್ತದೆ. ಆ ನಂಬಿಕೆಗಳನ್ನು ಕಾಲ್ಪನಿಕ ಆದರ್ಶಗಳನ್ನು ಕಣ್ಣೆದಿರಿಗೆ ಇರಿಸಿಕೊಂಡು ಅದನ್ನು ನಡೆಯಿಸಬೇಕಾದ ಹೆಣ್ಣುಗಂಡುಗಳ ಸ್ವಾಭಾವಿಕ ಇತಿಮಿತಿಗಳನ್ನು ಅವರು ಬಾಳುತ್ತಿರುವ ಆವರಣವನ್ನು ಅವರು ಇದಿರಿಸಬೇಕಾಗಬಹುದಾದ ಸುಳಿವು ಸೆಳವುಗಳನ್ನು ಗಮನಿಸದೆ ಹೊರಿಸುವುದಾದರೆ ಅವುಗಳಿಂದ ಸಮಾಜದ ಸುಖ ನೆಲೆಸೀತೆಂದು ಊಹಿಸಬೇಕಾಗಿಲ್ಲ.

ಈ ಕ್ಷೇತ್ರದಲ್ಲಿ ಯಾವತ್ತು ಮಾನವ ಕುಲದ ಇತಿಮಿತಿಗಳು ಒಂದೇ ತೆರನಾಗಿವೆ–ಎಂದೂ ನಾವು ತಿಳಿಯಬಹುದು. ಆದರೂ, ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ದೇಶಗಳಲ್ಲಿ ದೇರೆ ಬೇರೆ ಬಣಗಳಲ್ಲಿ ಜನಗಳು ಇರಿಸಿಕೊಂಡ ಆದರ್ಶ, ನಂಬಿಕೆ, ನಡವಳಿಕೆಗಳು ಎಲ್ಲಿಯೂ ಒಂದೇ ರೀತಿಯಲ್ಲಿದ್ದಂತೆ ಕಾಣಿಸುವುದಿಲ್ಲ. ಇದರಿಂದಾಗಿ ಭಾರತೀಯರಾದ ಕೆಲಕೆಲವರಲ್ಲಿ ನಾವು ಲೌಕಿಕಕ್ಕಿಂತ ಹೆಚ್ಚಿಗೆ ಪಾರಮಾರ್ಥಕ್ಕೆ ಪ್ರಾಶಸ್ತ್ಯ ಕೊಟ್ಟವರು, ಇಂದ್ರಿಯ ಭೋಗ ನೀಚವೆಂದು ತಿಳಿದವರು, ಆದುದರಿಂದ ನಮ್ಮ ನೈತಿಕ ಮಟ್ಟ ತುಂಬ ಮೇಲಿನದೆಂದು ಭಾವನೆಯಿದೆ, ಯುರೋಪಿನ ದೇಶಗಳಲ್ಲಿ ಅಂತಹ ಆದರ್ಶವಿಲ್ಲದೆಯೇ ಜನ ಸ್ವೇಚ್ಛಾ ವಿಹಾರಿಗಳಾಗಿ ಬಾಳುತ್ತಿದ್ದಾರೆ, ನೈತಿಕ ಅಧಃಪತನ ಹೊಂದಿದ್ದಾರೆ ಎಂಬುದಾಗಿ ಲೈಂಗಿಕ ಸಂಬಂಧವಾದ ಪ್ರಶ್ನೆಗಳನ್ನು ಕುರಿತು ಕೇಳಿದಾಗಲೆಲ್ಲ ಹೇಳುವುದುಂಟು.

ಭಾರತದ ಇಷ್ಟೊಂದು ದೊಡ್ಡ ದೇಶದಲ್ಲಿ ಸ್ತ್ರೀ–ಪುರುಷ ಸಂಬಂಧವನ್ನು ಕುರಿತ ನೀತಿಯೆಂಬುದು ಎಲ್ಲ ಜಾತಿ ಬಣ ಮತ್ತು ಮತಗಳಲ್ಲಿಯೂ ಈಗ ಒಂದೇ ತೆರನಾಗಿದೆಯೇ ಹಿಂದೆ ಇತ್ತೇ ಆ ವಿಷಯದಲ್ಲಿ, ಅವರವರ ಸಮಾಜಗಳು ಇರಿಸಿಕೊಂಡ ಆದರ್ಶಗಳು ಆಚರಣೆಯಲ್ಲಿವೆಯೇ – ಎಂಬುದನ್ನು ಕೂಡ ನಾವು ವಿಚಾರ ಮಾಡುವುದಿಲ್ಲ. ನನ್ನ ಸಮಾಜದ ಈ ವಿಷಯದ ನೀತಿ ಎಂದರೆ, ನನಗೆ ನಾನು ಹುಟ್ಟಿ ಬೆಳೆದ ಬ್ರಾಹ್ಮಣ ಸಮಾಜದ ಯಾವುದೋ ಒಂದು ಪಂಗಡದವರ ನೀತಿಯಷ್ಟೆ ಅಲ್ಲಿಯೂ ಗಂಡಿಗಿರುವ ಅಧಿಕಾರ ಹೆಣ್ಣಿಗಿಲ್ಲ. ನಾಲಿಗೆಯಲ್ಲಿ ಮಾತ್ರ ಗಂಡು ಹೆಣ್ಣಿಗೆ ಸಮಾನ. ಬಹುಪತ್ನಿತ್ವದ ವಿರುದ್ಧ ಕಾಯಿದೆ ಕಾಲಿಡುವ ಮುಂಚೆ, ಸಾಕುವ ತ್ರಾಣವಿದ್ದ ಗಂಡಸು ಎರಡೋ ಮೂರೋ ಹೆಂಡಿರನ್ನು ಮದುವೆಯಾಗಬಹುದಿತ್ತು. ಆದರ್ಶದ ರಾಮಾಯಣದ ದಶರಥನಿಗೆ ಮೂವರು ಹೆಂಡಿರಿದ್ದರು. ಭಾರತದ ಕೌರವನಿಗೆ ನೂರು ಮಕ್ಕಳಿರಬೇಕಾದರೆ ಎಷ್ಟು ಹೊಂದಿದ್ದರು ? ಈ ಎರಡು ಕಾವ್ಯಗಳನ್ನು ನಾವು ಇತಿಹಾಸವಾಗಿ ತಿಳಿಯಬೇಕಿಲ್ಲವಾದರೂ, ಅವು ಚಿತ್ರಿಸುವ ಕಥಾನಕ ಅವನ್ನು ಬರೆದ ಕಾಲದ ಸಾಮಾಜಿಕ ನಡವಳಿಕೆಯನ್ನು ಸಾಕಷ್ಟು ಪ್ರತಿಬಿಂಬಿಸುತ್ತಿರಬೇಕು.

ಇರಲಿ, ಪತಿಯನ್ನು ಕಳೆದುಕೊಂಡ ಸ್ತ್ರೀಗೆ ಮರುಮದುವೆಯ ಹಕ್ಕು ನನ್ನ ಸಮಾಜದಲ್ಲಿಲ್ಲ. ಪತಿಯ ದೈವತ್ವವನ್ನು ಸ್ತ್ರೀಯರ ಮೇಲೆ ಕಡ್ಡಾಯವಾಗಿ ಹೊರಿಸಿದ್ದಾರೆ. ದೆವ್ವದಂತಹ ಸ್ವಭಾವದ ವ್ಯಕ್ತಿಯ ಮೇಲೂ ಪತ್ನಿಯ ಭಕ್ತಿ ಲವಲೇಶವೂ ಕಡಿಮೆಯಾಗಬಾರದು ಎಂಬ ಆದರ್ಶ'ನಮ್ಮದು, ಪತ್ನಿ ನಿಧನರಾದವರು ತಿರುಗಿ ಮದುವೆಯಾಗಬಹುದು; ಆದರೆ ಪತಿಯನ್ನು ಕಳೆದುಕೊಂಡ ಸ್ತ್ರೀ ತಿರುಗಿ ಮದುವೆಯಾಗಕೂಡದು.

ಆದರೆ ಇದು ನನ್ನ ಸುತ್ತಣ ಎಲ್ಲ ಜಾತಿಯವರಿಗೂ ಬಭಾದಿಸುವವ ಸೂತ್ರವಲ್ಲ. ನನ್ನ ಕೋಟಿ ಬ್ರಾಹ್ಮಣ ಜಾತಿಗಷ್ಟೇ ಸಂಬಂಧಿಸಿದ್ದು, ಉಳಿದ ಕೆಲವು ಸಾಮಾಜಿಕ ಬಣಗಳಲ್ಲಿ ಆದ ಮದುವೆಯ ಸಂಬಂಧ ಸರಿಹೋಗದಿದ್ದರೆ, ಪರಿಹಾರಕೊಟ್ಟು ಗಂಡು ಹೆಣ್ಣುಗಳು ಬೇರೆಯಾಗುವ ಸ್ವಾತಂತ್ರ್ಯ ಇಂದೂ ವಾಡಿಕೆಯಲ್ಲಿದೆ. ವಿಧವೆಯಾದವಳಿಗೆ ತಿರುಗಿ ಮದುವೆಯಾಗುವ ಹಕ್ಕು ಮುಖ್ಯ ವಿಷಯವನ್ನು ಗಮನದಲ್ಲಿಟ್ಟುಕೊಂಡಾಗಲೂ ಶಾಸ್ತ್ರಗಳೂ, ಸಮಾಜಗಳೋ, ಅವರ ನಂಬಿಕೆಗ ಕಾರಣವಾದ ಪುರಾತನ ಕತೆಗಳೋ ಎತ್ತಿ ತೋರಿಸುವ ನೀತಿಯ ಉದ್ದೇಶವೇನು ? ಅದುದಾಂಪತ್ಯ ನಿಷ್ಠೆಯನ್ನು ಕಾಯಬೇಕೆಂಬ ಒಂದು ದೃಷ್ಟಿಯಷ್ಟೆ ನಾವು ಕೇವಲ ಶಾಸನದಿಂದ ದೈವನಿಷ್ಠೆ ರಾಜನಿಷ್ಠೆ ಮಿತ್ರನಿಷ್ಠೆಗಳನ್ನು ಪಾಲಿಸಲು ಬರುವ ಯಶಸ್ಸಿನಿಂದ ಪತಿನಿಷ್ಠ ಸತಿನಿಷ್ಟೆಗಳು ಸಮಾಜದಲ್ಲಿ ಉಳಿದಾವು ರಾಜ್ಯಗಳು ಅಂತಹ ನಿಷ್ಠೆಯನ್ನು ಹೊರಿಸಬಹುದು. ಅವನ್ನು ಮುರಿದರೆ ಇಂತಿಂಥ ನರಕ ಪ್ರಾಪ್ತಿಯಾಗುತ್ತದೆ ಎಂಬ ಭಯವನ್ನು ಹುಟ್ಟಿಸಿ, ಆ ಭಯದಿಂದಾಗಿಯೇ ವಿವಾಹಿತ ಗಂಡು ಹೆಣ್ಣುಗಳು ಒಂದೇ ಮನೆಯಲ್ಲಿ ನೆಲೆಸುವಂತೆ ಮಾಡಲೂಬಹುದು, ಜೀವನದ ಸುಖಕ್ಕೆ ಗಂಡು ಹೆಣ್ಣುಗಳಲ್ಲಿ ಸ್ನೇಹ, ಪ್ರೀತಿಗಳು ಅವರವರ ನಡವಳಿಕೆಯಿಂದ ಬೆಸೆದಾಗ ಮಾತ್ರ ದಾಂಪತ್ಯದಲ್ಲಿ ಸುಖ ಕಾಣುತ್ತದೆ. ಅದರ ಬದಲು ಹಕ್ಕಿನಿಂದ ಸ್ಥಾಪನೆಗೊಳ್ಳುವುದು ಒಬ್ಬರೊಬ್ಬರ ಅಧಿಕಾರ, ಅಂತಹ ಅಧಿಕಾರದಿಂದ ನಾವು ಪಡೆಯುವುದು ಚಾಕರಿ, ಸೇವೆ, ಅದರಂತೆ ದೇಹದ ಅರ್ಪಣೆಯೂ ದಾಂಪತ್ಯವನ್ನು ಉಳಿಸಲು ನೆರವಾಗುವ ಒಂದು ಪ್ರಬಲ ಶಕ್ತಿ, ಸಂಧಾನ ಪ್ರಾಪ್ತಿಗೆ ಅನಿವಾರ್ಯವಾದ ಗಂಡು, ಹೆಣ್ಣುಗಳನ್ನು ಸಮೀಪಕ್ಕೆ ತಂದು ಉಳಿಸಿಕೊಳ್ಳಬಲ್ಲ ದೇಹದ ಆಕಾಂಕ್ಷೆ ಮನಸ್ಸಿನ ಒಲವು, ಪ್ರೀತಿ, ಶೃಂಗಾರ, ಆಕರ್ಷಣೆ, ಮೋಹಕತೆ ಮೊದಲಾದ ಅನ್ಯ ಭಾವೋತ್ತೇಜಕ ಗುಣಗಳನ್ನು ಹೊಂದಿಕೊಂಡಿವೆ. ಅವುಗಳ ಪ್ರಾಮುಖ್ಯತೆಯನ್ನು ತೀರ ಮರೆತು ನಡೆಯುತ್ತಿರುವ ದಾಂಪತ್ಯ ಅಥವಾ ಲೈಂಗಿಕ ನೀತಿ ಸುಖದ ಬದಲು ಕಪಟ, ದುಖ, ಹತಾಶ, ಮೃತ್ಯು ಮೊದಲಾದ ಅನಿಷ್ಟ ಪರಿಣಾಮಗಳನ್ನು ತಂದೊಡ್ಡುವುದನ್ನು ಕಾಣುತ್ತೇವೆ.

ಈ ವಿಷಯದಲ್ಲಿ ಸಮಾಜವನ್ನು ನೋಡಿ ಪರಿಶೀಲಿಸಿದ್ದರಿಂದ, ಗ್ರಂಥಗಳಿಂದ ಸಾಕಷ್ಟು ತಿಳಿವಳಿಕೆ ಬಂದ ಮೇಲೆ–ದಾಂಪತ್ಯದ ಕಟ್ಟುನಿಟ್ಟಿನಲ್ಲಿ ಬಾಳಿದ ದಾರುಣ ಜೀವನವನ್ನು ಕಂಡಿದ್ದೇನೆ. ಅವರ ನಿರಾಶೆಯ ಕತೆಗಳನ್ನು ಕೇಳಿದ್ದೇನೆ. ಮನೆಯನ್ನು ಬಿಟ್ಟು ಓಡಿಹೋದ ಹೆಂಗಸರ ಪಾಡನ್ನು ಕಂಡಿದ್ದೇನೆ. ನಾನಾ ಬಗೆಯಿಂದ ಆತ್ಮಹತ್ಯೆ ಮಾಡಿಕೊಂಡವರ ಸುದ್ದಿಗಳೂ ಆಗಾಗ ಕೇಳಿಸುವುದುಂಟು 'ಮರಳಿ ಮಣ್ಣಿಗೆಯಲ್ಲಿ ಬರುವ ಒಂದು ತಲೆಮಾರಿನಲ್ಲಿ ಸೊಸೆಯಾದವಳು ಕಡಲಿಗೆ ಹಾರಿ ಪ್ರಾಣ ಬಿಡುವುದಕ್ಕೆ ಹೋಗುವ ವಿಚಾರ ಬರುತ್ತದೆ. ಕುಂದಾಪುರದಲ್ಲಿ ನಾನು ವಾಸವಾಗಿದ್ದಾಗ ನನ್ನ ನೆರೆಮನೆಯ ಇಬ್ಬರು ಸೊಸೆಯಂದಿರು ಅತ್ತೆಯವರಿಂದ ನಿತ್ಯವೂ ಹಿಂಸೆಗೆ ಗುರಿಯಾಗಿದ್ದು, ತಮ್ಮ ಗಂಡಂದಿರಿಂದ ಏನೂ ಸಮಾಧಾನವನ್ನೇ ಕಾಣದ ಜೀವಿಗಳು ಒಂದು ದಿನ ಹತಾಶೆಯಿಂದ ಗಂಗೊಳ್ಳಿ ಹೊಳೆಯ ಅಳುವಗೆ ಅದೇ ತೆರನಲ್ಲಿ ಹೋಗಿ ಪ್ರಾಣಬಿಡಲು ಹವಣಿಸಿದರು. ಇಂತಹ ತರ ತೆರನ ದಾಂಪತ್ಯ ಚಿತ್ರಗಳನ್ನು ಕಂಡಿದ್ದೇನೆ. ಹೆಣ್ಣು ಎಂಬುದು ಒಂದು ಕಸ, ದುಡಿಯುವ ತೊತ್ತು, ಅದಕ್ಕೆ ಸ್ವಂತ ಬಯಕೆಗಳೇ

ಇರಲಾರವು ಎಂದು ತಿಳಿಯುವ ಗಂಡಸರ ಸಂಖ್ಯೆ ವಿದ್ಯಾವಂತರೆನಿಸುವವರಲ್ಲೂ ಕಡಿಮೆಯಿಲ್ಲ. ಹಕ್ಕಿನಿಂದ ಪಡೆದ ಮದುವೆಯ ಹೆಣ್ಣು–ಒಲಿಸಿ, ಪ್ರೀತಿಸಿ ಕಾಯ್ದುಕೊಳ್ಳುವ ಜೀವ ಎಂಬ ಭಾವನೆ ನಮ್ಮ ಜನರಲ್ಲಿ ಎಷ್ಟು ಮಂದಿಗಿದೆ ?

ದಾಂಪತ್ಯ ಜೀವನವು ಸುಖಮಯವಾಗಿ ಕಾಣಿಸಬೇಕಾದರೆ ಗಂಡಿಸಿಗು ಅಂಥ ಪ್ರೇಮ ಬೇಕಾಗುತ್ತದೆ. ಬಾಳ್ವೆ ಸಹನೀಯವಾಗಲು , ಮದುವೆಯಾಗಿ ಮನೆಗೆ ಬಂದ ಗಂಡನೊಡನೆ ಬಾಯಿಬಿಟ್ಟು ಮಾತನಾಡುವುದೇನೆ ನಾಚಿಕೆಗೇಡಿತನ ಎಂದು ತಿಳಿಯುವ ಸಮಾಜದಲ್ಲಿ, ಆಕೆ ತನ್ನ ರೀತಿಯಿಂದ, ನಡಿಗೆಯಿಂದ, ಮಾತಿನಿಂದ ಗಂಡನನ್ನು ಒಲಿಸುವ ಪ್ರಶ್ನೆಯೇ ಇಲ್ಲವಾಗುತ್ತದೆ. ಅವು ಅಷ್ಟೊಂದು ಸಲಿಗೆಯಿಂದ ವರ್ತಿಸಿದರೆ ಸುತ್ತಣ ಬಂದುಗಳ ಪಾಲಿಗೆ ಒಬ್ಬಳು ವೇಶ್ಯೆ ಎನಿಸಿಯಾಳು! ಆದುದರಿಂದ ಅವಳ ನಡೆನುಡಿಗಳಲ್ಲ ನಿರ್ಬಂಧಿತವಾಗಿ, ನೀವು ಯಾಂತ್ರಿಕವಾಗುತ್ತದೆ. ಇಂಥ ಹೆಂಡತಿಯು ಗಂಡನ ದೇಹದ ಹಸಿವನ್ನು ತಣಿಸಿದರೂ ರಸಿಕ ಮನಸ್ಸಿನ ತಣಿವಿಗೆ, ಗಂಡಸು ದಾಂಪತ್ಯದ ಹೊರಗೆ ಕಣ್ಣುಹಾಯಿಸುತ್ತಾನೆ. ಇದಕ್ಕೆ ಹಲಕೆಲವು ಅನ್ಯ ಕಾರಣಗಳೂ ಸೇರಿಕೊಳ್ಳಬಹುದು.

ಮಹಾಭಾರತದಂತಹ ಸಾಹಿತ್ಯದಲ್ಲಿ ರಾಜರನ್ನು ಓಲಗಿಸುವ ವೇಶ್ಯೆಯರ ಬಳಗ ಅರಸು ಹೋದಲ್ಲೆಲ್ಲ ಹಿಂಬಾಲಿಸುವ ಗಣಿಕೆಯರ ಪರಿವಾರ, ಅವರ ವೃತ್ತಿಯ ಮತ್ತು ಜೀವನ ವಿಲಾಸಗಳ ಬೇಕಷ್ಟು ವರ್ಣನೆಗಳು ಬರುತ್ತವೆ. ಬುದ್ಧನ ಕಾಲದಿಂದ ಗುಪ್ತ ಯುಗದ ತನಕವೂ ಕಾಣಿಸಿಕೊಂಡ ಸಾಹಿತ್ಯದಲ್ಲಿ ಅಂದಿನ ಪಾಟಲಿಪುತ್ರದಂತಹ ನಗರಗಳು–ಅರ್ಧದಷ್ಟು ವೇಶ್ಯಯರ ಬೀಡೋ ಎಂದು ಕಾಣಿಸಬೇಕು. ವೇಶ್ಯಯರಿಲ್ಲದ ಹಬ್ಬ ಹುಣ್ಣಿಮೆ ಉತ್ಸವಗಳಿರಲಿಲ್ಲ. ಅವರ ಮನೆಗೆ ಸುಳಿದಾಡುತ್ತ ತಮ್ಮ ಗಂಡಸುತನಕ್ಕೆ ತೃಪ್ತಿ ಪಡೆಯದ ಸಮಾಜದ ಪ್ರತಿಷ್ಠಿತ ಕ್ಷತ್ರಿಯ, ಬಣಜಿಗೆ ಶ್ರೀಮಂತರಿಲ್ಲ. ಅಂತಹ ಬ್ರಾಹಣರಿಗೂ ಕಲಾವ್ಯವಸಾಯಿಗಳು ಈ ವನ್ಯಾ ಸಮುದಾಯದ ನಿಕಟವರ್ತಿಗಳಾಗಿದ್ದರು. ಹಣದ ಆಸೆಗಾಗಿ ಕೌಟಿಲ್ಯನ ಕಾಲದಲ್ಲಿ ಅಂದಿನ ಸರಕಾರ ವೇಶ್ಯಾವೃತ್ತಿಯನ್ನೇ ರಾಷ್ಟ್ರೀಕರಿಸಿ, ಅದರಿಂದ ದ್ರವ್ಯ ಸಂಪಾದಿಸುತ್ತಿತ್ತು. ವೇಶ್ಯಯ ಸಂಖ್ಯೆ, ವೈಭವಗಳಿಗೆ ಮೀರುವ ಐಟಿ ಸಮುದಾಯ ಇದ್ದೇ ಇರಬೇಕಲ್ಲ

ನನಗೆ ಪರಿಚಿತವಾದ ವರ್ತಮಾನದ ಸಮಾಜ ಪರಿಸರದಲ್ಲೂ ಆನುವಂಶಿಕ ವೇಶ್ಯಾ ವೃತ್ತಿ ನಡೆಸುವವರಿದ್ದಾರೆ, ಅದನ್ನು ಅಪಧರ್ಮದ ಕಸುಬಾಗಿ ಅನುಕರಿಸುವವರೂ ಇದ್ದಾರೆ. ಸಮಾಜದಲ್ಲಿ ಸ್ಥಾನಮಾನಗಳ ಪ್ರಜ್ಞೆ ಹೆಚ್ಚಿದಂತೆ, ತಿಳಿವು ಹೆಚ್ಚಿದಂತೆ ವಂಶಪಾರಂಪರ್ಯವಾಗಿ ವೇಶ್ಯಾವೃತ್ತಿ ನಡೆಯಿಸಿಕೊಂಡು ಬಂದ ಜನಗಳು–ಸಮಾಜ ತಮ್ಮಿಂದ ಸುಖವನ್ನು ಬಯಸಿದರೂ, ತಮ್ಮನ್ನು ಅವರು ಮೂದಲಿಸುತ್ತಿರುವ ರೀತಿಯನ್ನು ನೋಡಿ, ನೊಂದು ಕುಲದ ವೃತ್ತಿಯನ್ನು ತ್ಯಜಿಸಿ, ಮಾನವಂತ ಜೀವನ ನಡೆಸುವ ಹಂಬಲ ತಾಳಿದ್ದನ್ನು ನಾನು ಸಾಕಷ್ಟು ಕಂಡಿದ್ದೇನೆ. ಅಂಥವರಿಗೆ ನನ್ನಿಂದಾದ ನೆರವನ್ನು ಕೊಟ್ಟಿದ್ದೇನೆ. ನನ್ನ 'ಬತ್ತದ ತೊರೆ ಮತ್ತು ಇನ್ನೊಂದೆರಡು ಕಾದಂಬರಿಗಳಲ್ಲಿ ನನ್ನ ಇಂಥ ಕೆಲವು ಅನುಭವಗಳು ಪ್ರಕಟಗೊಂಡಿವೆ.

ಆದರೂ, ವೇಶ್ಯಾವೃತ್ತಿಯೆಂಬುದೇ ಸಮಾಜದಿಂದ ಕಣ್ಮರೆಯಾದೀತೇ? ಎಂದರೆ ಖಂಡಿತಕ್ಕೂ ಆ ದಿನ ಹತ್ತಿರವಿಲ್ಲ. ಹಿಂದೆಯೂ ಆ ಸಂಬಂಧದಲ್ಲಿ ಹೂಡುವ ಶಾಸನಗಳು ವೇಶ್ಯಾವೃತ್ತಿಯನ್ನು ಹಿತ್ತಿಲ ಮನೆಗೆ ಕಳುಹಿಸಿ ವಿವಾಹಿತ ವೇಶ್ಯೆಯರ ಸಂಖ್ಯೆಯನ್ನು ಹೆಚ್ಚಿಸಬಹುದಷ್ಟೆ. ಆಧುನಿಕ ಔದ್ಯಮಿಕ ಯುಗದಲ್ಲಿ ಹೊಟ್ಟೆಯ ಪಾಡಿಗಾಗಿ ವಿದ್ಯಾರ್ಜನೆಗಾಗಿ ಇತರ ಕಾರಣಗಳಿಂದ ಅಸಂಖ್ಯ ಜನರು ತಮ್ಮ

ಬಳಗದಿಂದಲೂ, ತಮ್ಮ ಗಂಡ ಹೆಂಡಿರಿಂದಲೂ, ಹಿರಿಯರಿಂದಲೂ ದೂರದಲ್ಲಿ ಬಾಳಬೇಕಾಗಿ ಬಂದಿರುವ ಜೀವನದ ಬಗ್ಗೆ ದಾಂಪತ್ಯದ ಹೊರಗೆ ಲೈಂಗಿಕ ಜೀವನಕ್ಕೆ ಅನಿವಾರ್ಯತೆಯನ್ನು ಕಲ್ಪಿಸುತ್ತದೆ.

ಅದರೆ ನಮ್ಮವರು ಈ ಸಮಸ್ಯೆಯನ್ನು ಕಾಲ್ಪನಿಕ ಆದರ್ಶಗಳ ದೃಷ್ಟಿಯಿಂದ ಕಂಡರೇ ಹೊರತು, ಅದರ ಆಚೆಗೆ, ಅವರು ಕಣ್ಣು ಹಾಯಿಸಲಿಲ್ಲ. ಆ ವಿಷಯವೇ ಏನೆಂದು ಗೊತ್ತಿರಲಿಲ್ಲವೇ ಎಂದು ಕೇಳಿದರೆ ಇಂದ್ರ, ರಂಭ, ತಿಲೋತ್ತಮೆ, ಊರ್ವಶಿಯರಂತಹ ಅಪ್ಸರೆಯರನ್ನು. ಹುಟ್ಟಿಸಿದ ಚಾಣಾಕ್ಷ ಪೌರಾಣಿಕರು ಮಾನವನ ಇತಿಮಿತಿಗಳನ್ನು ತಿಳಿಯದವರಲ್ಲ: ಋಷಿಗಳ ಕಠಿಣ ಜೀವನವಾಗಲಿ, ಇಂದ್ರಿಯ ನಿಗ್ರಹವಾಗಲಿ–ಬೆಡಗಿನ ಸಿಂಗಾರಿಯರ ಮುಂದೆ ಬಿಸಿಲಿಗೆ ಕರಗುವ ಮಂಜಿನಂತಿರುವುದನ್ನು ಚಿತ್ರಿಸಿದ್ದಾರೆ.

ದಾಂಪತ್ಯದಿಂದ ಬಂಧಿತರಾದ ಸಾಮಾಜಿಕರಲ್ಲೂ ನೂರು ಅಸಂತೃಪ್ತ ಮನಸ್ಸುಗಳಿವೆ. ಅವು ತಮ್ಮ ಹಂಬಲಗಳನ್ನು ತೀರಿಸಿಕೊಳ್ಳಲು ಪ್ರಯತ್ನಿಸುತ್ತವೆ. ವೇಶ್ಯೆಯರ ಬಳಗ ಅದಕ್ಕೆ ನೆರವಾಯಿತು. ಸಮಾಜದ ಹಿರಿಯರು ಆ ಕಾಲಕ್ಕೆ ತಮ್ಮ ಕರ್ತವ್ಯ ಸಾಗಿಸಲಾರದವರಾಗುತ್ತಾರೆ. ಬಡತನ ಅಡ್ಡಬಂದು ಮಕ್ಕಳ ಮದುವೆಗೆ ಕಷ್ಟ ತಂದೊಡ್ಡುತ್ತದೆ. ಸಾಂಪತ್ತಿಕ ಅನುಕೂಲತೆಯಿಲ್ಲದ ಹೆಣ್ಣುಗಳಿಗೆ ವರ ಸಿಗುವುದೇ ಕಷ್ಟವಾಗುತ್ತದೆ. ಈಗಿನ ಕಾಲದಲ್ಲಿ ನನ್ನ ಯೌವನದಲ್ಲಿ ಕಾಣಿಸದಿದ್ದ ಅನೇಕ ಹೊಸ ಹೊಸ ಸಮಸ್ಯೆಗಳೂ ಸೇರಿಕೊಂಡಿವೆ. ತಮ್ಮ ಎಳೆಯ ಮಕ್ಕಳ ಮೇಲೆ ಹಿಂದಿನ ಕಾಲದ ಮಾತಾಪಿತರುಗಳು ಕಡ್ಡಾಯದ ಮದುವೆ ಹೊರಿಸಿ ತಮ್ಮ ಹೊಣೆಯನ್ನು ಕಳಚಿಕೊಳ್ಳುತ್ತಿದ್ದರು. ಅಪ್ರಾಯಸ್ಥರ ವಿವಾಹ ಶಾಸನದಿಂದ ಖಂಡಿಸಲ್ಪಟ್ಟ ಬಳಿಕ, ಮೊದಲೇ ವಿವಾಹವಾಗಬೇಕೆಂಬ ಬ್ರಾಹ್ಮಣ ವರ್ಗದ ಗಾಢ ನಂಬಿಕೆ, ಅದರಿಂದ ತಾಯ್ತಂದೆಯರಿಗೆ ಬರುತ್ತಿದ್ದ ತಲೆನೋವು ತನ್ನಂತೆ ದೂರವಾಯಿತು. ಪ್ರೌಢ ವಿದ್ಯಾಭ್ಯಾಸ ಗಂಡು ಹೆಣ್ಣುಗಳಿಬ್ಬರಲ್ಲೂ ಮಾನ್ಯತೆ ಗಳಿಸಿ, ಹಲವರು ಕಾಲೇಜು ವಿದ್ಯಾರ್ಥಿಗಳಾಗುತ್ತಾರೆ. ಇದರಿಂದ ತಮ್ಮ ಮಕ್ಕಳ ಮೇಲೆ ತಮಗೆ ಇಚ್ಛೆ ಕಂಡ ನಂಟುತನ ಹೊರಿಸಬಹುದಾದ ಪ್ರಸಂಗ ತಗ್ಗುತ್ತಲೇ ಇದೆ. ಆದರೆ, ಮಕ್ಕಳು ಓದಿ ಬೆಳೆದಂತೆ ಅವರ ಇಷ್ಟಕ್ಕೆ ಒಪ್ಪುವ ನಂಟುತನವನ್ನು ಕಂಡುಕೊಳ್ಳಬಲ್ಲ ಕಷ್ಟವೂ ಹೆಚ್ಚಿದೆ. ಕನ್ಯೆಯರ ಪಾಲಿಗಂತು ಅವರು ಎಷ್ಟು ಹೆಚ್ಚಿಗೆ ಓದುತ್ತಾರೋ, ವರನ ವರ್ಚಸ್ಸು ಓದು ಅಷ್ಟೇ ಹೆಚ್ಚಿಗೆ ಬೇಕಾಗಿರುವುದರಿಂದ, ವರಾನ್ವೇಷಣೆಯ ಸಮಸ್ಯೆ ಮೊದಲಿಗಿಂತಲೂ ಎಷ್ಟೋ ಹೆಚ್ಚಿನ ಸಮಸ್ಯೆಯಾಗಿ ಕಾಣಿಸುತ್ತಿದೆ.

ನಮ್ಮ ಧಾರ್ಮಿಕ ಕಲ್ಪನೆಗಳ ಆರಂಭದ ತಪ್ಪನ್ನು ಜಗತ್ತಿನ ಉಳಿದೆಲ್ಲ ಜೀವಿಗಳಿಗಿಂತ ಮನುಷ್ಯ ಕುಲ ಪ್ರತ್ಯೇಕವಾದ, ಶ್ರೇಷ್ಠವಾದ ಒಂದು ಜೀವವರ್ಗ ಎಂದೆಣಿಸಿದ್ದು ಎಂಬುದಾಗಿ ಹಿಂದಣ ಅಧ್ಯಾಯದಲ್ಲಿಯೇ ನಾನು ಹೇಳಿದ್ರೆ ಅದೇ ಮಾತಿನ ಸೆರಗನ್ನು ಗಂಡು ಹೆಣ್ಣಿನ ಸಂಬಂಧಕ್ಕೆ ಅನ್ವಯಿಸುವಂತೆ ಇಲ್ಲಿ ಪ್ರತಿಪಾದಿಸಬೇಕಾಗುತ್ತದೆ.

ಈ ಭೂಮಿಯ ಮೇಲೆ ಸುಮಾರು 3,000 ಮಿಲಿಯ ವರ್ಷಗಳ ಜೀವಿಗಳ ವಿಕಾಸದ ಕೊನೆಯೊಂದು ಗಳಿಗೆಯಲ್ಲಿ ಮನುಷ್ಯ ಕಾಣಿಸಿಕೊಂಡಿದ್ದಾನೆ. ಆದಿಜೀವಿಯಂತಹ ಸೂಕ್ಷ್ಮ ಜೀವಕಣ ವಿಕಾಸದ ಹಾದಿಯಲ್ಲಿ ಬಹುಕಣ ಜೀವಿಯಾಗಿ, ಸಸ್ಯವಾಗಿ ಪ್ರಾಣಿಯಾಗಿ ಬೇರ್ಪಟ್ಟು ಹಾಗೆಯೇ ಪ್ರಾಣಿಕುಲ ವಿವಿಧ ಹೆಜ್ಜೆಗಳನ್ನು ದಾಟಿ ಮುಂದುವರಿಯಿತು. ತೀರ ಕೊನೆಯ ಮೂರು ಮಿಲಿಯ ವರ್ಷಗಳ ಅವಧಿಯಲ್ಲಿ ಮನುಷ್ಯನಂತಹ ಪ್ರಾಣಿಯು ವಿಕಾಸಗೊಂಡಿತು. ಮಾನವ ದೇಹದ ಯಾವತ್ತು ನಡವಳಿಕೆಯಾಗಲಿ ಬದುಕಿನ ಉದ್ದೇಶವಾಗಲಿ ಅಲ್ಲಿಯ ತನಕ ಕಾಣಿಸಿಕೊಂಡ ಜೀವಿಗಳ ಉದ್ದೇಶಕ್ಕಿಂತ ಎಂದೂ ಪ್ರತ್ಯೇಕವಾಗಿರಲಾರದು, ಅವನ ಅಂಗರಚನೆ, ನರಗಳು, ಆನುವಂಶಿಕ ಗುಣಗಳು, ಅವನ ದೇಹದ

ಅವಯುವಗಳನ್ನು ನಿಯಂತ್ರಿಸುವ ಹಾರ್ಮೋನ್, ಎಂಜೈಮು ಮೊದಲಾದ ರಾಸಾಯನಿಕಗಳು–ಅವನ ದೇಹ ತನ್ನ ಪರಿಸರಕ್ಕೆ ಹೊಂದಿಕೊಂಡು ಬಾಳುವುದಕ್ಕೂ, ಪರಿಸ್ಥಿತಿ ಅನುಕೂಲವಿಲ್ಲದಾಗ ತನ್ನ ಬದುಕಿಗೆ ಇದಿರಾಗುವಂಥ ವಿಘ್ನಗಳನ್ನು ಹಗೆಗಳನ್ನು ಗೆಲ್ಲುವುದಕ್ಕೂ ರೂಪುಗೊಂಡುವು.

ಜೀವಕುಲದ ಒಂದು ಪ್ರಧಾನ ಉದ್ದೇಶ, ಅಥವಾ ಆದಿಯಿಂದ ಇಂದಿನ ತನಕ ಕಾಣಿಸಿಕೊಂಡ ಪ್ರವೃತ್ತಿಯೆಂಬುದು ಸಂತಾನದಿಂದ ತನ್ನ ಕುಲವನ್ನು ತಾನು ನಿರಂತರ ಉಳಿಸಿಕೊಳ್ಳುವುದಾಗಿದೆ. ಎಲ್ಲ ಜೀವಕುಲಗಳಲ್ಲೂ ಅವುಗಳ ಪೀಳಿಗೆ ಹುಟ್ಟುತ್ತಲೇ ಇರುತ್ತದೆ. ಬೆಳೆಯುತ್ತಲೇ ಇರುತ್ತದೆ; ಮುಂದೊಂದು ದಿನ ಸಾಯುತ್ತಲೇ ಹೋಗುತ್ತದೆ. ವ್ಯಕ್ತಿ ಜೀವನ ಅಲ್ಪ ಕಾಲದ್ದಾದರೂ ದೀರ್ಘಕಾಲದ ತನಕ ಮುಂದುವರಿಯುತ್ತ ಸಾಗುವುದು ಆ ಪ್ರಾಣಿಕುಲದ ಪರಂಪರೆ, ಆದಿ ಜೀವಿಗಳಲ್ಲಿ ಲಿಂಗಭೇದವಿಲ್ಲದೆಯೇ ಇಂಥ ಸಂತಾನ ಕಾಣಿಸುತ್ತದೆ. ಆ ಹೆಜ್ಜೆಯನ್ನು ದಾಟಿ ಗಂಡು–ಹೆಣ್ಣು ಎಂಬ ಲಿಂಗಭೇದಗಳು ಸಸ್ಯಗಳಲ್ಲೂ ಪ್ರಾಣಿಗಳಲ್ಲೂ ಕಾಣಿಸಿದ ಬಳಿಕ ಅನೇಕ ತೆರನ ಬಹುಕಣ ಜೀವಿಗಳ ವಿಕಾಸ ಸಾಧ್ಯವಾಯಿತು. ಅಂಥ ವಿಕಾಸದ ಕೊನೆಯ ಮೆಟ್ಟಲಿನಲ್ಲಿ ಮನುಷ್ಯ ನಿಂತಿದ್ದಾನೆ. ಮಾನವರ ದೇಹಗಳು ಯುಗಮಾನದ ಉದ್ದಕ್ಕೂ ತಮ್ಮ ಕುಲವು ಪಡೆದು ಬಂದಂಥ, ಆ ಕುಲವನ್ನು ಉಳಿಸಿಕೊಳ್ಳಬೇಕೆನ್ನುವ ನೈಸರ್ಗಿಕ ಪ್ರವೃತ್ತಿಯನ್ನು ಎಂದೂ ಮರೆಯಲಾರದು, ಗಂಡು, ಹೆಣ್ಣುತನಗಳಿರುವುದು ಈ ಉದ್ದೇಶದ ಪೂರ್ತಿಗಾಗಿಯೇ, ಗಂಡು, ಹೆಣ್ಣುತನಗಳ ಮನೋವೃತ್ತಿ, ಅಂಗಭೇದ, ಅವುಗಳನ್ನು ಸಮೀಪಕ್ಕೆ ತರುವ ದೇಹಾಕರ್ಷಣೆ, ಹಾಗೆ ತಂದ ಬಳಿಕ ಹೆಣ್ಣಿನ ಮೂಲಕ ಸಂತತಿಯನ್ನು ಪಡೆಯುವ ಗಾಢ ಲಾಲಸ ಮನುಷ್ಯನಲ್ಲಿ ಬುದ್ಧಿ ಬಲಿಯುವುದಕ್ಕಿಂತಲೂ ಮೊದಲೇ ಕಾಣಿಸಿಕೊಂಡ ಮತ್ತು ಅವನಿರುವ ತನಕವೂ ಕಾಣಿಸಿಕೊಳ್ಳುವ ನಿಸರ್ಗದ ಒಂದು ಗಾಢ ಪ್ರವೃತ್ತಿಯಾಗಿದೆ. ಆಹಾರದ ಬಯಕೆ, ನೀರಡಿಕೆಯ ತೃಪ್ತಿ ಇವೆಲ್ಲ ವ್ಯಕ್ತಿಯ ದೇಶರಕ್ಷಣೆಗೆ ಎಷ್ಟು ಸ್ವಾಭಾವಿಕವೋ, ನಾಳಿನ ಸಂತಾನದ ಸಲುವಾಗಿ ತನಗರಿವಿದ್ದೂ ಇಲ್ಲದೆಯೂ ಲೈಂಗಿಕ ಪ್ರವೃತ್ತಿ ಜೀವಿಗಳಲ್ಲಿ ಕಾಣಿಸಿಕೊಂಡು ಗಂಡು ಹೆಣ್ಣುಗಳೆಂಬುವು ಒಂದನ್ನೊಂದು ಹಂಬಲಿಸುವುದು ಅಷ್ಟೇ ನೈಸರ್ಗಿಕವಾದ ಜೀವಲಕ್ಷಣವಾಗಿದೆ.

ಈ ಕುರಿತು ಮನುಷ್ಯನ ಸಂಸ್ಕೃತಿ, ಮತಧರ್ಮಗಳು, ನಂಬಿಕೆಗಳು, ವಾಡಿಕೆಗಳು ಪ್ರಾಣಿದೇಹ ಧರ್ಮಕ್ಕೆ ವಿರುದ್ಧವಾದ ರೀತಿಯಲ್ಲಿ...ಇದ್ದುವಾದರೆ ಅದೂ ನೈಸರ್ಗಿಕವೆನಿಸೀತು. ಅವು ಹಟ ಅಭ್ಯಾಸಗಳಿಂದ ಸಾಧ್ಯವೆನಿಸಿದರೂ ಕೃತಕವೂ, ಮನಃಪ್ರವೃತ್ತಿಯ ಅಪಚಾರವೂ ಆಗಿ ಕಾಣಿಸೀತು ಒತ್ತಾಯದಿಂದ ಹೊರಿಸುವ ಅಂತಹ ಕೆಲವೊಂದು ನೈತಿಕ ಸೂತ್ರಗಳು ಮನುಷ್ಯನ ಮನಸ್ಸು ವಿರೂಪ ತಾಳುವುದಕ್ಕೂ ಕಾರಣವಾದಾವು, ಈ ದೆಸೆಯಿಂದಲೇ ದಾಂಪತ್ಯ ಜೀವನದ ವಿಚಾರದಲ್ಲಿ, ಗಂಡು ಹೆಣ್ಣುಗಳ ನಡವಳಿಕೆಯ ವಿಚಾರದಲ್ಲಿ ಅವರ ದೇಹಗಳು ಪ್ರಾಣಿದೇಹಗಳಲ್ಲವೆಂದು ತಿಳಿದು, ಕಾಲ್ಪನಿಕ ಹಿರಿಮೆಯನ್ನು ಮನುಷ್ಯ ಕುಲದ ಮೇಲೆ ಹೇರಿ, ನಾವು ಹೊರಿಸುವ ತೀರ್ಮಾನಗಳು ತಪ್ಪು ದಾರಿಯನ್ನು ಅಂತ ತಿರ್ಮಾನಗಳಿಗೆ ಸಮನಾಗಿ, ಸಮಾಜದ ಗಂಡು ಹೆಣ್ಣುಗಳು ನಡೆಯಲಾರದ ಹೋದರೆ ಆಗ ಅದನ್ನು ವಿಧಿಸಿದವರೇ ತಮ್ಮ ಕಲ್ಪನೆಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ. ಕೃತಕ ನೀತಿಗಳಿಂದ ಸಮಾಜಕ್ಕೆ ಎರಡು ಬಗೆಗಳಿಂದ ಹಾನಿ ತಟ್ಟಬಹುದು. ಜನರು ಲೈಂಗಿಕ ವಿಚಾರದಲ್ಲಿ ಸಾಮಾಜಿಕ ಸೂತ್ರಗಳನ್ನೊಪ್ಪಿದಂತೆ ನಟಿಸುತ್ತ, ಗುಟ್ಟಾಗಿ ಅದಕ್ಕೆ ವಿರುದ್ಧವಾಗಿ ಕಪಟ ಜೀವನ ನಡೆಯಿಸುತ್ತಾರೆ. ಹಾಗೆ ಅದನ್ನು ಮುಚ್ಚುಮರೆಯಲ್ಲಿ ನಡೆಯಿಸಲಾರದ ಬಡಪಾಯಿಗಳು ಸಮಾಜಕ್ಕೆ ಹೆದರಿ ಕಂಗಾಲಾಗಿ ಅದುಮಿ ಹಿಡಿದ ದೈಹಿಕ ಒತ್ತಡಗಳಿಂದಾಗಿ ಕೆಲವೊಂದು ಮನೋವಿಕಾರಗಳಿಗೆ ಗುರಿಯಾಗುತ್ತಾರೆ.

ಸಂತತಿಯನ್ನು ಪಡೆದು, ಅನಂತರ ಅದನ್ನು ಬಾಲ್ಯದಲ್ಲಿ ರಕ್ಷಿಸಿ, ಮಕ್ಕಳು ಬೆಳೆದು ತಮ್ಮ ಜೀವನವನ್ನು ತಾವು ನಡೆಯಿಸಲು ಸಮರ್ಥರಾಗುವ ತನಕವೂ ಅವರನ್ನು ಪೋಷಣೆ ಮಾಡಿ ತನ್ನ ಕುಲದ ಪೀಳಿಗೆಯನ್ನು ಅವಿರತವಾಗಿ ಕಾಯ್ದುಕೊಳ್ಳುವುದು ನಿಸರ್ಗದ ಒಂದು ಉದ್ದೇಶವಾಗಿದೆ. ಅಲ್ಲಿಯ ತನಕವೂ ಆ ಸಂತತಿಯನ್ನು ಪಡೆಯುವುದಕ್ಕೆ ನೆರವಾದ ಗಂಡು, ಹೆಣ್ಣುಗಳ ಬಾಂಧವ್ಯ ಬೆಸೆದು, ಪ್ರೀತಿಮಯ ಆವರಣವನ್ನು ಕಲ್ಪಿಸಿದಾಗ ಮಾತ್ರವೇ ಅಂತಹ ಗುರಿ ಸಾಧ್ಯವಾಗುತ್ತದೆ. ಕ್ರಿಮಿಕೀಟಗಳಂತಹ ಪ್ರಾಣಿಗಳಲ್ಲಿ ಗಂಡು ಹೆಣ್ಣಿನ ಕೂಟ ಕ್ಷಣಕಾಲದ್ದಿರುತ್ತದೆ. ಮುಂದೆ ಹೆಣ್ಣು ಫಲಿತ ಮೊಟ್ಟೆಯನ್ನು ಎಲ್ಲಾದರೂ ಅಡಗಿಸಿ ಇಟ್ಟು ಅದು ಮರಿಯಾದಾಗ ಬೇಕಾಗುವ ಆಹಾರವಾಗಿ ಹೋಗುತ್ತದೆ. ತಿರುಗಿ ಆ ತಾಯಿ ತನ್ನ ಮರಿಯನ್ನು ಕಾಣುವುದೇ ಇಲ್ಲ. ವಿಕಾಸದ ಹಾದಿಯಲ್ಲಿ ಮುಂದುವರಿದ ಪ್ರಾಣಿಗಳಲ್ಲಿ ಹಾಗಿಲ್ಲ. ಪಕ್ಷಿಗಳಲ್ಲಿ ಮರಿಗಳು ಬಲಿತು ದೊಡ್ಡವಾಗಲು ಆರೆಂಟು ತಿಂಗಳುಗಳ ಅವಧಿ ಹಿಡಿಯುತ್ತದೆ. ಇತರ ಅನೇಕ ಪ್ರಾಣಿಗಳಲ್ಲಿ ಸ್ತನಪಾನದಿಂದ ಶಿಶುವಿನ ಆರಂಭದ ಆಹಾರ ಪೂರೈಕೆ ಸಾಗಿದರೂ, ಒಂದೆರಡು ವರ್ಷಗಳಲ್ಲಿ ಆ ಶಿಶು ಬೆಳದು ಮೊಲೆಹಾಲು ಕುಡಿಯುವುದನ್ನು ಬಿಟ್ಟು ತಾನೇ ಆಹಾರವನ್ನು ಅರಸಿ ಮೇಯಲು ಕಲಿಯುತ್ತದೆ. ಅಂಥಲ್ಲಿ ಒಂದು ವರ್ಷದ ತನಕ ಸಾಕಾದರೂ, ಹಿಂಸ್ರ ಪಶುಗಳ ಬಾಧೆಯಿಂದ ಮರಿಯ ಜೀವವನ್ನು ಪೋಷಿಸುವ ಹೊಣೆ ತಾಯಿ, ತಂದೆ ಮತ್ತು ಅವು ಸೇರಿದ ಗುಂಪಿನ ಹೊಣೆಯಾಗಿ ಉಳಿಯುತ್ತದೆ. ಇಲ್ಲಿ ಶಿಶುಪೋಷಣೆಯ ಭಾರವನ್ನು ಪಡೆದ ಗಂಡು ಹೆಣ್ಣುಗಳಲ್ಲಿ ತಾಯಿಗೂ ಗುಂಪಿಗೂ ಹಂಚಿ ಹೋಗುತ್ತದೆ. ಮಾಂಸಾಹಾರಿ ಪ್ರಾಣಿಗಳಲ್ಲಿ ಮರಿಯು ಬೇಟೆಯಾಡಲು ಕಲಿತು, ತನ್ನ ಆಹಾರವನ್ನು ತಾನು ಪಡೆಯಬಲ್ಲ ಸ್ಥಿತಿ ಬರುವ ತನಕವೂ, ತಂದೆ ತಾಯಿಗಳ ಹೊಣೆ ಇದ್ದೇ ಇರುತ್ತದೆ. ಇದಕ್ಕೆ ಎರಡು, ಮೂರು ವರ್ಷಗಳ ಅವಧಿಯು ಹಿಡಿಸಿತು. ಮಾನವನ ಕುಲದಲ್ಲಿ ಅವನ ಶಿಶು ಆಹಾರ ಸಂಪಾದನೆಯ ವಿಚಾರದಲ್ಲಿ ಆತ್ಮರಕ್ಷಣೆಯ ವಿಚಾರದಲ್ಲಿ ಸ್ವಂತ ಸಮಾಜವನ್ನು ಹೊಂದಿಕೊಂಡು ಜೀವನ ನಿರ್ವಹಿಸಲು ಸಮರ್ಥವಾಗಲು ಕನಿಷ್ಟ ಎಂಟು, ಹತ್ತು ವರ್ಷಗಳ ಪೋಷಣೆ ಮತ್ತು ರಕ್ಷಣೆ ಬೇಕಾಗುತ್ತದೆ. ಆ ಯಾವತ್ತು ಹೊಣೆ ಮಕ್ಕಳ ತಾಯಿ ತಂದೆಗಳಿಗೆ ಇರುತ್ತದೆ. ಶಾಸ್ತ್ರದ ಕಟ್ಟಿನಲ್ಲಿ ಸಿಲುಕಿ, ಕಡ್ಡಾಯದ ದಾಂಪತ್ಯ ನಡೆದುದರಿಂದಲೇ ಅಂಥ ಹೊಣೆಗಾರಿಕೆ ನಿರ್ವಹಣೆಗೊಳ್ಳುತ್ತದೆ ಎಂಬ ನಂಬಿಕೆ ಸಮನಲ್ಲ, ಗಂಡು, ಹೆಣ್ಣುಗಳನ್ನು ಸಮೀಪಕ್ಕೆ ತಂದು ಬೆಸೆಯುವುದರಲ್ಲಿ ಕಾಮ, ಪ್ರೇಮ, ಶೃಂಗಾರ, ಒಲುಮೆಗಳು ಕೆಲಸ ಮಾಡುವಂತೆಯೇ, ಮಕ್ಕಳ ಲಾಲನೆ, ಪಾಲನೆ, ಶಿಕ್ಷಣ ಮೊದಲಾದ ವಿಚಾರಗಳಲ್ಲೂ ಅವುಗಳ ಸುತ್ತ ಪ್ರೇಮಮಯ ವಾತಾವರಣ ಕಾಣಿಸುತ್ತ ಬರಬೇಕಾಗುತ್ತದೆ. ಇದನ್ನುಳಿಸಿಕೊಳ್ಳಲಾರದಂಥ ದಾಂಪತ್ಯಗಳಲ್ಲಿ ಮಕ್ಕಳು ವಿವಿಧ ರೀತಿಯ ಅಪಚಾರಗಳಿಗೆ, ಅನಾದರಕ್ಕೆ ಗುರಿಯಾಗಿ, ಅವರ ಮನಸ್ಸು ನೋಯುತ್ತದೆ. ಹಿರಿಯರನ್ನು ಕುರಿತ ಪ್ರತಿಭಟನೆ, ತಾತ್ಸಾರ ಹುಟ್ಟುತ್ತದೆ. ನಾಳೆ ದಿನ ಅವರು ಬಲಿತ ಮೇಲೆ ತಂದೆ ತಾಯಿಗಳ ವಿಚಾರದಲ್ಲೂ ತಮ್ಮ ಸಮಾಜದ ವಿಚಾರದಲ್ಲೂ ತಮಗಾದ ಅಪಚಾರಗಳ ದೆಸೆಯಿಂದಾಗಿ ದ್ವೇಷಿಗಳಾಗಲೂಬಹುದು. ಹೀಗಾದ ನೂರಾರು ಸಂಸಾರಗಳನ್ನು ನಮ್ಮ ಸುತ್ತಣ ಸಮಾಜದಲ್ಲಿ ಸದಾ ಗುರುತಿಸಬಹುದು.

ಮಾನವರಲ್ಲಿ ಗಂಡು ಹೆಣ್ಣುಗಳನ್ನು ಬೆಸೆಯುವ ನೈಸರ್ಗಿಕ ದೇಹದ ಹಂಬಲ ಮತ್ತು ಕಾಮಗಳು ಗರ್ಭೋತ್ಪತ್ತಿಯ ಮಟ್ಟಿಗೆ ಸಾಕಾದರೂ, ಅವರ ಮನಸ್ಸನ್ನು ಉದ್ದಕ್ಕೂ ಒಂದಾಗಿ ಸೆರೆ ಹಿಡಿಯಬಲ್ಲ ಪ್ರೇಮ ನಿಡುಗಾಲದ ಅವಧಿಯಾಗಬೇಕಾದರೆ ಗಂಡು ಹೆಣ್ಣುಗಳಲ್ಲಿನ ಪರಸ್ಪರ ಆಕರ್ಷಣೆ ಜೀವನದ ಉದ್ದಕ್ಕೂ ಪ್ರಯತ್ನದಿಂದ ಉಳಿಯಬೇಕು. ಒಬ್ಬರು ಇನ್ನೊಬ್ಬರ ಬಗ್ಗೆ ಸಹಾನುಭೂತಿ, ಪ್ರೇಮಗಳನ್ನು ತಳೆದು ಸದಾ ಕೂಡಿಕೊಂಡು ನಡೆಯುವುದಕ್ಕೂ ಒಬ್ಬರು ಇನ್ನೊಬ್ಬರ ಸಲುವಾದ ತ್ಯಾಗಕ್ಕೂ ಸಿದ್ಧರಾಗಬೇಕು. ದೇಹದ ಆಕರ್ಷಣೆಯನ್ನು ನಿಡುಗಾಲವೂ ಉಳಿಸಿಕೊಳ್ಳಬೇಕು. ಆ ವಿಷಯದಲ್ಲಿ

ಸಮಾಜದ ಅನ್ಯ ಗಂಡು ಹೆಣ್ಣುಗಳ ರೂಪ, ಯೌವನ, ಮೋಡಿ, ಶೃಂಗಾರಗಳು ಮದುವೆಯಾದ ಎಲ್ಲ ದಂಪತಿಗಳ ಪಾಲಿಗೆ ಹೊರಗಣ ಸ್ಪರ್ಧೆಯಾಗಿ ಉಳಿಯುತ್ತದೆ. ಹಿಂದಣ ಕಾಲದಲ್ಲಿ ಮನೆಯಿಂದ ಹೊರಬೀಳದ ಹೆಂಗಸರ ಬದುಕಿನಲ್ಲೂ ಒಮ್ಮೊಮ್ಮೆ ಈ ತೆರನ ಪರಾಕರ್ಷಣೆ ಕಾಣಿಸಿರಬಾರದೆಂದಿಲ್ಲ. ಸಮಾಜಜೀವಿಯು ಅದನ್ನು ಸದಾ ತಪ್ಪಿಸಿಕೊಂಡಿರಬಲ್ಲ ಎಂದು ಹೇಳುವುದು ವಾಸ್ತವಿಕ ಸಾಮಾಜಿಕ ಪರಿಸ್ಥಿತಿಯನ್ನು ಕಂಡೂ ಕಾಣದಂತೆ. ಈ ಕಾರಣದಿಂದಲೋ ಏನೋ, ಮಾನವನ ದೇಹ ಪ್ರಕೃತಿಗೂ ದ್ವಿಲಿಂಗಿಗಳಾದ ಅನ್ಯ ಪಶುಪ್ರಾಣಿಗಳ ದೇಹ ಪ್ರಕೃತಿಗೂ ಕಾಲಾಂತರದಲ್ಲಿ ಅಪಾರವಾದ ಒಂದು ವ್ಯತ್ಯಾಸ ಹುಟ್ಟಿಕೊಂಡಿದೆ. ಪ್ರಾಣಿಗಳಲ್ಲಿ ದೇಹ ಬಲಿತು ಋತುಗಾಲ (ಬೆದೆಗಾಲ) ಬಂದಾಗ ಮಾತ್ರವೇ ಶೃಂಗಾರದಿಂದ ಗಂಡು ಹೆಣ್ಣನ್ನ ಹೆಣ್ಣು ಗಂಡನ್ನೂ ಒಲಿಸುವ, ಮತ್ತು ಕೂಡುವ ಮೂಲಕ ಸಂತಾನವನ್ನು ಪಡೆಯುವ ವಿದ್ಯಮಾನವನ್ನು ನಾವು ಕಾಣುತ್ತೇವೆ. ಮನುಷ್ಯರಲ್ಲಿ ಹಾಗಿಲ್ಲ. ಅನಾದಿ ಮಾನವನಲ್ಲಿ ಇದ್ದಿರಬಹುದಾದ ಬೆದೆಗಾಲದ ಆಕರ್ಷಣೆಯೋ, ಪ್ರಭಾವವೋ, ಒತ್ತಡವೋ ಮಾಯವಾಗಿ ಗಂಡು ಹೆಣ್ಣುಗಳು ಪ್ರಾಪ್ತ ವಯಸ್ಕರಾದ ಮೇಲೆ ಎಂದು ಬೇಕಾದರಂದು ಜತೆಗೂಡಿ ದೇಹದ ಸುಖವನ್ನು ಪಡೆಯಬಹುದಾಗಿದೆ. ಋತುಗಾಲಕ್ಕೆ ಮಾತ್ರ ಭೋಗಸುಖ ಎಂಬ ಬಯಕೆ ತಪ್ಪಿ ಅನ್ಯಕಾಲದಲ್ಲೂ ಅಂತಹ ಆಕಾಂಕ್ಷೆ ಶ್ರದ್ಧಾಳುಗಳು ನಿಷ್ಠುರವಾಗಿ ನೋಡಬಹುದಾದ ಕಾಮಪ್ರವೃತ್ತಿ, ಮಾನವರಲ್ಲಿ ತುಂಬಿಕೊಳ್ಳದಿದ್ದರೆ ನಿಡುಗಾಲದ ದಾಂಪತ್ಯವಾಗಲಿ, ಗಂಡು ಹೆಣ್ಣಿನ ಸ್ನೇಹವಾಗಲಿ, ದೀರ್ಘಾವದಿಯ ಶಿಶು ಪೋಷಣೆಯ ಹೊಣೆಯಾಗಲಿ ಸಾಧ್ಯವಾಗುತ್ತಿರಲಿಲ್ಲ. ಉಳಿದ ಸಸ್ತನಿವರ್ಗದ ಪ್ರಾಣಿಗಳಲ್ಲಿ ಕಾಣಿಸದಿರುವ ದೈಹಿಕ ಗುಣ ಮಾನವರಲ್ಲಿ ಕಾಣಿಸಿಕೊಂಡುದು ತೀರ ಆಶ್ಚರ್ಯದ ಒಂದು ಸಂಗತಿಯೇ ಆಗಿದೆ.

ಈ ಎಲ್ಲ ಮಾತುಗಳು ಪ್ರಾಣಿವಿಜ್ಞಾನಕ್ಕೂ ಮತ್ತು ವರ್ತನಶಾಸ್ತ್ರ, ಮನಃಶಾಸಗಳಿಗೂ ಸಂಬಂಧಪಟ್ಟುದು. ಆದರೆ ಅವುಗಳ ತಿಳಿವಿಲ್ಲದೆ ಅಥವಾ ಅವುಗಳ ಅಸ್ತಿತ್ವವನ್ನೇ ನಿರಾಕರಿಸಿ ಗಂಡು ಹೆಣ್ಣುಗಳ ಲೈಂಗಿಕ ಜೀವನವನ್ನು ಒಂದೊಂದು ಸಮಾಜದ ರೂಢಿಯ, ನೀತಿ, ಅನೀತಿಯ ನಿಷ್ಠುರ ಅಳತೆಗೋಲಿಂದ ನಾವು ಅಳದಲ್ಲಿ ಮಾನವ ಪ್ರವೃತ್ತಿಯ ಒಂದು ಗಾಢವಾದ ಚಿತ್ತವೃತ್ತಿ ಮತ್ತು ಸ್ವಭಾವವನ್ನೇ ಮರೆತಂತಾದೀತು. ಈ ಕಾರಣಕ್ಕಾಗಿಯೇ ನಮ್ಮ ಧಾರ್ಮಿಕರು ಅನ್ಯಪ್ರಾಣಿಗಳಿಗಿಂತ ಭಿನ್ನವಾದ ಅಥವಾ ಉದ್ದಾಮನಾದ ಪ್ರಾಣಿಯೇ ಮನುಷ್ಯ ಎಂಬ ಸಿದ್ಧಾಂತಕ್ಕೆ ಬಂದು, ಅವನ ನಡವಳಿಕೆಯನ್ನು ಕೇವಲ ಶಿಕ್ಷಣದಿಂದ ರೂಪಿಸಬಹುದು ಎಂದು ತಿಳಿಯುವುದರಲ್ಲಿ ತಪ್ಪಿದ್ದಾರೆ ಎಂದು ಹೇಳಿದೆ.

ಹೆಣ್ಣುಗಳ ಸ್ನೇಹವನ್ನು ಬೆಸೆಯುವುದಕ್ಕೆ ಅವರ ಸಾಮೀಪ್ಯ ಕಾರಣವಾಗಬಹುದು. ಪರಸ್ಪರ ಕೇಳಿಕೆ, ಸಂಭಾಷಣೆ ಕಾರಣವಾಗಬಹುದು, ಬರಿಯ ದರ್ಶನದ ಆಕರ್ಷಣೆ ಕಾರಣವಾಗಬಹುದು. ದೇಹ ಸುಖಕ್ಕೆ ಸಂಬಂಧಪಡದ ಮನೋವಿಲಾಸಗಳಿಗೆ ಪುಟ ಕೊಡದ ಇತರ ತೆರನ ಯೋಗ್ಯತೆಗಳೂ ಕಾರಣವಾಗಬಹುದು. ಒಂದೇ ಊರಿನಲ್ಲಿ ನೆಲೆಸಿ, ಒಂದೇ ಊರಿನಲ್ಲಿ ಬಾಳುವ, ಸಮಾಜದ ಹಿರಿಯರ ಅಂಕೆಯಲ್ಲಿ ಜೀವಿಸುವ, ಸಮಾಜ ಇವತ್ತಿನದಲ್ಲ. ಸಮಾಜದ ಹಿರಿಯರ ಅಂಕೆ, ತಾಯ್ತಂದೆಯರ ಅಂಕೆ ಮೊದಲಿನಂತೆ ಇಂದು ಉಳಿದಿಲ್ಲ. ವಿದ್ಯಾಭ್ಯಾಸದ ದೆಸೆಯಿಂದ ಮಕ್ಕಳು ತಮ್ಮ ಹಿರಿಯರಿಂದ ದೂರ ಉಳಿಯುತ್ತಾರೆ. ವ್ಯಾಪಾರೋದ್ಯಮಗಳ ದೆಸೆಯಿಂದ ಸ್ವಂತ ಉರನ್ನು ಬಿಟ್ಟು ಯಾವಾವ ಊರಿನಲ್ಲೋ ವಾಸಿಸುತ್ತಾರೆ ವಿವಾಹವಾಗಿರಲಿ, ಆಗದಿರಲಿ ಗಂಡು ತನ್ನ ಹೆಣ್ಣಿನಿಂದ, ಹೆಣ್ಣು ಗಂಡಿನಿಂದ ಅಲ್ಪಕಾಲವೋ, ದೀರ್ಘಕಾಲವೋ ತನ್ನವರು ಸಮೀಪವಿಲ್ಲದೆ ಪರಿಸರದಲ್ಲಿ ಬಾಳುತ್ತಾರೆ. ಹಿಂದೆ ಹೀಗೆ ಬಾಳುತ್ತಿದ್ದವರ ಸಂಖ್ಯೆ ಕಡಿಮೆ ಇದ್ದಿತ್ತು. ಸೈನಿಕರಿಗೋ, ವ್ಯಾಪಾರಿಗಳಿಗೋ, ಕೆಲವೇ ವಿದ್ಯಾರ್ಥಿಗಳಿಗೋ ಅದು ಸೀಮಿತವಾಗಿತ್ತು. ಆಗಲೂ ಲೈಂಗಿಕ ಜೀವನ, ಹೆಣ್ಣುಗಂಡಿನ ಸಂಬಂಧವಾದ ಸಾಮಾಜಿಕ

ಕಟ್ಟುಕಟ್ಟಲೆಗಳನ್ನು ಮುರಿದು ವೇಶ್ಯಾವೃತ್ತಿಯಿಂದ ಮೈಮಾರಿಕೊಳ್ಳುವ ಸ್ತ್ರೀ ಸಮುದಾಯವನ್ನು ಅಂತಹ ಗಂಡುಗಳನ್ನು ಅವರನ್ನವಲಂಬಿಸಿದ ಪರಿಹಾರವನ್ನು ಹಿಂದಿನ ಸಮಾಜ ನಿರ್ಮಿಸಿತ್ತು. ಇಂದು ಬೆಳೆಯುತ್ತಿರುವ ನಗರಗಳು, ಕಾರ್ಖಾನೆಗಳು, ಉದ್ಯಮಗಳು, ಸಾರಿಗೆಗಳು– ಸಮಾಜದ ಎಟುಕಿನಿಂದ ದೂರ ನಿಂತು, ದಾಂಪತ್ಯದ ಹೊರಗಣ ನೂರಾರು ಲೈಂಗಿಕ ಸಂಬಂಧಗಳನ್ನು ಕ್ಲೇಷಗಳನ್ನು, ಈರ್ಷ್ಯಗಳನ್ನು ಬೆಳೆಯಿಸುತ್ತಿವೆ. ಕಾಮ ಪ್ರೇಮಗಳು ಮಾನವನ ಮನೋಭಾವಗಳ ಮೇಲೆ ಹೇರುವ ಒತ್ತಡ ತುಂಬ ಹೆಚ್ಚು ಮನಸ್ಸಿನ ವಿಲಾಸ ಎಷ್ಟು ಸೂಕ್ಷ್ಮವಾಗಬಲ್ಲುದೋ, ಅದು ಇಂಥ ಒತ್ತಡಗಳಿಗೆ ಗುರಿಯಾದಾಗ ತಳೆಯುವ ಸ್ನೇಹ, ಪ್ರೀತಿ, ಆಸೆ, ನಿರಾಶ ಅಷ್ಟೆ ಸೂಕ್ಷ್ಮವಾಗಿ ವಿವಿಧ ರೂಪದಲ್ಲಿ ವಿಸ್ತೃತಿ ಪಡೆಯುತ್ತದೆ. ಅಂಥ ಸಂದರ್ಭಗಳಲ್ಲಿ ಕಾಣಿಸಬಹುದಾದ ನಿರಾಶೆ, ಕೋಪ, ತಾಪ, ನಿಷ್ಟುರ ಮೊದಲಾದವು ಹಿಂಸಾಚರಣೆಗಳಲ್ಲಿ, ಅಮಾನುಷತೆಯಲ್ಲಿ ಕೊನೆಗೊಳ್ಳಬಹುದು. ಪರಸ್ಪರ ಸ್ಪರ್ಧೆ ಮತ್ತು ಅಸೂಯೆಗಳಿಂದ ಮನಸ್ಸಿನ ಉದ್ವಿಗ್ನತೆ ಉಕ್ಕಿ ಸ್ಫೋಟಗೊಳ್ಳಬಹುದು. ಪ್ರಣಯ ಸ್ಪರ್ಧೆಯಲ್ಲಿ ತನ್ನ ಯೋಗ್ಯತೆಯನ್ನು ಹೆಚ್ಚಿಸಿ ತೋರಿಸುವ ಪ್ರವೃತ್ತಿಗಳನ್ನು ಬೆಳೆಯಿಸಿ ಶೌರ್ಯ, ಸಾಹಸಗಳಲ್ಲಿ ಪರಿಣಮಿಸಬಹುದು.

ಹೀಗೆ, ಲೈಂಗಿಕ ಪ್ರವೃತ್ತಿಯು ತಳೆಯಬಹುದಾದ ರೂಪ ಪರಿವರ್ತನೆಗಳು ನಾನಾ ಮುಖಗಳಿಂದ ಕಾಣಿಸಿಕೊಳ್ಳುವುದು ಸಾಧ್ಯ. ತನ್ನ ಸಮಾಜವನ್ನು ಸಮೀಪದಿಂದ, ಸಹಾನುಭೂತಿಯಿಂದ ನಿರುಕಿಸಿ ನೋಡಬಲ್ಲವನ ಕಣ್ಣಿಗೆ ಇವು ಹೆಜ್ಜೆ ಹೆಜ್ಜೆಗೂ ಗೋಚರಿಸುತ್ತವೆ. ಸಂಪ್ರದಾಯ ಇರಿಸಿಕೊಂಡವರಲ್ಲೂ ಕಳೆದುಕೊಂಡವರಲ್ಲೂ ಲೈಂಗಿಕ ಸಮಸ್ಯೆಯ ವಿಭಿನ್ನ ಮುಖಗಳು ಕಾಣಿಸುತ್ತವೆ. ಅವರಲ್ಲಿಯೂ ಕಾಣಿಸುತ್ತವೆ, ಅವರಿಗೆ ಸಂಬಂಧಿಸಿದವರಲ್ಲಿಯೂ ಕಾಣಿಸುತ್ತವೆ. ಅವರ ಪೋಷಣೆಗೆ ಸಿಕ್ಕಿದ ಮಕ್ಕಳು ಮರಿಗಳಲ್ಲೂ ಅದು ಕಾಣಿಸಿಯೇ ಕಾಣಿಸುತ್ತದೆ. ಮಕ್ಕಳು ದೊಡ್ಡವರಾದಾಗ ಎಳೆತನದಲ್ಲಿ ಅವರ ಮನಸ್ಸಿನಲ್ಲಿ ಮೂಡಿದ ಪ್ರಭಾವಗಳು ಅವರ ವರ್ತನೆಗಳ ವಿಕೃತಿಗಳಲ್ಲೂ ಪರಿಣಮಿಸುತ್ತವೆ.

ಮೇಲಣ ಅಂಶಗಳನ್ನು ಪೂರ್ವ ತೀರ್ಮಾನವಿಲ್ಲದೆಯೇ ಪರಿಶೀಲಿಸಿದಿರಾದರೆ, ಮನುಷ್ಯ ಸಮಾಜದಲ್ಲಿ ಅದು ಯಾವುದೇ ದೇಶದಲ್ಲಿ ಕಾಲದಲ್ಲಿ ಲೈಂಗಿಕ ಸಮಸ್ಯೆಗಳಿಂದ ಉದ್ಭೂತವಾಗುವ ಜೀವನದ ನೂರಾರು ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳಲು ಎಷ್ಟೊಂದು ಕಷ್ಟವಿದೆ ಎಂಬುದರ ಅರಿವಾದೀತು, ಸಂಸ್ಕೃತಿ ದತ್ತವಾದ ನಮ್ಮ ನಮ್ಮ ನೀತಿ, ಅನೀತಿಗಳ ಕಲ್ಪನೆ ಅದಕ್ಕೆ ಸಾಕಾಗಲಾರದು. ಆ ಕಾರಣಕ್ಕಾಗಿಯೇ ಬರ್ಟ್ರಂಡ್ ರಸೆಲ್, ವಾಲ್ಟರ್ ಲಿಪಮನ್ನಂಥವರು ಇಂಗ್ಲಿಷಿನ 'ಮೋರಲ್' ಮತ್ತು 'ಇಮ್ಮೋರಲ್' ಪದಗಳ ವ್ಯಾಪ್ತಿ ಸಾಲದೆಂದು 'ಎಮೋರಲ್' ಎಂಬ ಮತ್ತೊಂದೇ ಪದವನ್ನು ಸೃಷ್ಟಿಸಿದರು. ಮೊದಲ ಎರಡು ಶಬ್ದಗಳಿಗೆ ನೀತಿ, ಅನೀತಿ ಎಂಬ ಶಬ್ದಗಳ ಬಳಕೆ ನಮ್ಮಲ್ಲಿದೆ. ಆದರೆ 'ಅನೀತಿ' ಎಂಬುದು 'ನೀತಿಯಲ್ಲದ್ದು' ಎಂದಷ್ಟೇ ಅರ್ಥವನ್ನು ಸೂಚಿಸುತ್ತದೆ. ಆದರೆ ವಾಡಿಕೆಯಿಂದ ಅದಕ್ಕೆ 'ಕೆಟ್ಟ ನಡವಳಿಕೆ' ಎಂಬ ಅರ್ಥವೂ ಬಂದಿರುತ್ತದೆ. ಆದುದರಿಂದ ನಾವು ಸಹ ಈ ವಿಷಯದಲ್ಲಿ 'ದುರ್ನೀತಿ' ಎಂಬ ಅರ್ಥ ಬಾರದಂತೆ 'ನಿರ್ನೀತಿ' ಎಂಬ ಇನ್ನೊಂದೇ ಪದವನ್ನು ಬಳಸಬೇಕಾಗುತ್ತದೋ ಏನೋ

ನನ್ನ ಹಲವಾರು ಕಾದಂಬರಿಗಳಲ್ಲಿ ಲೈಂಗಿಕತೆಯನ್ನು ಕುರಿತು ಅನೇಕ ಸಂದರ್ಭಗಳು ಮತ್ತು ಸನ್ನಿವೇಶಗಳು ಚಿತ್ರಿತವಾಗಿವೆ. ಅಂಥ ಪ್ರಸಂಗಗಳನ್ನು ಅನುಕಂಪದಿಂದ ನೋಡಿದ ನಾನು ವ್ಯಕ್ತಿಗಳ ಅಂಥ ನಡವಳಿಕೆಗೆ ಕಾರಣವಾದ ಹಿನ್ನೆಲೆಯನ್ನೂ ಸಾಕಷ್ಟು ಬಣ್ಣಿಸಿದ್ದೇನೆ. ಸಾಮಾನ್ಯ ಸಂಭೋಗ ಸಂಬಂಧವನ್ನೂ ಅಲ್ಲಿಯ ತನಕದ ಕಾಮಚೇಷ್ಟೆಗಳನ್ನು ಮಿತವರಿತ ಮಾತುಗಳಲ್ಲಿಯೇ ಹೇಳಿದ್ದೇನೆ. ಯಾವ ಮನೋವಿಲಾಸ ಕಿಡಿಯಂತೆ ಹುಟ್ಟಿ ದಳ್ಳುರಿಯಂತೆ ಬೀಸಬಹುದೋ ಅದನ್ನು ನಾನು ಓದುಗರ

ಚಪಲ ಹೆಚ್ಚಿಸುವುದಕ್ಕಾಗಿ ಸಾಹಿತ್ಯದ ವಸ್ತುವನ್ನಾಗಿ ಎಲ್ಲೂ ಮಾಡಿಕೊಂಡಿಲ್ಲ, ಯಾವ ತೆರನ ವ್ಯಾಪ್ತಿ ನನ್ನನ್ನು ನನ್ನ ಸುತ್ತಣ ಜಗತ್ತನ್ನು ಬಾಧಿ ಸುತ್ತಿದೆಯೋ, ಅದನ್ನು ಕುರಿತು ಮೂದಲಿಕೆಯ ಮಾತನ್ನೂ ನಾನು ಬಳಸಿಲ್ಲ. ಆದಷ್ಟು ಸಂಯಮದಿಂದ ಅವನ್ನೆಲ್ಲ ಚಿತ್ರಿಸಿದ್ದೇನೆ. ಅದರ ಸಾಕಷ್ಟು ಮುಖಗಳನ್ನೂ ಬಣ್ಣಿಸಿದ್ದೇನೆ. 'ಮೈ ಮನಗಳ ಸುಳಿಯಲ್ಲಿ' ಎಂಬ ನನ್ನ ಇತ್ತೀಚೆಗಿನ ಕಾದಂಬರಿಯೊಂದರಲ್ಲಿ ವೇಶ್ಯೆಯೊಬ್ಬಳ

ಮಾನಸಿಕ ಮತ್ತು ಲೈಂಗಿಕ ಜೀವನದಲ್ಲಿ ದೊರೆತ ಸ್ನೇಹ ಸಂಬಂಧವನ್ನು ತೋರಿಸಿಕೊಡುತ್ತ ಈ ಸಮಸ್ಯೆಯ ಹಲವಾರು ಮುಖಗಳನ್ನು ಸೂಚಿಸಿದ್ದೇನೆ. ವಾಸ್ತವವಾಗಿ ಅಲ್ಲಿ ಕಾಣಿಸುವ ಪ್ರತಿಕ್ರಿಯೆಗಳು, ಸನ್ನಿವೇಶಗಳು ವಿಭಿನ್ನ ವ್ಯಕ್ತಿಗಳಲ್ಲಿ ಕಂಡುಬರುವ ಅಂಶಗಳಾದರೂ ಅಲ್ಲಿನ ಮಂಜುಳೆಯು ವೇಶ್ಯೆಯೆಂಬ ನೆಪದಲ್ಲಿ ವಿಭಿನ್ನ ಪುರುಷರನ್ನು ಮನೋದೇಹಿಯಾದ ಅವಳ ಜೀವನದಲ್ಲಿ ಕಾಮ ಪ್ರೇಮಗಳ ವಿವಿಧ ರೂಪದ ಚಿತ್ರಗಳನ್ನೊದಗಿಸಿದ್ದೇನೆ. ವ್ಯಕ್ತಿಯಾಗಿಯೂ, ಮನೋವಿಲಾಸದ ಸೂಕ್ತತೆಯನ್ನು ಪಡೆಯಬಲ್ಲ ಒಟ್ಟಳು ಭಾವಜೀವಿಯಾಗಿಯೂ, ಮಂಜುಳಿಯಂಥವರು ಇದ್ದಾರೆಯೇ ಎಂದು ಓದುಗರು ಕೇಳಲೂಬಹುದು, ವೇಶ್ಯೆಯರ ಪರಂಪರೆಯಲ್ಲಿ ಆ ತೆರನ ಯಾವತ್ತು ಗುಣಗಳು ಒಬ್ಬರಲ್ಲೇ ಕಾಣಿಸುವುದು ಅಪೂರ್ವವೆನಿಸಬಹುದಾದರೂ, ಜೀವನಕ್ಕಾಗಿ ಆ ವೃತ್ತಿಯನ್ನು ತೊಡಗಿ, ತನ್ನ ನಾಯಕನ ಪ್ರೇಮಕ್ಕಾಗಿ ಹಂಬಲಿಸಿ ಸಾಮಾನ್ಯ ಗರತಿಯರು ತೋರಿಸದಂತಹ ಸದ್ಭಾವನೆ ಮತ್ತು ಸಂಬಂಧಗಳನ್ನು ಉಳಿಸಿಕೊಂಡವರನ್ನು ಕಂಡಿದ್ದೇನೆ. ಅದನ್ನು ಕುರಿತು ಕೇಳಿದ್ದೇನೆ. ಸಂಗೀತವನ್ನೋ, ನೃತ್ಯವನ್ನೋ ಅಭ್ಯಸಿಸಿ, ಅದು ಕೇವಲ ಪರರನ್ನು ಸೆಳೆಯುವ ಒಂದು ಬಲೆಯಲ್ಲ ; ಭಾವಜೀವನಕ್ಕೆ ಚೆಲುವನ್ನು ಕೊಡಬಲ್ಲ ಅಮೂಲ್ಯ ವಸ್ತು ಎಂದು ತಿಳಿದವರನ್ನೂ ಕಂಡಿದ್ದೇನೆ. ನೃತ್ಯ, ಗೀತ, ಚಿತ್ರ ಮೊದಲಾದ ಕಲೆಗಳ ವ್ಯಾಸಂಗ ಗಣಿಕೆಯರ ವ್ಯವಸಾಯಕ್ಕೂ, ವಿಟರನ್ನು ಸೆಳೆಯುವುದಕ್ಕೂ ಅನಿವಾರ್ಯವೆಂದು ತಿಳಿಸಿರುವ ಭಾರತೀಯ ಸಾಹಿತ್ಯ ನಮ್ಮ ನಾಡಿನಲ್ಲಿ ಧಾರಾಳವಾಗಿತ್ತು. ನನ್ನ ಕಾದಂಬರಿಯ ಅನೇಕ ವ್ಯಕ್ತಿಗಳು ಒಂಟಿ ಜೀವಿಗಳ ಜೀವನ ಚರಿತ್ರೆಯಾಗದೆ ವಿಭಿನ್ನ ವ್ಯಕ್ತಿಗಳಲ್ಲಿ ನಾನು ಕಂಡ ಗುಣಗಳನ್ನು ಒಂದು ವಿಷಯಕ್ಕೆ ಅನ್ವಯಿಸುವಂತೆ, ಒಂದು ಶೀಲಕ್ಕೆ ಒಪ್ಪುವಂತೆ ಸುಸಂಬದ್ಧವಾಗಿ ಮೇಳವಿಸಿ ತೋರಿಸಿದ ಸೃಷ್ಟಿಗಳಾಗಿವೆ. ಅದರಂತೆ 'ಮೈಮನಗಳ ಸುಳಿಯ ಮಂಜುಳೆಯ ಶೀಲ ಕಲಾಭಿಗ್ನತೆ ಭಾವುಕತೆಗಳಿಂದ ಕೂಡಿದ, ಆದರೆ ಕುಲದ ವ್ಯಾಪಾರವನ್ನು ನಡೆಸಿಕೊಂಡು ಹೋಗಲೇ ಬೇಕಾಗಿದ್ದ ಒಂದು ಸ್ಪಷ್ಟ ಪಾತ್ರ ಎಂದು ತಿಳಿಯುವಲ್ಲಿ ತಪ್ಪೇನಿಲ್ಲ

ಜೀವನದ ಕಡೆಗೆ ನನಗಿರುವ ಗಂಭೀರ ನಿಷ್ಠೆ,ಅದನು ತಿಳಿದು ಅರ್ಥಮಾಡಿಕೊಳ್ಳಬೇಕೆಂಬ ಅಪೇಕ್ಷೆ, ಮಾನವನ ವರ್ತನೆ ಮತ್ತು ಮನೋಧರ್ಮಗಳನ್ನು ಕುರಿತು ಬರೆದ ಮನಃಶಾಸ್ತ್ರವನ್ನು ಸಾಕಷ್ಟು ಓದಿ ತಿಳಿಯುವಂತೆ ಮಾಡಿದೆ. ಅದೇ ರೀತಿಯಲ್ಲಿ ಮಾನವನ ವಿಕಾಸ ಪೂರ್ವದ ವಿವಿಧ ಪ್ರಾಣಿಗಳು, ಪಕ್ಷಿಗಳ, ಮತ್ತು ಕ್ರಿಮಿಕೀಟಗಳ ವರ್ತನೆಗಳನ್ನು, ಮನೋಧರ್ಮವನ್ನು ಪ್ರಯೋಗಗಳಿಂದ ಮತ್ತು ಪರಿಶೀಲನೆಗಳಿಂದ ಬರೆದ ಹಲವಾರು ವೈಜ್ಞಾನಿಕ ಗ್ರಂಥಗಳನ್ನೂ ಓದುವಂತೆ ಒತ್ತಾಯಿಸಿದೆ. ಇವುಗಳಲ್ಲಿ ಜೀವಿಗಳ ಲೈಂಗಿಕ ಸಂಬಂಧವನ್ನು ಕುರಿತಾದ ಅನ್ವೇಷಣೆಗಳೂ ಸೇರಿವೆ, ನನ್ನ ಸಾಹಿತ್ಯಕ್ಕೆ ಈ ಎಲ್ಲ ಓದುಗಾರಿಕೆ–ನನ್ನ ಅನುಭವ, ಊಹೆ, ತರ್ಕ ಸರಣಿಗಳ ಜತೆಗೂಡಿಕೊಂಡು ಜೀವನದ ಕಡೆಗೆ ನಾನಿರಿಸಿಕೊಂಡಿದ್ದ ನೋಟವನ್ನು ದೃಷ್ಟಿಯನ್ನು ಬೇಕಷ್ಟು ತಿದ್ದಿವೆ.

ವಿಶ್ವವೆಂದರೆ ಭೂಮಿ, ಭೂಮಿಯನ್ನು ಸುತ್ತುವರಿಯುವ ಸೂರ್ಯಾದಿ: ಗ್ರಹ ನಕ್ಷತ್ರಗಳು, ಆ ಭೂಮಿ ಜನರ ಬಹುಮತದಿಂದ ಚಪ್ಪಟೆಯಾದ ನೆಲ ಎಂದು ತಿಳಿಯುತ್ತಿದ್ದ ಕಾಲವೊಂದಿತ್ತು. ವಿಜ್ಞಾನ ಕ್ಷೇತ್ರದ

ವಿವಿಧ ಅನ್ವೇಷಣೆಗಳು, ಇಂಥ ಅನೇಕ ಭ್ರಮಗಳನ್ನು ಹೋಗಲಾಡಿಸಿವೆ. ಅದರಿಂದ ಅನೇಕ ಪೌರಾಣಿಕ ನೈತಿಕ ಕಲ್ಪನೆಗಳೂ ಬದಲಾಗಬೇಕಾಯಿತು. ಹೀಗಿರುತ್ತಾ ಜೀವನದ ಸಮಸ್ಯೆಗಳನ್ನು ತಿಳಿಯಬೇಕೆಂಬ ಹಂಬಲವುಳ್ಳ ಸಾಹಿತಿ, ತತ್ಸಂಬಂಧವಾದ ವಿಷಯಗಳ ಮೇಲೆ ಬೆಳಕನ್ನು ಕೆಡೆಯಬಲ್ಲ: ಆಧುನಿಕ ವೈಜ್ಞಾನಿಕ ಸಂಶೋಧನೆಗಳ ಕಡೆಗೆ ಕುರುಡಾಗಬಾರದು. ನಾವು ಇತ್ತೀಚೆಗೆ ಚಲಾವಣೆಗೆ ತಂದ 'ಆಧುನಿಕ ಪ್ರಜ್ಞೆ' ಎಂಬ ಮಾತು ಸಾರ್ಥಕವಾಗಬೇಕಾದರೆ, ಆಧುನಿಕ ಮನೋದೇಹ ವಿಜ್ಞಾನಗಳ ತಕ್ಕಷ್ಟು ಪರಿಚಯ ಸಾಹಿತಿಗೆ ಇಲ್ಲದೆ ಹೋದರೆ ಅವನ ಆಧುನಿಕ ಪ್ರಜ್ಞೆ' ಎಂಬ ಮಾತು ಬರಿಯ ಬಡಬಡಿಕೆಯಾಗಿಯೇ ಉಳಿದೀತು. ಯಾರ ಮೇಲೆ ಆಧುನಿಕ ಪರಿಸರದ ಪ್ರಭಾವ ಬೀಳುತ್ತದೋ ಆ ಮಾನವ ಪ್ರಾಣಿಯ ಮೂಲಗುಣ ಎಲ್ಲಿಂದ ಬಂದಿತು, ಹೇಗಿದೆ ಎಂಬುದರ ಕಲ್ಪನೆ ನಮಗೆ ಇದ್ದೇ ಇರಬೇಕಾಗುತ್ತದೆ.

*****

ತಕರಾರಿನ ಕೊನೆಗೆ

–ಮೊಗಳ್ಳಿ ಗಣೇಶ್

ಸಾಹಿತ್ಯವನ್ನು ಹೀಗೆಲ್ಲ ತಕರಾರಿಗೀಡು ಮಾಡಬಹುದೇ? ನಂಬಿಕೆಗಳನ್ನು ಭಗ್ನ ಪಡಿಸುವುದು ಸರಿಯೆ? ಮಾನ್ಯರಾದವರನ್ನು ಅವಮಾನಿಸುವಂತೆ ವಿಮರ್ಶಿಸುವುದು ತರವೆ? ಸಾಹಿತ್ಯದ ಮಾನದಂಡಗಳನ್ನು ಬಿಟ್ಟು ಸಾಹಿತ್ಯೇತರ ಪರಿಕರಗಳಿಂದ ಸಾಹಿತ್ಯವನ್ನು ಪರಿಶೀಲಿಸುವುದು ನ್ಯಾಯವೇ? ಜಾತಿ ಧರ್ಮ ಮತ ಭೇದಗಳ ಒಡಕಿನಿಂದ ಸಾಹಿತ್ಯ ಪರಂಪರೆಗಳನ್ನು ವಿಶ್ಲೇಷಿಸುವುದರಿಂದ ಆಗುವ ಲಾಭವೇನು? ಮಹತ್ವದ ಲೇಖಕರನ್ನೆ ಹೀಗೆ ನಿರಾಕರಿಸಿ ದಂಡಿಸಿದರೆ ಯುವ ಪೀಳಿಗೆಗೆ ಉಳಿಯುಹುದಾದರೂ ಏನು? ಭವಿಷ್ಯಕ್ಕೆ ಇಂತಹ ಭಗ್ನಶೀಲತೆಯಿಂದ ಅಪಾಯ ಇಲ್ಲವೆ?ಇಂತಹ ನೂರೆಂಟು ಪ್ರಶ್ನೆಗಳನ್ನು ಈ ಬರಹಗಳ ವೇಳೆ ಸ್ವತಃ ನಾನೇ ಕೇಳಿಕೊಂಡು ಖಚಿತ ಉತ್ತರ ಕಾಣದೆ ಪರಿತಪಿಸಿದ್ದೇನೆ. ಆದರೂ ಈ ಬರಹಗಳ ಆಳದಲ್ಲಿ ಹೀಗೆಯೇ ಪರಂಪರೆಯ ಜೊತೆ ಮುಖಾಮುಖಿ ಆಗಲೇಬೇಕೆಂಬ ಉತ್ಕಟ ಪ್ರತಿರೋಧ ಭಾವ ಮಾತ್ರ ನಿರಂತರವಾಗಿ ನನ್ನನ್ನು ಒತ್ತಾಯಿಸಿದೆ. ಹೀಗೆ ಅಭಿವ್ಯಕ್ತಿಯ ಬೌಧಿಕ ಮುಷ್ಠಿ ಕದನದಲ್ಲಿ ಅನೇಕ ಬಾರಿ ಗುರಿ ತಪ್ಪಿ ಏಟು ತಿಂದು ಪ್ರತಿದಾಳಿ ಹೂಡಿ ಸೃಜನಶೀಲವಾದ ಯಾವುದೂ ವಿಶ್ವಾಸವನ್ನು ಉಸಿರಾಡಿದ್ದೇನೆ.ಆಳಾದಲ್ಲಿ ಸಾಹಿತ್ಯ ಸೃಷ್ಠಿ ಕೂಡ ಭಾವನೆಗಳ ಮಾಂತ್ರಿಕತೆಯಲ್ಲಿ ಮನುಷ್ಯರನ್ನು ಹಿಂಸಿಸಬಲ್ಲದು ಎಂಬ ಪ್ಲೇಟೋನ ಅನುಮಾನ ಈಗಲೂ ಬಲವಾಗಿ ನನ್ನ ಮನಸ್ಸಿನಲ್ಲಿದೆ. ಸಾಹಿತ್ಯದ ಮಾನವೀಯ ಸಂಬಂಧಗಳು ಎಲ್ಲರಲ್ಲೂ ಒಂದೇ ಬಗೆಯಲ್ಲಿರುವುದಿಲ್ಲ. ಕೊನೆಗೂ ಸಾಹಿತ್ಯ ಕೃತಿಯಲ್ಲಿ ರೂಪಿತವಾಗುವ ಆದರ್ಶ ಸಮಾಜ ವಾಸ್ತವವೇ ಆಗಿರುತ್ತದೆ ಎಂಬುದಕ್ಕೆ ಆಧಾರವಿಲ್ಲ. ಕ್ರಾಂತಿಗಾಗಿ ಆದರ್ಶ ಕಾದಂಬರಿಯನ್ನು ಗಾರ್ಕಿ 'ತಾಯಿ' ಕಾದಂಬರಿಯನ್ನು ಬರೆದಂತೆ ರೂಪಿಸುವುದು ಸುಲಭವೇ, ಆದರೆ ಅಂತಹ ಕನಸುಗಳೀಗೂ ವಾಸ್ತವದ ವೈರುಧ್ಯಗಳೀಗೂ ಯಾವತ್ತೂ ತಕರಾರುಗಳು ಸೃಷ್ಠಿ ಆಗುತ್ತಲೇ ಇರುತ್ತದೆ.

ಭಾರತೀಯ ಸಮಾಜದ ಜಾತಿ ಧರ್ಮಗಳಂತು ಸೃಜನಶೀಲ ಭಾವಕೋಶವನ್ನೆ ನಿರ್ಧರಿಸುತ್ತವೆ ಎಂಬುದು ಕೇವಲ ಆರೋಪವೂ ಅಲ್ಲ ಬೌದ್ಧಿಕ ಊಹೆಯೂ ಅಲ್ಲ.ಹಿಂದೂ ಧರ್ಮ ಮತ್ತು ತತ್ವ ಶಾಸ್ತ್ರ ಇವೆರಡನ್ನೆ ಹೋಲಿಸಿ ನೋಡಿದರೂ ಇವು ಒಂದನ್ನೊಂದು ಅವಲಂಬಿತ ಜ್ಞಾನಗಳು ಎಂಬುದು ತಿಳಿಯುತ್ತದೆ. ಹಾಗೆಯೇ ಹಿಂದೂ ಧರ್ಮ ಎಲ್ಲೆಲ್ಲಿಯ ತನಕ ತನ್ನ ವ್ಯಾಪ್ತಿಯನ್ನು ಚಾಚಿದೆ ಎಂಬುದನ್ನು ಸುಮ್ಮನೆ ಅಂದಾಜು ಮಾಡಿಕೊಂಡರೂ ಎಲ್ಲ ಕಡೆ ಅದರ ಪ್ರಭಾವ ಕಾಣುತ್ತದೆ. ಭಾಷೆಯ ಒಟ್ಟು ಅರ್ಥರಚನಾ ಕ್ರಮವೇ ಅನೇಕ ಬಾರಿ ಧರ್ಮದ ಅರ್ಥಕೋಶಕ್ಕೆ ಪೂರಕವಾಗಿರುವಂತೆ ಆಗಿದ್ದಿದೆ. ಇನ್ನು ಸಮಾಜಗಳ ಮೇಲೆ ಧರ್ಮ ಮತ್ತು ಭಾಷೆಗಳ ಹಿಡಿತವನ್ನು ಗಮನಿಸಿ. ಅಭಿವ್ಯಕ್ತಿಯ ಎಲ್ಲ ಹಂತಗಳಲ್ಲು ಹಿಂದೂ ಜಾತಿ ವ್ಯವಸ್ಥೆಯ ತನ್ನ ನಾಲಿಗೆಯನ್ನು ಚಾಚುತ್ತಲೇ ಇರುತ್ತದೆ. ಹೀಗಾಗಿ ಸಾಹಿತ್ಯ ಸೃಷ್ಠಿಯ ಆಳದಲ್ಲಿ ಮತಧರ್ಮಗಳ ಗುಣ ಇದ್ದೇ ಇರುತ್ತದೆ. ಜಾತಿ ಧರ್ಮ ಮತ ಭೇದಗಳು ಬೇಡ ಎಂದರೂ ಬಂದು ಸೇರಿಕೊಂಡು ಸೃಜನಶೀಲ ಪಾತಳಿಯನ್ನು ನಿಯಂತ್ರಿಸುವುದು. ಇದು ಎಷ್ಟರ ಮಟ್ಟಿಗೆ ಹಾವಳಿಕೋರತನದ್ದಾಗಿರುತ್ತದೆ ಎಂದರೆ ಸ್ವತಃ ಹಿಂದೂ ದೈವಾಚರಣೆಗಳಲ್ಲೆ ಹತ್ತಾರು ವೈರುಧ್ಯಗಳ ರೂಪಿಸಿ ಅದಕ್ಕೆ ತಕ್ಕಂತೆ ಧಾರ್ಮಿಕ ಸಾಹಿತ್ಯವನ್ನು ಸೃಷ್ಠಿಸಿದೆ, ವೇದಗಳ ಕಾಲದ ನಂತರದಲ್ಲಿ ಸೃಷ್ಠಿಯಾದ ಪುರಾಣಗಳ ಪ್ರಾಮಾಣವನ್ನು ಗಮನಿಸಿದರೆ; ಹೇಗೆ ದೈವಗಳ ಪೈಪೋಟಿ ಪುರಾಣಗಳ ಹಾವಳಿತನದಲ್ಲಿ ವ್ಯಾಪಿಸಿ ಆಧ್ಯಾತ್ಮದ ದಾರಿಯನ್ನೆ ಮುಟ್ಟಿಬಿಟ್ಟಿವೆ ಎಂಬುದು ತಿಳಿಯುತ್ತದೆ. ಪುರಾಣಾಶ್ರಯದ

ಮರುಸೃಷ್ಟಿಗಳಂತು ಪ್ರಾದೇಶಿಕ ಭಾಷೆಗಳನ್ನೆ ಕಿರಿದಾಗಿಸುವಂತೆ ಆವರಿಸಿದ್ದಿದೆ. ಇವನ್ನೆಲ್ಲ ಸಾಹಿತ್ಯದ ಆಚಿನ ಗತಕಾಲದ ಸಂಗತಿ ಎಂದು ಮರೆಯಲಾಗದು. ಇವುಗಳ ಪ್ರಭಾವ ಇವತ್ತಿಗೂ ಇದೆ.

ಜೈವಿಕ ಸ್ವಭಾವಗಳು ಸೃಜನಶೀಲತೆಯಲ್ಲಿ ಪ್ರತಿಬಿಂಬಿತವಾಗುತ್ತಿವೆ. ಹಾಗೆಯೇ ಜಾತಿ ಧರ್ಮ ಲಿಂಗ ಭೇದಗಳ ನಂಬಿಕೆಗಳು ಕೂಡ ಅನುವಂಶಿಕವಾಗಿ ಸಾಗಿ ಬಂದು ಅನಂತರ ಅವರವರ ಜಾತಿಗಳ ಅನುಭವಗಳಲ್ಲಿ ಮತ್ತಷ್ಟು ಗಟ್ಟಿಯಾಗಿ ಪೂರ್ವಗ್ರಹಗಳನ್ನು ಬೆಳಸಿಕೊಳ್ಳುತ್ತವೆ. ಹಾಗೆಯೆ ಒತ್ತಡದಲ್ಲಿ ರೂಪಾಂತರಗೊಂಡು ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತವೆ. ಕೆಲಹೊಮ್ಮೆ ಭಗ್ನಪಡಿಸಿಕೊಳ್ಳಲು ಮುಂದಾಗುತ್ತವೆ. ಇವೆಲ್ಲವೂ ಏಕಕಾಲಕ್ಕೆ ಸಾಗುತ್ತಿರುವಾಗ ಸಾಹಿತ್ಯ ಸೃಷ್ಟಿಯ ವಿರಾಟ್ ಪ್ರತಿಕ್ರಿಯೆಯಲ್ಲಿ ತಕರಾರುಗಳನ್ನು ಒಪ್ಪಿಕೊಳ್ಳುವುದು ಕೂಡ ಅವುಗಳ ಭಾಗವಾಗಿಯೆ. ತಕರಾರುಗಳು ಯಾವ ಕಾಲದಲ್ಲೂ ಇದ್ದವುಗಳೇ. ಲೌಖಿಕದ ನ್ಯಾಯ ಹಾಗು ಅಲೌಖಿಕದ ನ್ಯಾಯ ಇವೆರಡೂ ಕೂಡ ವೈರುಧ್ಯಗಳನ್ನು ಸೃಜನಶೀಲ ಮನಸ್ಸಿನಲ್ಲಿ ಉಂಟುಮಾಡಬಲ್ಲವು. ಈ ದಾರಿಯಲ್ಲಿ ಸಾಗುವಾಗ ವಿಮರ್ಶಾ ಪ್ರಜ್ಞೆಯ ಖಚಿತವಲ್ಲದ ಅನೇಕ ಬಗೆಯ ದೂರುಗಳನ್ನು ದಾಖಲಿಸುತ್ತದೆ. ತಕ್ಕ ತರ್ಕ ಸಾಕ್ಷಿಗಳಿಲ್ಲದಿದ್ದರೂ ವಿವರಣೆ ನೀಡಲಾಗದ ದಾಟಿಯಲ್ಲಿ ಹೊಳಹಿನ ಬಲದಲ್ಲಿ ಒಪ್ಪಿತ ಮೌಲ್ಯಗಳನ್ನು ಭಗ್ನ ಪಡಿಸುತ್ತಿರುತ್ತದೆ. ತಾರ್ಕಿಕ ಮನಸ್ಸು ಸಾಕ್ಷಿಗಳನ್ನು ಆಧರಿಸಿದ್ದರೆ ತರ್ಕಾತೀತ ಭಾವವು ಮನುಷ್ಯರ ಗೊಂದಲ ಅವರ ಒಳಗಿನ ವೈರುಧ್ಯಗಳನ್ನು ಹಿಂಬಾಲಿಸಿ ಅರ್ಥದ ಬೇರೊಂದು ಕ್ರಮವನ್ನು ರೂಢಿಸುತ್ತಿರುತ್ತದೆ.

ತತ್ವಶಾಸ್ತ್ರೀಯವಾದ ಭಾವನೆಗಳು ಕೂಡ ಹೀಗೆಯೆ, ಇರುವ ಎಲ್ಲ ನಂಬಿಕೆಗಳ ಆಚೆಗೆ ತುಡಿವ ಭಾವದಲ್ಲಿ ಪರಂಪರೆಯನ್ನು ವಿಸ್ತರಿಸಲು ಅವಕಾಶವಿರುತ್ತದೆ. ಸಾಹಿತ್ಯ ವಿಮರ್ಶೆಯ ಕ್ರಮಗಳು ಬೆಳೆದಿರುವುದೇ ಹೀಗೆ. ಕನ್ನಡ ಸಾಹಿತ್ಯದ ಪೂರ್ವಗ್ರಹಗಳನ್ನು ಬಯಲು ಮಾಡುವುದರಿಂದ ಭಾವನಾತ್ಮಕ ಚಹರೆಗಳಿಗೆ ನೋವಾಗುವುದು ಸಹಜ. ಕಾಲ ಇಂತಹ ಸಂದರ್ಭಗಳನ್ನು ಮೀರುವ ಸಲುವಾಗಿಯೇ ಭಾವ ಭಗ್ನತೆಯನ್ನೂ ರೂಪಿಸಿಕೊಳ್ಳುತ್ತದೆ. ಸಂರಚನೆಯೊಂದನ್ನು ಮುರಿವ ಪ್ರಕ್ರಿಯೆ ಕೂಡ ಭಿನ್ನ ರಚನೆಯ ಇನ್ನೊಂದು ಆಯಾಮವೇ ಆಗಿರುತ್ತದೆ. ನವಸಾಹಿತ್ಯ ಸಂವೇದನೆಯ ಬಹಳ ಕಲಾತ್ಮಕವಾಗಿಯೇ ಮುರಿವ ಕ್ರಿಯೆಯನ್ನು ಮಾಡಿದೆ.ಎಲ್ಲ ಭಾಷೆಗಳ ಸಾಹಿತ್ಯ ಪಂಥಗಳ ಪರಿ ಇದು. ದಲಿತ ಬಂಡಾಯದ ವಿಮರ್ಶಾ ಧೋರಣೆಗಳು ಕೂಡ ಹೀಗಾಗಿಯೆ ಒಪ್ಪಿತ ಮಾನದಂಡಗಳ ಆಚೆಗಿನ ಸಾಮಾಜಿಕ ನ್ಯಾಯದ ಆಶಯಗಳಿಂದ ಸಾಹಿತ್ಯದ ನಂಬಿಕೆಗಳನ್ನು ಪ್ರಶ್ನಿಸಿದ್ದುದು. ಇಲ್ಲಿ ಮಂಡಿತವಾದ ಎಲ್ಲ ತಕರಾರುಗಳು ಸಂಪೂರ್ಣವೆಂದು ಭಾವಿಸಿಲ್ಲ. ಭಾರತೀಯ ಕಾವ್ಯ ಮೀಮಾಂಸೆಯ ಯಾವ ಮಾನದಂಡಗಳನ್ನು ನಾನಿಲ್ಲಿ ಅನ್ವಯಿಸಲಿಲ್ಲ. ಹಾಗೆಯೆ ಪಶ್ಚಿಮದ ಕಾವ್ಯಾರ್ಥ ಚಿಂತನೆಯನ್ನೂ ಅನುಸರಿಸಿಲ್ಲ. ಪೂರ್ವ ಪಶ್ಚಿಮಗಳ ಎರಡೂ ಮಾದರಿಯ ವಿಮರ್ಶಾ ಪ್ರಜ್ಞೆಗಳು ಒಂದೂಂದು ಸಾಧ್ಯತೆ ನಿಜ. ಆದರೆ ಇಲ್ಲಿ ವಿಶೇಷವಾಗಿ ನಾನು ಮಾನವಿಕ ವಿಜ್ಞಾನಗಳ ಮಾನದಂಡಗಳನ್ನು ಅಳವಡಿಸಿಕೊಂಡು ಕನ್ನಡದ ಮುಖ್ಯ ಲೇಖಕರ ಜೊತೆಗೆ ಮುಖಾಮುಖಿ ಆಗಿದ್ದೇನೆ. ಹಾಗಾಗಿಯೇ ಇಲ್ಲೆಲ್ಲೂ ಕೃತಿನಿಷ್ಠ ವಿಮರ್ಶೆಗೆ ತೊಡಗಿಲ್ಲ. ಅದು ಸಾಹಿತ್ಯದ ಕ್ರಮ. ಜೊತೆಗೆ ಲೇಖಕ ಕೇಂದ್ರಿತ ವಿಮರ್ಶೆಯನ್ನೂ ಮಾಡಿಲ್ಲ.ಮುಖ್ಯವಾಗಿ ಸಾಹಿತ್ಯದ ಮನೋಧರ್ಮವನ್ನು ಆಧರಿಸಿ ಗ್ರಹಿಕೆಗೆ ಒದಗಿ ಬಂದ ಸಂಗತಿಗಳನ್ನು ನಿರೂಪಿಸಿರುವೆನು. ಈ ನಿರೂಪಣೆಯಾದರೂ ಸೃಜನಶೀಲ ಧಾರೆಯನ್ನೆ ಅನುಸರಿಸಿದ್ದುದಾಗಿದೆ. ಲೇಖಕರ ಸೃಜನಶೀಲ ಅಭಿವ್ಯಕ್ತಿಯನ್ನು ಸೃಜನಶೀಲ ಗ್ರಹಿಕೆಯಿಂದಲೇ ಭಾವಿಸಿದರೆ ಬರವಣಿಗೆಯ ಬೆನ್ನ ಹಿಂದಿರುವ ಸಂಗತಿಗಳನ್ನು ಗುರುತಿಸಲು ಸುಲಭವಾಗುತ್ತದೆ. ಇದು ಮನೋವಿಶ್ಲೇಷಣಾತ್ಮಕ ಗ್ರಹಿಕೆಯ ವಿಧಾನ.ಹೀಗಾಗಿಯೆ ಇಡೀ ಬರಹಗಳ ಉದ್ದಕ್ಕೂ ಮನೋವಿಶ್ಲೇಷಣೆಯ ಕ್ರಮವನ್ನೂ ಮಾನವ

ಶಾಸ್ತ್ರಜ್ಞರ ಸಂಸ್ಕೃತಿ ನಿರ್ವಚನ ಕ್ರಮವನ್ನೂ ಮತ್ತು ಸಮಾಜ ಶಾಸ್ತ್ರದ ಸಾಮಾಜಿಕ ವ್ಯವಸ್ಥೆಯ ಕ್ರಮವನ್ನೂ ಅಂತೆಯೇ ಚರಿತ್ರೆಯ ಸುಪ್ತಪ್ರಜ್ಞೆಯ ವಿಶ್ಲೇಷಣಾ ಕ್ರಮವನ್ನು ಒಟ್ಟಾಗಿ ಅನ್ವಯಿಸಿಕೊಂಡು ಕನ್ನಡ ಸಾಹಿತ್ಯವನ್ನು ಪರಿಶೀಲಿಸುವ ಪ್ರಯತ್ನ ಮಾಡಿರುವೆ. ಈ ಬಗೆಯ ಗ್ರಹಿಕಾ ಕ್ರಮದಲ್ಲಿ ಉಲ್ಲೇಖಗಳಿಗೆ ಹೆಚ್ಚಿನ ಅವಕಾಶವಿಲ್ಲ. ಉಲ್ಲೇಖದ ಕ್ರಮ ಸೃಜನಶೀಲ ಗ್ರಹಿಕೆಗೆ ಅಡ್ಡಬರುವಂತಿರುತ್ತದೆ. ಆದ್ದರಿಂದಲೇ ಸಾಹಿತ್ಯ ಕೃತಿಯ ಹಾಗು ಲೇಖಕನ ಒಟ್ಟು ಸಾಹಿತ್ಯದ ಆಶಯ ಹಾಗು ಅದರ ಹಿಂದಿನ ತಾತ್ವಿಕತೆಯನ್ನು ಬಯಲು ಮಾಡುವುದೇ ಇಲ್ಲಿ ಮುಖ್ಯ ಕಾಳಜಿಯಾಗಿದೆ.

ಬೇರೆ ಬೇರೆ ಜ್ಞಾನಶಾಖೆಗಳ ಬೌದ್ಧಿಕ ಮಾನದಂಡಗಳನ್ನು ಸ್ಥಾನಂತರಿಸುವುದು ಅನ್ವಯಿಕತೆ. ಮಾನವರ ಜ್ಞಾನ ಪರಂಪರೆಗಳೆಲ್ಲವಕ್ಕೂ ಆಂತರಿಕ ಸಂಬಂಧವಿರುತ್ತದೆ.ಯಾವ ಸಂಗತಿಯೂ ಒಂದರಿಂದ ಮತ್ತೊಂದಕ್ಕೆ ಅನ್ಯವಲ್ಲ. ವಿಜ್ಞಾನದ ಗ್ರಹಿಕೆಯಲ್ಲೂ ತತ್ವಶಾಸ್ತ್ರದ ತಿಳುವಳಿಕೆಯಲ್ಲೂ ಈ ನಂಬಿಕೆ ಬಲವಾಗಿದೆ.. ಸಾಹಿತ್ಯವನ್ನು ಯಾವುದೇ ಜ್ಞಾನ ಶಿಸ್ತಿಗೂ ಅನ್ವಯಿಸಬಹುದು. ಆ ಮೂಲಕವೇ ಅರಿವು ವಿಕಾಸವಾಗುವುದು. ಕನ್ನಡ ಸಾಹಿತ್ಯದ ಅನುಭವದಲ್ಲಿ ಇದು ನಿಜವಾಗಿದ್ದು ವರ್ತಮಾನದ ಹಲವಾರು ಜ್ಞಾನಶಾಖೆಗಳು ಸಾಹಿತ್ಯದ ಒಳಗೆ ಬಂದು ಸೇರಿಕೊಳ್ಳುತ್ತವೆ. ಸಾಹಿತ್ಯದ ಸಂವೇದನೆಯ ಎಲ್ಲವನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳಬಲ್ಲುದೆಂದು ಒಪ್ಪುವುದಾದರೆ ಉಳಿದ ಮಾನವಿಕ ಶಾಸ್ತ್ರಗಳ ವಿವೇಕವನ್ನು ಅದರಲ್ಲಿ ಅನ್ವಯಿಸಿಕೊಳ್ಳುವುದು ತಪ್ಪಲ್ಲ. ಸಾಹಿತ್ಯ ಮೀಮಾಂಸೆಯಲ್ಲೇ ಇಂತಹ ಅನ್ವಯವಿದೆ. ಭಾರತೀಯ ಕಾವ್ಯಮೀಮಾಂಸೆಯು ಹಾಗೆ ನೋಡಿದರೆ ಶುದ್ಧವಾದ ಸಾಹಿತ್ಯದ ತರ್ಕವೇ ಅಲ್ಲ ಧರ್ಮದ ಹಂಗಿನಿಂಡ ಸಾಹಿತ್ಯ ಸೃಷ್ಟಿಯ ಕ್ರಮವನ್ನು ತಿಳಿಯುವುದಕ್ಕಿಂತ ನಮ್ಮ ಕಾಲದ ಹತ್ತಾರು ಸಂಗತಿಗಳಿಂದ ಸಾಹಿತ್ಯ ಮೀಮಾಂಸೆಯನ್ನು ಮಾಡುವುದು ಹೆಚ್ಚು ಉಪಯುಕ್ತವಾದುದು. ಕೇವಲ ಸಾಹಿತ್ಯದ ತರ್ಕದಿಂದ ಜ್ಞಾನ ಬೆಳೆಯುವುದಿಲ್ಲ. ಅದು ಇಡಿಯಾಗಿ ಸಮಾಜದ ಸುಪ್ತ ಮನಸ್ಸಿನ ವಿವಿಧ ಆಯಾಮಗಳನ್ನು ವರ್ತಮಾನದ ಅನುಭವದಿಂದ ಗತಕಾಲದ ಅರ್ಥವನ್ನು ಹಿಡಿಯುವ ರೀತಿಯಲ್ಲಿ ಸಾಗಬೇಕಾಗುತ್ತದೆ. ಸೃಜನಶೀಲತೆಯು ಕೇವಲ ವ್ಯಕ್ತಿಯ ಭಾವನೆ ಆಗಿರುವುದಿಲ್ಲ. ಅದು ಕಾಲದ ಅನೇಕ ಹಂತಗಳ ಜೀವನಕ್ರಮಗಳನ್ನೆಲ್ಲ ಅಡಗಿಸಿಟ್ಟುಕೊಂಡು ಸುಪ್ತ ಪ್ರಜ್ಞೆಯ ಭಾಗವಾಗಿ ಸಾಹಿತ್ಯ ಕೃತಿಯ ಮೂಲಕವೂ ಅಥವಾ ಉಳಿದ ಬೇರೆ ಕಲಾಪ್ರಾಕಾರಗಳ ಮೂಲಕವೂ ಅಭಿವ್ಯಕ್ತಗೊಂಡಿರುತ್ತದೆ. ಆದ್ದರಿಂದಲೇ ಸುಪ್ತ ಪ್ರಜ್ಞೆಯಲ್ಲಿರುವ ಅನುಭವಗಳೇ ಮುಖ್ಯವೇ ಹೊರತು ನಿತ್ಯದ ಅನುಭವಗಳೇ ಅಂತಿಮವಲ್ಲ. ಸುಪ್ತ ಪ್ರಜ್ಞೆಯಲ್ಲಿರುವ ಅನುಭವಗಳು ಜೈವಿಕವಾಗಿಯೆ ಸಾಗಿ ಬಂದಿರುತ್ತವೆ ಎಂಬುದನ್ನು ಲೇಖಕರ ಸಂಧರ್ಭದಲ್ಲಿ ಈ ಹಿಂದೆ ಅನೇಕ ಬಾರಿ ಪ್ರಸ್ತಾಪಿಸಲಾಗಿದೆ. ಈ ಬಗೆಯ ಸುಪ್ತಾನುಭವಗಳು ಗಾಢವಾಗಿ ತೆರೆದುಕೊಂಡಾಗ ಮಾತ್ರ ಶ್ರೇಷ್ಠ ಕಲಾಕೃತಿ ಮೂಡಿ ಬರಲು ಸಾಧ್ಯ. ಇಲ್ಲವಾದರೆ ಸುಪ್ತ ಪ್ರಜ್ಞೆಯ ಮಾನವ ಅನುಭವಗಳು ಜೈವಿಕವಾಗಿಯೆ ಸಾಗಿ ಬಂದಿರುತ್ತವೆ ಎಂಬುದನ್ನು ಲೇಖಕರ ಸಂಧರ್ಭದಲ್ಲಿ ಈ ಹಿಂದೆ ಅನೇಕಬಾರಿ ಪ್ರಸ್ತಾಪಿಸಲಾಗಿದೆ. ಈ ಬಗೆಯ ಸುಪ್ತಾನುಭವಗಳು ಗಾಢವಾಗಿ ತೆರೆದುಕೊಂಡಾಗ ಮಾತ್ರ ಶ್ರೇಷ್ಥ ಕಲಾಕೃತಿ ಮೂಡಿ ಬರಲು ಸಾಧ್ಯ. ಇಲ್ಲವಾದರೆ ಸುಪ್ತ ಪ್ರಜ್ಞೆಯ ಮಾನವ ಅನುಭವಗಳನ್ನೆಲ್ಲ ಜಾಗ್ರೃತಾವಸ್ಥೆಯ ಮನಸ್ಸು ತಾನು ಹುಟ್ಟಿಬಂದ ಪರಿಸರದ ನಿಯಂತ್ರಣಕ್ಕೆ ಸಿಲುಕಿ ಅಥವಾ ಜಾತಿ ಧರ್ಮ ಲಿಂಗ ತಾರತಮ್ಯಗಳ ಜೊತೆ ಒಪ್ಪಂದ ಮಾಡಿಕೊಂಡು ಸೀಮಿತವಾಗುವ ಸಾಧ್ಯತೆಯೂ ಇರುತ್ತದೆ. ಪೂರ್ಣ ಒಪ್ಪಿಗೆಯ ದಾರಿಯಲ್ಲಿ ಹೊರಟಾಗಲೂ ನಿಗದಿತ ದಡವನ್ನು ತಲುಪಲಾಗದು. ಅಂತೆಯೆ ಪೂರ್ಣ ನಿರಾಕರಣೆಯಲ್ಲಿ ದಿಕ್ಕು ಬದಲಿಸಿ ನಡೆದಾಗಲೂ ನಿಶ್ಚಿತ ಗುರಿ ಮುಟ್ಟಲಾಗದು. ಇವೆರಡೂ ಕ್ರಮಗಳಿಂದ ತಪ್ಪಿಸಿಕೊಂಡು ಕನ್ನಡ ಸಾಹಿತ್ಯದ ಕೆಲವು ಮುಖ್ಯ ಸಂಗತಿಗಳನ್ನು ಎದುರು ಹಾಕಿಕೊಂಡು ಚಿಂತಿಸಿದ ದಾರಿಯಲ್ಲಿ ಸಮನ್ವಯ ಕ್ರಮವನ್ನೂ ಅನುಸರಿಸಲು ಹೋಗಲಿಲ್ಲ. ಇವರು ಬೇಕು ಅವರು

ಬೇಡ, ಇದು ಸರಿ ತಪ್ಪು, ಇದು ಶ್ರೇಷ್ಠ, ಅದು ಕನಿಷ್ಠ ಎಂಬ ವೈರುಧ್ಯ ಚಿಂತನೆಗೂ ಯತ್ನಿಸಿಲ್ಲ. ಸೃಜನಶೀಲವಾದ ದಾರಿಯನ್ನೇ ನೆಚ್ಚಿ ನಡೆದಿರುವ ಈ ಕ್ರಮದಲ್ಲಿ ಓದುಗರು ಕೇವಲ ಒಳ್ಳೆಯದು ಕೆಟ್ಟದು ಎಂಬ ವೈರುದ್ಧ ನಂಬಿಕೆಗಳಿಗೆ ಒಳಪಡದಿದ್ದರೆ ಸಾಕು. ಓದುವ ದೃಷ್ಟಿ ಕೂಡ ಸೃಜನಶೀಲವಾಗಿದ್ದಾಗ ಸಾಹಿತ್ಯದ ಮೂಢನಂಬಿಕೆಗಳನ್ನು ಮೀರಲು ಸಾಧ್ಯವಾಗುತ್ತದೆ. ಸಾಹಿತ್ಯದಲ್ಲಿ ಕೇವಲ ಸರಿ ತಪ್ಪುಗಳು ಮಾತ್ರ ಇರುವುದಿಲ್ಲ, ಸಂವೇದನೆಯು ಅಸಂಖ್ಯ ಸ್ವರೂಪದಲ್ಲಿರುತ್ತದೆ, ಸೃಜನಶೀಲವಾದ ಗ್ರಹಿಕೆಗಳು ತರ್ಕದ ಆಚೆಗಿರುತ್ತವೆ. ತರ್ಕದಿಂದ ಏನನ್ನು ಬೇಕಾದರೂ ಒಪ್ಪಿಸಬಹುದು ಹಾಗೆಯೇ ತಿರಸ್ಕರಿಸಲೂ ಬಹುದು. ಆದರೆ ಸಂವೇದನೆಯ ಸೂಕ್ಷ್ಮ ಗ್ರಹಿಕೆಗಳಿಂದಲೇ ಜಗತ್ತಿನ ಅರಿವು ವಿಸ್ತರಿಸಿರುವುದು, ತರ್ಕ ಮೀಮಾಂಸೆಯು ಅಂತಃಸಾಕ್ಷಿಯನ್ನು ನಂಬುವುದಿಲ್ಲ. ಬೇಕಿದ್ದರೆ ಅದು ನಂಬಿಸಲು ಅರ್ಹವೆನಿಸಿದ ಯಾವುದೇ ಸುಳ್ಳು ಸಾಕ್ಷಿಯನ್ನಾದರೂ ಹೆಮ್ಮೆಯಿಂದ ಸ್ವೀಕರಿಸುತ್ತದೆ. ಅದರ ಮೇಲೆಯ ತನ್ನ ತೀರ್ಮಾನವನ್ನು ಕೊಟ್ಟು ಬಿಡುತ್ತದೆ. ಅಂತಹ ತೀರ್ಮಾನವನ್ನು ಮಾನ್ಯ ಮಾಡಲು ಕಷ್ಟ ಪಡಬೇಕಾಗಿಲ್ಲ. ಸೃಜನಶೀಲ ಗ್ರಹಿಕೆಗಳು ನ್ಯಾಯಾಲಯದ ಕಟ್ಟಳೆಗಳ ಆಚೆಗಿನವು ಹಾಗೆಂದು ಅವು ಸ್ವೇಚ್ಚೆಯವಲ್ಲ, ಪರಮ ಸ್ವಾತಂತ್ರ್ಯವೇ ಅವುಗಳ ಗುರಿ, ಗ್ರಹಿಕೆಗಳು ಆತ್ಯಂತಿಕ ಮುಕ್ತಿ ಭಾವಗಳು, ಇರುವ ನಿರ್ಮಿತಿಗಳ ಮೀರಿದ ಅಂತಹ ಗ್ರಹಿಕೆಗಳನ್ನು ಮಾನ್ಯ ಮಾಡಬೇಕಾದರೆ ತುಂಬ ಕಷ್ಟ ಪಡಬೇಕಾಗುತ್ತದೆ. ಲೌಖಿಕದ ಹಂಗು ಮೀರಿದ ಅಲ್ಲಮ ಪ್ರಭುವಿನಂತವರು ಈ ಬಗೆಯಲ್ಲಿ ಮಾಡಿದ ಗ್ರಹಿಕೆಯ ಕ್ರಾಂತಿ ಅರ್ಥಾತ್ ಪರಮ ಸ್ವಾತಂತ್ರ್ಯದ ಆಯ್ಕೆಯ ಅಭಿವ್ಯಕ್ತಿಯ ಮುಕ್ತಿಯ ಕ್ರಾಂತಿಯು ಬಸವಣ್ಣನ ಕ್ರಾಂತಿಗಿಂತಲು ದೊಡ್ಡದು. ಯಾವುದೇ ಗ್ರಹಿಕೆಯು ಆದ್ದರಿಂದಲೇ ತರ್ಕಾತೀತ ಸಂವೇದನೆಯಲ್ಲಿ ಅರಿವಿನ ಅಲೆಗಳ ಮೇಲೆ ತೇಲುತ್ತ ಸಾಗುವುದು. ಬುದ್ಧನಿಗೆ ಜ್ಞಾನೋದಯದ ಮೊದಲ ಪ್ರಜ್ಞೆ ಘಟಿಸಿದ್ದುದು ಕೂಡ ಮೋಕ್ಷದ ಕೊನೆ ಏನು ಎಂದು ಗ್ರಹಿಸುವುದರ ಪರಿಣಾಮವಾಗಿಯೇ. ಇಂತಹ ದೊಡ್ಡಥನ ಕಾರ್ಯ ಮಾಡಿದ್ದೇನೆಂದು ಪರೋಕ್ಷವಾಗಿ ಹೇಳುತ್ತಿಲ್ಲ. ಆದರೆ ಹಾಗೆ ಮಾಡಿದ ಮುಕ್ತ ಚಿಂತಕರ ಅರಿವನ್ನು ಹಿಂಬಾಲಿಸುವವನಾಗಿ ನನಗೆ ತೋಚಿದ್ದನ್ನು ತಕರಾರಿಗೆ ಒಳಪಡಿಸಿರುವೆ.

ಗ್ರಹಿಕೆಯು ಆನಂದವಿದ್ದಂತೆ. ವಿಜ್ಞಾನಿಗೂ ದಾರ್ಶನಿಕನಿಗೂ ನಿಜವಾದ ಕ್ರಾಂತಿಕಾರಿಗೂ ಇಂತಹ ಆನಂದವೆ ಕೈ ಹಿಡಿದು ನಡೆಸಿರುವುದು. ಕನ್ನಡ ಸಾಹಿತ್ಯದ ವಿಮರ್ಶೆಯನ್ನು ಹೀಗಾಗಿಯೇ ನಾನು ಹಿಂಬಾಲಿಸಲು ಹೋಗಲಿಲ್ಲ, ಆಧಾರ ಕೊಡದ ಕೇವಲ ಹೇಳಿಕೆಗಳನ್ನು ಸಲೀಸಾಗಿ ಮಾಡುವ ನಿಮ್ಮ ನಿರೂಪಣೆಗಳನ್ನು ಹೇಗೆ ತಾನೆ ಒಪ್ಪಲು ಸಾಧ್ಯ ಎಂದು ಅನೇಕರು ಪ್ರಶ್ನಿಸುತ್ತಲೇ ಇರುತ್ತಾರೆ. ಮೇಲೆ ಹೇಳಿದಂತೆಯೇ ತರ್ಕದ ವಿಧಾನ ನನ್ನದಲ್ಲವಾದ್ದರಿಂದ ಸಾಕ್ಷಾಧಾರಗಳನ್ನು ಅವಲಂಬಿಸುವುದಿಲ್ಲ. ಪ್ರಾಚೀನ ಜ್ಞಾನ ಪ್ರಕಾರಗಳು ಅನುಭವಗಳ ಆಧಾರದಲ್ಲಿ ರೂಪಿತವಾದವೇ ವಿನಃ ಭೌತಿಕ ಸಾಕ್ಷಿಗಳನ್ನು ಆಶ್ರಯಿಸಿ ಅಲ್ಲ. ಆಧುನಿಕ ಜಗತ್ತು ಮಾತ್ರವೇ ಭೌತಿಕ ಸಾಕ್ಷ್ಯಗಳ ಮೂಲಕ ಗ್ರಹಿಸುವ ಕ್ರಮವನ್ನು ರೂಢಿಸಿಕೊಂಡಿತು. ಸಾಹಿತ್ಯ ಕೃತಿಯ ಒಳಗಿನ ಸಾಕ್ಷ್ಯವೇ ಅಂತಿಮವಲ್ಲ. ಆ ಕೃತಿಯ ಮೂಲ ಆಕರವಾದ ಮನುಷ್ಯ ಲೋಕದ ಎಲ್ಲ ಸುಪ್ತ ಪ್ರಜ್ಞೆಯು ನಮ್ಮ ತೀರ್ಮಾನಗಳಿಗೆ ದೊಡ್ಡ ಪ್ರಮಾಣದಲ್ಲಿ ಸಮಸ್ಯೆ ಸಾಕ್ಷ್ಯವನ್ನು ಒದಗಿಸುತ್ತಿರುತ್ತದೆ. ಆದ್ದರಿಂದಲೇ ಮನಸಾಕ್ಷಿ, ಆತ್ಮಸಾಕ್ಷಿ, ಅಂತಃಸಾಕ್ಷಿ ಪರಿಕಲ್ಪನೆಗಳು ಅಖಂಡ ಪ್ರಜ್ಞೆಯ ಭಾಗವಾಗಿ ಬರುವುದು. ಇವುಗಳು ಮನುಷ್ಯರಿಗೇ ವಿಶಿಷ್ಟ ಎನಿಸುವ ಗ್ರಹಿಕೆಗಳನ್ನು ತಂದುಕೊಡುವ ಮೂಲಕ ಅರ್ಥದ ಆನಂದವನ್ನು ಮುಂಗಾಣೆಯ ರೂಪದಲ್ಲಿ ತಂದು ಕೊಡುತ್ತವೆ. ಹೀಗಾಗಿಯೇ ಈ ದಾರಿಯು ಸೃಜನಶೀಲವಾದದ್ದು. ಇಂತಹ ನಿರೂಪಣೆಗಳು ಏಕಕಾಲಕ್ಕೆ ಭಾಷೆಯನ್ನು ವಿಸ್ತರಿಸುವುದರ ಜೊತೆಗೆ ಲೋಕದ ಅರಿವಿನ ಕ್ರಮವನ್ನೂ ಬೆಳೆಸುತ್ತಿರುತ್ತವೆ. ಹಾಗೆಯೆ ಸುಪ್ತ ಮನಸ್ಸಿನ ತಳಪಾಯವಾದ ಜೈವಿಕ ಧಾತುವಿನಲ್ಲಿ ಅಡಗಿರುವ ಎಷ್ಟೋ ಅರ್ಥದ ಸಾಧ್ಯತೆಗಳನ್ನು ನಮ್ಮ

ಜಾಗೃತಾವಸ್ಥೆಗೆ ತಂದು ಕೊಡಲು ಅವಕಾಶ ಮಾಡುತ್ತವೆ. ಈ ಬಗೆಯ ಜೈವಿಕ ಮನೋವಿಶ್ಲೇಷಣೆಯ ಆಧುನಿಕೋತ್ತರ ವಿಚಾರಗಳನ್ನೆಲ್ಲ ಕನ್ನಡ ಸಾಹಿತ್ಯದ ಅರಿವಿನ ಬಯಲಿಗೆ ತಂದುಕೊಳ್ಳಬೇಕು. ಹೀಗೆ ಹೊರಟಾಗ ಒಪ್ಪಿತ ಸಂಗತಿಗಳ ಜೊತೆ ನಿರಾಕರಣೆಯ ದಾಟಿಯಲ್ಲೇ ಸಾಗಬೇಕು. ಈ ದಾರಿಯು ನಿಷ್ಟುರವಾದದ್ದು. ದಂಡಿಸುವಂತದ್ದು. ಸ್ವಯಂ ದಂಡನೆಗೂ ಈಡಾಗುವಂತದ್ದು. ಕಳೆದುಕೊಳ್ಳುತ್ತಾ ಸಾಗಿ ಪಡವ ಕನಸ ಕಾಣುವಂತದ್ದು, ಬಹುಸಂಖ್ಯಾತರ ವಿರೋಧ ಕಟ್ಟಿಕೊಂಡು ಒಂಟಿಯಾಗುವಂತದ್ದು. ಸಜ್ಜನಿಕೆಯ ಎಲ್ಲ ಕ್ರಮಗಳನ್ನು ದಾಟಿ ಬೌದ್ಧಿಕ ಹಿಂಸೆಯನ್ನೂ ಪಾಲಿಸುವಂತದ್ದು. ಇದು ಅನಿವಾರ್ಯ, ದಿಕ್ಕೆಟ್ಟ ಸಮಾಜದಲ್ಲಿ ಇಂತಹ ಕ್ರಮವು ನೈತಿಕತೆಯನ್ನು ಎತ್ತಿ ಹಿಡಿಯುವಂತದ್ದು.

ಈ ತಕರಾರನ್ನು ದಲಿತ ಮೀಮಾಂಸೆ ಎಂದು ಕರೆದಿದ್ದ. ತುಮಕೂರಿನಲ್ಲಿ ನಡೆದ ಎಪ್ಪತ್ನಾಲ್ಕನ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರಾಗಿದ್ದ ಯು. ಆರ್. ಅನಂತಮೂರ್ತಿಯವರ ಎದಿರು 'ನಾಳಿನ ವಿಮರ್ಶೆಯ ದಿಕ್ಕು' ವಿಚಾರ ಗೋಷ್ಠಿಯಲ್ಲಿ ಆವೇಶಭರಿತನಾಗಿ ಪುಣ್ಯಕೋಟಿಯ ಕಥನವನ್ನು ವಿಶ್ಲೇಷಿಸುತ್ತಾ ಇನ್ನು ಮುಂದೆ ಸಾಹಿತ್ಯ ಮೀಮಾಂಸೆಗೆ ಬದಲು ಅಸ್ಪೃಶ್ಯ ಮೀಮಾಂಸೆಯನ್ನು ಭಾರತದ ಎಲ್ಲ ಭಾಷೆ ಮತ್ತು ಸಮುದಾಯಗಳ ಹಿನ್ನೆಲೆಯಲ್ಲಿ ಮಾಡಬೇಕಾಗಿದೆ ಎಂದಿದ್ದೆ. ಆ ಗೋಷ್ಠಿಯ ಅಧ್ಯಕ್ಷರಾಗಿದ್ದ ಕುರ್ತಕೋಟಿಯವರು ಪ್ರತಿಕ್ರಿಯಿಸಿ ಅಸ್ಪೃಶ್ಯ ಮೀಮಾಂಸೆ ಕೂಡ ಭಾರತೀಯ ಕಾವ್ಯ ಮೀಮಾಂಸೆಯಷ್ಟೇ ಮುಖ್ಯವಾಗಲಿ; ಅದನ್ನು ನಾವೂ ಕೂಡ ಸೇರಿ ಮಾಡೋಣ ಎಂದು ಹೇಳುತ್ತಲೇ ನನ್ನ ನಿಲುವುಗಳನ್ನು ವಿಮರ್ಶಿಸಿದ್ದರು. ಮುಂದೆ ಅದು ಯು. ಆರ್. ಅನಂತಮೂರ್ತಿಯವರಿಗೂ ನನಗೂ ಅಗ್ನಿ ಪತ್ರಿಕೆಯಲ್ಲಿ ಮುಂದುವರಿದು ಚರ್ಚೆ ಆದದ್ದು ಈಗ ಗತಕಾಲಕ್ಕೆ ಸರಿದಿದೆ. ಆದರೆ ಆ ವೇಳೆಯಲ್ಲಿ ಗಾಢವಾಗಿ ನನ್ನೊಳಗೆ ಹುಟ್ಟಿಕೊಂಡ ವಿಚಾರಗಳನ್ನು ವಿಸ್ತರಿಸಿ ಅಗ್ನಿ ಪತ್ರಿಕೆಯಲ್ಲಿ ಅಂಕಣದ ಮೂಲಕ ತಕರಾರು ಬರದ ಹಾಗ ಬರೆಯುತ್ತ ಸಾಗಿದಂತೆ ಅಭಿವ್ಯಕ್ತಗೊಂಡ ಈ ಎಲ್ಲ ಬರಹಗಳು ಈಗ ಒಂದು ಸ್ಥಿತಿಗೆ ಬಂದು ತಲುಪಿವೆ. ದಲಿತ ಮೀಮಾಂಸೆಯ ಒಂದು ರೂಪ ಎಂದು ಈ ತಕರಾರಿನ ಬರಹಗಳನ್ನು ಮಂಡಿಸಲು ನನಗೆ ಯಾವ ಮುಜುಗರವೂ ಇಲ್ಲ. ಅಂತೆಯೇ ಗರ್ವವೂ ಇಲ್ಲ. ಮೀಮಾಂಸೆಗೆ ಇರುವ ಅರ್ಥಕೋಶದ ವಿವರದಿಂದ ಇಲ್ಲಿನ ಆಲೋಚನಾ ನಿರೂಪಣೆಯನ್ನು ಭಾವಿಸಬೇಕಾದ್ದಿಲ್ಲ. ಮೀಮಾಂಸೆಯು ಕೊನೆಗೂ ನಮ್ಮ ನಮ್ಮ ಅರಿವಿನ ಸಂವೇದನ. ಈ ಸಂವೇದನೆಯು ಅರ್ಥದ ತಳಪಾಯವನ್ನು ಹುಡುಕುವಂತದ್ದು.

ದಲಿತ ಮೀಮಾಂಸೆಯನ್ನು ಜಲತತ್ವಕ್ಕೆ ಅನ್ವಯಿಸಿದ್ದೆ ದಲಿತತ್ವ, ಬುದ್ಧತ್ವ, ಜಲತತ್ವದಂತಹ ಪರಿಕಲ್ಪನೆಗಳು ಸಾಹಿತ್ಯ ಮೀಮಾಂಸೆಯ ಹೊರಗಿನವು ಎನಿಸಬಹುದು. ಈ ಬಗೆಯ ತತ್ವಗಳು ಇಪ್ಪತ್ತೊಂದನೆ ಶತಮಾನದ ನಿರೂಪಣೆಗಳಿಗೆ ವಿಭಿನ್ನ ದಾರಿಗಳನ್ನು ತೆರೆಯಬಲ್ಲವು. ರೂಪಕ ವೈಚಾರಿಕತೆಯ ಕನಸುಗಳು ಯಾಜಮಾನ್ಯ ತತ್ವ ಸಿದ್ಧಾಂತಗಳ ಹಂಗಿನಲ್ಲಿ ರೂಪುಗೊಳ್ಳುವುದಿಲ್ಲ. ದಲಿತ ಮೀಮಾಂಸೆಯು ಈ ನಿಟ್ಟಿನಲ್ಲಿ ಎಲ್ಲ ದಿಗ್ವಿಜಯದ ಅರ್ಥಗಳ ಆಚೆಗಿನದು. ವ್ಯವಸ್ಥೆಯ ಭಾಗವಾದ ಜ್ಞಾನ ಪ್ರಕಾರಗಳು ಕೂಡ ಸಮಾಜವನ್ನು ಆಳಬಲ್ಲವು. ನಿರ್ದೇಶಿಸಿ ತನ್ನ ಅರ್ಥ ಸಾಮ್ರಾಜ್ಯಕ್ಕೆ ನಿರ್ಬಂಧಿಸಿಕೊಳ್ಳಬಲ್ಲವು. ಬಂಡವಾಳಶಾಹಿ ಅರ್ಥಜಗತ್ತಿನಂತೆಯೇ ಪರ್ಯಾಯ ಚಿಂತನೆಗಳು ಕೂಡ ತಮ್ಮ ರಾಜಕಾರಣವನ್ನು ಮಾಡಬಲ್ಲವು, ಪರಮ ಆಯ್ಕೆಗೆ ಅವಕಾಶವಿರುವುದೇ ನಿಜವಾದ ಅರ್ಥದ ಸ್ವಾತಂತ್ರ್ಯ, ಇಂತಹ ಸಂಗತಿಗಳನ್ನೆಲ್ಲ ತಕರಾರಿನ ಈ ಬರಹಗಳಲ್ಲಿ ಹುಡುಕಾಡಿರುವ ಓದುಗರಿಗಿಲ್ಲಿ ಏನು ಸಿಗುತ್ತದೆ ಎಂದು ಖಚಿತವಾಗಿ ಹೇಳಲಾರೆ. ದಿಕ್ಸೂಚಿಯನ್ನು ಹಿಂಬಾಲಿಸಿ ನಡೆದಾಗಲೂ ಕೂಡ ನಿಗಧಿತ ನೆಲೆ ತಲುಪಿರುತ್ತೇವೆ ಎಂದು ಖಚಿತವಾಗಿ ಹೇಳಲಾಗದು. ಸೃಜನಶೀಲ ಅನುಸಂಧಾನದ

ಧ್ಯಾನೋತ್ಮನನದಲ್ಲಿ ಏನೂ ಸಿಗಲೇ ಇಲ್ಲ ಎಂದುಕೊಂಡರೂ ಹಾಗೆ ಏನೂ ಸಿಗಲಿಲ್ಲ ಎನ್ನುವುದು ಕೂಡ ಒಂದು ಬಗೆಯ ದಕ್ಕಿದ್ದರ ಸೂಚನೆಯನ್ನೂ ಕೊಡುತ್ತಿರುತ್ತದೆ. ಇದು ಅಂತರಂಗಕ್ಕೆ ಮಾತ್ರ ಗೋಚರವಾಗುವಂತದ್ದು. ಬುದ್ಧನಿಗೆ ಇರುವುದೆಲ್ಲ ಏನೂ ಅಲ್ಲ ಎನಿಸಿದಾಗ ಇರದಿದ್ದುದು ಕಂಡ ಹಾಗೆ ಅಥವಾ ಕಾಣಲಾಗದ್ದನ್ನು ಕಂಡೇ ಕಾಣಬೇಕೆಂದು ಬೆಳಕನ್ನು ಅರಸುತ್ತ ಕತ್ತಲಲ್ಲಿ ನಡೆದ ಹಾಗೆ. ಇಂತಹ ತತ್ವಶಾಸ್ತ್ರೀಯ ಮಾತಿಗೂ ತಕರಾರಿಗೂ ಸಂಬಂಧವಿದೆ. ಬುದ್ಧ, ದಲಿತತ್ವ, ಜಲತತ್ವದಂತಹ ವೈಚಾರಿಕ ಸ್ವಾತಂತ್ರ್ಯದ ದಾಹ ಕೂಡ ತತ್ವಜಿಜ್ಞಾಸೆಯ ಕಾಯಕವೇ. ಅಲ್ಲಮ ಪ್ರಭುವಿನ ವಚನಗಳಲ್ಲಿ ಈ ಬಗೆಯ ಹುಡುಕಾಟವಿರುವುದುನ್ನು ಗಮನಿಸಬಹುದು. ಬೌದ್ಧಿಕ ಹೊರೆಯಿಂದ ವಿಶ್ಲೇಷಿಸಿದಾಗಲೂ ಅರ್ಥ ಸಂವಹನಕ್ಕೆ ಧಕ್ಕೆಯಾಗುತ್ತದೆಂದು ಬಲ್ಲೆ. ಸಂಕೀರ್ಣ ವಾದ ರೂಪಕ ವೈಚಾರಿಕತೆ ಕಾವ್ಯಕ್ರಿಯೆಯ ಹಾಗೆಯೇ ಸುಲಭವಾಗಿ ತೆರೆದುಕೊಳ್ಳುವುದಿಲ್ಲ. ಅರಿವಿನ ಸಂಕೀರ್ಣ ಸ್ಥಿತಿಯಲ್ಲಿ ಸರಳೀಕರಿಸಿದಾಗಲೆಲ್ಲ ಗ್ರಹಿಕೆಯು ತೆಳುವಾದಂತೆ ಕಾಣುತ್ತದೆ. ಆದರೂ ಸಾಧ್ಯವಾದಷ್ಟು ಮಟ್ಟಿಗೆ ಮತ್ತೆ ಹಲವಾರು ರೀತಿಯಲ್ಲಿ ತಕರಾರಿನ ಈ ಬರಹವನ್ನು ತಿದ್ದಿ ಮರು ರೂಪಿಸಿರುವೆ. ಮತ್ತೆ ಮತ್ತೆ ಈ ಬರಹವನ್ನು ತಾಳ್ಮೆಯಿಂದ ಪುನರ್ ಅನುಸಂಧಾನ ಮಾಡಿದರೆ ಅರ್ಥದ ಬೇರೆ ಬೇರೆ ಸ್ತರಗಳು ತೆರೆದುಕೊಳ್ಳುತ್ತವೆ. ಹಾಗೆ ಓದುಗರು ತಕರಾರನ್ನು ಪರಿಹರಿಸಿಕೊಳ್ಳುವರೆಂದು ನಂಬುವ, ಓದಿದ ಎಲ್ಲರಿಗೂ ಪ್ರೀತಿಯ ವಂದನೆಗಳು.

*****

ಸಂಪಾದಕರ ವಿಳಾಸ

1. ಡಾ. ಸುವರ್ಣ ಸಂಗಣ್ಣ ಹುಡೇದ
   ಹೆಚ್. ಕೆ. ಇ. ಎಸ್.
   ಶ್ರೀ ವೀರೇಂದ್ರ ಪಾಟೀಲ್ ಪದವಿ ಮಹಾವಿದ್ಯಾಲಯ.
   ಬೆಂಗಳೂರು.

2. ಪ್ರೊ. ಅರುಣ್ ಕುಮಾರ್ .ವಿ
   ಸಹ ಪ್ರಾಧ್ಯಾಪಕರು
   ವಿಜಯ ಕಾಲೇಜು
   ಜಯನಗರ 4ನೇ ಬ್ಲಾಕ್. ಬೆಂಗಳೂರು –11

3. ಹರೀಶ್ ಎಂ.ಸಿ
   ಸಹಾಯಕ ಪ್ರಾಧ್ಯಾಪಕರು
   ಆಚಾರ್ಯ ಪಾಠಶಾಲಾ ಕಲೆ ಮತ್ತು ವಿಜ್ಞಾನ ಕಾಲೇಜು
   ಎನ್. ಆರ್ . ಕಾಲೋನಿ, ಬೆಂಗಳೂರು – 19